ಕಸ್ತೂರಿ

ನವೆಂಬರ್ 1988 · ರೂ. 3-00



ಸೂರ್ಯನಿಗೆಂಬೆ ನಮೋ ನಮೋ

ಕಸ್ತೂರಿ

ಕನ್ನಡ ಡೈಜೆಸ್ಟ್

ವ್ಯವಸ್ಥಾಪಕ ಸಂಪಾದಕ:
ಕೆ. ಶಾಮರಾವ್

ಸಂಪಾದಕ:
ಆರ್.ಎ. ಉಪಾಧ್ಯ

ಸಹಸಂಪಾದಕ:
ಮಾಧವ ನಾ. ಮಹಿಷಿ

ಸಹಾಯಕ ಸಂಪಾದಕ:
ಎಸ್.ಕೆ. ಶಾಮಸುಂದರ

ಮುಖಪುಟ:
ದೀಪೋತ್ಸವ
ಚಿತ್ರ: ಕೆ.ಪಿ. ಸತ್ಯನಾರಾಯಣ

ಬೆಳಕಿಂಡಿ

● ನಾ ಕಂಡ ಕನಸುಗಳ ಅರ್ಧದಷ್ಟೂ ಸುಂದರವಾಗಿಲ್ಲ ನನ್ನ ಸಾಹಿತ್ಯ ಕೃತಿಗಳು.

- ವಿಲಿಯಂ ಫಾಕ್ನರ್.

● ಅತಿ ಲೋಭದಿಂದ ಮನುಷ್ಯನ ಕರ್ತವ್ಯ ಜ್ಞಾನಕ್ಕೆ ಸಂಚಕಾರ ಬರುತ್ತದೆ.

- ಕಾಳಿದಾಸ.

● ಸಾಧಕ ಪ್ರಪಂಚದಲ್ಲಿರಬಹುದು. ಆದರೆ ಪ್ರಾಪಂಚಿಕತೆ ಸಾಧಕನಲ್ಲಿರಬಾರದು.

- ರಾಮಕೃಷ್ಣ ಪರಮಹಂಸ.

● ಜೀವಿಸುವವರಿಗೆಲ್ಲ ಎರಡು ಕಣ್ಣುಂಟು. ಒಂದು ಅಕ್ಷರಗಳು ಎರಡು ಸಂಖ್ಯೆಗಳು.

- ತಿರುಕ್ಕುರಳ್.

● ನಾಯಕರ ತಪ್ಪಿನ ಪರಿಣಾಮಕ್ಕಿಂತಲೂ ಅವರನ್ನು ಅನುಸರಿಸುವವರು ಮಾಡುವ ತಪ್ಪಿನ ಪರಿಣಾಮ ಹೆಚ್ಚು ಘಾತಕ.

- ಸಿಸಿರೊ

● ಯಾವಾಗ ಸಂಗೀತದಲ್ಲಿ ರಸಭಾವಗಳಿಲ್ಲದೆ ರಸವು ಪ್ರಧಾನವಾಯಿತೊ ಆಗಲೇ ಸಂಗೀತಕ್ಕೂ ಸಾಹಿತ್ಯಕ್ಕೂ ಇರುವ ಸಂಬಂಧ ದೂರವಾಗಿ, ಸರಸ್ವತಿ ಒಮ್ಮೊಲೆಯ ತಾಯಿಯಾದಳು.

- ರಾಳ್ಳಪಲ್ಲಿ ಅನಂತಕೃಷ್ಣಶರ್ಮಾ

ಹೊಸ ಚಂದಾ ದರಗಳು:

ಬಿಡಿ ಸಂಚಿಕೆ	...	3=00
1 ವರ್ಷಕ್ಕೆ	ಅಂಚೆಸೇರಿ	34=00
2 ವರ್ಷಕ್ಕೆ	...	65=00
3 ವರ್ಷಕ್ಕೆ	...	100=00

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ 1ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ 5ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಚೇರಿಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರ ವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

KASTURI, NOVEMBER 1988

ಈ ಸಂಚಿಕೆಯಲ್ಲಿ

ಜನ ಚಿಂತನ

ಸುಲಗ್ನಾ ಸಾವಧಾನ

ಅಕ್ಟೋಬರ್ ಸಂಚಿಕೆಯಲ್ಲಿಯ ಗೌರೀಶ ಕಾಯ್ಕಿಣಿಯವರ 'ಸುಲಗ್ನಾ ಸಾವಧಾನ' ಹೇಳುವುದಾದರೂ ಏನು? ಈ ಅಂತರ್ ಮತೀಯ ವಿವಾಹ ಲೇಖಕರು ಭಾವಿಸಿದಷ್ಟು ಸರಳವಲ್ಲ. ಇಂಥ ಪ್ರಸಂಗವನ್ನು ಲೇಖಕರು ಕೇವಲ ರೋಮ್ಯಾಂಟಿಕ್ ಆಗಿ ಮಾತ್ರ ನೋಡುತ್ತಾರೆ. ಆದರೆ ಈ ಮದುವೆಯಿಂದ ಮುಂದೆ ಜನಿಸುವ ಮಕ್ಕಳ ಧರ್ಮ ಮತ್ತು ಸಂಸ್ಕೃತಿಯ ಪ್ರಶ್ನೆಯೂ ಅಡಗಿದೆಯಲ್ಲ. ನಾವು ಈ ಅಂತರ್‌ಧಾರ್ಮಿಕ ವಿವಾಹವನ್ನು ರೋಮ್ಯಾಂಟಿಕ್ ಆಗಿ ನೋಡುವುದನ್ನು ಬಿಟ್ಟು, ವಾಸ್ತವಿಕ ದೃಷ್ಟಿಯಿಂದ ನೋಡುವುದು ಕ್ಷೇಮಕರ.

ಬೆಂಗಳೂರು ಕೆ. ದ್ವಾರಕಾನಾಥ

'ಸುಲಗ್ನಾ ಸಾವಧಾನ' ದಂಥ ತೀರಾ ಹಳಸಲು ವಿಚಾರಗಳಿಗೆ ಮೂರು ಪುಟಗಳನ್ನು ವ್ಯರ್ಥವಾಗಿ ಬಳಸುವುದು 'ಕಸ್ತುರಿ'ಗೆ ಅನಿವಾರ್ಯವಾಗಿತ್ತೆ?

ರಾಣೆಬೆನ್ನೂರು ನಾಗರಾಮಭಟ್ಟ

ಗಟ್ಟಿ ಬರಹ

ಪ್ರಪಂಚದ ಸಕಲ ವಿಷಯಗಳನ್ನು, ವಿಜ್ಞಾನದ ಕೊಡುಗೆಗಳನ್ನು ಅರಿತುಕೊಳ್ಳಲು 'ಓದು' ನಮಗೆ ಎಷ್ಟೊಂದು ಅವಶ್ಯ ಎಂಬುದನ್ನು ತಿಳಿಸಿಕೊಟ್ಟ ಕೆ.ಟಿ. ಗಟ್ಟಿಯವರ ಗಟ್ಟಿ ಬರಹಗಳನ್ನು 'ಕಸ್ತೂರಿ'ಯಲ್ಲಿ ಸದಾ ಬಯಸುತ್ತೇವೆ.

ಹಮ್ಮಿಗಿ ಡಾ॥ ಎಂ. ಚನ್ನಬಸಯ್ಯ

ಇವನ್ನೂ ನೋಡಿ

'ಉಲ್ಲಾಸ ತರುವ ಹವ್ಯಾಸ' (ಅಕ್ಟೋಬರ್ ಸಂಚಿಕೆ) ಓದುತ್ತಿದ್ದಂತೆ, ನಾನು ಗಮನಿಸಿದ ಈ ಕೆಳಕಂಡ ಪುಸ್ತಕಗಳ ಪಟ್ಟಿ ಕೊಡುವುದು ಸೂಕ್ತ ಎನಿಸಿತು.

ಮೈಸೂರು ವಿಶ್ವವಿದ್ಯಾಲಯ ಹೊರತಂದ ಗೃಹ ಸರಸ್ವತಿ ಮಾಲಿಕೆಯಲ್ಲಿ ಡಾ॥ ಶಿವರಾಮ ಕಾರಂತರು ಬರೆದಿರುವ 'ಹಿರಿ-ಕಿರಿಯ ಹಕ್ಕಿಗಳು', ನ್ಯಾಶನಲ್ ಬುಕ್ ಟ್ರಸ್ಟ್ ಪ್ರಕಟಿಸಿದ ನೆಹರೂ ಪುಸ್ತಕ ಮಾಲೆಯ ಜಮಾಲ್ ಆರಾ ಅವರ 'ಪಕ್ಷಿ ವೀಕ್ಷಣೆ'.

ಅಲ್ಲದೇ ಪೂರ್ಣಚಂದ್ರ ತೇಜಸ್ವಿ ತಾವೇ ತೆಗೆದ ಛಾಯಾಚಿತ್ರದೊಡನೆ ಬೇರೆ ಬೇರೆ ಪತ್ರಿಕೆಗಳಲ್ಲಿ ಬರೆದ ಈ ಪುಟ್ಟ ಜೀವಿಗಳ ಕುರಿತ ಲೇಖನಗಳನ್ನೂ ನೋಡಬೇಕು. (ಈ ಲೇಖನಗಳೆಲ್ಲ ಪುಸ್ತಕ ರೂಪದಲ್ಲಿ ಬಂದರೆ ತುಂಬ ಅನುಕೂಲವಲ್ಲವೆ ?)

ಅಳಗಂಚಿ ಎ.ಡಿ. ನಂಜುಂಡಸ್ವಾಮಿ

ಗಾಂಧಿ

'ಕನ್ನಡದ ನೆಲದಲ್ಲಿ ಗಾಂಧಿ' (ಅಕ್ಟೋಬರ್ 88) ಕುರಿತು ಡಾ॥ ಸೂರ್ಯನಾಥರು ಬರೆದ ವಿಸ್ತೃತ ಲೇಖನಕ್ಕಾಗಿ ಧನ್ಯವಾದಗಳು.

ಗಾಂಧೀಜಿ ಹರಿಜನಕೇರಿಗೆ ಭೇಟಿ ನೀಡಿದಾಗಲೆಲ್ಲ ಸ್ವಚ್ಛತೆಯ ಕುರಿತೂ ಕುಡಿತದ ದುಷ್ಪರಿಣಾಮಗಳ ಕುರಿತೂ ತಿಳಿ ಹೇಳುತ್ತಿದ್ದರು.

ಮಹಾತ್ಮರ ಹೆಸರು-ತತ್ವಗಳನ್ನೇ ಬಂಡವಾಳವನ್ನಾಗಿಸಿಕೊಂಡು ಆಳುವ ಇಂದಿನ ಧುರೀಣರು 'ಎಕ್ಸೈಜ್ ಲಾಬಿ'ಯ ಗೊಡವೆಗೆ ಹೋದರೆ ಮಂತ್ರಿಮಂಡಳವೇ ಉರುಳೀತು ಎನ್ನುತ್ತಾರೆ.

ಆ ಕಾರಣವೇ ಕನ್ನಡದ ನೆಲದಲ್ಲಿ ಬೀದಿಗೊಂದು, ಕೇರಿ ಗೆರಡು 'ವೈನ್-ಬಾರ್'ಗಳು!

ಬೆಂಗಳೂರು ವಿ. ವರದಯ್ಯ

ಭೇದಿ

ಅನೇಕ ತಿಂಗಳುಗಳ ನಂತರ ಡಾ॥ ಧ್ರುವಕುಮಾರರ ಲೇಖನ ಮತ್ತೆ 'ಕಸ್ತೂರಿ'ಯಲ್ಲಿ ಬಂದದ್ದು ಸ್ವಾಗತಾರ್ಹ. ಮನುಷ್ಯನು ಅನುಭವಿಸುವ ಅನೇಕ ಅಸ್ವಾಸ್ಥ್ಯಗಳ ಮೂಲ ಮನಸ್ಸೂ

ಆಗಿರ ಬಹುದೆಂಬುದನ್ನು ವೈದ್ಯವಿಜ್ಞಾನ ಮನ್ನಿಸಿ ಮುನ್ನಡೆದಿರುವುದು ಒಳ್ಳೆಯ ಬೆಳವಣಿಗೆ. ಒಂದು ಕಾಲಕ್ಕೆ ಒಬ್ಬ ಮನುಷ್ಯ ಮನೋರೋಗದಿಂದ ಬಳಲುತ್ತಿದ್ದಾನೆಂದರೆ ಆತನನ್ನು 'ಹುಚ್ಚ' ಎಂದು ವರ್ಗೀಕರಿಸಿ ಬಿಡುತ್ತಿತ್ತು ಸಮಾಜ. ಈಗ ಪರಿಸ್ಥಿತಿ ತಿಳಿಯಾಗುತ್ತಿರುವುದು ಸಮಾಧಾನದ ಸಂಗತಿ.

ರಾಯಚೂರು — ಮ. ಸೂರ್ಯನಾರಾಯಣ

ಮುಖಪುಟದಲ್ಲಿ ಗಾಂಧಿ

ಅಕ್ಟೋಬರ್ ಸಂಚಿಕೆಯ ಮುಖಪುಟಕ್ಕೆ ಗಾಂಧೀಜಿಯ ಚಿತ್ರ ಹಾಕಿದ್ದು ಸಂದರ್ಭೋಚಿತವಾಗಿದೆ. ಆದರೆ ಚಿತ್ರ ಮಾತ್ರ ಬಾಪುವನ್ನು ಯಥಾವತ್ತಾಗಿ ಮೂಡಿಸುವಲ್ಲಿ ಪೂರ್ತಿ ಸಫಲವಾಗಿಲ್ಲವೆಂದು ವಿಷಾದಿಸಬೇಕಿದೆ. ಗಾಂಧೀಜಿ ಹೀಗೂ ಇದ್ದರೆ? ಎಂದು ಒಮ್ಮೊಮ್ಮೆ ಸಂದೇಹ ಬರುತ್ತದೆ.

ಹೊನ್ನಾವರ — ಆರ್.ಎಸ್. ಭಟ್ಟ

ಅದ್ಭುತ ಭೃಗು ಸಂಹಿತೆಗಳು

ಬಹುಚರ್ಚಿತವೂ ಮನುಷ್ಯನನ್ನು ಯಾವಾಗಲೂ ಕಲಕುತ್ತಿರುವಂಥದೂ ಆದ ವಿಷಯ ಜ್ಯೋತಿಷ್ಯ. ಇಂದಿಗೂ ಜ್ಯೋತಿಷ್ಯವು ನಂಬಲರ್ಹವಾದ ಶಾಸ್ತ್ರವಲ್ಲವೆಂದು ಘಂಟಾಘೋಷವಾಗಿ ಸಾರುವವರೂ ಅಂತರಂಗದಲ್ಲಿ ತಮ್ಮ ಭವಿಷ್ಯತ್ತನ್ನು 'ತಿಳಿದವ'ರಿಂದ ಅರಿಯುವ ತವಕ ತೋರುತ್ತಾರೆ. ದಿ. ಕನ್ಹಯ್ಯಲಾಲ್ ಮುನಶಿಯವರ ಪ್ರಸ್ತುತ ಲೇಖನ ವಿಚಾರವಾದಿಗಳಿಗೆ ಒಳ್ಳೆಯ ಆಹಾರ ಒದಗಿಸುತ್ತದೆ. ಯಾವುದನ್ನು ಸರಿಯಾದ ವಿವೇಚನೆಯಿಲ್ಲದೆ ಸ್ವೀಕರಿಸಲೂ ಬೇಡಿ, ತಿರಸ್ಕರಿಸಲೂ ಬೇಡಿ ಎಂಬಂಥ ಪಾಠವನ್ನಿದು ನಮಗೆ ಹೇಳಿಕೊಡುತ್ತದೆ. ಈ ಬಗೆಯ ಮೌಲಿಕ ಲೇಖನವನ್ನು ಪುನಃ ಪ್ರಕಟಿಸಿದ್ದಕ್ಕಾಗಿ ಧನ್ಯವಾದಗಳು.

ಧಾರವಾಡ — ಪ್ರಹ್ಲಾದ ಕುಲಕರ್ಣಿ

ಸಾಧಾರಣ ಕಥೆ

ಅಕ್ಟೋಬರ್ 'ಕಸ್ತೂರಿ'ಯಲ್ಲಿ ಪ್ರಕಟವಾದ ಕಥೆ 'ಸಂಗಾತಿ ಯಾರಿಗೆ?' ಅದೇಕೋ ಈ ಪತ್ರಿಕೆಯ ಘನತೆಗೆ ತಕ್ಕುದಲ್ಲ ಎನಿಸುತ್ತದೆ. ಹೆಣ್ಣುಗಳೊಂದಿಗೆ ಚೆಲ್ಲಾಟವಾಡುವ ರವಿಯಂತಹ ಆಷಾಢಭೂತಿಗಳು ಸಮಾಜದಲ್ಲಿ ಇರಲಾರರೆಂದೇನೂ ಅಲ್ಲ. ಆದರೆ ಕತೆಯ ರಚನೆ ಮತ್ತು ಬೆಳವಣಿಗೆಯಲ್ಲಿ ಕಲಾತ್ಮಕತೆ ಮಾತ್ರ ಎಷ್ಟೂ ತೋರುತ್ತಿಲ್ಲ. ಸಿನಿಮೀಯ ರೀತಿಯಲ್ಲಿ ಇಲ್ಲಿ ನಡೆದು ಹೋಗುವ ಘಟನೆಗಳನ್ನು ನೋಡಿದಾಗ ಓದುಗನಿಗೆ ಗಾಢ ನಿರಾಸೆಯಾಗುತ್ತದೆ.

ಕಲಬುರ್ಗಿ — -ರವೀಂದ್ರ ಬುಮಾರಾಣೆ

ಡಾ॥ ಕೌಲಗುಡ್ಡ

ಆಧುನಿಕ ವೈದ್ಯರನ್ನು ಸಾಮಾನ್ಯವಾಗಿ ಸಮಾಜ ಗುರುತಿಸುವುದು ಅವರು ಗಳಿಸುವ ಸಂಪತ್ತಿನ ಮಾನದಿಂದ. ಇದು ಇಂದಿನ ಸಾಮಾಜಿಕ ಮೌಲ್ಯಗಳಿಗೆ ಹಿಡಿದ ಕನ್ನಡಿಯಾಗಿರಬಹುದು. ಆದರೆ ಹಣಗಳಿಕೆಗೆ ಗೌಣ ಸ್ಥಾನವನ್ನಿತ್ತು ರೋಗಿಗಳ ಸೇವೆಯಲ್ಲಿಯೇ ಸಾರ್ಥಕತೆಯನ್ನು ಕಂಡುಕೊಳ್ಳುವಂತಹ ವೈದ್ಯರೂ ನಮ್ಮ ಮಧ್ಯದಲ್ಲಿಯೇ ಇದ್ದು ಹೋದರು ಎಂಬುದನ್ನು ನಂಬುವುದು ಕೂಡ ಕಠಿಣವಾಗುತ್ತದೆ. ಡಾ॥ ಶ್ರೀನಿವಾಸ ಕೌಲಗುಡ್ಡರು ಇಂಥ ಒಬ್ಬ ವ್ಯಕ್ತಿ ಎಂಬುದು ಡಾ॥ ಸುನಂದಾ ಕುಲಕರ್ಣಿಯವರ ಲೇಖನದಿಂದ ನನಗೆ ಮನವರಿಕೆಯಾಯಿತು. ಡಾ॥ ಪ್ರಭುಶಂಕರರ ಒಂದು ಪುಸ್ತಕದಲ್ಲೂ ಡಾ॥ ಕೌಲಗುಡ್ಡರ ಬಗ್ಗೆ ಮನೋಜ್ಞ ಲೇಖನವೊಂದನ್ನು ಓದಿದ ನೆನಪು.

ಕಾರವಾರ — ಎಂ. ರಾಧಾಕೃಷ್ಣ [illegible]

ಗೋರ್ಬಾಚೇವ್

ಸೋವಿಯತ್ ರಶಿಯದ ಹೊಸ ನಾಯಕ ಗೋರ್ಬಾಚೇವ್ ಕುರಿತು ಸಂಜೀವ ಪ್ಯಾಟಿಯವರು ಬರೆದ ಲೇಖನ ವಿವರಪೂರ್ಣವಾಗಿದೆ. ಶೈಲಿ ರೋಚಕವಾಗಿದೆ. ಒಂದು ಕಾಲಕ್ಕೆ ಕಬ್ಬಿಣದ ಪರದೆಯ ಹಿಂದಡಗಿದ್ದ ಜಗತ್ತಿನ ಬಹು ದೊಡ್ಡ ಭಾಗವನ್ನು ಪುನಃ ಬಯಲಿಗೆ ತಂದದ್ದು ಗೋರ್ಬಾಚೇವರ ಮಹತ್ಸಾಧನೆ. ಆದರೆ ಸ್ಟಾಲಿನ್-ಬ್ರೆಜ್ನೇವ್ ಪರಂಪರೆಯಲ್ಲಿ ಬೆಳೆದು ಬಂದ 'ಶಿಷ್ಟ' ಕಮ್ಯೂನಿಸ್ಟರ ಪ್ರಭಾವ ಇನ್ನೂ ಎಷ್ಟು ಉಳಿದಿದೆಯೆಂಬುದರ ಮೇಲೆಯೇ ಆ ದೇಶದ ಭವಿತವ್ಯದ ನಿರ್ಧಾರವಾಗಲಿದೆ.

ಜಮಖಂಡಿ — ಲಿಂಗಪ್ಪ ಮುಂಡಾಸದ

ಸಂಶೋಧಕ ವಾಕಣಕರ್

'ಮನಸಾ'ರವರು ಚಿತ್ರಿಸಿದ ಶಬ್ದಚಿತ್ರ 'ವಿ.ಶ್ರೀ ವಾಕಣಕರ್' ತುಂಬ ಪರಿಣಾಮಕಾರಿಯಾಗಿದೆ. ತಮ್ಮ ಜೀವಿತಾವಧಿಯಲ್ಲಿ ಅವರು ಭಾರತೀಯ ಸಂಸ್ಕೃತಿಯ ಪೋಷಕರಾಗಿ ಮಾಡಿದ ಮಹತ್ಕಾರ್ಯಗಳ ಪಟ್ಟಿಯೇ ಅವರ ಯೋಗ್ಯತೆಯ ಉಚ್ಚ ಅಂತಸ್ತನ್ನು ಎತ್ತಿ ತೋರುತ್ತದೆ.

ಬೆಳಗಾಂವಿ — ರಂಜನಾ ಜೋಶಿ

ಓದುಗರಲ್ಲಿ

ಇದೇ ಸಂಚಿಕೆಯ ಪುಸ್ತಕ ವಿಭಾಗಕ್ಕೆ ಮುನ್ನುಡಿಯ ರೂಪದಲ್ಲಿ ಬಂದ ಮಾತುಗಳಲ್ಲಿ (ಪುಟ 108) ಇದು "ನಮ್ಮ 1952 ಜುಲೈ ಸಂಚಿಕೆಯಲ್ಲಿ ಬಂದಿವೆ" ಎಂದಿದ್ದುದನ್ನ "1962 ಜುಲೈ" ಎಂದು ದಯವಿಟ್ಟು ತಿದ್ದಿಕೊಳ್ಳಿ. —ಸಂ.

ಕಸ್ತೂರಿ

ವರ್ಷ ೩೩	ನವೆಂಬರ್ ೧೯೮೮	ಸಂಚಿಕೆ ೩

ಯೋಗ

ಪಶ್ಚಿಮದ ಭೋಗಭೂಮಿಯಲ್ಲಿ ಹುಟ್ಟಿಬೆಳೆದು ಸ್ವಾಮಿ ವಿವೇಕಾನಂದರ ಪ್ರಭಾವಕ್ಕೊಳಗಾಗಿ ಅವರ ಪದತಲದಲ್ಲಿ ತನ್ನನ್ನೇ ಸಂಪೂರ್ಣವಾಗಿ ಸಮರ್ಪಿಸಿಕೊಂಡು, ಈ ಧರ್ಮ ಭೂಮಿ, ಕರ್ಮಭೂಮಿಯ ಸೇವೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ 'ಮಹಾಶ್ವೇತೆ' ಸಹೋದರಿ ನಿವೇದಿತಾ ಒಂದು ದಿನ ಮುಂಜಾವಿನಲ್ಲಿ ತಮ್ಮ ಕೊಠಡಿಯಲ್ಲಿ ಅಧ್ಯಯನ ನಿರತರಾಗಿದ್ದರು. ಅವರಿಂದ ಪ್ರಭಾವಿತನಾಗಿದ್ದ ವಿದ್ಯಾರ್ಥಿಯೊಬ್ಬ ಅವರ ಕೊಠಡಿಯನ್ನು ಪ್ರವೇಶಿಸಿದ. ಓದುತ್ತಿದ್ದ ಅವರ ಗಮನ ಸೆಳೆಯಲೆಂದು ಮೆಲ್ಲಗೆ ಕೆಮ್ಮಿದ. ನಿವೇದಿತಾರಿಗೆ ಅದು ಗೊತ್ತಾಗಲಿಲ್ಲ. ವಿದ್ಯಾರ್ಥಿ ಮೆಲ್ಲಗೆ "ಮಾ" ಎಂದು ಕರೆದ. ಊಹೂಂ. ನಿವೇದಿತಾ ಓದುತ್ತಲೇ ಇದ್ದರು. ವಿದ್ಯಾರ್ಥಿ ಮತ್ತೊಮ್ಮೆ ಸ್ವಲ್ಪ ಜೋರಾಗಿ "ಕ್ಷಮಿಸಿ ಮಾ" ಎಂದ. ಥಟ್ಟನೇ ಎಚ್ಚೆತ್ತ ನಿವೇದಿತಾ ಏನು ಎಂಬಂತೆ ವಿದ್ಯಾರ್ಥಿಯ ಕಡೆ ತಿರುಗಿದರು.

"ಮಾ... "ಕೇಳಲೋ ಬೇಡವೋ ಎನ್ನುವಂತಿತ್ತು ವಿದ್ಯಾರ್ಥಿಯ ಧ್ವನಿ "ಹೂಂ, ಏನದು ಕೇಳು" ನಿವೇದಿತಾರ ಭರವಸೆಯ ಧ್ವನಿ.

"ಮಾ", ಯೋಗ ಎಂದರೇನು?" ಅಳುಕುತ್ತ ಕೇಳಿದ ಆತ.

ಒಂದು ಕ್ಷಣ ಆತನೆಡೆಗೆ ನೋಡಿದರು - ನಿವೇದಿತಾ. ತಾನು ಕೇಳಿದ್ದು ತಪ್ಪಾಯಿತೇನೋ ಎಂದುಕೊಳ್ಳುತ್ತಿರುವಾಗಲೇ, "ನೋಡು ಮಗೂ ಅಲ್ಲಿ ಮೇಜಿನ ಮೇಲಿರುವ ಮೊಳೆ ಹಾಗೂ ಸುತ್ತಿಗೆ ತೆಗೆದುಕೊ", ಎಂದರವರು. ವಿದ್ಯಾರ್ಥಿ ತೆಗೆದುಕೊಂಡ.

ಗೋಡೆಗೆ ಮೊಳೆಯನ್ನು ಹೊಡೆ. ಆ ಪಟವನ್ನು ನೇತು ಹಾಕಬೇಕು" ಆಜ್ಞೆಯಂತೆ ವಿದ್ಯಾರ್ಥಿ ಮೊಳೆಯನ್ನು ಹಿಡಿದು ಕೊಂಡು ಕುಟ್ಟಿದ. ಠಣ್ ಎಂಬ ಶಬ್ದದೊಂದಿಗೆ ಮೊಳೆ ಸಿಡಿದು ಬಿತ್ತು. ಮತ್ತೆ ಬಡಿದ. ಆಗಲೂ ಅದೇರೀತಿ. ಮೂರನೇ ಬಾರಿ ಮೊಳೆಯನ್ನು ಭದ್ರವಾಗಿ ಹಿಡಿದುಕೊಂಡು ಸುತ್ತಿಗೆಯಿಂದ ಬಲವಾಗಿ ಬಾರಿಸಿದ ಮೊಳೆ ಸಿಡಿಯಲಿಲ್ಲ, ಆದರೆ ಬಗ್ಗಿ ಹೋಯಿತು!

ನಿವೇದಿತಾ ತಮ್ಮ ಕುರ್ಚಿಯಿಂದ ಎದ್ದು ಮೊಳೆ ಹಾಗೂ ಸುತ್ತಿಗೆ ತೆಗೆದುಕೊಂಡರು ಒಮ್ಮೆ ಗೋಡೆಯ ಕಡೆ ಗಮನವಿಟ್ಟು ನೋಡಿ ಒಂದು ಕಡೆ ಮೊಳೆಯನ್ನಿಟ್ಟು ಫಟ್, ಫಟ್ ಎಂದು ಎರಡು ಬಾರಿ ಹೊಡೆದರಷ್ಟೆ. ಮೊಳೆ ಗೋಡೆಯೊಳಗೆ ತೂರಿತು. ಅವರು ವಿದ್ಯಾರ್ಥಿಯೆಡೆಗೆ ತಿರುಗಿ, "ಇದೇ ಯೋಗ" ಎಂದರು.

"ನೋಡು, ನೀನು ಕಲ್ಲಿನ ಮೇಲೆ ಮೊಳೆಯನ್ನಿಟ್ಟು ಬಡಿದೆ. ಅದು ಹೇಗೆ ಒಳಗೆ ಸೇರಿತು? ನಾನು ಎರಡು ಕಲ್ಲುಗಳ ಸಂದಿಯಲ್ಲಿ ಮೊಳೆಯಿಟ್ಟು ಬಡಿದೆ. ಮೊಳೆ ನಿಂತಿತು. ನಾವು ಕುಶಲತೆ ಮಾಡುವುದೇ ಯೋಗ. ಅರ್ಥವಾಯಿತೆ?" ಎಂದು ಅವನ ತಲೆ ಸವರಿದರು. ವಿದ್ಯಾರ್ಥಿ ಹರ್ಷದಿಂದ ಅವರಿಗೆ ನಮಿಸಿ ತೆರಳಿದ.

(ಸಾಭಾರ)

• 'ವರದ' ಯಲ್ಲಾಪುರ •

ಸೂರ್ಯನಿಗೆಂಬೆ ನಮೋ ನಮೋ



● ಎ.ಪಿ. ರಾಧಾಕೃಷ್ಣ ●

ಇದಕ್ಕೆ ಕಾರಣವಿಲ್ಲದಿಲ್ಲ. ಅತ್ಯಂತ ಹಿರಿಯ ನಾದ ಅವನಿಗಿಂದು ಐವತ್ತು ಕೋಟಿ ವರ್ಷಗಳಷ್ಟು ವಯಸ್ಸು. ಆಗ ಸೂರ್ಯನಿರುವಲ್ಲಿ ಹೈಡ್ರೋಜನ್ ಅಣುಗಳ ಮಹಾ ಅನಿಲ ರಾಶಿ ಪಸರಿಸಿತ್ತು. ಅನಿಲ ರಾಶಿಯ ಅಗಾಧ ದ್ರವ್ಯ ರಾಶಿ ಮತ್ತು ಸಾಂದ್ರತೆಗೆ ಅನುಗುಣವಾಗಿ ಗುರುತ್ವ ಬಲವೂ ಅತ್ಯಗಾಧವಾಗಿತ್ತು. ಈ ಅಗಾಧ ಗುರುತ್ವಬಲ ಮುಷ್ಟಿಯಲ್ಲಿ ಹಿಟ್ಟಿನ ಮುದ್ದೆಯನ್ನು ಹಿಚುಕಿದಂತೆ ಅನಿಲ ರಾಶಿಯನ್ನು ನಿಧಾನವಾಗಿ ಹಿಚುಕುತೊಡಗಿತು. ಇದರಿಂದಾಗಿ ಅನಿಲ ರಾಶಿಯ ಗಾತ್ರ ಕುಸಿಯ ತೊಡಗಿತು. ಕುಗ್ಗಿದ ಅನಿಲ ರಾಶಿಯ ಕೇಂದ್ರದ ಉಷ್ಣತೆ ಒಂದೂವರೆ ಕೋಟಿ ಡಿಗ್ರಿ ಸೆಲ್ಸಿಯಸ್ಸುಗಳಷ್ಟಾದರೆ ಒತ್ತಡ ಊಹಾತೀತವಾಗಿತ್ತು. ಇಂಥ ಅಸಾಧಾರಣ ಒತ್ತಡ ಮತ್ತು ಉಷ್ಣತೆಗಳಿಂದಾಗಿ ಪ್ರಳಯ ಸ್ವರೂಪಿ ಪರಮಾಣುಪಿಕಾಗ್ನಿ ಭುಗಿಲೆದ್ದಿತು. ಹೈಡ್ರೋಜನ್ ಪರಮಾಣುಗಳ ಸಂಲಯನದಿಂದ ಉತ್ಪರ್ಜಿತವಾದ ಪರಮಾಣು ಶಕ್ತಿಯು ಅನಿಲ ರಾಶಿಯನ್ನು ವಾಕೋಚಿಸಿದರೆ ಗುರುತ್ವ ಬಲ ಸಂಕೋಚಿಸುತ್ತದೆ. ಒಂದೆಡೆ ಸಂಕೋಚನ. ಇನ್ನೊಂದೆಡೆ ವಾಕೋಚನ. ಇವುಗಳೆರಡರ ನಡುವಿನ ಜಗ್ಗಾಟದಲ್ಲಿ ಸಮ ತೋಲವೇರ್ಪಟ್ಟಾಗ ನಮ್ಮ ಸೂರ್ಯ ಮೈದಾಳಿದ.

ಅಂದಿನಿಂದ ಇಂದಿನ ತನಕ ಈ ಪರಮಾಣು ಕಡಾಯಿ ಕತಕತನೆ ಕುದಿಯುತ್ತಿದೆ. ಪ್ರತಿ ಸೆಕೆಂಡಿಗೆ ೬೦ ಕೋಟಿ ಟನ್ನುಗಳಷ್ಟು ಹೈಡ್ರೋಜನ್ ಪರಮಾಣುಗಳು ಸಂಲಯನಗೊಂಡು ಕ್ಷಕಿರಣ, ಗ್ಯಾಮಾ ಕಿರಣ, ಅಧಿಕ ಶಕ್ತಿಯ ಹ್ರಸ್ವ ಮತ್ತು ದೀರ್ಘ ತರಂಗಾಂತರದ ವಿವಿಧ ವಿಕಿರಣಗಳ ಮಹಾ ಪ್ರವಾಹವೇ ಕೋಡಿ ಬಿರಿದು ಹರಿಯುತ್ತಿವೆ. ಈ ಎಲ್ಲ ಶಕ್ತಿ ಪ್ರಕಾರಗಳನ್ನು ವಿದ್ಯುತ್ಕಾಂತ ವಿಕಿರಣಗಳೆನ್ನುತ್ತೇವೆ. ವಿದ್ಯುತ್ಕಾಂತ ವಿಕಿರಣಗಳಲ್ಲಿ 4000 ಆಂಗ್ಸ್ಟ್ರಾಂನಿಂದ 7400 ಆಂಗ್ಸ್ಟ್ರಾಂ (1 ಆಂಗ್ಸ್ಟ್ರಾಂ. $A = 10^{-10}$ ಮೀಟರ್) ಅಲೆಯುದ್ದದ ವಿಕಿರಣಗಳು ಮಾತ್ರ ಬರಿಗಣ್ಣಿಗೆ ಗೋಚರಿಸಬಲ್ಲವು. ಈ ಅಲೆಯುದ್ದದ ಶಕ್ತಿ ಪ್ರಕಾರವೇ ವೈಜ್ಞಾನಿಕ ಪರಿಭಾಷೆಯಲ್ಲಿ ದೈನಂದಿನ ಜೀವನದಲ್ಲಿ ಸದಾ ಬಳಕೆಯಾಗುತ್ತಿರುವ ಬೆಳಕು. ವಾಸ್ತವವಾಗಿ ನಮ್ಮ ಕಣ್ಣಿಗೆ ಬಿಳಿಯಾಗಿ ಕಾಣಿಸುವ ಬೆಳಕು ವಿವಿಧ ಅಲೆಯುದ್ದದ ಏಳು ಬಣ್ಣಗಳ (ನೇರಳೆ, ಕಡು ನೀಲಿ, ನೀಲಿ, ಹಸಿರು, ಕಿತ್ತಳೆ, ಹಳದಿ, ಮತ್ತು ಕೆಂಪು) ಮಿಶ್ರಣ (ನೇರಳೆ ಬಣ್ಣದ ಅಲೆಯುದ್ದ ಸುಮಾರು 4500 ಆಂಗ್ಸ್ಟ್ರಾಂ ಮತ್ತು ಕೆಂಪು ಬಣ್ಣದ ಅಲೆಯುದ್ದ ಸುಮಾರು 7000 ಆಂಗ್ಸ್ಟ್ರಾಂ).

ಸ್ವಯಂಪ್ರಕಾಶದಿಂದ ಮಿನುಗುವ ಆಕಾಶ ಕಾಯವೇ ನಕ್ಷತ್ರ. ಸೂರ್ಯ ನಮ್ಮ ಅತ್ಯಂತ ಸಮೀಪದ ನಕ್ಷತ್ರ. ಭೂಮಿ ಸೇರಿದಂತೆ ನವ ಗ್ರಹಗಳು ಮತ್ತವುಗಳ ಉಪಗ್ರಹಗಳು ಕ್ಷುದ್ರ ಗ್ರಹಗಳು, ಧೂಮಕೇತುಗಳು ಸೂರ್ಯನ ಸುತ್ತ ಪರಿಭ್ರಮಿಸುತ್ತಿದ್ದು, ಇವುಗಳಿಗೆಲ್ಲ ಸೂರ್ಯನೇ ಅಧಿಪತಿ. ಈ ಸೂರ್ಯಾಧಿಪ ವ್ಯವಸ್ಥೆಯ ಅಭಿನಾಮ ಸೌರವ್ಯೂಹ. ನಮಗಂತೂ ಸೂರ್ಯನೇ ಮಹಾಕಾಯ. ಗಾತ್ರದಲ್ಲಿ 12,806 ಕಿಲೋಮೀಟರ್ ವ್ಯಾಸದ, ಭೂಮಿಗಿಂತ 110 ಪಟ್ಟು ದೊಡ್ಡದಾದ, ತೂಕದಲ್ಲಿ 5.99×10^{24} ಕಿಲೋಗ್ರಾಂ ತೂಕದ ಭೂಮಿಗಿಂತ 3,24,000 ಪಟ್ಟು ಅಧಿಕ ತೂಕದ ಸೂರ್ಯ ಕಿರುಭೂಮಿಗೆ ಗುರುತರವೆನ್ನಿಸಿದರೆ ಅಚ್ಚರಿಯಿಲ್ಲ.

ಆದರೆ ವಿಶ್ವದಲ್ಲಿ ಸೂರ್ಯನನ್ನು ಗಾತ್ರದಲ್ಲಿ ರಾಶಿಯಲ್ಲಿ ಮತ್ತು ಪ್ರಕಾಶದಲ್ಲಿ ಮೀರಿಸಬಲ್ಲ ಅಸಂಖ್ಯ ನಕ್ಷತ್ರಗಳುಂಟು. ಸೂರ್ಯ-ಭೂಮಿ ಅಂತರ 14.96 ಕೋಟಿ ಕಿಲೋಮೀಟರಿನಷ್ಟು. ಸೂರ್ಯನನ್ನು ಬಿಟ್ಟರೆ ನಮ್ಮ ಸಮೀಪದ ನಕ್ಷತ್ರ ಆಲ್ಫಾ ಸೆಂಟಾರಿ. ಅದು ಭೂಮಿ-ಸೂರ್ಯ ಅಂತರದ 2,72,000 ಪಟ್ಟು ದೂರದಲ್ಲಿದೆ-ಎಂದೇ ನಮ್ಮ ಪಾಲಿಗೆ ಸೂರ್ಯ ಕಣ್ಣು ಕುಕ್ಕುವ ಪ್ರಖರ ಗೋಲ, ಉಳಿದುವೆಲ್ಲ ಮಿಣುಕು ಜಾಲ.

ಐನಸ್ಟೈನರ ತಲೆಗೂದಲು

ದೀರ್ಘಾವಧಿ ಅಧ್ಯಯನಗಳಿಂದ ಇಂದು ಸೂರ್ಯನ ರಚನೆ ಸಾಕಷ್ಟು ಸ್ಪಷ್ಟವಾಗಿದೆ. ಕೇಂದ್ರ ಭಾಗ, ದ್ಯುತಿಗೋಳ (Photosphere) ವರ್ಣಗೋಳ (chromosphere) ಮತ್ತು ಪ್ರಭಾ ಕಿರೀಟಗಳು ಸೂರ್ಯನ ಪ್ರಮುಖ ರಚನೆಗಳು. ಸೂರ್ಯನ ಕೇಂದ್ರ ಉಷ್ಣತೆ ಒಂದೂವರೆ ಕೋಟಿಯಿಂದ ಎರಡು ಕೋಟಿ ಡಿಗ್ರಿ ಸೆಲ್ಸಿಯೆಸ್ಸುಗಳಷ್ಟಿದ್ದರೆ ಕೇಂದ್ರದಿಂದ ದೂರ ಹೋದಂತೆ ಉಷ್ಣತೆ ಇಳಿಮುಖವಾಗುತ್ತದೆ. ಸುಮಾರು 20,000 ಡಿಗ್ರಿ ಸೆಲ್ಸಿಯಸ್ ಉಷ್ಣತೆಯ ದ್ಯುತಿಗೋಳ ಹೆಸರೇ ಸೂಚಿಸುವಂತೆ ಪ್ರಖರವಾಗಿ ಹೊಳೆಯುವುದರಿಂದ ಇದರ ಪ್ರಖರತೆಯಲ್ಲಿ ವರ್ಣಗೋಳ ಮತ್ತು ಪ್ರಭಾ ಕಿರೀಟಗಳನ್ನು ನಿರ್ದಿಷ್ಟವಾಗಿ ಗುರುತಿಸಲಾರೆವು. ಪೂರ್ಣ ಸೂರ್ಯ ಗ್ರಹಣದ ವೇಳೆಯಲ್ಲಿ ಮಾತ್ರ ಇವುಗಳ ದರ್ಶನ ಲಭ್ಯವಾಗಬಲ್ಲದು. ಸೂರ್ಯಗ್ರಹಣವಾದರೋ ನಿಸರ್ಗದ ಅದ್ಭುತ ವಿದ್ಯಮಾನ. ಸೂರ್ಯ, ಚಂದ್ರ ಮತ್ತು ಭೂಮಿ ಏಕರೇಖಸ್ಥವಾದಾಗ ಸೂರ್ಯ ಕಿರಣ ಚಂದ್ರನ ಮೇಲೆ ಬಿದ್ದು ಚಂದ್ರನ ನೆರಳು ಭೂಮಿಯ ಮೇಲೆ ಬಿದ್ದು ಆ ಭಾಗದ ಮಂದಿಗಳಿಗೆ ಹೊಳೆ ಹೊಳೆವ ಸೂರ್ಯನಿರುವಲ್ಲಿ ಕರಿಯ ಸೂರ್ಯ ಬಿಂಬವಷ್ಟೆ ಗೋಚರಿಸುತ್ತದೆ. ಸೂರ್ಯನ ಕರಿ ಬಿಂಬದ ಅಂಚಿನಲ್ಲಿ ಕೆಂಪು ಮತ್ತು ಕಿತ್ತಳೆ ಬಣ್ಣದ ವೃತ್ತಾಕಾರ-ವರ್ಣಗೋಳ ಕಂಗೊಳಿಸಿದರೆ, ವರ್ಣಗೋಳದಿಂದ ಹೊರಕ್ಕೆ ಹೊಳೆವ ಪ್ರಭಾಕಿರೀಟ ನಮ್ಮನ್ನು ರೋಮಾಂಚನಗೊಳಿಸಬಲ್ಲದು.

ಸೂರ್ಯನ ರಚನೆ



1. ಸೂರ್ಯಗರ್ಭ-ಕಾರ್ಬನ್ ತಿರುಳು. ಹೀಲಿಯಂ ದಹನಶೇಷ.
2. ಉರಿಯುವ ಹೀಲಿಯಂ ಕವಚ.
3. ಉರಿಯುವ ಹೈಡ್ರೋಜನ್ ಕವಚ.
4. ವಿಕಿರಣ ವಲಯ.
5. ವರ್ಣಗೋಳ.
6. ದ್ಯುತಿಗೋಳ.
7. ಸೂರ್ಯನ ಹೊರ ಆವರಣ - ಕೊರೊನಾ. ಸಾವಿರ ಕಿ.ಮೀ. ಎತ್ತರಕ್ಕೆ ಪುಟಿಯುವ ಜ್ವಾಲೆಗಳು.
8. ಸೌರ ಕಲೆಗಳು.

1930ರಲ್ಲಿ ಫ್ರೆಂಚ್ ಖಗೋಳಶಾಸ್ತ್ರಜ್ಞ ಬೆನಾರ್ಡ್ ಲಿಯೋಟ್ ಈ ಪ್ರಭಾಕಿರೀಟದ ಅಧ್ಯಯನಕ್ಕಾಗಿ ವಿಶಿಷ್ಟ ದೂರದರ್ಶಕ, ಕೊರೊನಾಗ್ರಾಫನ್ನು ಉಪಜ್ಞಿಸಿದ ಮೇಲೆ ಕೊರೊನಾ ದರ್ಶನಕ್ಕಾಗಿ ಸೂರ್ಯಗ್ರಹಣದ ನಿರೀಕ್ಷೆಯಲ್ಲಿರಬೇಕಾದ ಪ್ರಮೇಯ ತಪ್ಪಿದೆ. ಈ ಚಿಕ್ಕ ಚೊಕ್ಕ ಸಂಕೀರ್ಣ ಉಪಕರಣದಲ್ಲಿ ಕಣ್ಣಿಗೆ ಕಾಣಿಸುವ ಸೂರ್ಯಬಿಂಬದ ಕೇಂದ್ರ ಭಾಗವನ್ನು ಚಿಕ್ಕ ಬಿಲ್ಲೆಯೊಂದು ಮರೆಮಾಡಿ ಪ್ರಭಾಕಿರೀಟವನ್ನು ದರ್ಶಿಸುತ್ತದೆ. ಹಲವು ಸಾವಿರ ಕಿಲೋಮೀಟರ್‌ಗಳ ಎತ್ತರಕ್ಕೆ ಚಿಮ್ಮುವ ಕೆನ್ನಾಲಗೆಗಳಿಂದ ಪ್ರಭಾಕಿರೀಟ ಅತ್ಯದ್ಭುತವಾಗಿ ಕಾಣಿಸುತ್ತದೆ. "ಕೊರೊನಾ ರಚನೆ ನನ್ನ ಪಾಲಿಗೆ ಇಳಿವಯಸ್ಸಿನ ಆಲ್ಬರ್ಟ್ ಐನ್‌ಸ್ಟೈನರ (1879-1955) ಕೆದರಿದ ತಲೆ ಗೂದಲ ರಾಶಿಯಂತೆ ಗೋಚರಿಸುತ್ತದೆ" ಎಂದು ಖ್ಯಾತ ವಿಜ್ಞಾನಿ ಮತ್ತು ಜನಪ್ರಿಯ ವಿಜ್ಞಾನ ಲೇಖಕ ಜಾರ್ಜ್ ಗ್ಯಾಮೊವ್ ವರ್ಣಿಸಿದ್ದಾರೆ.

ಸೂರ್ಯನ ಈ ಬಹಿರಾವರಣಕ್ಕೆ ನಿರ್ದಿಷ್ಟ ಗಡಿಯೆನ್ನುವುದಿಲ್ಲ. ಸೂರ್ಯ ಪ್ರಕ್ಷುಬ್ಧತೆಗೆ ಅನುಗುಣವಾಗಿ ಹಿಗ್ಗುತ್ತದೆ, ಅಥವಾ ಕುಗ್ಗುತ್ತದೆ. ಭೂಮಿ ಸೂರ್ಯರ ನಡುವಣ ಅಂತರದ ಐದು ಪಟ್ಟು ದೂರದವರೆಗೆ ಅಂದರೆ ಸುಮಾರು ಗುರು ಗ್ರಹದವರೆಗೆ ಸೂರ್ಯನ ಅನಿಲ ರಾಶಿ ಪಸರಿಸಿದೆ. ಅದಕ್ಕೆ ಅನಿಲ ರಾಶಿ ಎನ್ನುವುದಕ್ಕಿಂತಲೂ- ಪ್ಲಾಸ್ಮಾ ಎನ್ನುವುದು ಹೆಚ್ಚು ಸೂಕ್ತ. ಪ್ಲಾಸ್ಮಾ ಎಂದರೆ ದ್ರವ್ಯದ ಅಯಾನೀಕೃತ ಅನಿಲ ಸ್ಥಿತಿ. ಧನಾವೇಶ ಪ್ರೋಟಾನ್ ಮತ್ತು ಆವೇಶರಹಿತ ನ್ಯೂಟ್ರಾನ್ ಬಲವದ್ಬಂಧಿತವಾಗಿರುವ ನ್ಯೂಕ್ಲಿಯಸಿನ ಸುತ್ತ ವಿವಿಧ ಕಕ್ಷೆಗಳಲ್ಲಿ ಋಣಾವಶೇಷ ಎಲೆಕ್ಟ್ರಾನುಗಳು ಪರಿಭ್ರಮಿಸುವುದು ಪರಮಾಣುವಿನ ಮೂಲರಚನೆ. ಆದರೆ ಸೂರ್ಯಗರ್ಭದ ಅತ್ಯಗಾಧ ಉಷ್ಣತೆಯಲ್ಲಿ ಕಕ್ಷೆಗಳು ನುಚ್ಚು ನುರಿಯಾಗಿ ಎಲೆಕ್ಟ್ರಾನುಗಳು ನ್ಯೂಕ್ಲಿಯಸ್ಸಿನ ಪ್ರಬಲಾಕರ್ಷಣೆಯಿಂದ ತಪ್ಪಿಸಿಕೊಂಡು ಸರ್ವ ತಂತ್ರ ಸ್ವತಂತ್ರವಾಗುತ್ತವೆ. ಇದುವೇ ಅಯಾನೀಕೃತ ಅನಿಲ ಸ್ಥಿತಿ, ಸೂರ್ಯ ಸೇರಿದಂತೆ ಎಲ್ಲ ನಕ್ಷತ್ರಗಳಲ್ಲೂ ವಸ್ತುಘನ "ವಸ್ತುಸ್ಥಿತಿ" ಇದು.

ಸೌರಮಾರುತ

ಸಿಗಿನಿಗಿಸುವ ಸೂರ್ಯನಿಂದ ಸೆಕೆಂಡಿಗೆ 500 ಕಿಲೋಮೀಟರುಗಳ ವೇಗದಲ್ಲಿ ಶಕ್ತಿಶಾಲಿ ಕಣಗಳಾದ ಪ್ರೋಟಾನ್, ಎಲೆಕ್ಟ್ರಾನುಗಳ ಮಹಾ ಪ್ರವಾಹವೇ ಹರಿಯುತ್ತದೆ. ಈ ಕಣಗಳ ಸಂತತ ಪ್ರವಾಹಕ್ಕೆ ಅಮೇರಿಕನ್ ಭೌತ ಶಾಸ್ತ್ರಜ್ಞ ಯ್ಯೂಜಿನಿ ನ್ಯೂಮೆನ್ ಪಾರ್ಕರ್ (1927)-ಟಂಕಿಸಿದ ಹೆಸರು ಸೌರಮಾರುತ (1959). ಧೂಮಕೇತುಗಳ ಬಾಲ ಸದಾ ಸೂರ್ಯನಿಗೆ ವಿಮುಖವಾಗಿರುವುದಕ್ಕೆ ಸೌರ ಮಾರುತ ಕಾರಣ- ಬೀಸುಗಾಳಿ ವಿರುದ್ಧ ದಿಶೆಯಲ್ಲಿ ಕೆನ್ನಾಲಗೆಗಳು ಚಾಚುವಂತೆ. ಅತ್ಯುಜ್ವಲವಾಗಿ ಬೆಳಗುವ ಧ್ರುವಪ್ರಭೆಗಳಿಗೂ ಸೌರ ಮಾರುತವೆ ಮೂಲ. ಸೌರಮಾರುತ ರೂಪದಲ್ಲಿ ಸೆಕೆಂಡಿಗೆ ಹತ್ತು ಕೋಟಿ ಕಿಲೋ ಗ್ರಾಮುಗಳಷ್ಟು ದ್ರವ್ಯ ಸೂರ್ಯನಿಂದ ಅಂತರ್ ನಾಕ್ಷತ್ರಿಕ ಅವಕಾಶಕ್ಕೆ (Inter steller space) ಸೇರ್ಪಡೆಯಾಗುತ್ತಿದೆ. ವಿಶ್ವದ ಬೃಹತ್ತಿನ ಮುಂದೆ ತೃಣಸಮಾನ ಮಾನವನಿಗೆ ಇದೇನೋ ಅಸಾಧಾರಣ ಪ್ರಮಾಣವೆನ್ನಿಸಿದರೂ ಸೂರ್ಯನಿಗಿದು ಬರೆ ಗೌಣ. ಈ ತನಕ ಸೌರಮಾರುತ ರೂಪದಲ್ಲಿ ಸೂರ್ಯ ಕಳಕೊಂಡ ದ್ರವ್ಯ - ಅದರ ಒಟ್ಟು ದ್ರವ್ಯದ ಸಾವಿರ ಒಂದು ಪಾಲೂ ಇಲ್ಲ.

ಜೀವಿಗಳ ಪಾಲಿಗೆ ಸೂರ್ಯನ ಶಕ್ತಿಶಾಲಿ ಕಣಗಳು ಅಪಾಯಕಾರಿ. ಭೂಮಿಯ ಮೇಲೆ ಜೀವ ಉಗಮವಾಗುವುದಕ್ಕೆ ನಿಸರ್ಗವು ಯುಕ್ತವಾದ ದಾಳ ಹೂಡಿದೆ! ಭೂಮಿಯನ್ನಾವರಿಸಿದ ಕಾಂತಕ್ಷೇತ್ರವು ಸೂರ್ಯೋತ್ಸರ್ಜಿತ ಶಕ್ತಿಶಾಲಿ ಕಣಗಳನ್ನು ತಡೆಹಿಡಿಯುವುದರಿಂದ ಹೆಚ್ಚಿನ ಕಣಗಳೆಲ್ಲ ಭೂಮಿಯ ವಾತಾವರಣದೊಳಗೆ ನುಸುಳದೆ ಕೊಡುಗಲ್ಲನ್ನು ಸುತ್ತುವರಿದು ಸಾಗುವ ನದಿಯಂತೆ ಭೂಮಿಯನ್ನು ಸುತ್ತುವರಿದು ಸಾಗುತ್ತದೆ. ಒಂದು ವೇಳೆ ಕೆಲವು ಕಣಗಳು ವಾಯುಮಂಡಲದೊಳಕ್ಕೆ ನುಸುಳಿದರೂ, ವಾಯುಮಂಡಲದ ದಪ್ಪ ಪದರ ಅವುಗಳ ವೇಗಕ್ಕೆ ಕಡಿವಾಣ ಹಾಕಿ ಶಕ್ತಿಯನ್ನು ಕುಂಠಿತಗೊಳಿಸುತ್ತದೆ.

ಸೂರ್ಯನಿಂದ ಉತ್ಸರ್ಜಿಸಲ್ಪಡುವ ಹಲವು ನಮೂನೆಯ ವಿಕಿರಣಗಳಲ್ಲಿ ಯಮಪ್ರಾಯ

ವಾಮದು ಅತಿನೇರಳೆ ಕಿರಣ. ಇವುಗಳನ್ನು ತಾಳಿಕೊಳ್ಳುವ ತಾಕತ್ತು ಜೀವಿಗಳಿಗಿಲ್ಲ. 2400 ರಿಂದ 3000 ಆಂಗ್‌ಸ್ಟ್ರಾಂ ಅಲೆಯುದ್ದದ ಅತಿ ನೇರಳೆ ಕಿರಣಗಳನ್ನು ವಾಯುಮಂಡಲದ ಉನ್ನತ ಸ್ತರದಲ್ಲಿರುವ ಓಝೋನ್ ವಲಯ ಹೀರಿ ನಿರಪಾಯಕರವಾದ ವಿಕಿರಣವನ್ನಷ್ಟೇ ಭೂಮಿಗೆ ಬಿಡುತ್ತದೆ. ಎಂದೇ ಭೂಮಿ ಕೆಂಬಣ್ಣದ ಬರಡು ಭೂಮಿಯಾಗದೆ ಉಳಿದಿದೆ. ಜೀವ ಜಗತ್ತು ಇಲ್ಲಿ ಕೊಸರೊಡೆಯಲು ಸಾಧ್ಯವಾಗಿದೆ.

ದೃಷ್ಟಿ ಬೊಟ್ಟೇ?

ಅನಾದಿಕಾಲದಿಂದಲೂ ಪರಿಪೂರ್ಣನೆಂದು ನಂಬಲಾಗಿದ್ದ ಸೂರ್ಯನ ಮೇಲ್ಮೈಯಲ್ಲಿ ತನ್ನ ದೂರದರ್ಶಕದ ಮೂಲಕ ಕಪ್ಪು ಕಲೆಗಳನ್ನು ಗುರುತಿಸಿ ಭಾವುಕ ಮಹಾಶಯರಿಗೆ ಆಘಾತ ಕೊಡಿದ 'ಕುಖ್ಯಾತಿ' ಹದಿನೈದನೇ ಶತಮಾನದ ಖಗೋಳಶಾಸ್ತ್ರಜ್ಞ ಗೆಲಿಲಿಯೋ ಗೆಲಿಲಿಗೆ (1564-1642) ಸಲ್ಲುತ್ತದೆ. ನಿಮ್ಮಲ್ಲಿ ದೂರದರ್ಶಕವಿದೆಯೆ? ಹಾಗಾದರೆ ಸೂರ್ಯನೆಡೆಗೆ ಗುರಿ ಹಿಡಿಯಿರಿ. ಆದರೆ ಒಂದು ಮಾತು ಎಂದಿಗೂ ಸೂರ್ಯ ಅಥವಾ ಇನ್ನಾವುದೇ ಪ್ರಖರ ಬೆಳಕಿನ ಆಕರವನ್ನು ದೂರದರ್ಶಕದ ಮೂಲಕ ನೇರವಾಗಿ ನಿಟ್ಟಿಸಬೇಡಿ. ಕಣ್ಣು ಕುರುಡಾಗುವ ಎಲ್ಲ ಅಪಾಯಗಳುಂಟು. ನಿಮ್ಮ ದೂರದರ್ಶಕದ ಅಕ್ಷಿಮಸೂರದ ಹಿಂದೆ ಬಿಳಿಯ ಹಾಳೆ ಅಥವಾ ಪರದೆ ಇರಿಸಿದ್ದಾದರೆ ಕಣ್ಣಿಗೆ ತ್ರಾಸವಿಲ್ಲದೆ ಸೂರ್ಯಬಿಂಬ ಮತ್ತದರ ಕಲೆಗಳನ್ನು ಗುರುತಿಸಲು ಸಾಧ್ಯ.

ಕಲೆಯ ವಿಸ್ತಾರ ಸಾವಿರ ಕಿಲೋಮೀಟರುಗಳಿಂದ ಲಕ್ಷ ಕಿಲೋಮೀಟರ್‌ಗಳವರೆಗಿರಬಹುದು. ಜರ್ಮನ್ ಖಗೋಳ ಶಾಸ್ತ್ರಜ್ಞ ಹೆನ್ರಿಕ್ ಶ್ವಾಬೆ 1825ರಿಂದ ಸತತ 17



ಸೌರವ್ಯೂಹ




"ಅಂತೂ ಈ ಸಾರೀನೂ ನಮ್ಮ ಹುಡುಗೀರೂ ಹೋತು ನಮ್ಮ ಮಾನಾ ಕಾಪಾಡೀದ್ರೂ..ಅಲ್ರೇ"

ವರ್ಷಗಳ ಕಾಲ ಸೌರಕಲೆಗಳನ್ನು ಅಧ್ಯಯನಿಸಿ ಕಲೆಗಳ ಹುಟ್ಟು, ಸಂಖ್ಯೆ ಮತ್ತು ವಿಸ್ತಾರ ಪ್ರತಿ ಹನ್ನೊಂದು ವರ್ಷಗಳಿಗೊಮ್ಮೆ ಕನಿಷ್ಠ ಅಥವಾ ಗರಿಷ್ಠವಾಗುತ್ತದೆಂದು ಸಾರಿದ. ಅರ್ಥಾತ್ ಇಂದೀಗ ಸೌರಕಲೆಗಳ ಸಂಖ್ಯೆ ಅತ್ಯಂತ ಕನಿಷ್ಠವಿದ್ದರೆ ಇನ್ನು ಐದು ವರ್ಷಗಳಲ್ಲಿ ಗರಿಷ್ಠಕ್ಕೇರಿ ಮತ್ತೆ ಆರು ವರ್ಷಗಳಲ್ಲಿ ಪುನಃ ಕನಿಷ್ಠ ಸ್ಥಿತಿ ಬರುತ್ತದೆ.

ಸೌರಕಲೆಗಳ ಜನನ ಹೇಗಾಗಿರಬಹುದು? ಉತ್ತರ ಹೀಗಿದೆ: ಸೂರ್ಯನ ಮೇಲ್ಮೈಯಲ್ಲಿ ಎಲೆಕ್ಟ್ರಾನುಗಳ ಮಹಾಪ್ರವಾಹವೇ ಪ್ರವಹಿಸುತ್ತಿರುತ್ತದೆ. ಸೂರ್ಯನ ಯಾವೆಲ್ಲ ಭಾಗಗಳಲ್ಲಿ ಎಲೆಕ್ಟ್ರಾನುಗಳು ಪ್ರವಹಿಸುತ್ತವೋ ಅಲ್ಲೆಲ್ಲ ಕಾಂತಕ್ಷೇತ್ರ ಉದ್ಭವಿಸುತ್ತದೆ. ಕಾಂತಕ್ಷೇತ್ರ ಎಷ್ಟು ಪ್ರಬಲವಾಗಿದೆಯೆನ್ನುವುದು ಎಲೆಕ್ಟ್ರಾನ್ ಪ್ರವಾಹ ಎಷ್ಟು ತೀವ್ರವಾಗಿದೆ ಎನ್ನುವುದನ್ನು ಅವಲಂಬಿಸಿದೆ. ಸುಮಾರು ಸಾವಿರದಿಂದ ಹದಿನೈದು ಸಾವಿರ ಗಾಸ್‌ಗಳಷ್ಟು, ಭೂ ಕಾಂತ ಕ್ಷೇತ್ರದ ಇಪ್ಪತ್ತು ಸಾವಿರ ಪಟ್ಟು ಪ್ರಬಲ ಕಾಂತ ಕ್ಷೇತ್ರವಿರುವಲ್ಲಿ ಸೂರ್ಯಗರ್ಭದಿಂದ ಮೇಲೇರಿ ಹರಿಯುವ ಉಷ್ಣ ಪ್ರವಾಹ ಒತ್ತಿ ಹಿಡಿಯಲ್ಪಟ್ಟು ಆ ಭಾಗದಲ್ಲಿ ಸೂರ್ಯನ ಮೇಲ್ಮೈಯು ಇತರ ಭಾಗಕ್ಕಿಂತ ಉಷ್ಣತೆ ಕಡಿಮೆಯಾಗಿ ಪ್ರಕಾಶಮಾನವಾದ ಹಿನ್ನೆಲೆಯಲ್ಲಿ ಕಪ್ಪು ಕಲೆಯಾಗಿ ಗೋಚರಿಸುತ್ತದೆ. ಸೌರಕಲೆಗಳಿಗೆ ಕಾರಣವಾದ ಕಾಂತಕ್ಷೇತ್ರದ ಹುಟ್ಟು ಮತ್ತು ಉಷ್ಣ ಪ್ರವಾಹಕ್ಕೆ ನಿರ್ಬಂಧ ವಿಧಿಸುವ ವಿಧಾನದ ರಹಸ್ಯ ಇನ್ನೂ ಸ್ಪಷ್ಟವಾಗಿಲ್ಲ.

ಸೌರಕಲೆಗಳಿಗೂ ಭೂ ಹವಾಗುಣಕ್ಕೂ ನಿಕಟ ಸಂಬಂಧವುಂಟೆಂಬ ಒಂದಂಶವಂತೂ ಸ್ಪಷ್ಟವಾಗಿ ಬಯಲಾಗಿದೆ. ತನ್ನ ಅಕ್ಷದ ಸುತ್ತ ಆವರ್ತಿಸುತ್ತ, ಸೂರ್ಯನ ಸುತ್ತ ಪರಿಭ್ರಮಿಸುತ್ತಿರುವ ಭೂಮಿಯ ಹವಾಗುಣ ಭೂಮಿ ಮೇಲೆ ಪಾತವಾಗುವ ಸೂರ್ಯೋಷ್ಣ ಮತ್ತು ಭೂಮಿ ಆ ಉಷ್ಣವನ್ನು ಹೀರಿಕೊಳ್ಳುವುದರ ಅನುಪಾತದ ಮೇಲೆ ಅವಲಂಬಿಸಿದೆ. ಸೌರಕಲೆ ಮತ್ತು ಭೂಮಿಯ ಹವಾಗುಣದ ನಡುವಣ ಸಂಬಂಧವನ್ನು ಅಧ್ಯಯನಿಸಲೆಂದು 1980 ರಲ್ಲಿ ಅಮೇರಿಕದ ನಾಸಾ ಸಂಸ್ಥೆ 'ಸೋಲಾರ್ ಮ್ಯಾಕ್ಸ್' ಎಂಬ ಆಕಾಶನೌಕೆಯನ್ನು ಉಡ್ಡಯಿಸಿತು. ಭೂಮಿಯಿಂದ 525 ಕಿಲೋಮೀಟರು ಎತ್ತರದ ಕಕ್ಷೆಯಲ್ಲಿ ಸ್ಥಾಪಿತವಾದ ಈ ನೌಕೆ ಸೂರ್ಯನಲ್ಲಿ ನಡೆವ ವಿದ್ಯಮಾನಗಳನ್ನು ಸೆರೆ ಹಿಡಿವ ಸಂವೇದನಾಶೀಲ 'ಕಣ್ಣು'ಗಳನ್ನು ಹೊಂದಿತ್ತು. ಸುಮಾರು ಒಂಬತ್ತು ತಿಂಗಳ ವರೆಗೆ ಸೋಲಾರ್ ಮ್ಯಾಕ್ಸ್ ಸಂಗ್ರಹಿಸಿದ ಮಾಹಿತಿಗಳು ಸೂರ್ಯನ ಬಗ್ಗೆ ಈಗ ಲಭ್ಯವಿರುವ ಮಾಹಿತಿಗೆ ಹೊಸ ಹೊಳಪು ತೋರಿದುವು. ಭೂಮಿಯ ಮೇಲೆ ಪಾತವಾಗುವ ಸೌರಶಕ್ತಿಯ ಪ್ರಮಾಣವನ್ನು 'ಸೌರನಿಯತಾಂಕ' (solar constant) ಎನ್ನುತ್ತಾರೆ (1390 ವ್ಯಾಟ್ ಮೀ.) ಸೂರ್ಯನಿಂದ ಹೊರಹೊಮ್ಮುವ ಶಕ್ತಿಯ ದರದಲ್ಲಿ ಏರಿಳಿತಗಳನ್ನು ಗುರುತಿಸಿದಾಗ ವಿಜ್ಞಾನಿಗಳಿಗೆ ದಿಗ್ಭ್ರಮೆ! ಈ ಏರಿಳಿತ ಮತ್ತು ಸೌರಕಲೆಗಳ [illegible] [illegible]ವಾಯಿತು. ಸೌರಕಲೆಗಳ ಸಂಖ್ಯೆ ಅತ್ಯುಚ್ಚ ಸ್ಥಿತಿಯಲ್ಲಿದ್ದಾಗ ಸೂರ್ಯ



ಕೂಡ ಹೆಚ್ಚಿನ ಪ್ರಕ್ಷುಬ್ಧ ಸ್ಥಿತಿಯಲ್ಲಿರುವುದು ಮತ್ತು ಭೂಮಿಯ ಮೇಲೆ ಪಾತವಾಗುವ ವಿಕಿರಣದ ಪ್ರಮಾಣ ಹೆಚ್ಚು. ಭೂಮಿಯ ಹವಾಗುಣ ಅತ್ಯಂತ ಬೆಚ್ಚಗಿರುವುದು; ಸೌರ ಕಲೆಗಳು ಕ್ಷೀಣಿಸಿದಾಗ ಕಡು ಹಿಮಗಾಲವಿರುವುದು ಸೋಲಾರ್ ಮ್ಯಾಕ್ಸ್ ಮತ್ತಿತರ ಆಕಾಶ ನೌಕೆ ಮತ್ತು ಉಪಗ್ರಹಗಳು ಸಂಗ್ರಹಿಸಿದ ಮಾಹಿತಿಗಳ ಅಧ್ಯಯನದಿಂದ ತಿಳಿದುಬಂತು.

ಸೌರಕಲೆಯ ಬೆರಳೊತ್ತು

ಭೂ ವಾಯುಮಂಡಲದ ಮೇಲೆ ನಿರಂತರ ಪಾತವಾಗುತ್ತಿರುವ ಕಿರಣ ಅಥವಾ ಕಣಗಳ ಧಾರೆಯನ್ನು ವಿಶ್ವಕಿರಣಗಳೆನ್ನುತ್ತೇವೆ. ಅಧ್ಯಯನಕ್ಕೆ ಅನುಕೂಲವಾಗಲೆಂಬ ಉದ್ದೇಶದಿಂದ ವಿಶ್ವಕಿರಣಗಳನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಒಂದು ಸೂರ್ಯೋತ್ಸರ್ಜಿತ ವಿಶ್ವಕಿರಣ (suns cosmic rays) ಇನ್ನೊಂದು ಬ್ರಹ್ಮಾಂಡೋತ್ಸರ್ಜಿತ ವಿಶ್ವಕಿರಣ (galactic cosmic rays) ಸೂರ್ಯೋತ್ಸರ್ಜಿತ ವಿಶ್ವಕಿರಣಗಳ ಪ್ರಮುಖ ಘಟಕ ಕಡಿಮೆ ಶಕ್ತಿಯ ಪ್ರೋಟಾನುಗಳಾದರೆ, ಬ್ರಹ್ಮಾಂಡೋತ್ಸರ್ಜಿತ ವಿಶ್ವಕಿರಣಗಳ ಪ್ರಮುಖ ಘಟಕ ಅತ್ಯಧಿಕ ಶಕ್ತಿಯ ನ್ಯೂಟ್ರಾನುಗಳು ಮತ್ತು ಮೇಸಾನುಗಳು. ಈ ಅಧಿಕ ಶಕ್ತಿಯ ನ್ಯೂಟ್ರಾನುಗಳು ವಾಯುಮಂಡಲದ ನೈಟ್ರೋಜನ್ ಪರಮಾಣುಗಳೊಡನೆ ಡಿಕ್ಕಿ ಹೊಡೆದಾಗ ವಿಕಿರಣಶೀಲ ಕಾರ್ಬನ್-14 ಬಿಡುಗಡೆಯಾಗುತ್ತದೆ. ಸಸ್ಯಗಳು ಸೂರ್ಯನ ಬೆಳಕಿನಲ್ಲಿ ಕಾರ್ಬನ್‌ಡೈ-ಆಕ್ಸೈಡನ್ನು ಉಪಯೋಗಿಸಿಕೊಂಡು ಆಹಾರೋತ್ಪಾದಿಸುವ ದ್ಯುತಿಸಂಶ್ಲೇಷಣ ಕ್ರಿಯೆಯಲ್ಲಿ, ಕಾರ್ಬನ್-14 ಸಸ್ಯಗಳ ಕಾಂಡದಲ್ಲಿ ಶೇಖರವಾಗುತ್ತದೆ.

ಯಾವುದೇ ಮರದ ಕಾಂಡದ ಅಡ್ಡ ಕೊಯ್ತದಲ್ಲಿ ಕಪ್ಪಗಿನ ಏಕಕೇಂದ್ರೀಯ ವರ್ತುಲಗಳನ್ನು ನೀವು ಗಮನಿಸಿರಬಹುದು. ಪ್ರತಿ ವರ್ತುಲವೂ ವರ್ಷವನ್ನು ಸೂಚಿಸುತ್ತಿದ್ದು, ವರ್ತುಲಗಳ ಸಂಖ್ಯೆಯ ಆಧಾರದಿಂದ ಮರದ ಪ್ರಾಯವನ್ನು ಅಂದಾಜಿಸಬಹುದು. ವಿಕಿರಣಶೀಲ ಕಾರ್ಬೈನ್-14 ಸಂಗ್ರಹವಾಗುವುದು ಈ ವರ್ತುಲಗಳಲ್ಲಿ.

ಸೂರ್ಯ ಅತ್ಯಂತ ಪ್ರಕ್ಷುಬ್ಧ ಸ್ಥಿತಿಯಲ್ಲಿದ್ದಾಗ ಅರ್ಥಾತ್ ಸೌರಕಲೆಗಳು ಅತ್ಯುಚ್ಚವಿದ್ದಾಗ ಸೂರ್ಯನ ಕಾಂತಕ್ಷೇತ್ರ ಭೂಮಿಯನ್ನು ಆವರಿಸಿರುತ್ತದೆ. ಈ ಕಾಂತಕ್ಷೇತ್ರ ಬ್ರಹ್ಮಾಂಡ ವಿಶ್ವಕಿರಣಗಳನ್ನು ತಡೆಹಿಡಿಯುತ್ತದೆ. ಆದುದರಿಂದ ಸೌರಕಲೆಗಳ ಅತ್ಯುಚ್ಚತೆಯ ಕಾಲದಲ್ಲಿ ಮರಗಳಲ್ಲಿ ಕಾರ್ಬನ್-14ರ ಶೇಖರಣೆ ಕನಿಷ್ಠ ಮತ್ತು ಸೌರಕಲೆಗಳು ಕ್ಷೀಣಿಸಿದಾಗ ಗರಿಷ್ಠ. ಮರಗಳ ವರ್ತುಲಗಳಲ್ಲಿ ಶೇಖರವಾದ ಕಾರ್ಬನ್-14 ಈ ಪ್ರಮಾಣದ ಲೆಕ್ಕಾಚಾರದಿಂದ ಆ ವರ್ಷಗಳ ಸೌರಕಲೆಗಳ ತೀಕ್ಷ್ಣತೆಯನ್ನು ಸಾಕಷ್ಟು ಕರಾರುವಾಕ್ಕಾಗಿ ನಿರ್ಧರಿಸಬಹುದು ಕ್ರಿ.ಶ. 1110-1300, 1400 1510, 1640-1715 ಈ ವರ್ಷಗಳಲ್ಲಿ ಸೌರಕಲೆಗಳು ತೀವ್ರವಾಗಿ ಕ್ಷೀಣಿಸಿದ್ದನ್ನು ಮರ

ಗಳಲ್ಲಿ ಶೇಖರವಾದ ಕಾರ್ಬನ್-14 ಬಯಲಾಗಿಸಿತು. ಈ ಅವಧಿಯಲ್ಲಿ ಯುರೋಪಿನಾದ್ಯಂತ ಕಡು ಚಳಿಗಾಲದ ಅನುಭವ ಸೂರ್ಯ ಮತ್ತು ಭೂಮಿಯ ಹವಾಗುಣದ ನಡುವಿನ ನವುರು ಸಂಬಂಧವನ್ನು ಇದು ಇನ್ನಷ್ಟು ಸ್ಪಷ್ಟೀಕರಿಸಿತು. ಕಾರ್ಬನ್-14 ಮರಗಳ ವರ್ತುಲಗಳಲ್ಲೊತ್ತಿದ ಸೌರ ಚಟುವಟಿಕೆಯ ಬೆರಳೊತ್ತು (finger print), ಭವಿಷ್ಯತ್ತಿನ ಶಕ್ತಿ ಮೂಲ.

ಸುಮಾರು ನಲವತ್ತು ಕೋಟಿ ವರ್ಷಗಳ ಹಿಂದೆ ನಿಗಿನಿಗಿಸುವ ಸೂರ್ಯನಿಂದ ಹೊರಗಟ್ಟಿದ ದ್ರವ್ಯಾಂಶ ಘನೀಭವಿಸಿ ಉಸಿಸಿದ ಭೂಮಿ (ಇತರ ಗ್ರಹಗಳು ಕೂಡ) ಇನ್ನು ತನ್ನ ಪೋಷಣೆಯ ಹೊರೆಯನ್ನು ಸೂರ್ಯನಿಗೆ ವಹಿಸಿ ನಿಶ್ಚಿಂತವಾಗಿದೆ. ಅದೃಷ್ಟವಶಾತ್ ಈ ಸೂರ್ಯ ಹೊಣೆಗೇಡಿಯಲ್ಲ! ಭೂಮಿಗಾಗಿಯೇ ಅಲ್ಲದಿದ್ದರೂ, ಭೂಮಿಯ ಮೇಲೆ ನಿರಂತರ ಶಕ್ತಿಯ ಹೊನಲನ್ನೆ ಹರಿಸುತ್ತಿದೆ. ಭೂಮಿ ಸೂರ್ಯರ ನಡುವಣ ಅಂತರ, ಮತ್ತು ಭೂಮಿಯನ್ನು ಆವರಿಸಿರುವ ವಾಯು ಮಂಡಲದ ದಟ್ಟ, ಪದರದಿಂದಾಗಿ ಸೂರ್ಯ ಶಕ್ತಿಯ ಹತ್ತು ಲಕ್ಷದ ಒಂದು ಭಾಗಕ್ಕಿಂತಲೂ ಕಡಿಮೆ ಶಕ್ತಿ ನಮ್ಮ ಪಾಲಿಗೆ ದಕ್ಕುತ್ತದೆ. ಆದರೆ ನಮಗೆ ಇಷ್ಟೂ ಯಥೇಷ್ಟವಾಗುತ್ತಿದೆ.

ಭೂಮಿಯ ಆಳದಲ್ಲಿ ಸಂಚಯನಗೊಂಡಿರುವ ಕಲ್ಲಿದ್ದಲು ತೈಲ ನಿಕ್ಷೇಪಗಳಿಗೆ ಸೌರ ಶಕ್ತಿಯೆ ಕಾರಣ. ಆದರೆ ತಾಂತ್ರಿಕತೆಯ ಉಚ್ಛ್ರಾಯದ ಈ ಕಾಲದಲ್ಲಿ ಅತಿಯಾದ ಬಳಕೆಯಿಂದ ಪಳೆಯುಳಿಕೆಯ ಶಕ್ತಿ ಮೂಲಗಳು ಹ್ರಾಸವಾಗುತ್ತಿರುವಂತೆ ನವೀನ ಶಕ್ತಿ ಮೂಲಗಳತ್ತ ಗಮನಹರಿಸುವುದು ಅನಿವಾರ್ಯವಾಗುತ್ತಿದೆ. ಪರಿಸರ ಮಾಲಿನ್ಯಕ್ಕೆ ಎಡೆಕೊಡದ ಶಕ್ತಿ ಮೂಲಗಳು ಜರೂರಿನ ಅಗತ್ಯ. ಸೌರಶಕ್ತಿ ಅಂಥ ಶಕ್ತಿ ಮೂಲ. ಕೃತಕ ಉಪಗ್ರಹಗಳಿಗೆ ಶಕ್ತಿಯೂಡಲು ಸೌರಶಕ್ತಿಯಿಂದ ವಿದ್ಯುತ್ ತಯಾರಿಸುವ ವಿದ್ಯುತ್ ಕೋಶಗಳು ಈಗಾಗಲೇ ಚಾಲ್ತಿಯಲ್ಲಿವೆ. ಜಲ ಅಥವಾ ಉಷ್ಣ ವಿದ್ಯುತ್ತಿನಂತೆ, ಪೆಟ್ರೋಲಿಯಂ ಇಂಧನದಂತೆ ಅಪಾರ ಪ್ರಮಾಣದಲ್ಲಿ ಸೌರ ಶಕ್ತಿಯನ್ನು ಬಳಸುವ ತಂತ್ರಗಳಿನ್ನೂ ಕರಗತವಾಗದೆ ಇದ್ದರೂ ಶೀತ ಪ್ರದೇಶದಲ್ಲಿ ಮನೆ



ಪೂರ್ಣ ಸೂರ್ಯಗ್ರಹಣದ ವೇಳೆಯಲ್ಲಿ ಕಾಣುವ ಕೊರೋನಾದ ಸುಂದರ ವೃತ್ತ

ಬೆಚ್ಚಗಿರಿಸಲು, ಚಿಕ್ಕ ಪುಟ್ಟ ಗಣಕಯಂತ್ರ ನಡೆಸಲು, ಕೆಲವೆಡೆ ವಾಹನ ಚಲಾಯಿಸಲು ಸೌರಶಕ್ತಿಯನ್ನು ಬಳಸುತ್ತಿರುವುದು ಮುಂಬರುವ ಶತಮಾನದಲ್ಲಿ ಸೌರಶಕ್ತಿ ಪ್ರಮುಖ ಶಕ್ತಿ ಮೂಲವಾಗುವುದರ ಸಂಕೇತ. ಇಂದಲ್ಲ ನಾಳೆಯಾದರೂ ಸೌರಶಕ್ತಿ ಇತರೆಲ್ಲ ಶಕ್ತಿ ಮೂಲಗಳಿಗೆ ಬದಲಿ ವ್ಯವಸ್ಥೆಯಾಗುವುದು ಅನಿವಾರ್ಯ. ಏಕೆಂದರೆ, ಎಲ್ಲಿಯವರೆಗೆ ಹೊಳೆವ ಸೂರ್ಯನಿರುತ್ತಾನೋ ಅಲ್ಲಿಯವರೆಗೆ ಇದು ಸುಲಭ ಲಭ್ಯ.

ಐವತ್ತು ಕೋಟಿ ವರ್ಷಗಳ ಹಿಂದೆ ಮೈದಾಳಿದ ನಮ್ಮ ಸೂರ್ಯನಿಗಿಂದು ನಡು ವಯಸ್ಸು. ಭೂಮಿ ಸೂರ್ಯನ ಸುತ್ತ ಪರಿಭ್ರಮಿಸಲು ಅಗತ್ಯ ಅವಧಿಯ ಒಂದು ವರ್ಷ. ಸುಮಾರು ಮೂರು ಸಾವಿರ ಕೋಟಿ ನಕ್ಷತ್ರಗಳುಳ್ಳ ನಮ್ಮ ಬೃಹತ್ ಆಕಾಶಗಂಗೆಗೆ ಒಂದು ಸುತ್ತು ಬರಲು ಸೂರ್ಯನಿಗೆ ಬೇಕಾಗುವ ಅವಧಿ ಎಷ್ಟು ಗೊತ್ತೇ? ಎರಡೂವರೆ ಸಾವಿರ ಕೋಟಿ ವರ್ಷಗಳು. ಈಗಾಗಲೆ ಇಂಥ 30 ಪ್ರದಕ್ಷಿಣೆಗಳನ್ನು ಮುಗಿಸಿರುವ ಸೂರ್ಯ ನಾಶವಾಗುವ ಮುನ್ನ ಇನ್ನೂ 30 ಸುತ್ತು ಹಾಕಲಿದ್ದಾನೆ. ಹಾಗಾದರೆ ಸೂರ್ಯನ ಅಂತ್ಯವಾಗುವುದು ಹೇಗೆ?


ನಿಮ್ಮದೇ ಅಚ್ಚುಮೆಚ್ಚಿನ ಆರ್ಕೆ
ಗುಲಾಬ್ ಜಾಮೂನ್ ಮಿಕ್ಸ್
ಹೊಚ್ಚ ಹೊಸ ಪ್ಯಾಕೇಟಿನಲ್ಲಿ.
ನೂತನ! ಅತಿಸುಲಭ! ಅತಿ ತಾಜಾ!
ಎಲ್ಲರಿಗೂ ಇಷ್ಟವಾದ ಆರ್ಕೆ ಗುಲಾಬ್ ಜಾಮೂನ್ ಮಿಕ್ಸ್ ಈಗ ಗಾಳಿ ತೂರದ, ತೇವ ಇಳಿಯದ, ಹೊಸ ಹೊದಿಕೆಯಲ್ಲಿ ನಿಮ್ಮ ಮುಂದಿದೆ.
ಕೈ ಸೋಕದೇ, ಯಂತ್ರ ಮಾತ್ರದಿಂದ ತಯಾರಿಸಿ, ತುಂಬಲಾದ ಈ ಮಿಶ್ರಣ. ಉತ್ತಮ ಮಟ್ಟದ ತಯಾರಿಕೆ.
ಹಗೂರ, ಹರಿಯದು, ಯಾವಾಗಲೂ ತಾಜಾತನ, ಸುವಾಸನೆಯ ಕಾದಿರಿಸುವುದು.
ಈ ಹೊಸ ಪ್ಯಾಕೆಟ್, ಆರ್ಕೆ ಗುಲಾಬ್ ಜಾಮೂನನ್ನು ತಯಾರಿಸಲು ಈಗ ನೀಡುವುದು ಇಮ್ಮಡಿ ಉತ್ಸಾಹ.
ORKAY
ಆರ್ಕೆ
ದಕ್ಷಿಣ ಭಾರತದಲ್ಲಿ ಅತ್ಯಧಿಕವಾಗಿ ಮಾರಾಟವಾಗುವ ಇನ್ಸ್ಟಂಟ್ ಮಿಶ್ರಣಗಳು.
Dattaram-Orkay/88 Kan

ನಿರಂತರ ಶಕ್ತ್ಯುತ್ಪಾದನೆಯಿಂದ ಹೈಡ್ರೋಜನ್ ಸರಕು ಸೊರಗಿದಂತೆ ಗುರುತ್ವಾಕರ್ಷಣ. ಸೂರ್ಯನ ಗಾತ್ರ ಕುಗ್ಗುತ್ತದೆ. ಪರಿಣಾಮವಾಗಿ ಒತ್ತಡ ಅಗಾಧವಾಗಿ ಉಷ್ಣತೆ ಅತಿಗೆ ಜಿಗಿದಾಗ ಸಂಲಯನಗೊಳ್ಳುವ ಸರದಿ ಹೀಲಿಯಂ ಪರಮಾಣುಗಳದು. ಇಲ್ಲಿ ಉತ್ಸರ್ಜಿತವಾಗುವ ಬೂದಿ ಕಾರ್ಬನ್. ಈ ಉಷ್ಣಬೈಜಿಕ ಕ್ರಿಯೆಯಲ್ಲಿ ಬಿಡುಗಡೆಯಾಗುವ ಶಕ್ತಿ ಸೂರ್ಯನ ಗಾತ್ರವನ್ನು ಅತಿಯಾಗಿ ಹಿಗ್ಗಿಸುತ್ತದೆ. ಇಂಥ ಸೂರ್ಯನ ಅನ್ವರ್ಥ ನಾಮ ರಕ್ತದೈತ್ಯ. ಏಕೆಂದರೆ, ಹಿಗ್ಗಿದ ಸೂರ್ಯನ ವರ್ಣ. ಗಾತ್ರ ಅಸಾಮಾನ್ಯ. ಮಾಮೂಲಿ ಸೂರ್ಯನಿಗಿಂತ ನೂರು ಪಟ್ಟು ಜಾಸ್ತಿ. ವಿಸ್ತರಿಸಿದ ಪ್ಲಾಸ್ಮಾ ರಾಶಿಯಲ್ಲಿ ರಕ್ತದೈತ್ಯನ ದೈತ್ಯಾಲಿಂಗನದಲ್ಲಿ ಭೂಮಿ ಸೇರಿದಂತೆ ಗ್ರಹ. ಉಪಗ್ರಹಗಳೆಲ್ಲ ಕರಗಿ ಲೀನವಾಗುವ ಅದೆಷ್ಟೋ ಮುನ್ನವೆ ಜೀವ ಸಮುದಾಯ ನಾಮಾವಶೇಷವಾಗಿರುತ್ತವೆ. ಆ ಮೊದಲೆ ಭೂಮಿಯ ಮೇಲಿನ ಜೀವಿ ಹೊಸ ತಾಣಕ್ಕೆ ಲಗ್ಗೆ ಇಟ್ಟು, ತವರಿನ ನಶವನ್ನು ಗಮನಿಸುವ ಸಂಭಾವ್ಯತೆಗೆ ಮುಗಿಯುವುದಿಲ್ಲ. ರಕ್ತದೈತ್ಯ ಸೂರ್ಯನ ಹೀಲಿಯಂ ಉಗ್ರಾಣ ಬರಿದಾದಂತೆ, ಗುರುತ್ವ ಕುಸಿತ ಮತ್ತಷ್ಟು ಹೆಚ್ಚಿ ಗಾತ್ರ ಇನ್ನಷ್ಟು ಕುಗ್ಗುತ್ತದೆ. ಕುಬ್ಜ ಸೂರ್ಯನ ಬಣ್ಣ ಅಧಿಕೋಷ್ಣತೆಯಿಂದಾಗಿ ಅಚ್ಚ ಬಿಳಿ ಎಂದೇ ಹೆಸರೀಗ. 'ಶ್ವೇತಕುಬ್ಜ (shite dwarf) ಆದರೆ ಸೂರ್ಯನ ದ್ರವ್ಯ ರಾಶಿ ಸಾಕಷ್ಟಿಲ್ಲದಿರುವುದರಿಂದ ಏರಿದ ಉಷ್ಣತೆ ಕಾರ್ಬನ್ ಪರಮಾಣುಗಳು ಸಂಲಯನಗೊಳ್ಳಲು ಸಾಕಾಗದು. ಈ ಶ್ವೇತಕುಬ್ಜ ಕಾಲ ಕ್ರಮೇಣ ತನ್ನ ಶಾಖ ಕಳೆದುಕೊಂಡು ಕಪ್ಪಗಿನ ಕಿಟ್ಟವಾಗಿ ವಿಶ್ವದಲ್ಲಿ ಅಂಡಲೆಯಲಾರಂಭಿಸಬಹುದು.

ಯಾವುದೋ ನಕ್ಷತ್ರದ ಗುರುತ್ವಾಕರ್ಷಣ ಬಲೆಗೆ ಸಿಲುಕಿ ಆ ನಕ್ಷತ್ರದ ಗ್ರಹವಾಗಬಹುದು.

ಒಂದು ವೇಳೆ ನಕ್ಷತ್ರವೊಂದರ ದ್ರವ್ಯರಾಶಿ ಸೂರ್ಯರಾಶಿಗಿಂತ ಜಾಸ್ತಿ ಇದ್ದರೆ ಏನಾಗುತ್ತದೆ? ವಿಶ್ವದಲ್ಲಿ ಸೂರ್ಯನ ದ್ರವ್ಯರಾಶಿಯನ್ನು ಮೀರಿಸುವ ಅಸಂಖ್ಯ ನಕ್ಷತ್ರಗಳುಂಟು. ಇಂಥ ನಕ್ಷತ್ರಗಳು ಶ್ವೇತಕುಬ್ಜಕ್ಕಷ್ಟೇ ಪರವಸಾನ ಹೊಂದದೆ ಮತ್ತಷ್ಟು ಗುರುತ್ವಾತ್ಮಕ ಕುಸಿತಕ್ಕೊಳಗಾಗಿ ಒತ್ತಡ ಸಹಿಸಲಾಗದೆ ಮಹಾ ಆಸ್ಫೋಟದೊಂದಿಗೆ ಸಿಡಿಯುತ್ತವೆ. ಈ ಅದ್ಭುತ ವಿದ್ಯಮಾನವೇ ಸೂಪರ್‌ನೋವಾ. ಬರಿಗಣ್ಣಿಗೆ ನಿಲುಕುವ ಸೂಪರ್ ನೋವಾಗಳು ತೀರ ಅಪರೂಪ (ಕ್ರಿಸ್ತಶಕ 1054ರಲ್ಲಿ 1572, 1604). 1987 ಫೆಬ್ರವರಿಯ ಇರುಳಿನಲ್ಲಿ ಇಂಥ ಗಗನವೈಭವವನ್ನು ಅಮೇರಿಕದ ಖಭೌತಶಾಸ್ತ್ರಜ್ಞ ಇಯಾನ್ ಶೆಲ್ಟನ್ ಪತ್ತೆ ಹಚ್ಚಿದರು. ಸೂಪರ್‌ನೋವಾದ ಆಟಾಟೋಪದ ಬಳಿಕ ಉಳಿವ ತಿರುಳು ನ್ಯೂಟ್ರಾನ್ ಕಣಗಳ ಮುದ್ದೆ. ಎಂದೇ ಇದರ ಹೆಸರಿಗೆ ನ್ಯೂಟ್ರಾನ್ ನಕ್ಷತ್ರ.

ನ್ಯೂಟ್ರಾನ್ ನಕ್ಷತ್ರ ಗುರುತ್ವಾತ್ಮಕ ಕುಸಿತಕ್ಕೊಳಗಾಗಿ ಬೆಳಕೂ ಸೇರಿದಂತೆ ಯಾವುದನ್ನೂ ಹೊರಬಿಡಲೊಲ್ಲದ ಕೃಷ್ಣವಿವರವಾಗಿ ಪಸಮಾಪ್ತಿ ಹೊಂದಬಹುದು. ಈಗ ಲಭ್ಯವಿರುವ ಜ್ಞಾನಸೀಮೆಗೆ ಸಂಬಂಧಿಸಿದಂತೆ ನಕ್ಷತ್ರದ ಅಂತಿಮ ಹಂತವಿದು.

ನಕ್ಷತ್ರಗಳ ಹುಟ್ಟು, ಸಾವಿನಲ್ಲಿ ಏನು ವಿಸ್ಮಯ. ಸೃಷ್ಟಿಯ ನಿಗೂಢ ರಹಸ್ಯ ಅಡಗಿದೆ? ನಮ್ಮ ನೆರೆಯ ಅತ್ಯಂತ ನೆರೆಯ ಖಾಸಾ ನಕ್ಷತ್ರ ಸೂರ್ಯನಿಗೆ ಅರ್ಘ್ಯವನ್ನಷ್ಟೇ ಅರ್ಪಿಸುವ ಬದಲಾಗಿ ವೈಜ್ಞಾನಿಕವಾಗಿ ಸೂರ್ಯನನ್ನು ಅಧ್ಯಯನಿಸಿದಾಗ ವಿಶ್ವದ ಪಲವು ನಿಗೂಢ ವಿಸ್ಮಯಗಳಿಗೆ ಉತ್ತರ ದೊರೆತೀತು.

[illegible]?●

ಒಂದು ಚಿಕ್ಕ ಆನಂದ ಕೂಡ ಮನುಷ್ಯನ ಗಾಢ ಮನಸ್ಸನ್ನು ಮುಚ್ಚಿಬಿಡುವುದರಿಂದ ಮನುಷ್ಯ ನಗಬೇಕಾದದ್ದು ಅತ್ಯಂತ ಅಗತ್ಯವಾಗಿದೆ.

● ರೆಬೆಲಾಯಿಸ್

ಧಾರವಾಡದಲ್ಲಿ ತಲೆಯೆತ್ತಿದ ರಾಜ್ಯದ ಎರಡನೆಯ ಕೃಷಿ ವಿಶ್ವವಿದ್ಯಾಲಯ ಒಂದು ವರ್ಷವನ್ನು ಮುಗಿಸಿದಾಗ ಕುಲಪತಿ ಡಾ॥ ಜೆ.ವಿ. ಗೌಡರು 'ಕಸ್ತೂರಿ'ಗೆ ನೀಡಿದ ಸಂದರ್ಶನವಿದು. ಸ್ವತಃ ಹೆಸರಾಂತ ಕೃಷಿ ವಿಜ್ಞಾನಿಯಾದ ಅವರಿಗೆ ಕೃಷಿಯ ಮೂಲಕ-ಭಾರತದ ಆರ್ಥಿಕ ಪುನರುತ್ಥಾನದಲ್ಲಿ, ಅಂತೆಯೆ ಧಾರವಾಡದ ನೂತನ ಕೃಷಿ ವಿಶ್ವವಿದ್ಯಾಲಯದ ಭವಿಷ್ಯದಲ್ಲಿ ಅದಮ್ಯ ವಿಶ್ವಾಸ.

ಕುಲಪತಿಯೊಂದಿಗೆ ಒಂದು ಗಂಟೆ

● ಮಾಧವ ನಾ. ಮಹಿಷಿ ●

ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ॥ ಜೆ.ವಿ. ಗೌಡರ ಜೀವನ ಹಲವು ಹತ್ತು ಸಾಧನೆಗಳ ಆಗರ. ಇದೀಗ 50 ಮುಗಿಸಿರುವ ಅವರು ಪ್ರತಿಭೆ, ಕ್ರಿಯಾಶಕ್ತಿಗಳ ಸಂಗಮವಾಗಿದ್ದಾರೆ. ಧಾರವಾಡದ ಕೃಷಿ ಮಹಾವಿದ್ಯಾಲಯದ ವಿದ್ಯಾರ್ಥಿಯೇ ಆದ ಅವರು 1959ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಬಿ.ಎಸ್ಸಿ (ಅಗ್ರಿ.) ಪರೀಕ್ಷೆಯಲ್ಲಿ ಪ್ರಥಮರಾಗಿ ಉತ್ತೀರ್ಣರಾದರು. 1961ರಲ್ಲಿ ಅಲ್ಲಿಂದಲೇ ಪ್ರಥಮದರ್ಜೆಯಲ್ಲಿ ಎಂ.ಎಸ್ಸಿ (ಅಗ್ರಿ.) 1962ರಲ್ಲಿ ದಿಲ್ಲಿಯಲ್ಲಿ ಭಾರತೀಯ ಕೃಷಿ ಸಂಶೋಧನ ಮಂಡಳಿಯನ್ನು ಸೇರಿ 1965ರಲ್ಲಿ ಪಿಯೆಚ್.ಡಿ. ಮುಗಿಸಿದರು. ನಂತರದ ಒಂದು ವರ್ಷ ಅಲ್ಲಿಯೇ ಸಂಶೋಧನೆಯನ್ನು ಮುಂದುವರಿಸಿದರು.

1966 ರಿಂದ ಹೆಬ್ಬಾಳದಲ್ಲೂ, ಧಾರವಾಡದಲ್ಲೂ ಹೊಣೆಗಾರ ಸ್ಥಾನಗಳನ್ನು ನಿರ್ವಹಿಸುತ್ತ ಬಂದ ಅವರು 1973ರಿಂದಲೂ ಕೃಷಿ ವಿಶ್ವವಿದ್ಯಾಲಯದ ಧಾರವಾಡ ಘಟಕದಲ್ಲಿ ಕೃಷಿ ಸಸ್ಯಶಾಸ್ತ್ರದ ಪ್ರಾಧ್ಯಾಪಕರೂ, ವಿಭಾಗ ವರಿಷ್ಠರೂ ಆಗಿ ದುಡಿದಿದ್ದಾರೆ. ಇದುವರೆಗೆ 20 ಜನ ಪಿಯೆಚ್.ಡಿ. ವಿದ್ಯಾರ್ಥಿಗಳಿಗೂ 19 ಜನ ಎಂ.ಎಸ್ಸಿ(ಅಗ್ರಿ.) ವಿದ್ಯಾರ್ಥಿಗಳಿಗೂ ಸಂಶೋಧನ ಮಾರ್ಗದರ್ಶನ ಮಾಡಿದ್ದಾರೆ. ಸುಮಾರು 200 ಸಂಶೋಧನ ಪ್ರಬಂಧಗಳನ್ನು ಅವರು ಇದುವರೆಗೆ ಪ್ರಕಟಿಸಿದ್ದು ಅವುಗಳಲ್ಲಿ 45 ಪ್ರಬಂಧಗಳು ಅಂತಾರಾಷ್ಟ್ರೀಯ ಪತ್ರಿಕೆಗಳಲ್ಲಿ ಬಂದಿವೆ. ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಸುಮಾರು 12 ಪ್ರಬಂಧಗಳನ್ನು ಮಂಡಿಸಿದ್ದಾರೆ. ಕನ್ನಡದಲ್ಲೂ ಜನಸಾಮಾನ್ಯಕ್ಕಾಗಿ ಅನೇಕ ಜನಪ್ರಿಯ ಲೇಖನಗಳನ್ನು 'ಸಸ್ಯದಲ್ಲಿ ಸುಧಾರಣೆ' ಎಂಬ ಪುಸ್ತಕವನ್ನೂ ಬರೆದಿದ್ದಾರೆ.

ಜೋಳ, ಬಟಾಣೆ, ಮೆಣಸಿನಕಾಯಿ, ತಂಬಾಕು, ಕುಸುಬೆ ಮುಂತಾದುವುಗಳಲ್ಲಿ ಹಲವಾರು ಸುಧಾರಿತ ತಳಿಗಳನ್ನು ಶೋಧಿಸಿ ಬಳಕೆಗೆ ತಂದಿದ್ದಾರೆ. ಹಲವಾರು ಭಾರತೀಯ ಹಾಗೂ ಅಂತಾರಾಷ್ಟ್ರೀಯ ಮಂಡಳಿಗಳ ಸದಸ್ಯತ್ವವನ್ನು ಪಡೆದಿರುವ ಡಾ॥ ಗೌಡರು ಮಿತಭಾಷಿ; ಆದರೆ ಅಮಿತೋತ್ಸಾಹಿ.



ನಾನು ಮುಖ್ಯವಾಗಿ ನಿಮ್ಮ ಬಳಿ ಬಂದದ್ದಕ್ಕೆ ಕಾರಣ, ನಿಮ್ಮ ಓರಿತನದಲ್ಲಿ ಧಾರವಾಡದ ಕೃಷಿ ವಿಶ್ವವಿದ್ಯಾಲಯ ಒಂದು ವರ್ಷವನ್ನು ಪೂರ್ಣಗೊಳಿಸಿದ್ದಕ್ಕಾಗಿ ಅಭಿನಂದಿಸಲು. ಅಲ್ಲದೆ ತೀರ ಸಾಮಾನ್ಯವೆನಿಸಿದರೂ ನಮ್ಮ ಓದುಗರಿಗೆ ಉಪಯುಕ್ತವೆನಿಸಬಹುದಾದಂಥ ಕೆಲವು ಪ್ರಶ್ನೆಗಳನ್ನು ಕೇಳಲು.

ನಿಮ್ಮ ಅಭಿನಂದನೆಗಾಗಿ ಥ್ಯಾಂಕ್ಸ್. ಏನು ಪ್ರಶ್ನೆಗಳನ್ನು ಬೇಕಾದರೂ ಕೇಳಬಹುದು.

ಕರ್ನಾಟಕ-ರಾಜ್ಯ ಸ್ಥಾಪನೆಯಾದಾಗ ಇದ್ದ ವಿಶ್ವವಿದ್ಯಾಲಯಗಳು ಎರಡು. ಕೃಷಿಯಂಥ ವಿಷಯಕ್ಕೆ ಪ್ರತ್ಯೇಕ ವಿಶ್ವವಿದ್ಯಾಲಯವಿರಲಿಲ್ಲ. ಮುಂದೆ ರಾಜ್ಯಕ್ಕೊಂದು ಪ್ರತ್ಯೇಕ ಕೃಷಿ ವಿಶ್ವವಿದ್ಯಾಲಯ ಬೇಕೆಂದು ನಿರ್ಧಾರವಾದಾಗ ಅದು ಬೆಂಗಳೂರು ಬಳಿ ಹೆಬ್ಬಾಳದಲ್ಲಾಯಿತು. ಕರ್ನಾಟಕದಂಥ ಮಧ್ಯಮಗಾತ್ರದ ರಾಜ್ಯಕ್ಕೆ ಎರಡು ಕೃಷಿ ವಿಶ್ವವಿದ್ಯಾಲಯಗಳ ಅಗತ್ಯವಿತ್ತೆ?

ನಮ್ಮ ರಾಜ್ಯಕ್ಕೊಂದು ಪ್ರತ್ಯೇಕ ಕೃಷಿ ವಿಶ್ವವಿದ್ಯಾಲಯ ಬೇಕೆಂದು ನಿರ್ಧಾರವಾದಾಗ ನಂತರ ಅದಕ್ಕಾಗಿ ಸ್ಥಳ ಪರಿಶೀಲನೆ ಮಾಡಿ ಶಿಫಾರಸು ಮಾಡುವಂತೆ ಸರಕಾರ 1963ರಲ್ಲಿ ಒಂದು ಉಚ್ಚಾಧಿಕಾರ ಸಮಿತಿಯನ್ನು ನೇಮಿಸಿದ್ದು ತಮಗೆ ಗೊತ್ತಿರಬೇಕು. ಈ ಸಮಿತಿ ಧಾರವಾಡ, ಬೆಂಗಳೂರು (ಹೆಬ್ಬಾಳ) ಎರಡನ್ನೂ ಪರಿಶೀಲಿಸಿ ವರದಿ ಸಲ್ಲಿಸಿತು. ಆ ಸಮಿತಿಯ ಒಲವು ಧಾರವಾಡದ ಕಡೆಗೆಯೇ ಇತ್ತು. ಆದರೂ ಆಗ ವಿಶ್ವವಿದ್ಯಾಲಯ ಆದದ್ದು ಬೆಂಗಳೂರಲ್ಲಿ.

ಉಚ್ಚಾಧಿಕಾರ ಸಮಿತಿ ಧಾರವಾಡದಲ್ಲಾಗ ಬೇಕೆಂದು ಹೇಳಿದ್ದರೂ ಕೃಷಿ ವಿಶ್ವವಿದ್ಯಾಲಯ ಆಗ ಆದದ್ದು ಬೆಂಗಳೂರಲ್ಲಿ. ಇದನ್ನು ನೋಡಿದಾಗ ಕಾರವಾರದ ನೆನಪು ಮರುಕಳಿಸುತ್ತದೆ. ಕಳೆದ ನೂರಕ್ಕೂ ಹೆಚ್ಚು ವರ್ಷಗಳಿಗಿಂತ ಹಿಂದಿನಿಂದಲೂ ಕಾರವಾರ ಮುಂಬಯಿಗಿಂತ ಶ್ರೇಷ್ಠ ಬಂದರಾಗುವ ಅನುಕೂಲಗಳು ಇರುವ ತಾಣ, ಮುಂಬಯಿಯ ನಂತರ ಪಶ್ಚಿಮ ಕರಾವಳಿಯಲ್ಲಿ ಪ್ರಥಮ ದರ್ಜೆಯ ಬಂದರಾಗ ಬೇಕಾದದ್ದು ಕಾರವಾರದಲ್ಲೇ ಎಂದು ಅನೇಕ ತಜ್ಞ ಸಮಿತಿಗಳು ಶಿಫಾರಸು ಮಾಡಿದಾಗಲೂ....

ಈಗ ಸೀಬರ್ಡ್ ಆದರೂ ಬಂತಲ್ಲ ಎಂದು ಸಮಾಧಾನ ಪಡೋಣ. ಮೊದಲ ಕೃಷಿ ವಿಶ್ವವಿದ್ಯಾಲಯ ಬೆಂಗಳೂರಿನಲ್ಲಿ ಆದ ನಂತರವೂ ಉತ್ತರ ಕರ್ನಾಟಕದ ವಿಶಿಷ್ಟ ಕೃಷಿ ಸಮಸ್ಯೆಗಳಿಗೆ ಪ್ರತ್ಯೇಕ ವಿಶ್ವವಿದ್ಯಾಲಯ ಬೇಕೆಂಬ ಬೇಡಿಕೆ ಈ ಭಾಗದ ಸಂಸತ್ ಸದಸ್ಯರು ವಿಧಾನಸಭಾ ಸದಸ್ಯರು ಮುಂತಾದವರಿಂದ ಜೀವಂತವಾಗಿಯೇ ಉಳಿಯಿತು. ತದ ವಾವರೂ ಈ ವಿಶ್ವವಿದ್ಯಾಲಯ ಮೇವಳಿಯ

ತಲ್ಲ ಎಂಬುದು ಸಮಾಧಾನದ ಸಂಗತಿಯಲ್ಲವೆ?

ಉತ್ತರ ಕರ್ನಾಟಕಕ್ಕೆ ಅವರದೇ ಆದ ವಿಶಿಷ್ಟ ಕೃಷಿ ಸಮಸ್ಯೆಗಳಿವೆ ಅಂದಿರಲ್ಲ...ಏನು ಹೇಳುವಿರಾ?

ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಂಟು ಜಿಲ್ಲೆಗಳಲ್ಲಿರುವುದು ನೂರಕ್ಕೆ 60ರಷ್ಟು ಎರೆಭೂಮಿ ಅರ್ಥಾತ್ ಕಪ್ಪು ಮಣ್ಣಿನ ನೆಲ. ಕೆಲವು ಕಡೆ ಕಡುಗಪ್ಪು ಮಣ್ಣಿದೆ ಯಾದರೆ ಮತ್ತೆ ಹಲವೆಡೆ ತಿಳಿಗಪ್ಪು ಮಣ್ಣಿದೆ. ವಿಜಾಪುರದ ಕಡೆ ಕೆಲವೆಡೆಗಳಲ್ಲಿ ಸವಳಿಯಾದ ಮಣ್ಣೂ ಇದೆ. ಈ ಭಾಗದಲ್ಲಿ ನೂರಕ್ಕೆ 30-35 ರಷ್ಟು ಮಸಾರಿ ಭೂಮಿಯೂ ಇದೆ. ಅಲ್ಲದೆ ರಾಜ್ಯದ ಮುಖ್ಯ ಆಹಾರ ಧಾನ್ಯಗಳಾಗಲಿ, ಎಣ್ಣೆ ಕಾಳುಗಳಾಗಲಿ, ರೊಕ್ಕದ ಬೆಳೆಗಳಾಗಲಿ ಹೆಚ್ಚಾಗಿ ಬೆಳೆಯುವುದು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲೆ ಎಂಬುದನ್ನು ಮರೆಯುವಂತಿಲ್ಲ. ಉತ್ತರ ಕನ್ನಡ ಜಿಲ್ಲೆಯ ದಟ್ಟ ಅರಣ್ಯ ಮತ್ತು ಅಲ್ಲಿಯ ತೋಟಗಾರಿಕೆ-ಪ್ರದೇಶ ಕೂಡ ಈ ವಲಯದಲ್ಲೇ ಇದೆ. ಅಡಿಕೆ, ಏಲಕ್ಕಿ, ಮೆಣಸು ಮುಂತಾದವುಗಳನ್ನು ಈ ಜಿಲ್ಲೆ ನಮಗೆ ಕೊಡುತ್ತಿದೆ. ಇಷ್ಟೊಂದು ವೈವಿಧ್ಯಮಯ ಬೆಳೆಗಳಿಂದ ಸಮೃದ್ಧವಾದ ಉತ್ತರ ಕರ್ನಾಟಕದಲ್ಲಿ ಅತಿ ಹೆಚ್ಚು ಮಳೆ ಬೀಳುವ ಕರಾವಳಿ ಪ್ರದೇಶದಿಂದ ಹಿಡಿದು ಅತಿ ಕಡಿಮೆ ಮಳೆಯಾಗುವ ಬಯಲು ಸೀಮೆಯವರೆಗೆ ವೈವಿಧ್ಯಪೂರ್ಣ ಭಾಗಗಳಿವೆ. ಮೂರು ಮುಖ್ಯ ನೀರಾವರಿ ಅಚ್ಚುಕಟ್ಟಿನ ಪ್ರದೇಶಗಳೂ ಇಲ್ಲಿವೆಯೆಂಬುದನ್ನು ಮರೆಯುವಂತಿಲ್ಲ. ಎರೆಮಣ್ಣಿನ ಪ್ರದೇಶದಲ್ಲಿ ನೀರಾವರಿಯು ಬಳಕೆ ತುಂಬ ವೈಶಿಷ್ಟ್ಯಪೂರ್ಣವಾದದ್ದಿರುತ್ತದೆ. ಇಲ್ಲಿ ಅತ್ಯಂತ ವ್ಯವಸ್ಥಿತ ರೀತಿಯಲ್ಲಿ ನೀರಾವರಿ ಸೌಲಭ್ಯವನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆ. ನೀರಿನ ಅನಿಯಂತ್ರಿತ ಬಳಕೆಯಿಂದ ಮಣ್ಣು ಕೊಚ್ಚಿಕೊಂಡು ಹೋಗಬಹುದು. ಬಹು ಬೇಗನೆ ಈ ಭೂಮಿಗೆ ಜವುಳು ಹಿಡಿಯಬಹುದು. ಇದೆಲ್ಲ ಕಾರಣಗಳಿಂದಾಗಿ ರಾಜ್ಯದ ಇತರತ್ರ ಕಾಣದಂತಹ ವಿಶಿಷ್ಟ ಕೃಷಿ ಸಮಸ್ಯೆಗಳನ್ನು ಈ ಭಾಗ ಎದುರಿಸಬೇಕಾಗುತ್ತದೆ. ಈ [illegible] ಯಿಂದ ಈ ಭಾಗಕ್ಕಾಗಿಯೇ ಒಂದು ಪ್ರತ್ಯೇಕ ಕೃಷಿ ವಿಶ್ವವಿದ್ಯಾಲಯವಾಗಿರುವುದು ಬಹಳ ಒಳ್ಳೆಯದು ಎಂದು ನನಗನಿಸುತ್ತದೆ.

ಈ ಪ್ರಶ್ನೆಗೆ ಸಂಬಂಧಪಟ್ಟ ಒಂದು ಉಪಪ್ರಶ್ನೆ: ನಮ್ಮದು ಕೃಷಿ ಪ್ರಧಾನ ಪ್ರದೇಶವೆಂದು ನೀವು ಈಗಷ್ಟೇ ಹೇಳಿದಿರಿ. ಇಲ್ಲಿ ಉದ್ಯಮಗಳು ಸಾಕಷ್ಟು ಪ್ರಮಾಣದಲ್ಲಿ ಬೆಳೆದಿಲ್ಲವೆಂಬ ಕಾರಣಕ್ಕಾಗಿ ನಮ್ಮದು ಕೃಷಿ ಪ್ರಧಾನವಾಗಿ ಉಳಿದಿರುವುದು ನಿಜ. ಆದರೆ ನಮ್ಮ ನೆರೆಯ ರಾಜ್ಯಗಳಿಗೆ ಹೋಲಿಸಿ ನೋಡಿದಾಗ ನಮ್ಮಲ್ಲಿ ಭೂಮಿಯನ್ನು ಅಷ್ಟೇ ಕಾರ್ಯಕ್ಷಮ ರೀತಿಯಲ್ಲಿ ಬಳಸಿಕೊಳ್ಳುತ್ತಿದ್ದೇವೆಯೇ?

ಮಹಾರಾಷ್ಟ್ರ, ಆಂಧ್ರಪ್ರದೇಶಗಳಿಗೆ ಹೋಲಿಸಿದಲ್ಲಿ ನಮ್ಮ ಕೃಷಿ ಪದ್ಧತಿ ಚೆನ್ನಾಗಿಯೇ ಇದೆ. ಹತ್ತಿಯನ್ನೇ ಬೇಕಾದರೆ ನೋಡಬಹುದು. ನಮ್ಮಲ್ಲಿ ನಡೆದ ಸಂಶೋಧನೆಗಳ ಫಲವಾಗಿ ಜಯಲಕ್ಷ್ಮಿ, ವರಲಕ್ಷ್ಮಿಗಳಂಥ ಉದ್ದ ಎಳೆಯ ಹತ್ತಿಯ ತಳಿಗಳ ಶೋಧವಾಯಿತು. ಇದರ ಲಾಭವನ್ನು ನಮ್ಮ ರೈತರಷ್ಟೇ ಅಲ್ಲ, ಇತರ ರಾಜ್ಯಗಳ ರೈತರೂ ವಿಪುಲವಾಗಿ ಪಡೆದುಕೊಂಡಿದ್ದಾರೆ. ಈ ಸಂಶೋಧಿತ ತಳಿಗಳು ನಮ್ಮ ದೇಶದಲ್ಲಷ್ಟೇ ಏಕೆ, ಪ್ರಪಂಚದಲ್ಲೇ ಮಹಾಸಾಧನೆಯೆಂದು ಪರಿಗಣಿಸಲ್ಪಟ್ಟಿವೆ.

● ನಾನು ಕೇಳಿದ ಪ್ರಶ್ನೆ ಇದಲ್ಲ. ಇಲ್ಲಿ ಆದ ಸಂಶೋಧನೆಗಳ ಲಾಭವನ್ನು ಇತರರೂ ಪಡೆದುಕೊಳ್ಳುತ್ತಾರೆಂಬ ಬಗ್ಗೆ ಎರಡು ಮಾತಿಲ್ಲ. ಆದರೆ ಎಕರೆವಾರು ಬೆಳೆಯ ಪ್ರಮಾಣವನ್ನು ನೋಡಿದಾಗ ನಮ್ಮ ಸಾಧನೆಯನ್ನು ಇತರ ರಾಜ್ಯಗಳ ಸಾಧನೆಯೊಂದಿಗೆ ಹೋಲಿಸಬಹುದೆ?

ಖಂಡಿತ ಹೋಲಿಸಬಹುದು. ಜೋಳದ ಬೆಳೆಯನ್ನು ನೋಡೋಣ. ನಮ್ಮ ಉತ್ತರ ಕರ್ನಾಟಕದಲ್ಲಿಯಂತೆಯೇ ಮಹಾರಾಷ್ಟ್ರದ ಬಹು ಭಾಗದಲ್ಲೂ ಜೋಳ ಮುಖ್ಯ ಆಹಾರ ಬೆಳೆ. ನಮಗೆ ಗೊತ್ತಿರುವ ಮಟ್ಟಿಗೆ ಅಲ್ಲಿ ಎಕರೆವಾರು ಬೆಳೆ ನಮ್ಮಲ್ಲಿಗಿಂತ ಹೆಚ್ಚಿಲ್ಲ. ಆದರೆ ಒಂದು ಅಂತರವನ್ನು ಮಾತ್ರ ಗಮನಿಸಲೇಬೇಕು. ನಮ್ಮಲ್ಲಿ ಜೋಳ ಮುಖ್ಯ ಹಿಂಗಾರಿ ಬೆಳೆ, ಆದರೆ ಮಹಾರಾಷ್ಟ್ರದಲ್ಲಿ ಅದು ಮುಖ್ಯ

ಮುಂಗಾರಿ ಬೆಳೆ. ನಮ್ಮ ಉತ್ತರ ಗಡಿಭಾಗದಲ್ಲಿ ಮಾತ್ರ ಜೋಳ ಪ್ರಮುಖ ಮುಂಗಾರಿ ಬೆಳೆಯಾಗಿದೆ. ಹೆಚ್ಚು ಉತ್ಪಾದನೆ ನೀಡುವ ಮುಂಗಾರಿ ಜೋಳದ ಹೊಸ ಹೊಸ ತಳಿಗಳು ಸಾಕಷ್ಟು ಬಂದು ಅದರ ಪ್ರಯೋಜನವನ್ನು ಮಹಾರಾಷ್ಟ್ರ ಚೆನ್ನಾಗಿ ಪಡೆದುಕೊಂಡಿದೆ. ಹಿಂಗಾರಿ ಜೋಳದಲ್ಲಿ ಹೊಸ ಹೊಸ ತಳಿ ಗಳು ಇತ್ತೀಚೆಗೆ ಮಾತ್ರ ಲಭ್ಯವಾಗುತ್ತಿದ್ದು ನಮ್ಮ ರಾಜ್ಯದ ಚಿತ್ರವನ್ನೇ ಬದಲಿಸಬಹುದಾಗಿದೆ. ನಾವೇ CHS12R ಎಂಬ ನೂತನ ಹಿಂಗಾರಿ ಜೋಳದ ತಳಿಯನ್ನು ತಂದಿದ್ದೇವೆ. ಇನ್ನೂ ಸುಧಾರಿಸಿದ ಹಿಂಗಾರಿ ತಳಿಗಳು ಬರಬೇಕಾಗಿರುವುದರಿಂದ ಬಹಳ ಪ್ರದೇಶಗಳಲ್ಲಿ ಹಳೆಯ ತಳಿಗಳನ್ನೇ ಬಳಸುತ್ತಿದ್ದಾರೆ. ಹಳೆಯ ತಳಿಗಳಿಂದ ಬರುವ ಇಳುವರಿ ಎಕರೆಗೆ ನಾಲ್ಕೈದು ಕ್ವಿಂಟಾಲುಗಳಾದರೆ ಹೊಸತಳಿಗಳು ಅದರ ಎರಡರಷ್ಟು ಇಳುವರಿ ನೀಡುತ್ತವೆ. ಇಂದು ನಾವು ಒಟ್ಟಾರೆ ಜೋಳದ ಬೆಳೆಯನ್ನೇ ತೆಗೆದುಕೊಂಡರೆ, ಮೊದಲು ಎಕರೆಗೆ ಸರಾಸರಿ ಐದು ಕ್ವಿಂಟಾಲಿದ್ದುದು ಈಗ ಆರೂವರೆ ಕ್ವಿಂಟಾಲುಗಳಿಗೆ ಏರಿದೆ. ಇದು ನಮ್ಮ ದೇಶದ ರಾಷ್ಟ್ರೀಯ ಇಳವರಿ ಪ್ರಮಾಣಕ್ಕೆ ಸರಿಸಮನಾಗಿಯೇ ಇದೆ. ಇನ್ನೂ ಒಂದು ಉದಾಹರಣೆಯೆಂದು ಮೆಣಸಿನ ಕಾಯಿಯನ್ನು ನೋಡಬಹುದು. ಇದೊಂದು ಉತ್ತಮ ಆರ್ಥಿಕ ಬೆಳೆ. ಇತ್ತೀಚೆಗೆ ಮೆಣಸಿನ ಕಾಯಿ ಬೆಳೆಯುವ ಪ್ರದೇಶ ಮತ್ತು ಉತ್ಪಾದನೆಯ ಪ್ರಮಾಣ ಎರಡೂ ಹೆಚ್ಚಿದೆ. ಧಾರವಾಡ ಜಿಲ್ಲೆಯ ರಾಣೆಬೆನ್ನೂರವರೆಗಿನ ಭಾಗವೆಲ್ಲ ಈಗ ಮೆಣಸಿನಕಾಯಿಯ ಬೆಳೆಯಿಂದ ಸಮೃದ್ಧವಾಗಿದೆ. ಒಂದು ಕಾಲಕ್ಕೆ ಬ್ಯಾಡಗಿ, ಸಂಕೇಶ್ವರದಂಥ ಹಳೆಯ ತಳಿಗಳು ಜನಪ್ರಿಯವಾಗಿದ್ದರೆ ಈಗ ಸುಧಾರಿಸಿದ ತಳಿಗಳ ಸಂಶೋಧನವಾಗಿ ಹಳೆಯವನ್ನು ಹಿಂದೆ ಬಿಟ್ಟು ಮುಂದೆ ಓಡುತ್ತಿವೆ. ಹತ್ತಿಯಲ್ಲಿ ಕೂಡ ಒಂದು ಕಾಲಕ್ಕೆ ಜಯಧರ, ಲಕ್ಷ್ಮಿ ಬಳಸುತ್ತಿದ್ದವರು ಈಗ ಜಯಲಕ್ಷ್ಮಿ, ವರಲಕ್ಷ್ಮಿ ಬೆಳೆಯುತ್ತಿದ್ದಾರೆ.

● ಕೆಲವೊಂದು ಹಳೆಯ ತಳಿಗಳು ಮಾಯವಾಗಿ ಬಿಟ್ಟಿರುವುದರಿಂದ ಎಷ್ಟೋ ಸಲ ಏನನ್ನೋ ಕಳೆದುಕೊಂಡಂತೆ ಅನಿಸುತ್ತಿದೆ. ಸುಮಾರು 1964 65 ರವರೆಗೂ [illegible]ಗಿ ಅಕ್ಕ ಎಂಬ ಅಕ್ಕಿ ಸಿಗುತ್ತಿತ್ತು. ಅಷ್ಟು ರುಚಿ ಕರವಾದ ಅಕ್ಕಿಯನ್ನು ಅನಂತರ ನಾನು ಕಂಡಿಲ್ಲ..

ಅಧಿಕ ಇಳುವರಿ ತಳಿಗಳು ಬಂದಾಗ ಅವುಗಳನ್ನು ನಾವು ಬೇಸಾಯಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತದೆ. ಹಳೆಯ ತಳಿಗಳು ಎತ್ತರಕ್ಕೆ ಬೆಳೆಯುತ್ತವೆ. ಸಾರಜನಕ ಹಾಕಿ ಅವುಗಳಿಂದ ಹೆಚ್ಚಿನ ಉತ್ಪಾದನೆ ಪಡೆಯಲು ಆಗುವುದಿಲ್ಲ. ಭತ್ತದಲ್ಲಂತೂ ಹಳೆಯ ತಳಿಗಳಿಂದ ಎಕರೆಗೆ ಐದಾರು ಕ್ವಿಂಟಾಲು ಪಡೆಯುತ್ತಿದ್ದರೆ, ಈಗ ಸುಧಾರಿಸಿದ ತಳಿಗಳಿಂದ 15-20 ಕ್ವಿಂಟಾಲು ಬೆಳೆಯುತ್ತೇವೆ. ಜನಸಂಖ್ಯೆ ಕಡಿಮೆಯಿದ್ದಾಗ ಇಳುವರಿ ಕಡಿಮೆಯಿದ್ದರೂ ನಡೆಯುತ್ತಿತ್ತು. ಈಗ ಬೆಳೆಯುತ್ತಿರುವ ಜನಸಂಖ್ಯೆಯ ಕಾರಣದಿಂದಾಗಿ, ನಾವು, ಗುಣದಲ್ಲಿ ಸ್ವಲ್ಪ ಕೊರತೆ ಕಂಡರೂ ಬೆಳೆಯ ಪ್ರಮಾಣವನ್ನು ಖಂಡಿತ ಹೆಚ್ಚಿಸಲೇಬೇಕಿದೆ.

● ಗುಣದಲ್ಲಿ ಕೊರತೆ ಕಂಡರೂ ಹೆಚ್ಚು ಇಳುವರಿ ನೀಡುವ ತಳಿಗಳನ್ನು ಆಯ್ದುಕೊಳ್ಳುವುದು ಅನಿವಾರ್ಯವೆಂದು ನೀವು ಹೇಳಿದಿರಿ. ಈಗ ಜನರಲ್ಲಿ ರೂಢವಾಗಿರುವ ಒಂದು ನಂಬಿಕೆಯ ಬಗ್ಗೆ ಪ್ರಸ್ತಾಪಿಸಬೇಕಾಗುತ್ತದೆ. ಈಗ ಜನಕ್ಕೆ ಹೊಸತಾಗಿ ಬರುತ್ತಿರುವ ಅನೇಕ ರೋಗ ರುಜಿನಗಳಿಗೆ ಹೈಬ್ರಿಡ್ ಧಾನ್ಯಗಳೇ ಕಾರಣವೆಂದು ಆಡಿಕೊಳ್ಳಲಾಗುತ್ತಿದೆ.

ಅದು ತಪ್ಪು ಕಲ್ಪನೆ.

● ಇರಬಹುದು. ಆದರೆ ಹಳೆಯ ತಳಿಗಳಲ್ಲಿ ಇರುತ್ತಿದ್ದಂಥ ಪ್ರೋಟೀನ್ ಮುಂತಾದ ಪೋಷಕಾಂಶಗಳು ಹೈಬ್ರಿಡ್ ತಳಿಗಳಲ್ಲಿ ಇಲ್ಲವೆಂಬ ಸಾಮಾನ್ಯ ಭಾವನೆ ಪ್ರಚಲಿತವಾಗಿದೆಯಲ್ಲ...

ಧಾನ್ಯಗಳ ಗುಣಮಟ್ಟದ ಬಗ್ಗೆ ಮಾತಾಡುವುದಾದರೆ ನಾವು ತೀರ ಇಷ್ಟೊಂದು ಸ್ಥೂಲವಾಗಿ ಮಾತಾಡಬಾರದು. ಧಾನ್ಯಗಳ ಗುಣಮಟ್ಟವನ್ನು ಅವುಗಳಲ್ಲಿಯ ಕಾರ್ಬೋಹೈಡ್ರೇಟ್ಸ್, ಮಿನರಲ್ಸ್ ಮುಂತಾದುವುಗಳ ಪ್ರಮಾಣ ಹಳೆಯ ತಳಿಯ ಕಾಳುಗಳಲ್ಲಿಗಿಂತ ಹೊಸ ಹೈಬ್ರಿಡ್ ಧಾನ್ಯದಲ್ಲಿ ವ್ಯತ್ಯಾಸವಾಗುತ್ತದೆಯೇ ಎಂಬುದೇ ಪ್ರಶ್ನೆ. ಈ ಬಗ್ಗೆ ಕೃಷಿ ವಿಜ್ಞಾನಿಗಳು ಸಾಕಷ್ಟು ಪ್ರಯೋಗಗಳನ್ನು ನಡೆಸಿ ಅದು ಮಿಥ್ಯವೆಂದು [illegible]ತುಕೊಂಡಿದ್ದಾರೆ. ಸಾರಿಯೂ

ಇದ್ದಾರೆ. ಆದರೆ ಭಾರತೀಯರಾದ ನಮಗೆ, ವಿಶೇಷತಃ ರೈತರಿಗೆ ತಾವು ನಿತ್ಯ ಸೇವಿಸುವ ಆಹಾರದ ವಿಷಯದಲ್ಲಿ rigid taste preferences ಇವೆ. ಒಬ್ಬೊಬ್ಬನಿಗೆ ಒಂದೊಂದು ರುಚಿ ಇಷ್ಟವಾಗುತ್ತದೆ. ಆಗಷ್ಟೇ ನೀವೇ ಹಿಂದೆ ಸಿಗುತ್ತಿದ್ದ ಕಲಘಟಗಿ ಅಕ್ಕಿಯ ವಿಚಾರ ಹೇಳಿದಿರಿ. ಅದರಿಂದ ಮಾಡಿದ ಅನ್ನಕ್ಕೆ ವಿಶಿಷ್ಟ ರುಚಿ ಇರುತ್ತಿತ್ತು. ಅದನ್ನು ನೀವಿನ್ನೂ ಮರೆತಿಲ್ಲ. ಇದೇ ರೀತಿ ನಮ್ಮ ರೈತರಿಗೆ ಮುತ್ತಿನಂಥ ಜೋಳವೇ ಆಗಬೇಕು. ಅದನ್ನು ಮನೆಯಲ್ಲೇ ಬೀಸಿ ರೊಟ್ಟಿ ಮಾಡಿದರೇನೇ ಅವನು ರುಚಿ ಮಾಡಿಕೊಂಡು ಯಥೇಚ್ಛ ಸೇವಿಸುತ್ತಾನೆ. ಆದರೆ ಅಮೆರಿಕನ್ ರೈತ ಗೋಧಿ, ಮೆಕ್ಕೆ ಜೋಳ ಮುಂತಾದುವನ್ನೆಲ್ಲ ಯಥೇಚ್ಛ ಬೆಳೆದರೂ ಅವನು ಅವುಗಳನ್ನು ನೇರವಾಗಿ ಬಳಸೋದೇ ಇಲ್ಲ. ಇಲ್ಲಿ ಅವನಿಗೆ ಬೇಕಾದದ್ದು finished product ಅಥವಾ ಸಿದ್ಧ ಆಹಾರ. ಪೇಟೆಯಲ್ಲಿ ದೊರೆಯುವ ಸಿದ್ಧ ಆಹಾರ ಉತ್ತಮಗುಣ ಮಟ್ಟದ್ದಾಗಿರಬೇಕೆಂದು ಆತ ಬಯಸುತ್ತಾನಷ್ಟೆ. ಇಂಥ ಕಟ್ಟುನಿಟ್ಟಾದ ಕಲ್ಪನೆಗಳಿಂದ ನಾವು ಮುಕ್ತರಾಗದಿದ್ದರೆ ಪ್ರಾಯಶಃ ನಮ್ಮ ಆಹಾರ ಸಮಸ್ಯೆಗಳಿಗೆ ಇನ್ನು ಮುಂದೆ ಉತ್ತರವೇ ದೊರೆಯಲಿಕ್ಕಿಲ್ಲ. ಹೆಚ್ಚು ಇಳುವರಿ ನೀಡುವ ಹೈಬ್ರಿಡ್ ತಳಿಗಳನ್ನು ಜನಪ್ರಿಯ ಗೊಳಿಸುವಲ್ಲಿ ಹಿಂದೇಟು ಬೀಳುತ್ತಿರುವುದಕ್ಕೆ ಈ ಬಗೆಯ ರೂಢ ಕಲ್ಪನೆಗಳೂ ಬಹಳ ಮಟ್ಟಿಗೆ ಕಾರಣವಾಗುತ್ತವೆ. ಸಿದ್ಧ ಆಹಾರಗಳಿಗೆ ರುಚಿ ನೀಡಲು ಸೋಯಾಬೀನನ್ನು ಇಷ್ಟ ಪ್ರಮಾಣದಲ್ಲಿ ಬೆರೆಸಿದರೆ ಸಾಕಾದೀತು. ಸಾವಿರಾರು ವರ್ಷಗಳಿಂದ ಸಂಪ್ರದಾಯಬದ್ಧ ರೀತಿಯಲ್ಲಿ ಬೆಳೆದು ಬಂದ ನಮ್ಮ ದೇಶದಲ್ಲಿ ಇತ್ತೀಚಿನ ವರ್ಷಗಳಲ್ಲಿ ಅನೇಕ ವಿಷಯಗಳಲ್ಲಿ ತೀವ್ರ ಬದಲಾವಣೆಗಳಾಗುತ್ತಿವೆ. ಆಹಾರ ಉತ್ಪಾದನೆ ಮತ್ತು ಅದರ ಸೇವನೆ ಈ ಎರಡೂ ವಿಷಯಗಳ ಬಗ್ಗೆ ನಮ್ಮ ಪ್ರವೃತ್ತಿ ಬದಲಾದರೆ ಮಾತ್ರ ನಿಶ್ಚಿತ ಪ್ರಗತಿ ಸಾಧ್ಯ. ತನ್ನ ಐವತ್ತು ಎಕರೆ ಜಮೀನಿನಲ್ಲಿ ತನ್ನ ಮನೆತನಕ್ಕೆ ಸಾಕಾಗುವಷ್ಟು ಬೆಳೆ ಬಂದರೆ ಸಾಕೆಂಬಂಥ ರೈತರ ದೃಷ್ಟಿಕೋನ ಬದಲಾಗಿ ಕೃಷಿ ಕೂಡ ಒಂದು ಉದ್ಯಮದ ರೂಪದಲ್ಲೇ ಬೆಳೆಯಬೇಕು. ಆದರೆ ಇಂದಿನ ಭಾರತೀಯ ಪರಿಸರದ ಹಿನ್ನೆಲೆಯಲ್ಲಿ ಇದು ತಕ್ಷಣ ಅಥವಾ ಅಲ್ಪಾವಧಿಯಲ್ಲಿ ಸಂಭವಿಸಬಹುದಾದ ಸಂಗತಿಯಲ್ಲ; ಇದಕ್ಕೆ ಸಾಕಷ್ಟು ಕಾಲಾವಧಿ ಬೇಕಾದೀತು. ಅದಕ್ಕಾಗಿ ಕೃಷಿ ವಿಜ್ಞಾನಿಗಳು, ಸಾಮಾಜಿಕ ಕಾರ್ಯಕರ್ತರು ಅವಿಶ್ರಾಂತವಾಗಿ ಪರಿಶ್ರಮ ಪಡಬೇಕೆಂಬುದಂತೂ ನಿಜ.

● ಇದೇ ಸಂದರ್ಭದಲ್ಲಿ ಇನ್ನೂ ಒಂದು ಪ್ರಶ್ನೆಯನ್ನು ಕೇಳಬಹುದಲ್ಲ? ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಫಸಲು ಚೆನ್ನಾಗಿ ಬರುತ್ತದೆಂಬುದು ಕಣ್ಣಿಗೇ ಕಾಣುವಂತಿದೆ. ಆದರೆ ಅವುಗಳ ಬಳಕೆಯಲ್ಲಿ ಸ್ವಲ್ಪ ಏರುಪೇರಾದರೂ ಅದರಿಂದ ಬೆಳೆಗೆ ಹಾನಿ ತಟ್ಟುವುದಷ್ಟೇ ಅಲ್ಲ, ಇಂಥ ಬೆಳೆಯನ್ನು ಕೊನೆಯಲ್ಲಿ ಉಪಯೋಗಿಸುವ ಬಳಕೆದಾರನ ಆರೋಗ್ಯಕ್ಕೂ ಹಾನಿಯುಂಟಾಗಬಹುದಾಗಿದೆಯಲ್ಲವೇ?

ಬಳಕೆದಾರನ ಆರೋಗ್ಯಕ್ಕೆ ಹಾನಿಯಾಗಬಹುದೋ ಇಲ್ಲವೋ ಎಂಬ ಬಗ್ಗೆ ಖಚಿತವಾಗಿ ಒಮ್ಮೆಲೆ ಹೇಳಲಾಗುವುದಿಲ್ಲ. ಆದರೆ ಸಾಂಪ್ರದಾಯಿಕ ಕೃಷಿ ಪದ್ಧತಿಗಳನ್ನೇ ನಂಬಿದವರು ಎಕರೆಗೆ ಐದಾರು ಕ್ವಿಂಟಾಲು ಬೆಳೆಯುತ್ತಿದ್ದರೆ ಈಗ ಪರಿಷ್ಕೃತ ಬೀಜಗಳ ಬಳಕೆಯಿಂದ ಹಾಗೂ ಅದಕ್ಕೆ ಗೊಬ್ಬರಗಳಂಥ ಆಹಾರ ಪೋಷಕಾಂಶಗಳನ್ನು ನೀಡಿದರೆ ನಾಲ್ಕುಪಟ್ಟು ಬೆಳೆ ಬೆಳೆಯಬಹುದು. ಐದಾರು ಕ್ವಿಂಟಾಲು ಬೆಳೆಯುತ್ತಿದ್ದಷ್ಟೇ ಭೂಮಿಯಲ್ಲಿ ಅದರ ನಾಲ್ಕು ಪಟ್ಟು ಬೆಳೆಯನ್ನು ಬೆಳೆಯಬೇಕಿದ್ದರೆ ಭೂಮಿಗೆ ನೀಡುವ ಪೋಷಕಾಂಶಗಳಲ್ಲೂ ನಾಲ್ಕು ಪಟ್ಟು ಹೆಚ್ಚಳವಾಗಬೇಕಾದ್ದು ಅಗತ್ಯ. ಇಲ್ಲಿ ರಾಸಾಯನಿಕ ಗೊಬ್ಬರಗಳ ಪಾತ್ರ ಮುಖ್ಯವಾಗುತ್ತದೆ. ರಸಗೊಬ್ಬರಗಳನ್ನು ಬಳಸುವಾಗ ನಾವು ಅದಕ್ಕೆ ಅಗತ್ಯವಾದಂಥ ಎಚ್ಚರಿಕೆಯನ್ನು ವಹಿಸದಿದ್ದರೆ ಭೂಮಿಯ ಗುಣಮಟ್ಟವೇ ಹಾಳಾಗಿ ಹೋಗುವ ಸಂಭವವೂ ಇದೆ. ನಮ್ಮ ರೈತರಲ್ಲಿ ಹೆಚ್ಚಿನವರನ್ನು ನಾವು ಅಶಿಕ್ಷಿತರು ಅಥವಾ ಅರ್ಧಶಿಕ್ಷಿತರು ಎಂದೇ ಹೇಳಬೇಕಾಗುತ್ತದೆ. ನೈಟ್ರೋಜನ್, ಅಮೋನಿಯಂ ಸಲ್ಫೇಟ್, ಯೂರಿಯಾ ಇವುಗಳ ನಡುವಿನ ಅಂತರವೇ ಅವರಿಗೆ ಗೊತ್ತಿರುವುದಿಲ್ಲ. ಇದನ್ನೆಲ್ಲ ಬೂದಿ

ಗೊಬ್ಬರ ಎಂದವರು ಕರೆಯುತ್ತಾರೆ. ಸೂಪರ್ ಫಾಸ್ಫೇಟಿಗೆ ಅವರು ಕೊಟ್ಟ ಹೆಸರು 'ಸಕ್ಕರೆ ಗೊಬ್ಬರ'. ರಸಗೊಬ್ಬರಗಳನ್ನು ಮನಬಂದಂತೆ ಭೂಮಿಗೆ ಉಣಿಸಲು ಬರುವುದಿಲ್ಲ. ಭೂಮಿಯ ಗುಣಮಟ್ಟ, ನಾವು ಅಲ್ಲಿ ಬಿತ್ತಬೇಕೆಂದು ನಿರ್ಧರಿಸುವ ಬೆಳೆ ಇತ್ಯಾದಿ ಅಂಶಗಳನ್ನು ಮನಗಂಡು ಯಾವ ವಿಶಿಷ್ಟ ರಸಗೊಬ್ಬರವನ್ನು ಯಾವ ಪ್ರಮಾಣದಲ್ಲಿ, ಯಾವ ಯಾವ ಸಮಯದಲ್ಲಿ ಭೂಮಿಗೆ ಉಣಿಸಬೇಕೆಂಬುದನ್ನು ಕೃಷಿ ವಿಜ್ಞಾನಿ ನಿರ್ಧರಿಸಬಲ್ಲ. ಅರ್ಥಾತ್ ಈ ಸಮತೋಲವನ್ನು ನಾವು ಸಾಧಿಸದಿದ್ದರೆ ನಾವು ನಿರೀಕ್ಷಿಸುವ ಪ್ರಮಾಣದಲ್ಲಿ ಬೆಳೆಯೂ ಬರಲಿಕ್ಕಿಲ್ಲ. ಹಾಗೂ ಕೆಲವೇ ವರ್ಷಗಳಲ್ಲಿ ಭೂಮಿಯೂ ಬರಡಾಗಬಹುದು. ಇಲ್ಲಿ ಕೃಷಿ ವಿಜ್ಞಾನಿಗಳ ಮತ್ತು ರೈತರ ಮಧ್ಯೆ ಅರ್ಥಪೂರ್ಣ ಸಂಪರ್ಕ ಏರ್ಪಡಬೇಕಾದದ್ದು ಅತ್ಯಗತ್ಯ. ಈಗ ಆಧುನಿಕ ಕೃಷಿ ತಂತ್ರಜ್ಞಾನ ಲಭ್ಯವಾಗುತ್ತಿರುವುದು ಕೇವಲ ನೂರಕ್ಕೆ 15 ರಷ್ಟು ಕೃಷಿಕರಿಗೆ. ಎಲ್ಲ ಸಂಶೋಧನೆಗಳ ಫಲ ಕೃಷಿಕರಿಗೆ ದೊರೆಯುತ್ತಿಲ್ಲವಾದರೆ ಮುಂದಿನ ಶತಮಾನದ ಪ್ರಾರಂಭದ ಹೊತ್ತಿಗೆ ನಾವು ಸಾಧಿಸಬೇಕೆಂದಿಟ್ಟು ಕೊಂಡಿರುವ ಗುರಿಯನ್ನು ತಲಪುವುದು ಹೇಗೆ ಸಾಧ್ಯ? ಈಗಿನ ನಮ್ಮೆಲ್ಲ ಪ್ರಯತ್ನಗಳ ಗುರಿಯೆಂದರೆ ತಂತ್ರಜ್ಞಾನ ಮತ್ತು ರೈತನ ನಡುವಿನ ಅಂತರವನ್ನು ಕುಗ್ಗಿಸುವುದು.

● ಈಗ ಬೆಳೆಗಳ ರಕ್ಷಣೆಯ ಬಗ್ಗೆ ಒಂದು ಪ್ರಶ್ನೆ. ನನಗೆ ತೀರ ಸಮೀಪದಿಂದ ಗೊತ್ತಿರುವ ಒಂದು ವಿಷಯವೆಂದರೆ ಶಿರಹಟ್ಟಿ ತಾಲ್ಲೂಕಿನದು. ಆ ತಾಲ್ಲೂಕಿನ ಮುಖ್ಯ ಬೆಳೆಯಾದ ಜೋಳಕ್ಕೆ ಸುಮಾರು 10-12 ವರ್ಷಗಳ ಹಿಂದೆ ಬೆಂಕೀ ಹುಳ ಎಂಬ ಒಂದು ಬಗೆಯ ಹುಳ ಹತ್ತಿ ಬೆಳೆ ಬಹುಮಟ್ಟಿಗೆ ನಾಶವಾಯಿತು. ಆದರೆ ಅಂದಿನಿಂದ ಇಂದಿನವರೆಗೂ ಪ್ರತಿವರ್ಷವೂ ಈ ಹುಳದ ಬಾಧೆ ಅವ್ಯಾಹತವಾಗಿಯೇ ಇದೆ. ಅದನ್ನು ನಿರ್ಮೂಲ ಮಾಡಲು ಸಾಧ್ಯವಾಗಿಲ್ಲವಲ್ಲ?

ಈ ಹುಳ ಅವಿನಾಶಿಯೇನೂ ಅಲ್ಲ. ಇದರ ನಿಯಂತ್ರಣಕ್ಕೆ ಅನುಸರಿಸಬೇಕಾದ ಸರಿಯಾದ ಕ್ರಮವನ್ನು ಅನುಸರಿಸುತ್ತಿಲ್ಲವೆಂಬುದೇ ಸಮಸ್ಯೆ. ನಮ್ಮ ತಂತ್ರಜ್ಞಾನ ಗ್ರಾಮ ಭಾರತವನ್ನು ತಲಪುತ್ತಿಲ್ಲವೆಂಬುದಕ್ಕೆ ಇದಕ್ಕಿಂತ ಹೆಚ್ಚಿನ ಉದಾಹರಣೆಯೇನು ಬೇಕು?



"ಅದು ಯಾರದ್ರೀ..ಸ್ಲೇಟು ಹಿಡ್ಕೊಂಡಿರೋ ಫೋಟೋ ಹಾಕಿದೀರಲ್ಲ...ವಯಸ್ಕರ ಶಿಕ್ಷಣದಲ್ಲಿ ರ್‍ಯಾಂಕ್ ಬಂದಿರೋರಾ?"

● ಜನಮಾನಸದಲ್ಲಿ ರೂಢವಾಗಿರುವ ಇನ್ನೊಂದು ಕಲ್ಪನೆಯೆಂದರೆ ಹೈಬ್ರಿಡ್ ಬೆಳೆಗಳೆಲ್ಲ ರೋಗಗಳಿಗೆ ಬಲು ಸುಲಭವಾಗಿ ತುತ್ತಾಗುತ್ತವೆ. ಅವುಗಳಲ್ಲಿ ರೋಗ ನಿರೋಧಕ ಗುಣ ತೀರ ಕಡಿಮೆ ಅನ್ನುತ್ತಾರೆ. ಅಲ್ಲದೆ ಇವುಗಳಿಗೆ ಹುಳಗಳು ಹತ್ತುವುದೂ ಹೆಚ್ಚೆಂಬ ಕಲ್ಪನೆಯೂ ಇದೆ. ಇದೆಲ್ಲದರ ನಿವಾರಣೆಗಾಗಿ ಉಪಯೋಗಿಸುವಂಥ ಕ್ರಿಮಿನಾಶಕ ಮುಂತಾದವುಗಳು ಮನುಷ್ಯನ ಆರೋಗ್ಯಕ್ಕೆ ತುಂಬ ಅಪಾಯಕಾರಿಯಲ್ಲವೆ?

ಉತ್ಪಾದನಾ ಕ್ಷಮತೆ ಹೆಚ್ಚುವುದಕ್ಕೆ ಹೆಚ್ಚಿನ ಪೋಷಕಾಂಶಗಳನ್ನು ಕೊಡಬೇಕಾಗುತ್ತದೆ. ಬೆಳೆಗೆ ಹೆಚ್ಚಿನ ಪೋಷಕಾಂಶಗಳಂತೆಯೇ ಸಂರಕ್ಷಣೆಯೂ ಅಗತ್ಯವಾಗುತ್ತದೆ. ಇಳುವರಿ ಹೆಚ್ಚಿದಂತೆಲ್ಲ ಅವುಗಳಿಗೆ ಬರಬಹುದಾದ ರೋಗರುಜಿನಗಳು ಕ್ರಿಮಿಕೀಟಗಳೂ ಹೆಚ್ಚಾಗುತ್ತವೆ. ಅದು ಸಹಜವೇ. ಅವುಗಳನ್ನು ನಾವು ದಮನ ಮಾಡಲೇಬೇಕು. ಆದರೆ ಅದೇ ನೆಪದಿಂದ

[illegible] ಬಳಸುತ್ತ ನಡೆದರೆ ನಿಸರ್ಗದ ವಿರುದ್ಧ ದೊಡ್ಡ ಅಪರಾಧವನ್ನೇ ಮಾಡಿದಂತಾಗುತ್ತದೆ. ಯಾಕೆಂದರೆ, ಸೃಷ್ಟಿಯಲ್ಲಿ ಪ್ರತಿಯೊಂದಕ್ಕೂ ಅರ್ಥವಿದೆ. ನಿಶ್ಚಿತ ಕಾರ್ಯವಿದೆ. ಈ ನೈಸರ್ಗಿಕ ಸಮತೋಲ ಹಾಳಾಗದಂತೆ ನಾವು ನೋಡಿಕೊಳ್ಳಲೇ ಬೇಕಾಗುತ್ತದೆ. ರಾಸಾಯನಿಕ ಕ್ರಿಮಿನಾಶಕಗಳು ನಿಸರ್ಗಕ್ಕೆ, ತನ್ಮೂಲಕ ಮನುಷ್ಯನಿಗೆ ಅದೆಷ್ಟು ಅಪಾಯಕಾರಿಯೆಂಬ ಅರಿವು ಇತ್ತೀಚೆಗಷ್ಟೇ ಮೂಡುತ್ತಿದೆ. ಕ್ರಿಮಿಗಳ ದಮನ ಅಥವಾ ನಾಶಕ್ಕೆ ಬದಲು ಅವುಗಳನ್ನು ನಿಯಂತ್ರಿಸಿ ಅಂಕೆಯಲ್ಲಿಟ್ಟುಕೊಳ್ಳುವಂತಾಗಬೇಕು. ಇಲ್ಲಿಯೇ ಜೈವಿಕ ನಿಯಂತ್ರಣದಂಥ ಕ್ರಮದ ಅಗತ್ಯವೂ ಇದೆ. ರಾಸಾಯನಿಕ ಕ್ರಿಮಿನಾಶಕಗಳು ಪರಿಸರವನ್ನು ಕಲುಷಿತಗೊಳಿಸುವಲ್ಲೂ ಮಹತ್ತರ ಪಾತ್ರವಹಿಸುತ್ತವೆ. ಈಗಾಗಲೇ ಅವುಗಳಿಂದಾದ ಹಾನಿ ಸಾಕು. ಈಗ ತೀರ ಅನಿವಾರ್ಯವೆಂಬಲ್ಲಿ ಮಾತ್ರ ಅವುಗಳನ್ನು ಎಚ್ಚರಿಕೆಯಿಂದ ಬಳಸಿ ಅನಾಹುತವನ್ನು ತಡೆಯಬೇಕು.

● ದ್ರಾಕ್ಷಿ, ಸೇಬುಗಳಂಥ ಹಣ್ಣುಗಳ ಮೇಲೆಯೇ ಕ್ರಿಮಿನಾಶಕಗಳನ್ನು ಹೊಡೆಯುತ್ತಾರೆ. ಅವುಗಳನ್ನು ಹಾಗೆಯೇ ಮಾರುಕಟ್ಟೆಗೆ ತಂದು ಮಾರುತ್ತಾರೆ. ಇದರಿಂದ ಇಬ್ಬಗೆಯ ಅಪಾಯವಿದೆಯೆಂದು ನನಗನಿಸುತ್ತದೆ. ಒಂದು, ನೇರವಾಗಿ ಈ ಹಣ್ಣುಗಳನ್ನು ಕೊಂಡಂತೆಯೇ ತಿಂದುಬಿಡುವುದು ಮನುಷ್ಯರ ಆರೋಗ್ಯಕ್ಕೆ ಹಾನಿಕರ; ಅಲ್ಲದೆ ಈ ಕ್ರಿಮಿನಾಶಕಗಳಿಂದ ಈ ಹಣ್ಣುಗಳ ಗುಣಮಟ್ಟದ ಮೇಲೂ ಪರಿಣಾಮವಾಗಬಹುದು.

ಪೇಟೆಯಲ್ಲಿ ಕೊಂಡ ಹಣ್ಣುಗಳನ್ನು ನೇರವಾಗಿ ತಿಂದುಬಿಡುವುದು ಹಿತಕರವಲ್ಲವೆಂಬ ಬಗ್ಗೆ ಜನಕ್ಕೆ ಸರಿಯಾದ ಶಿಕ್ಷಣ ನೀಡುವುದು ಅಗತ್ಯ. ನನಗೆ ಗೊತ್ತಿರುವ ಮಟ್ಟಿಗೆ ದ್ರಾಕ್ಷಿ, ಸೇಬುಗಳನ್ನಂತೂ ಮನೆಗೆ ತಂದು ತೊಳೆಯದೇ ತಿನ್ನುವ ಜನ ಕಡಿಮೆ. ಆದರೆ ಹೆಚ್ಚು ಇಳುವರಿ ನೀಡುವ ಬೆಳೆಯನ್ನು ಬೆಳೆದಾಗ ಅದರ ಸಂರಕ್ಷಣೆಗಾಗಿ ನಾವು ಕ್ರಮಗಳನ್ನು ಯೋಜಿಸುವುದೂ ಅಗತ್ಯವೇ ಅಲ್ಲವೆ? ಈ ಹಣ್ಣುಗಳ ಸಂರಕ್ಷಣೆಗಾಗಿ ಇವುಗಳಿಗೆ ಸಿಂಪಡಿ ... ಮಟ್ಟದ ಮೇಲೆ ಯಾವುದೇ ದುಷ್ಪರಿಣಾಮವಾಗುವುದಿಲ್ಲ.

●ಉತ್ತರ ಕರ್ನಾಟಕದ ಕಪ್ಪು ಮಣ್ಣೇ ಪ್ರಧಾನವಾಗಿರುವಂಥ ಪ್ರದೇಶವೆಂದು ನೀವೇ ಹೇಳಿದಿರಿ. ಮಲಪ್ರಭಾ ಅಣೆಕಟ್ಟು ಕಟ್ಟಿ ಧಾರವಾಡ, ಬೆಳಗಾಂವಿ ಜಿಲ್ಲೆಗಳ ಕೆಲ ತಾಲ್ಲೂಕುಗಳಿಗೆ ನೀರಾವರಿ ಸೌಕರ್ಯ ಒದಗಿಸಬೇಕೆಂದು ನಿರ್ಧಾರವಾದಾಗ ಈ ಭಾಗಕ್ಕೆ ಕಾಲುವೆಗಳ ಮೂಲಕ ನೀರಾವರಿಯ ಬದಲು ತುಂತುರು ನೀರಾವರಿಯೇ ಯೋಗ್ಯವೆಂಬ ಬಗ್ಗೆ ಆಂದೋಲನವೇ ನಡೆಯಿತು. ಅಂದಿನ ಕೇಂದ್ರ ಮಂತ್ರಿಯೊಬ್ಬರ ಪ್ರಯತ್ನದಿಂದ ಒಂದು ತಜ್ಞರ ಸಮಿತಿ ನೇಮಕಗೊಂಡು ಈ ಭಾಗಕ್ಕೆ ತುಂತುರು ನೀರಾವರಿಯೇ ಯೋಗ್ಯವೆಂಬ ವರದಿಯೂ ಬಂತು. ಆದರೆ ಆ ವರದಿ ಧೂಳು ತಿನ್ನುತ್ತ ಇನ್ನೂ ವಿಧಾನಸೌಧದ ಕೊಠಡಿಯಲ್ಲಿ ಬಿದ್ದಿರಬೇಕು. ಮುಂದೆ ಕಾಲುವೆ ನೀರಾವರಿ ಯೋಜನೆಯಾಗಿ ಮುಗಿದುಬಿಟ್ಟಿತು.

ಈ ವಿಷಯವನ್ನು ನೀವು ಪ್ರಸ್ತಾಪಿಸಿದ್ದು ಚೆನ್ನಾಯಿತು. ಹಿಡಕಲ್ ಅಣೆಕಟ್ಟು ಕಟ್ಟುವಾಗ ಚೀಫ್ ಇಂಜಿನಿಯರಾಗಿದ್ದ ಎಸ್.ಜಿ. ಬಾಳೇಕುಂದ್ರಿಯವರೇ ಮಲಪ್ರಭಾ ಅಣೆಕಟ್ಟಿನ ಪ್ರಾರಂಭದಲ್ಲಿ ಇಲ್ಲಿದ್ದರು. ಆ ಕಾಲಕ್ಕೆ ನಮ್ಮಲ್ಲೊಂದು (ನಮ್ಮ ವಿಶ್ವವಿದ್ಯಾಲಯದಲ್ಲಿ) ಒಣ ಭೂಮಿ ಬೇಸಾಯ ಸಂಶೋಧನ ಕೇಂದ್ರವೆಂಬ ಸಂಸ್ಥೆಯಿತ್ತು. ಅದು ಸಾಕಷ್ಟು ಒಳ್ಳೆಯ ಕೆಲಸವನ್ನೂ ಮಾಡಿತ್ತು. ಮಲಪ್ರಭಾ ನೀರಾವರಿ ಪ್ರಾರಂಭವಾದ ನಂತರವೂ ಈ ಸಂಸ್ಥೆಯನ್ನು ಮುಂದುವರಿಸಿಕೊಂಡು ಹೋಗುವುದು ಸರಿಯೇ ಎಂಬ ಪ್ರಶ್ನೆಯೂ ಬಂತು. ಆ ಕಾಲಕ್ಕೆ ಈ ಯೋಜನೆಯಡಿಯಲ್ಲಿ ಯಾವ ಬಗೆಯ ನೀರಾವರಿ ಪದ್ಧತಿಯನ್ನು ಅನುಸರಿಸಬೇಕೆಂಬ ಬಗ್ಗೆ ಶಿಫಾರಸು ಮಾಡಲು ನಾಲ್ಕು ಜನರ ಒಂದು ತಜ್ಞ ಸಮಿತಿ ನೇಮಕವಾಯಿತು. ನಾನು ಆ ಸಮಿತಿಯ ಸದಸ್ಯನಾಗಿದ್ದೆ. ನಾವು ಅನೇಕ ಸಲ ಸಭೆ ಸೇರಿ ಚರ್ಚಿಸಿ ಒಂದು ತೀರ್ಮಾನಕ್ಕೆ ಬಂದೆವು. ಆಗ ಆಗಲೇ ಅಣೆಕಟ್ಟಿನ ನಿರ್ಮಾಣಕಾರ್ಯ ಪ್ರಾರಂಭವಾಗಿಬಿಟ್ಟಿತ್ತು. ಈ ಪ್ರದೇಶಕ್ಕೆ ನೀರುಣಿಸುವ ಕಾಲುವೆಗಳ [illegible]

ಪೂರ್ಣಗೊಳ್ಳು ಸೂಕ್ತ ವ್ಯವಸ್ಥೆಯಾಗಬೇಕು. Drainage channels were much more relevant than irrigation channels themselves. ಕಪ್ಪು ಮಣ್ಣಿಗೆಂದೂ ಅತಿಯಾಗಿ ನೀರುಣಿಸಬಾರದು; ಲಘು ನೀರಾವರಿಯಿಂದ ಮಾತ್ರ ಇಲ್ಲಿ ಉತ್ತಮ ಪರಿಣಾಮಗಳನ್ನು ಪಡೆಯಬಹುದು. ಏನು ಮಾಡಬಹುದು ಎಂಬ ಬಗ್ಗೆ ಸಾಕಷ್ಟು ವಿವರವಾದ ಸಲಹೆಗಳನ್ನೇ ಸಮಿತಿ ನೀಡಿತು. ಅವುಗಳನ್ನು ಸರಕಾರ ಸ್ವೀಕರಿಸಿತಾದರೂ ಅನುಷ್ಠಾನದಲ್ಲಿ ತರುವಾಗ ಮಾತ್ರ ಅನೇಕ ತಪ್ಪುಗಳಾಗಿ ಕೆಲವೆಡೆ ವಿಪರೀತ ಪರಿಣಾಮವೂ ಆಗಿದ್ದಿದೆ. ತುಂತುರು ನೀರಾವರಿಯನ್ನೇ ಪ್ರಾರಂಭದಲ್ಲಿ ಸ್ವೀಕರಿಸಿದ್ದರೆ ಅದು ಈ ಭಾಗಕ್ಕೆ ಅತ್ಯಂತ ಮಿತವ್ಯಯಕಾರಿ, ಲಾಭದಾಯಕ ಕ್ರಮವೆನಿಸಬಹುದಿತ್ತು.

● **1983 ರಲ್ಲಿ ನಾನು ಮುಖ್ಯಮಂತ್ರಿಗಳ ಸಂದರ್ಶನ ಮಾಡಿದ್ದೆ. ಅಪ್ಪರ್‌ಕೃಷ್ಣಾ ಯೋಜನೆ ಪೂರ್ತಿಗೊಂಡ ನಂತರ ಹೈದರಾಬಾದ್ ಕರ್ನಾಟಕ ಭಾರತದ ಆಹಾರ ಕಣಜಾಗಿ ಆಗಿಬಿಡಬಹುದೆಂಬ ಆಶಯವನ್ನು ಅವರು ವ್ಯಕ್ತಪಡಿಸಿದ್ದರು. ಆದರೆ ಹೈದರಾಬಾದ್ ಕರ್ನಾಟಕದ ಬಹುಭಾಗ ಕೂಡ ಕಪ್ಪು ನೆಲವೇ ಆಗಿರುವುದರಿಂದ ಮಲಪ್ರಭಾದಿಂದ ನರಗುಂದ ಭಾಗಕ್ಕಾದ ಗತಿಯೇ ಇಲ್ಲಿಗೂ ಒದಗಬಹುದೇನೋ ಎಂಬ ಭಯ ನನಗೆ.**

ಮಲಪ್ರಭಾದ ಸುಟ್ಟಿಗೆ ಹೇಳುವುದಾದರೆ ಅಲ್ಲಿ ಅಷ್ಟೇನೂ ಗಂಭೀರ ಪ್ರಮಾದಗಳಾಗಿಲ್ಲ. ಹಾಗೆ ನೋಡಿದರೆ ಪ್ರಮಾದವಾದದ್ದು ತುಂಗಭದ್ರಾ ಯೋಜನೆಯಡಿ. ಅಲ್ಲಿ ಭತ್ತ, ಕಬ್ಬು ಮುಂತಾದ ಭಾರಿ ನೀರುಣ್ಣುವ ಬೆಳೆಗಳಿಗೆ ಅವಕಾಶವಿದ್ದುದರಿಂದ ಆ ಭಾಗದಲ್ಲಿಯ ಕೃಷಿ ಸ್ವರೂಪವೇ ಬದಲಾಯಿತಲ್ಲದೆ ಅನೇಕ ಕಡೆಗಳಲ್ಲಿ ಭೂಸತ್ವವೂ ಹಾಳಾಗಿದೆ. ಅಲ್ಲಿ ಕಲಿತ ಪಾಠವನ್ನು ಕೃಷ್ಣಾ ಯೋಜನೆಯಲ್ಲಿ ಬಳಸಿಕೊಂಡರೆ ಮುಖ್ಯಮಂತ್ರಿಗಳ ಕನಸು ನನಸಾಗಲೂಬಹುದು.

● **ಇನ್ನೊಂದು ವಿಷಯ. ನಮ್ಮ ದೇಶದಲ್ಲಿ ಪ್ರಕಟವಾಗುವಂಥ 'ಸೈನ್ಸ್ ರಿಪೋರ್ಟರ್', 'ಸೈನ್ಸ್ ಟುಡೆ' ಮುಂತಾದ ಪತ್ರಿಕೆಗಳಲ್ಲಿ ನಿಮ್ಮ ವಿಶ್ವವಿದ್ಯಾಲಯದಲ್ಲಿ ನಡೆದ, ನಡೆಯುತ್ತಿರುವ ಸಂಶೋಧನೆಗಳ ಬಗ್ಗೆ ವರದಿಗಳಾಗಲಿ ಲೇಖನಗಳಾಗಲಿ ನಾನು ಕಂಡಿಲ್ಲ. 'ಹಿಂದು' ದಂಥ ದಿನಪತ್ರಿಕೆಯ ಪುರವಣಿಗಳಲ್ಲಿ ಆಗೀಗ ಹೆಬ್ಬಾಳದಲ್ಲಿ ನಡೆದಿರುವುದರ ಬಗ್ಗೆ ಸ್ವಲ್ಪೇನೋ ನೋಡಸಿಗುತ್ತದೆ. ಇದರಿಂದ ಒಮ್ಮೊಮ್ಮೆ ನಮ್ಮಲ್ಲಿ ಯಾವುದೇ ಸಂಶೋಧನ ಚಟುವಟಿಕೆಗಳೇ ನಡೆಯುವುದಿಲ್ಲವೇನೋ ಎಂಬ ಸಂದೇಹ ಉಂಟಾಗುತ್ತದೆ.**

ನಮ್ಮದಿನ್ನೂ ಒಂದು ವರ್ಷದ ಕೂಸು. ವೈಜ್ಞಾನಿಕ ಪತ್ರಿಕೆಗಳಲ್ಲಿ ಹಾಗೂ ಜನಪ್ರಿಯ ಪತ್ರಿಕೆಗಳಲ್ಲಿ ನಮ್ಮಲ್ಲಿ ನಡೆಯುವ ಉಪಯುಕ್ತ ಕಾರ್ಯಗಳ ಬಗ್ಗೆ ಸಂಶೋಧನೆಗಳ ಬಗ್ಗೆ ಲೇಖನಗಳು, ವಾರ್ತೆಗಳು ಬರಬೇಕೆಂಬುದು ನಿಜ. ಆದರೆ ನಮ್ಮಲ್ಲಿ ಅದಕ್ಕೆ ಅಗತ್ಯವಾದ ಸಂಸ್ಕೃತಿಯೂ ಬೆಳೆದು ಬರಬೇಕಿದೆ. ಬೆಂಗಳೂರಂಥ ನಗರದಲ್ಲಿ ಅದಕ್ಕೆ ಅಗತ್ಯವಾದಂಥ ವಾತಾವರಣ ತಕ್ಕಮಟ್ಟಿಗೆ ಪತ್ರಿಕೆಗಳಲ್ಲಿ ಬರುತ್ತವೆ. ಪ್ರಚಾರ ಮಾಧ್ಯಮದ ಮೂಲಕ ನಮ್ಮ ಸಂಶೋಧನೆಗಳ ಫಲ ನಮ್ಮ ರೈತರಿಗೆ ಸುಲಭವಾಗಿ ಸಿಗಬೇಕು. ಈ ಬಗ್ಗೆ ವಿಸ್ತರಣಾ ಯೋಜನೆಯನ್ನು ಹಮ್ಮಿಕೊಂಡು ಬರಲಿರುವ ವರ್ಷಗಳಲ್ಲಿ ಅದು ನಮ್ಮ ವಿಶ್ವವಿದ್ಯಾಲಯದ ಅತ್ಯುಪಯುಕ್ತವಾಗುವಂತೆ ನೋಡಿಕೊಳ್ಳಬೇಕಿದೆ.

● **ಈ ನೂತನ ಕೃಷಿ ವಿಶ್ವವಿದ್ಯಾಲಯದ ಕುಲಪತಿಯಾಗಿ ನೀವು ಕಾಣುತ್ತಿರಬಹುದಾದ ಕನಸನ್ನು ನಾನು ಊಹಿಸಬಲ್ಲೆ. ಆದರೂ ಈ ಬಗ್ಗೆ ನಿಮ್ಮಿಂದಲೇ ಎರಡು ಮಾತು ಬಂದರೆ ಒಳ್ಳೆಯದಲ್ಲವೆ?**

ನನಗೇನೋ ತುಂಬ ಆಸೆಯಿದೆ. ಇಲ್ಲಿ ಕೆಲಸ ಮಾಡುವ ನಾವು, ಕಲಿಯುವ ವಿದ್ಯಾರ್ಥಿಗಳು ಬೌದ್ಧಿಕವಾಗಿ, ಭೌತಿಕವಾಗಿ ಶ್ರಮಿಸಿದರೆ ಈ ವಿಶ್ವವಿದ್ಯಾಲಯ ಖಂಡಿತವಾಗಿಯೂ ದೇಶಕ್ಕೆ ತುಂಬ ಉಪಯುಕ್ತವಾದ ಸಂಸ್ಥೆಯಾಗಿ ಆದರ್ಶ ವಿಶ್ವವಿದ್ಯಾಲಯವಾಗಿ ರೂಪುಗೊಳ್ಳುತ್ತದೆ. ನಮಗೆ ದೊರೆತ ಅವಕಾಶವನ್ನು ಪೂರ್ತಿ ಸದುಪಯೋಗಪಡಿಸಿಕೊಳ್ಳೋಣ.

ಬಂಗಾರದ ಹುಡುಗಿ

ಸ್ಟೆಫಿ ಗ್ರಾಫ್

●ಸಂಜೀವ●



ಟೆನಿಸ್ ಆಡುವುದೊಂದೇ ನನ್ನ ಕೆಲಸ. ಗೆಳೆಯರು, ಹಣ, ಮೋಜು ಮುಂತಾದುವುಗಳತ್ತ ಗಮನ ಹರಿಸಲು ನನಗೆ ಸಮಯವಿಲ್ಲ"

ಇದು 20ರ ಹರೆಯದ ಸುಂದರಿ, ಪಶ್ಚಿಮ ಜರ್ಮನಿಯ ಖ್ಯಾತ ಟೆನಿಸ್ ತಾರೆ ಸ್ಟೆಫಿ ಗ್ರಾಫ್‌ರ ನುಡಿ.

1988ರಲ್ಲಿ ನಾಲ್ಕೂ ಪ್ರಮುಖ ಟೆನಿಸ್ ಪ್ರಶಸ್ತಿಗಳನ್ನು (ಆಸ್ಟ್ರೇಲಿಯನ್ ಓಪನ್, ಫ್ರೆಂಚ್ ಓಪನ್, ವಿಂಬಲ್ಡನ್ ಮತ್ತು ಯು.ಎಸ್. ಓಪನ್) ಗೆದ್ದು "ಗ್ರ್ಯಾಂಡ್ ಸ್ಲಾಮ್" ಸಾಧಿಸಿದ ಈ ಬಂಗಾರ ಕೂದಲಿನ ಹುಡುಗಿ ಸದ್ಯ ಟೆನಿಸ್ ಆಡುವ ಒಂದು ಯಂತ್ರದಂತೆ. ಈ ಯಂತ್ರ ತಪ್ಪುವುದು ಬಹಳ ಕಡಿಮೆ.

70ರ ದಶಕದ ದ್ವಿತೀಯಾರ್ಧದಿಂದ ಮಹಿಳೆಯರ ವಿಭಾಗದಲ್ಲಿ ಕೇಳಿ ಬರುತ್ತಿದ್ದ ಹೆಸರುಗಳು ಎರಡೇ ಎರಡು. ಮಾರ್ಟಿನಾ ನಾವ್ರಾಟಿಲೋವಾ ಮತ್ತು ಕ್ರಿಸ್ ಎವರ್ಟ್. ಈ ಚಾಂಪಿಯನ್ನರ ಸಾರ್ವಭೌಮತ್ವ ಮುರಿಯಬಹುದೆಂದು ನಿರೀಕ್ಷಿಸಲಾಗಿದ್ದ ಟ್ರೇಸಿ ಆಸ್ಟಿನ್, ಆಂಡ್ರಿಯಾ ಯೇಗರ್, ಪಾಮ್ ಶ್ರೈವರ್ ಆ ಮಟ್ಟ ತಲುಪದಿದ್ದಾಗ ಟೆನಿಸ್ ಪ್ರೇಮಿಗಳಿಗೆ ನಿರಾಶೆ.' ಮಾರ್ಟಿನಾ, ಕ್ರಿಸ್‌ರನ್ನು ಬಿಟ್ಟರೆ ಮತ್ತಾರು ಗೆಲ್ಲುತ್ತಾರೆ!" ಎಂಬ ಒಂದು ರೀತಿಯ ಉದಾಸೀನ ಭಾವನೆ.

1986ರ ವೇಳೆಗೆ ಸ್ಟೆಫಿ ಗ್ರಾಫ್‌ರ ಹೆಸರು ಅಂತರಾಷ್ಟ್ರೀಯ ರಂಗದಲ್ಲಿ ಕೇಳಿಬರತೊಡಗಿದಾಗಲೂ ಅದು ಇವರಿಬ್ಬರ ಜನಪ್ರಿಯತೆಗೆ ಕುಂದು ತರಲಿಲ್ಲ. ಆದರೆ 1987 ಪರಿಸ್ಥಿತಿಗೆ ಹೊಸ ತಿರುವು ನೀಡಿತು. ಆ ವರ್ಷದ ಫ್ರೆಂಚ್ ಓಪನ್ ಫೈನಲ್ಸ್‌ನಲ್ಲಿ ಮಾರ್ಟಿನಾಗೆ, ಸ್ಟೆಫಿ ಕೈಯಲ್ಲಿ ಸೋಲು. ಸ್ಟೆಫಿಗೆ ಮೊದಲ ಗ್ರ್ಯಾಂಡ್ ಸ್ಲಾಮ್ ಪ್ರಶಸ್ತಿ. ಜಗತ್ತಿನ ನಂಬರ್ ಒನ್ ಆಟಗಾತಿಯ ಪಟ್ಟಕ್ಕೆ ಲಗ್ಗೆ. ಮುಂದೆ ಕೆಲವು ವಾರಗಳಲ್ಲಿ ಅದೂ ಕೈಗೂಡಿತು.

1988ರಲ್ಲಿ ಅವರ ಸಾಧನೆ ಏರುತ್ತಲೇ ನಡೆದಿದೆ. ಆದರೆ ವಿಪರ್ಯಾಸವೆಂದರೆ ಮಾರ್ಟಿನಾ ಕ್ರಿಸ್‌ರ ಸಾರ್ವಭೌಮತ್ವಕ್ಕೆ ಕೊನೆ ಹಾಡಿದರೂ, ಟೆನಿಸ್ ಪ್ರೇಮಿಗಳಿಗೆ ಈಗಲೂ ಮಹಿಳಾ ಟೆನಿಸ್‌ನಲ್ಲಿ ಆಸಕ್ತಿ ಉಳಿದಿಲ್ಲ. ಅದಕ್ಕೆ ಕಾರಣ ಸ್ಟೆಫಿ, ಏಕೆಂದರೆ ಈಗ ಅವರನ್ನು ಸೋಲಿಸುವುದೇ ಅಸಾಧ್ಯ ಎನ್ನುವ ಪರಿಸ್ಥಿತಿಯಿದೆ. ಅವರಿಗೆ ಬಲಾಢ್ಯ ಸ್ಪರ್ಧೆಯೊಡ್ಡಬಹುದೆಂದು ನಿರೀಕ್ಷಿಸಲಾಗಿರುವ ಗ್ರ್ಯಾಬ್ರಿಯೆಲಾ ಸಬಾಟಿನಿ, ಮಾನ್ವೆಲಾ ಮಲೀವಾ, ನತಾಲಿಯಾ ಜ್ವೆರವಾ ಇನ್ನೂ ಆ ಮಟ್ಟ ತಲುಪಿಲ್ಲವೆಂಬುದು ಸುಸ್ಪಷ್ಟ. ಸಬಾಟಿನಿಯನ್ನು ಬಿಟ್ಟರೆ ಉಳಿದವರೆಲ್ಲ ಇನ್ನೂ ಆ ಗುರಿಯಿಂದ ಬಹಳ ದೂರವಿದ್ದಾರೆ. ಮೇಲೆಯೇ ಹೇಳಿದಂತೆ ಸ್ಟೆಫಿ ಉತ್ತಮ ಚಾಲ್ತಿ ಸ್ಥಿತಿಯಲ್ಲಿರುವ ಒಂದು ಯಂತ್ರದಂತೆ.

ಆದರೆ ಹೀಗೆ ಯಂತ್ರದಂತೆ ಸಾಧನೆಗೈಯುವುದರ ಹಿಂದೆ ಅಗಾಧ ಪ್ರತಿಭೆಯೊಂದಿಗೆ ಚಿಕ್ಕಂದಿನಿಂದಲೇ ಪಟ್ಟ ಕಠಿಣ ಶ್ರಮ. ಏಕಾಗ್ರ ಚಿತ್ತವಿದೆ. ಬ್ರುಲ್ ನಗರದ ನಿವಾಸಿಯಾದ ಸ್ಟೆಫಿ ಮೊದಲ ಬಾರಿಗೆ ಟೆನಿಸ್ ರ್‍ಯಾಕೆಟ್ ಹಿಡಿದಿದ್ದು ಕೇವಲ ನಾಲ್ಕು ವರ್ಷದವರಿದ್ದಾಗ. ಅವರ ತಂದೆ ಪೀಟರ್ ಗ್ರಾಫ್ ಸ್ವತಃ ಟೆನಿಸ್ ಆಟಗಾರ ಹಾಗೂ ತರಬೇತುದಾಗ

ಆ ಚಿಕ್ಕ ವಯಸ್ಸಿನಲ್ಲಿಯೇ ಟೆನಿಸ್ ಸ್ಟೆಫಿಯನ್ನು ಎಷ್ಟು ಆಕರ್ಷಿಸಿತ್ತೆಂದರೆ ಸಾಯಂಕಾಲ ಆಕೆ ತಂದೆ ಮನೆಗೆ ಬರುವ ದಾರಿಯನ್ನೇ ಕಾಯುತ್ತಿದ್ದಳು. ಬಂದೊಡನೆ ಆಟ ಪ್ರಾರಂಭ. ತಂದೆಗೆ ಎಷ್ಟೋ ಬಾರಿ ಬಹಳ ದಣಿವಾಗಿ ಮನೆಗೆ ಬಂದಾಗ ಆಡುವ ಮನಸ್ಸಿರುತ್ತಿರಲಿಲ್ಲ. ಆದರೆ ಸ್ಟೆಫಿಯದು ಆಡಲೇಬೇಕೆಂಬ ಹಟ.

ಮುಂದೆ ಆಕೆಯ ದೃಢ ಚಿತ್ತ. ಉತ್ತಮ ಆಟಗಾತಿಯಾಗಬಲ್ಲ ಲಕ್ಷಣಗಳು ಗೋಚರಿಸಿದಾಗ ಪೀಟರ್ ಅವಳಿಗೆ ತನ್ನಿಂದ ಸಾಧ್ಯವಿರುವ ಎಲ್ಲಾ ಸಹಾಯ ನೀಡಲು ನಿರ್ಧರಿಸಿದ. ಸಾರ್ವಜನಿಕ ಟೆನಿಸ್ ಕೋರ್ಟುಗಳಲ್ಲಿ ಆಡಲು ಸಾಕಷ್ಟು ಅವಕಾಶ ದೊರೆಯುತ್ತಿರಲಿಲ್ಲವಾದ್ದರಿಂದ ಮನೆಯ ಅಂಗಳದಲ್ಲೇ ಕೋರ್ಟ್ ನಿರ್ಮಾಣವಾಯಿತು.

ಪೀಟರ್‌ನ ತರಬೇತಿ ವಿಧಾನಗಳೂ ಸ್ವಾರಸ್ಯಕರ. ಆತ ನೆಟ್‌ನ ಆಚೆಗೆ ನಿಂತು ಚೆಂಡು ಎಸೆ



"ಅದೂ ಸಿಯೋಲ್‌ನಿಂದ ಬರಬೇಕಾದ್ರೆ 'ತುಂಬಾ ಚಿನ್ನ ತನ್ನಿ' ಅಂತ ನಮ್ಮ ನಾಯಕರೇ ಹೇಳಿದ್ರು."

ಯುತ್ತಿದ್ದ. ಸ್ಟೆಫಿ ಒಮ್ಮೆಯೂ ತಪ್ಪದೆ ಸತತ ಐವತ್ತು ಬಾರಿ ಅದನ್ನು ಮರಳಿ ನೆಟ್ಟಿನಾಚೆಗೆ ಕಳಿಸಿದರೆ ಆಕೆಗೊಂದು ಐಸ್‌ಕ್ರೀಂ! ಹೀಗೆ ಚಿಕ್ಕಂದಿನಿಂದಲೂ ಸ್ಟೆಫಿಗೆ ಗೆಲ್ಲುವ ಹಟ. ಇಂದಿಗೂ ಅದು ಮುಂದುವರಿದು ಬಂದಿರುವುದು. ಸಹಜ.

ಕಳೆದ ಜೂನ್ ೧೪ರಂದು ೨೦ನೇ ವರ್ಷಕ್ಕೆ ಕಾಲಿಟ್ಟ ಈ ಐದಡಿ ಎಂಟಂಚು ಎತ್ತರದ ಆಟಗಾರ್ತಿಯ ಸರ್ವಿಸ್ ಸಾಕಷ್ಟು ಬಲವಾಗಿದೆ. ಅವರ ಫೋರ್‌ಹ್ಯಾಂಡ್ ಹೊಡೆತವಂತೂ ಎದುರಾಳಿಗಳಿಗೆ ಸಿಂಹಸ್ವಪ್ನ. ಸದ್ಯ ಮಹಿಳಾ ಟೆನಿಸ್‌ನಲ್ಲಿ ಸ್ಟೆಫಿಯದು ಅತಿ ಬಲವಾದ ಫೋರ್ ಹ್ಯಾಂಡ್ ಹೊಡೆತ. ಅಂಕಣದಲ್ಲಿ ಅವಶ್ಯವಿಲ್ಲದೆ ಸಮಯ ವ್ಯರ್ಥಮಾಡುವುದು ಅವರಿಗೆ ಸೇರುವುದಿಲ್ಲ. ಬಾಲ್‌ಬಾಯ್‌ಗಳಿಗಾಗಿ ಕಾಯದೇ ತಾವೇ ಹೋಗಿ ಚೆಂಡನ್ನು ಎತ್ತಿಕೊಂಡು ಸರ್ವ್ ಮಾಡಲಾರಂಭಿಸುತ್ತಾರೆ. ಅವರ ಎದುರಾಳಿಗಳಿಗೆ ಹೆಚ್ಚಿನ ಪ್ರತಿರೋಧವೊಡ್ಡುವ ಅವಕಾಶವೇ ಇರುವುದಿಲ್ಲವಾದ್ದರಿಂದ. [illegible] ಪಂದ್ಯಗಳು ಮುಕ್ಕಾಲು ಗಂಟೆಯಲ್ಲೇ ಮುಗಿದು ಹೋಗುತ್ತವೆ. ಎದುರಾಳಿಗಳ ಆತ್ಮವಿಶ್ವಾಸವನ್ನೇ ತೊಡೆದು ಹಾಕುವಂಥ ಆಟ ಅವರದು.

ಇಷ್ಟಾದರೂ ಸ್ಟೆಫಿಗೆ ಇನ್ನೂ ಕಲಿಯಬೇಕು. ಎಲ್ಲವನ್ನೂ ಕರಗತ ಮಾಡಿಕೊಳ್ಳಬೇಕು ಎಂಬ ಹಂಬಲ. ಮೊದಲು ಅವರ ಬ್ಯಾಕ್‌ಹ್ಯಾಂಡ್ ಹೊಡೆತ ಸ್ವಲ್ಪ ದುರ್ಬಲವಾಗಿತ್ತು. 1987ರ ವಿಂಬಲ್ಡನ್ ಫೈನಲ್‌ನಲ್ಲಿ ಮಾರ್ಟಿನಾ ಇದರ ಸಂಪೂರ್ಣ ಪ್ರಯೋಜನ ಪಡೆದು ಪ್ರಶಸ್ತಿ ಗೆದ್ದರು. ಆದರೆ 1988ರಲ್ಲಿ ಈ ಕೊರತೆ ನೀಗಿಸಿಕೊಳ್ಳಲು ಸ್ಟೆಫಿಯ ದೃಢಸಂಕಲ್ಪ. ಎಡಗೈ ಆಟಗಾರನೊಬ್ಬನನ್ನು 'ಪ್ರಾಕ್ಟೀಸ್ ಪಾರ್ಟ್‌ನರ್'ನನ್ನಾಗಿ ನೇಮಿಸಿಕೊಂಡುದು ಇತ್ತ ಆರಂಭ (ಮಾರ್ಟಿನಾ ಎಡಗೈ ಆಟಗಾರ್ತಿಯಾಗಿರುವುದರಿಂದ ಈ ವ್ಯವಸ್ಥೆ). ಈ ಆಟಗಾರನ ಕೆಲಸವೆಂದರೆ ಸ್ಟೆಫಿಯ ಬ್ಯಾಕ್‌ಹ್ಯಾಂಡ್‌ಗೆ ಸರ್ವ್ ಮಾಡುವುದು. ಸತತ ಪ್ರಯತ್ನ ಫಲ ನೀಡಿತು. 1988ರ ವಿಂಬಲ್ಡನ್ ಫೈನಲ್‌ನಲ್ಲಿ ಹಿಂದಿನ ವರ್ಷದ ತಂತ್ರವನ್ನೇ ಉಪಯೋಗಿಸಲೆತ್ನಿಸಿದ ಮಾರ್ಟಿನಾಗೆ ಅಚ್ಚರಿ. ಆಘಾತ. ಸ್ಟೆಫಿಯ ಬ್ಯಾಕ್‌ಹ್ಯಾಂಡ್ ಹೊಡೆತಗಳು ಚೆಂಡನ್ನು ಸಲೀಸಾಗಿ ನೆಟ್‌ನಿಂದಾಚೆಗೆ ಮರಳಿ ಕಳಿಸಿದವು. ಮುಂದೆ ನಡೆದದೆಲ್ಲಾ ಈಗ ಇತಿಹಾಸದ ಪುಟಗಳಿಗೆ ಸೇರಿ ಹೋಗಿದೆ.

ಕಳೆದ 18 ವರ್ಷಗಳಲ್ಲಿ ಸ್ಟೆಫಿ ಗ್ರ್ಯಾಂಡ್ ಸ್ಲ್ಯಾಮ್ ಸಾಧಿಸಿದ ಏಕೈಕ ಆಟಗಾರ್ತಿ. ನಂತರ ಒಲಿಂಪಿಕ್ಸ್‌ನಲ್ಲಿ ಅವರು ಚಿನ್ನ ಗೆದ್ದಾಗ ಜಗತ್ತಿನ ಕ್ರೀಡಾ ಬರಹಗಾರರು ಈ ಸಾಧನೆಯನ್ನು ಒಟ್ಟಾರೆ "ಗೋಲ್ಡನ್ ಸ್ಲ್ಯಾಮ್" ಎಂದು ಬಣ್ಣಿಸಿದರು.

ಟೆನಿಸ್, ಕ್ರೀಡಾರಂಗದಲ್ಲಿನ ಅತಿ ಶ್ರೀಮಂತ ಕ್ರೀಡೆಗಳಲ್ಲೊಂದು. ಗೆಲ್ಲುತ್ತಿರುವವರಿಗೆ ಹಣದ ಹೊಳೆಯೇ ಹರಿದು ಬರುತ್ತದೆ. ಆದ್ದರಿಂದಲೇ ಸ್ಟೆಫಿ ಎರಡೇ ವರ್ಷಗಳಲ್ಲಿ [illegible] ಪಂದ್ಯಾವಳಿಗಳ ಬಹುಮಾನ ಹಣದಿಂದಲೇ

ಕೋಟ್ಯಾಧೀಶರಾಗಿದ್ದಾರೆ. ಜೊತೆಗೆ ಆಟ ಆಡುವಾಗ ಅವರು ಉಪಯೋಗಿಸುವ ರಾಕೆಟ್, ಉಡುಪು, ಬೂಟು ಮುಂತಾದವುಗಳಿಂದ ಸಹ ಸಾಕಷ್ಟು ಹಣ ಬರುತ್ತದೆ. ಈ ನೀಲಿ ಕಂಗಳ, ಬಂಗಾರ ಬಣ್ಣದ ಕೂದಲಿನ ಚೆಲುವೆ ಪ್ರಚಾರ-ಜಾಹೀರಾತುಗಳಿಗೆ ಹೇಳಿ ಮಾಡಿಸಿದಂತಿದ್ದಾರೆ. ಒಂದು ಪತ್ರಿಕೆಯಂತೂ ಈಕೆಯ ನಗ್ನ ಛಾಯಾ ಚಿತ್ರಕ್ಕಾಗಿ 2,70,000 ಡಾಲರ್ ಕೊಡಲು ಮುಂದಾಗಿತ್ತಂತೆ! ಆದರೆ ಸ್ಟೆಫಿ ಒಪ್ಪಿಕೊಳ್ಳಲಿಲ್ಲ. ಅವರಿಗೆ ಈಗ ಹಣದಲ್ಲಿ ಹೆಚ್ಚಿನ ಆಸಕ್ತಿ ಇಲ್ಲ. ಟೆನಿಸ್‌ಗೆ ಸಂಬಂಧಿಸಿದ ಅವರ ಇತರ ವ್ಯವಹಾರವನ್ನೆಲ್ಲ ಪೀಟರ್ ಗ್ರಾಫ್‌ರೇ ನೋಡಿಕೊಳ್ಳುತ್ತಾರೆ. ತಂದೆ- ಮಗಳು ಯಾವಾಗಲೂ ಜೊತೆಯಾಗಿಯೇ ಇರುತ್ತಾರೆ. ಸ್ಟೆಫಿಗೆ ಸದ್ಯದ ಆಲೋಚನೆಯೆಂದರೆ ಇನ್ನೂ ಕನಿಷ್ಠ ಏಳೆಂಟು ವರ್ಷ ಇದೇ ರೀತಿ ಮುಂದುವರಿಯುವುದು.

ಸಾಮಾನ್ಯವಾಗಿ ಆಟಗಾರರು ಪಂದ್ಯಾವಳಿಗಳಲ್ಲಿ ತಮ್ಮ ಒಂದು ಪಂದ್ಯ ಮುಗಿದ ನಂತರ ಮನೋರಂಜಕ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಆದರೆ ಸ್ಟೆಫಿ ತಮ್ಮ ಪಂದ್ಯ ಮುಗಿದೊಡನೆ ಮತ್ತೆ ಅಭ್ಯಾಸಕ್ಕಿಳಿಯುತ್ತಾರೆ. ಅದೂ ಮೀರಿ ಸಮಯ ಉಳಿದಾಗ ತಂದೆ- ಮಗಳು ಇಸ್ಪೀಟು ಆಡುತ್ತಾರೆ. ಸಾಮಾನ್ಯವಾಗಿ ಗೆಲ್ಲುವುದು ಸ್ಟೆಫಿಯೇ. ತಾವೂ ಅವರಿಗೇ ಗೆಲ್ಲಲು ಬಿಡುವುದಾಗಿ ಪೀಟರ್ ಹೇಳುತ್ತಾರೆ. ಏಕೆಂದರೆ ಇದರಿಂದ ಪಂದ್ಯಾರಂಭಕ್ಕೆ ಮುನ್ನ ಸ್ಟೆಫಿಗೆ ಸರಿಯಾದ ಲಹರಿ ಬರುತ್ತದಂತೆ.

ಬ್ರೂಲ್‌ನಲ್ಲಿ ಮನೆಯಲ್ಲಿದ್ದಾಗ ಸ್ಟೆಫಿ ಕಿರಿಯ ಸೋದರ ಮೈಕಲ್‌ನೊಂದಿಗೆ ಸಮಯ ಕಳೆಯುತ್ತಾರೆ. ಇಲ್ಲವಾದರೆ ಅಡಿಗೆ ಮನೆಗೆ. ಅಡಿಗೆ ಮಾಡುವುದೆಂದರೆ ಇವರಿಗೆ ಬಹಳ ಖುಷಿಯಂತೆ. ಸಂಗೀತ ಕೇಳುವುದು ಅವರ ಹವ್ಯಾಸಗಳಲ್ಲೊಂದು. ದೈಹಿಕವಾಗಿ ಸಂಪೂರ್ಣ ಆರೋಗ್ಯದಿಂದಿರಲು ಈಜು, ಬಾಸ್ಕೆಟ್‌ಬಾಲ್ ಮುಂತಾದ ಆಟಗಳಲ್ಲಿ ತೊಡಗುತ್ತಾರೆ.

ಕಳೆದ ಒಂದು ದಶಕದಲ್ಲಿ ಮಾರ್ಟಿನಾ ಕ್ರಿಸ್‌ರಿಂದ ಮಹಿಳಾ ಟೆನಿಸ್‌ಗೊಂದು ಹೊಸ ಇಮೇಜ್ ದೊರೆತಿದೆ. ಆಟದ ಗುಣ ಮಟ್ಟ ಏರುತ್ತ ಹೋಗಿದೆ. ಗೆಲ್ಲಲು ಪ್ರತಿಭೆಯ ಜೊತೆಗೆ ಸಂಪೂರ್ಣ ದೈಹಿಕ ಅರ್ಹತೆ, ಮಾನಸಿಕ ದಾರ್ಢ್ಯ ಅಗತ್ಯವೆಂಬುದನ್ನು ಮಾರ್ಟಿನಾ ಎತ್ತಿ ತೋರಿಸಿದ್ದಾರೆ. ಈಗ ಸ್ಟೆಫಿ ಒಂದು ಹೆಜ್ಜೆ ಮುಂದೆ ಹೋಗಿ ದಯೆ-ದಾಕ್ಷಿಣ್ಯವಿಲ್ಲದೆ ಎದುರಾಳಿಗಳನ್ನು ಹೇಗೆ ಸದೆಬಡಿಯಬೇಕೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಮೊದಲೇ ಹೇಳಿದಂತೆ ಸ್ಟೆಫಿಗೆ ಇನ್ನೂ ಕಲಿಯುವ ಹಂಬಲ. ಆದ್ದರಿಂದ ಅವರ ಆಳ್ವಿಕೆಯಲ್ಲಿ ಮಹಿಳಾ ಟೆನಿಸ್‌ನ ಗುಣಮಟ್ಟ ಇನ್ನೂ ಹೆಚ್ಚುತ್ತದೆಯೆನ್ನುವುದು ನಿಸ್ಸಂಶಯ. ●

ವಾಕ್-ವಜ್ರ

ಪ್ರಜಾಸತ್ತೆಯೆಂದರೆ "ನಾನು ನಿನಗೇನು ಕಮ್ಮಿ?" ಎಂಬುದಾಗಿರದೆ, "ನೀನು ನನಗೇನು ಕಮ್ಮಿ?" ಎಂಬುದಾಗಿದೆ.

● ಥಿಯೋಡೋರ್ ಪಾರ್ಕರ್

ಮನುಷ್ಯ ತನ್ನ ವೈರಿಗಳನ್ನಾರಿಸುವಾಗ ಎಷ್ಟು ಜಾಗ್ರತೆ ವಹಿಸಿದರೂ ಸಾಲದು.

● ಆಸ್ಕರ್ ವೈಲ್ಡ್

ನಿರಾಶಾವಾದಿಯೆಂದರೆ ತನ್ನ ಉಪದೇಶವನ್ನು ಕೃತಿಗಿಳಿಸಲು ಯತ್ನಿಸದ ಆಶಾವಾದಿ.

● ಎಲ್ಡನ್ ಸ್ಮಿತ್

ನಿಮ್ಮ ಮಗುವನ್ನು ರೋಗಗಳಿಂದ ರಕ್ಷಿಸಿ

ಹುಟ್ಟಿದ ದಿನದಿಂದಲೇ ನಿಮ್ಮ ಮಗುವು ಅನೇಕ ಆರೋಗ್ಯದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅಲ್ಲದೆ, ಮಗುವು ಹಲವಾರು ಸಾಂಕ್ರಾಮಿಕ ರೋಗಗಳಿಗೆ ತುತ್ತಾಗುವ ಸಾಧ್ಯತೆ ಇರುತ್ತದೆ. ಮಗುವಿನಲ್ಲಿ ರೋಗ ನಿರೋಧಕ ಶಕ್ತಿ ಸ್ವಾಭಾವಿಕವಾಗಿ ಕಡಿಮೆ ಇರುತ್ತದೆ. ಎಂತಲೇ, ನಿಮ್ಮ ಮಗುವನ್ನು ರೋಗಗಳಿಗೆ ತುತ್ತಾಗದಂತೆ ಕಾಪಾಡುವುದು ಅತ್ಯಂತ ಅವಶ್ಯಕ; ನಿಮ್ಮ ಮಗುವಿಗೆ ರೋಗ ನಿರೋಧಕ ಚುಚ್ಚು ಮದ್ದುಗಳನ್ನು ಕೊಡಿಸಿ.

ಕ್ಷಯ, ಗಂಟಲುಬೇನೆ, ನಾಯಿಕೆಮ್ಮು, ಹಾಗೂ ಮೀಸಲ್ಸ್ (ಗೊಬ್ಬರ) ಈ ರೋಗಗಳನ್ನು ತಡೆಗಟ್ಟಲು ನಿಮ್ಮ ಮಗುವಿಗೆ ಒಂದು ವರ್ಷದೊಳಗೆ ಚುಚ್ಚುಮದ್ದುಗಳನ್ನು ಹಾಕಿಸಿ, ಹಾಗೂ ಪೋಲಿಯೋ ತಡೆಯಲು 'ತೊಟ್ಟು' ಔಷಧಿಯನ್ನು ಕೊಡಿಸಿ.

ಮಗುವಿನ ವಯಸ್ಸು	ಕೊಡಬೇಕಾದ ಲಸಿಕೆ	ಪ್ರಮಾಣ
3 ರಿಂದ 9 ತಿಂಗಳು	ಅ) ತ್ರಿರೋಗ-ಅಂದರೆ ಧನುರ್ವಾಯು, ನಾಯಿ ಕೆಮ್ಮು, ಗಂಟಲುಬೇನೆಗಳ ವಿರುದ್ಧ	3 ಬಾರಿ 1ರಿಂದ 2 ತಿಂಗಳ ಅಂತರದಲ್ಲಿ
	ಆ) ಪೋಲಿಯೋ (ಅಂಗವಿಕಲತೆ)	3 ಬಾರಿ 1 ರಿಂದ 2 ತಿಂಗಳ ಅಂತರದಲ್ಲಿ
	ಇ) ಕ್ಷಯರೋಗ ವಿರುದ್ಧ ಬಿ.ಸಿ.ಜಿ.	ಒಂದುಬಾರಿ
9 ರಿಂದ 12 ತಿಂಗಳು	ಮೀಸಲ್ಸ್	ಒಂದುಬಾರಿ

ಹೆಚ್ಚಿನ ವಿವರಗಳಿಗೆ.

ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ,
ಕರ್ನಾಟಕ ಸರ್ಕಾರ,
ಬೆಂಗಳೂರು-ಇವರನ್ನು ಸಂಪರ್ಕಿಸಿ.

'ಕರ್ನಾಟಕ ವಾರ್ತೆ'

ಪ್ರೀತಿ, ದ್ವೇಷ ಮತ್ತು ಅಲರ್ಜಿಕ್ ಭಾವನೆ

★ ಕೃ.ಶಾ. ★

ಓರ್ವ ವ್ಯಕ್ತಿ ಅಥವಾ ಒಂದು ವಸ್ತುವನ್ನು ನಾವು ಅತ್ಯಂತ ಗಾಢವಾಗಿ ಪ್ರಿತಿಸುತ್ತಿದ್ದೇವೆ ಎಂದು ಒಮ್ಮೊಮ್ಮೆ ಭಾವಿಸಿರುತ್ತೇವೆ. ಆದರೆ ವಾಸ್ತವವಾಗಿ ಅಲ್ಲಿ ಪ್ರೀತಿಯ ಬದಲು ಸ್ವಾರ್ಥವೋ, ಲಾಲಸೆಯೋ, ಚಾಪಲ್ಯವೋ ವಿಶೇಷವಾಗಿ ತುಂಬಿಕೊಂಡಿರುವಂತೆ ತೋರುವಂತೆ ಹಾಗೆಯೇ ಕೆಲವರನ್ನು ನಾವು ದ್ವೇಷಿಸುತ್ತಿದ್ದೇವೆಂದು ತಿಳಿದುಕೊಂಡಿದ್ದರೂ ಅದು ಬರಿಯ ಅಲರ್ಜಿಕ್ ಭಾವನೆ ಅಥವಾ ಮತ್ಸರ ಮಾತ್ರವೇ ಆಗಿರಬಹುದು. ಆದ್ದರಿಂದ ವ್ಯಕ್ತಿಯ ಬದುಕಿನಲ್ಲಿ ಕಾಡುತ್ತಿರಬಹುದಾದ ಪ್ರೀತಿ, ದ್ವೇಷ ಅಥವಾ ಅಲರ್ಜಿಕ್ ಭಾವನೆಗಳು ಭಿನ್ನಭಿನ್ನವಾದ ಗತಿಯನ್ನೂ ಪರಿಣಾಮಗಳನ್ನು ಹೊಂದಿರುತ್ತವೆ. ಏಕಕಾಲಕ್ಕೆ ಓರ್ವ ವ್ಯಕ್ತಿಯನ್ನು ಪ್ರೀತಿಸುವುದೂ ದ್ವೇಷಿಸುವುದೂ ನಮಗೆ ಸಾಧ್ಯವಾಗಲಾರದು. ಹಾಗಿದ್ದಲ್ಲಿ ಪ್ರಿತಿ ಅಥವಾ ದ್ವೇಷ ಎರಡರಲ್ಲೊಂದು ಕೇವಲ ತೋರಿಕೆಯದಾಗಿರುತ್ತದೆ. ಆದರೆ ಒಂದೇ ಗಾಢವಾಗಿ ಪ್ರೀತಿಸುವ ಹೆಂಡತಿ ಆತನ ವ್ಯಕ್ತಿಯ ಸಂಬಂಧದಲ್ಲಿ ಪ್ರೀತಿಯು. ಅಲರ್ಜಿಕ್ ಭಾವನೆಯೂ ಇರುವುದಕ್ಕೆ ಸಾಧ್ಯವಿದೆ. ಗಂಡನನ್ನೂ ಸೀಗರೇಟಿನ ಚಟಕ್ಕೆ ಅಲರ್ಜಿಕ್ ಭಾವನೆ ಹೊಂದಿರಬಹುದು. ಆಕೆಗೆ ಸಿಗರೇಟಿನ ಬಗ್ಗೆ ಅಲರ್ಜಿಯೇ ವಿನಾ ಗಂಡನ ಬಗೆಗಲ್ಲ. ಸಿಗರೇಟಿನ ಚಟವನ್ನು ಬಿಡುವ ತನಕವೂ ಆತನಿಗೆ ಅವಳಿಂದ ಅಲರ್ಜಿ ರಹಿತ, ಪೂರ್ಣ ಪ್ರಮಾಣದ ಪ್ರೀತಿ ದೊರಕುವುದು ಅಸಾಧ್ಯ. ಹೆಂಡತಿಯ ಬಾಯಿ ವಾಸನೆ ಅಪಾನವಾಯುವಿನ ಅಲರ್ಜಿಯಿಂದಾಗಿ ಗಂಡ ಆಕೆಯನ್ನೇ ತೊರೆದ ಬಗ್ಗೆ ಎಲ್ಲೋ ಒಂದೆಡೆ ಓದಿದ ನೆನಪು!

ಅಲರ್ಜಿಕ್ ಭಾವನೆ ಮತ್ತು ದ್ವೇಷಗಳಲ್ಲಿ ಥಟ್ಟನೆ ವ್ಯತ್ಯಾಸ ಕಂಡುಬರದಿದ್ದರೂ ಕೆಲವು ಸ್ಪಷ್ಟೀಕರಣಗಳಿಂದ ಅವು ಮನದಟ್ಟಾಗುತ್ತವೆ.

ನಾವು ಪ್ರೀತಿಸುತ್ತಿರುವ ಅಥವಾ ದ್ವೇಷಿಸುತ್ತಿರುವ ವ್ಯಕ್ತಿಗಳು ನಮ್ಮ ಬಳಿಯಿರದಿದ್ದರೂ ನೆನಪಿನಲ್ಲಿ ಸದಾ ಕಾಡುತ್ತಿರಬಹುದು. ಆದರೆ ನಮಗೆ ಅಲರ್ಜಿಕ್ ಭಾವನೆಯುಳ್ಳ ವ್ಯಕ್ತಿಗಳನ್ನು ಕಂಡಾಗಷ್ಟೇ ಅವರ ನೆನಪಾಗುತ್ತದೆ. ಉಳಿದ ಸಮಯದಲ್ಲಿ ಅವರು ಸರ್ವಥಾ ನಮ್ಮ ಮನದಲ್ಲಿ ಸುಳಿಯುವುದಿಲ್ಲ. ಇಲ್ಲಿರುವುದು ಬರಿಯ 'ಕಂಡರಾಗದಿರುವಿಕೆ' ಮಾತ್ರ. ಅದನ್ನೇ ದ್ವೇಷವೆಂದು ಭಾವಿಸುವುದು ತಪ್ಪಾಗುತ್ತದೆ. ದ್ವೇಷದಲ್ಲಿ ಅಡಕವಾಗಿರುವ ಸೇಡು, ಮತ್ಸರ, ಕ್ರೌರ್ಯಗಳಂಥ ದುಷ್ಪರಿಣಾಮಗಳು ಅಲರ್ಜಿಕ್ ಭಾವನೆಯಲ್ಲಿ ಖಂಡಿತ ಇಲ್ಲ. ಅಲರ್ಜಿಕ್ ಭಾವನೆಯೆಂಬುದು ವ್ಯಕ್ತಿಯ ಸ್ವಭಾವವನ್ನವಲಂಬಿಸಿ ಕೆಲವು ಬಾರಿ ಅನಿವಾರ್ಯವೇ ಆಗಿರುತ್ತದೆ. ಸದಾ ಮೃದುವಾಗಿ, ಒಳ್ಳೆಯದನ್ನೇ ಆಡುತ್ತಿರುವ ಮಿತಭಾಷಿಗೆ ಬೊಬ್ಬೆ, ಪೋಲಿ, ಕೀಳ ಭಿರುಚಿಯ ವ್ಯಕ್ತಿಯನ್ನು ಕಂಡರೆ ಅಲರ್ಜಿ. ಆತನೊಡನೆ ಗಂಟೆಗಟ್ಟಲೆ ಮಾತಾಡುತ್ತ ಕಳೆಯಬೇಕಾದ ಅನಿವಾರ್ಯ ಸಂದರ್ಭದಲ್ಲಿ ಬೆಂಕಿಯ ಮೇಲೆ ಕುಳಿತಂತೆ ಭಾಸವಾಗುತ್ತದೆ. ಆತ ಅಲ್ಲಿಂದ ಹೋದೊಡನೆಯೇ 'ಅಬ್ಬಬ್ಬ' ಎಂಬ ನಿಟ್ಟುಸಿರಿನೊಂದಿಗೆ ಆತನನ್ನು ಮರೆತುಬಿಡುತ್ತಾನೆ. ಆದ್ದರಿಂದಲೇ ನಾವು ಪ್ರೀತಿಸುತ್ತಿರುವ ಅಥವಾ ದ್ವೇಷಿಸುತ್ತಿರುವ ವ್ಯಕ್ತಿಗಳನ್ನು ಎಂದೂ ಮರೆಯಲಾರೆವು. ಆದರೆ ನಮಗೆ ಒಗ್ಗದ ವ್ಯಕ್ತಿಯನ್ನು ಬಹುಬೇಗ ಮರೆತುಬಿಡುತ್ತೇವೆ. ಏಕೆಂದರೆ ಆ ನೆನಪೇ ಒಂದು ಅಲರ್ಜಿ.

ಒಗ್ಗದಿರುವಿಕೆಯ ಮನೋಭಾವಕ್ಕೆ ಹೊರತಾದ ಪ್ರೀತಿ ಅಥವಾ ದ್ವೇಷಗಳು ಒಂದು ಗಾಢವಾದ ಸಂಬಂಧದಿಂದ ಉದ್ಭವಿಸುತ್ತವೆ. ಮನಃಶಾಸ್ತ್ರಜ್ಞ ಫ್ರಾಯ್ಡ್‌ನ ಪ್ರಕಾರ ಎಲ್ಲ ಬಗೆಯ ಅನುರಕ್ತತೆಯಲ್ಲಿನ ಲೈಂಗಿಕ ತೃಪ್ತಿ-ಅತೃಪ್ತಿಗಳೇ ವ್ಯಕ್ತಿತ್ವ ವಿಕಾಸದ ಮೇಲೆ ಪರಿಣಾಮ ಬೀರಿರುತ್ತವೆ. ಗಂಡು ಮಗು ತಾಯಿಯನ್ನು ಪ್ರೀತಿಸುವ ಈಡಿಪಸ್ ಕಾಂಪ್ಲೆಕ್ಸ್ ಆಗಲೀ ಹೆಣ್ಣು ಮಗು ತಂದೆಯನ್ನು ಪ್ರೀತಿಸುವ ಇಲೆಕ್ಟ್ರಾ ಕಾಂಪ್ಲೆಕ್ಸ್ ಆಗಲಿ ಲೈಂಗಿಕ ತೃಪ್ತಿಯ ಅಂಶಗಳೇ ಆಗಿರುತ್ತವೆ. ಆದ್ದರಿಂದಲೇ ತಾನು ಪ್ರೀತಿಸುವ ವ್ಯಕ್ತಿಯ ಬಗ್ಗೆ ಒಲವು ತೋರುವ ಇನ್ನೊಬ್ಬನನ್ನು ಮಗು ದ್ವೇಷಿಸುವ ಅಥವಾ ಪ್ರತಿಸ್ಪರ್ಧಿಯಾಗಿ ಕಾಣುವ ಗುಣವನ್ನು ಬೆಳೆಸಿಕೊಳ್ಳುತ್ತದೆ.

ಫ್ರಾಯ್ಡ್‌ನ ದೃಷ್ಟಿಯಲ್ಲಿ ಲೈಂಗಿಕತೆಗೆ ಹೊರತಾದ ವಿಕಾಸದ ಹಂತಗಳಿಲ್ಲ. ಹಾಗಾದಾಗ ಕಾಮಮೂಲವಾದ ಪ್ರೇಮವೇ ಹೆಚ್ಚು ಗಟ್ಟಿಯಾದದ್ದು ಎಂಬುದನ್ನು ಒಪ್ಪಿಕೊಳ್ಳುವಂತಾಗುತ್ತದೆ. ವರ್ಷಗಳವರೆಗೆ ತಂದೆ ತಾಯಿಯ ಪ್ರೀತಿಯಲ್ಲಿ ಬೆಳೆದ ಹುಡುಗಿ ಕೆಲವೇ ದಿನಗಳ ಹಿಂದೆ ಪರಿಚಿತನಾದ ಹುಡುಗನೊಡನೆ ಅತಿಶಯವಾದ ಪ್ರೀತಿ ಬೆಳೆದು ಆತನೊಂದಿಗೆ ಓಡಿಹೋಗಿ ಪ್ರಾಣವನ್ನೇ ಕಳೆದುಕೊಳ್ಳಲು ತಯಾರಾಗುವ ಸಂದರ್ಭವನ್ನು ಊಹಿಸಿಕೊಳ್ಳಬಹುದು. ಇಲ್ಲಿ ತನ್ನ ಹೆತ್ತವರನ್ನು ಆಕೆ ದ್ವೇಷಿಸುತ್ತಿದ್ದಾಳೆ ಎಂದರ್ಥವಲ್ಲ. ತಂದೆ ತಾಯಂದಿರ ಪ್ರೀತಿಗಿಂತಲೂ ಪ್ರೇಮಿ ನೀಡುವ ಪ್ರೀತಿಯ ಸುಖವೇ (ಮೂಲತಃ ಲೈಂಗಿಕ ಒಲವುಳ್ಳ) ಹೆಚ್ಚು ಇಷ್ಟವೆನಿಸುತ್ತದೆ. ಪರಸ್ಪರ ಅರ್ಪಣಾ ಮನೋಭಾವದಿಂದ ಒಂದಾಗುವ ಇಂಥ ಪ್ರೀತಿಯೇ ಸಮಾನ ತುಡಿತಗಳಿಂದ ಕೂಡಿದ್ದಲ್ಲಿ ಬೇರೆ ರೀತಿಯ ಪ್ರೀತಿಗಳಿಗಿಂತ ಹೆಚ್ಚು ಗಾಢವೂ ಶಾಶ್ವತವೂ ಆಗಿಬಿಡುತ್ತದೆ. ಹಾಗಾಗಿಯೇ ನಂತರದ ಅವಸ್ಥೆಯಲ್ಲಿ ಹುಟ್ಟಿಕೊಳ್ಳುವ ಕರುಳ ಕುಡಿಯ ಮಮತೆ, ಸಾಂಸಾರಿಕ ಬಂಧನಾದಿ ಅಂಶಗಳಲ್ಲೂ ಮೂಲತಃ ಮೂಲದಲ್ಲಿನ ಕಾಮದ ಪ್ರಾಧಾನ್ಯವನ್ನು ಅಲ್ಲಗಳೆಯಲಾಗುವುದಿಲ್ಲ.

ಕಾಮವನ್ನು ಲೈಂಗಿಕತೆಗೆ ಸೀಮಿತಗೊಳಿಸದೆ ವಿಶಾಲ ದೃಷ್ಟಿಯಿಂದ ನೋಡಿದಾಗ ಸಹ ಎಲ್ಲ ಪ್ರೀತಿಗಳಲ್ಲೂ ಸ್ವಾರ್ಥವೆಂಬುದು ಕಾಮಮೂಲವಾಗಿರುವದು ಸ್ಪಷ್ಟವಾಗುತ್ತದೆ. ಜಗತ್ತಿನ ಎಲ್ಲ ವ್ಯವಹಾರಗಳ ಹಿನ್ನೆಲೆಯೂ ಸ್ವಾರ್ಥವಲ್ಲದೆ ಇನ್ನೇನು? ಅದೇ ಸ್ವಾರ್ಥದಲ್ಲಿ ಎರಡು ಬಗೆ. ಒಂದು ಸದಭಿರುಚಿಯ ಸ್ವಾರ್ಥವಾದರೆ ಇನ್ನೊಂದು ದುಷ್ಟ ಸ್ವಾರ್ಥ (ರಾಮನಿಗೆ ಸೀತೆಯ ಬಗೆಗಿದ್ದುದು ಸದಭಿರುಚಿಯ ಸ್ವಾರ್ಥವಾದರೆ ರಾವಣನದು ದುಷ್ಟ ಸ್ವಾರ್ಥ) ಈ ಸದಭಿರುಚಿಯ ಸ್ವಾರ್ಥದ ಮೂಲೋದ್ದೇಶ ಸ್ವಾತ್ಮೋನ್ನತಿಯೂ ಪರಹಿತ

ವಿಕಾಸವೂ ಎಂಬುದರಲ್ಲಿ ಅನುಮಾನವಿಲ್ಲ. ಅಂಥ ಸ್ವಾರ್ಥಪೂರಿತ ಪ್ರೀತಿಯಿಂದ ಹುಟ್ಟಿಕೊಳ್ಳುವ ದ್ವೇಷವೂ ದುಷ್ಟಸ್ವಾರ್ಥದ ದ್ವೇಷಕ್ಕಿಂತ ಭಿನ್ನವಾದದ್ದು. ನಮ್ಮ ಪೀತಿಯ ಅನುರಕ್ತಿ ಎಲ್ಲೆಲ್ಲಿ ಪ್ರವಹಿಸಲ್ಪಡುತ್ತದೆ? ಸಾಂಸಾರಿಕವಾಗಿಯೋ ಅಪಾರ ಮಿತ್ರವರ್ಗದಲ್ಲೋ ಪ್ರಕೃತಿಯ ಹರಹಿನಲ್ಲೋ ಹೀಗೆ ನಮ್ಮ ಒಲವು ಎಲ್ಲಿದೆಯೋ ಅಲ್ಲೆಲ್ಲ ನಮ್ಮ ಪ್ರೀತಿಯೂ ಹರಿದಿರುತ್ತದೆ. ಎಲ್ಲವೂ ಸ್ವಾತ್ಮತೃಪ್ತಿಗಾಗಿ ಸ್ವಂತ ಲಾಭಕ್ಕಾಗಿ. ನಮಗೆ ಇಷ್ಟವಿಲ್ಲದ ವಸ್ತುವಿನ ಮೇಲೆ ಪ್ರೀತಿ ಹುಟ್ಟಿಕೊಳ್ಳುವುದಿಲ್ಲ. ಏಕೆಂದರೆ, ಅದರಿಂದ ನಮಗೇನೂ ಲಾಭವಿಲ್ಲ. ಆದರೆ ಪ್ರೀತಿಯ ಪ್ರಗಾಢತೆಯ-ಪ್ರಶ್ನೆ ಬಂದಾಗ ಅಲ್ಲಿ ನಿಜವಾದ ಆಂತರಂಗಿಕ ಪ್ರೀತಿಯೋ ಅಥವಾ ಲೋಕಪರವಾದ ಒಟ್ಟಾರೆ ಒಲವೋ ಎಂಬ ಜಿಜ್ಞಾಸೆ ಉದ್ಭವಿಸುತ್ತದೆ. ಯಾವುದೇ ಪ್ರೀತಿಯು ಆರಂಭ ಪರಿಚಯದಿಂದ ಉಂಟಾಗುತ್ತದಲ್ಲವೆ? ಇಲ್ಲಿ ಪರಿಚಯವೆಂದರೆ ಒಂದು ವಸ್ತುವಿನ ಬಗೆಗೆ ಹುಟ್ಟಿದ ಆರಂಭಿಕ ಚಿಂತನೆ. ಮೊಟ್ಟಮೊದಲು ಉದ್ಭವಿಸುವ ಭಾವ. ('ಧ್ಯಾಯತೋ ವಿಷಯಾನ್.... ಗೀತೆ). ಪರಿಚಯಕ್ಕಿಂತ ಹೆಚ್ಚು ಪ್ರೀತಿಯ ಗಾಢತೆ ನಂತರದ ಒಡನಾಟದಲ್ಲಿ ಆನಂತರದ ಸ್ನೇಹದಲ್ಲಿ ಮೂಲಭೂತವಾದ ವೈಯಕ್ತಿಕ ಸಂವೇದನೆಗಳ ಸ್ಪಂದನ ಈ ಹಂತದಲ್ಲಿ ಉಂಟಾಗುತ್ತದೆಯೆಂದು ಹೇಳಲಾಗುವುದಿಲ್ಲ. ಹಾಗಾಗಿ ಒಂದು ಪ್ರೀತಿಗೆ ತೊಡಕುಂಟಾದಲ್ಲಿ ಅದು ಇನ್ನೊಂದು ಪೀತಿಯಡಿಯಲ್ಲಿ ಮರೆತು ಹೋಗುತ್ತದೆ. ಆದ್ದರಿಂದ ಪ್ರೀತಿಯ ಸಂಬಂಧವು ವೈಯಕ್ತಿಕ ಭಾವೋತ್ಕಟತೆಗೆ ನಿಕಟವಾದಷ್ಟೂ ಬಿಗಿಯಾಗುತ್ತದೆ ಎನ್ನಬಹುದು. ಬಂಧ ಬಿಗಿಯಾದಷ್ಟೂ ಪ್ರೀತಿಯ ಆಳ ಹೆಚ್ಚುತ್ತ ಹೋಗುತ್ತದೆ. ಆದ್ದರಿಂದಲೇ ನಾವು ಎಲ್ಲರನ್ನೂ ಸಮಾನವಾಗಿ ಪ್ರೀತಿಸುತ್ತಿದ್ದೇವೆಂದು ಭಾವಿಸುವುದು ಸರಿಯಲ್ಲ. ಉದಾಹರಣೆಗೆ ಯಾವುದೋ ಒಂದು ಮಗು ನೀರಿಗೆ ಬಿದ್ದು ಸತ್ತಿತು ಎಂದಾಗ ನಮಗೆ ಮಾನವ ಸಹಜವಾದ ಸಂವೇದನೆ ಉಂಟಾಗುತ್ತದೆ. ಆ ಮಗು ನಮ್ಮ ಪರಿಚಿತರದಾಗಿದ್ದರೆ ಅದು ಕೊಂಚ ಹೆಚ್ಚು. ಅದೇ ನಮ್ಮ ಸ್ನೇಹಿತನದೋ ಸಂಬಂಧಿಕರದೋ ಆಗಿದ್ದಲ್ಲಿ ಸಹಾನುಭೂತಿ ಇನ್ನಷ್ಟು ಹೆಚ್ಚು. ತೀರಾ ಆತ್ಮೀಯರದಾಗಿದ್ದರೆ ನಮ್ಮದೇ ಎಂದು ಹೇಳಿಕೊಳ್ಳುವಷ್ಟು ವೇದನೆ. ಅದೇ ನಿಜಕ್ಕೂ ನಮ್ಮದೇ ಆಗಿದ್ದಲ್ಲಿ?

ಹಾಗಾಗಿಯೇ ನಿಜವಾದ ಪ್ರೀತಿಯನ್ನು ಕಳೆದುಕೊಳ್ಳುವುದೆಂದರೆ ವ್ಯಕ್ತಿಯು ತನಗೆ ಜೀವನೋತ್ಸಾಹ ನೀಡುವ ಚೈತನ್ಯವೊಂದನ್ನು ಕಳೆದುಕೊಂಡಂತೆ. ಎಲ್ಲ ಇದ್ದರೂ ಏನೂ ಇಲ್ಲವೆಂಬ ಭಾವನೆ. ಜನಜಂಗುಳಿಯ ನಡುವೆ ಇದ್ದರೂ ಒಂಟಿತನದ ವೇದನೆ. ಬೇಂದ್ರೆ ಹೇಳುವಂತೆ "ದುಃಖವನ್ನು ನಗೆಯೊಳಗೆ ಹುಗಿದಿಡುವ" ಯತ್ನ. ಒಂದು ತೀವ್ರವಾದ ದುಃಖದ ಆಘಾತವನ್ನು ಎಂದೂ ಮರೆಯುವುದಕ್ಕೆ ಸಾಧ್ಯವಿಲ್ಲ. ಒಲವಿನ ಯಾವುದೇ ಪರ್ಯಾಯ ಪ್ರಯೋಗಗಳೂ ಮೂಲ ನೋವನ್ನು ಪೂರ್ತಿಯಾಗಿ ಮರೆಮಾಚಲಾರವು. ಅದೇನಿದ್ದರೂ 'ಮರೆತಂತೆ ನಟಿಸುವುದು'. ಬದುಕಿನುದ್ದಕ್ಕೂ ಅದೇ ನಟನೆ. ಒಂದು ನೋವಿನ ತೀವ್ರತೆಯನ್ನು ಇನ್ನೇನೋ ವ್ಯವಹಾರ ಚಟುವಟಿಕೆಗಳ ಒತ್ತಡದಲ್ಲಿ ಕಡಿಮೆಗೊಳಿಸುವ ಪ್ರಯತ್ನ.

ಪ್ರೀತಿಯ ಆಧಾರದಿಂದಲೇ ಸಮರ್ಥಿಸಲ್ಪಡುವ ದ್ವೇಷವು ಒಂದು ಬಿಗಿಯಾದ ಪ್ರೀತಿಯ ಬಂಧಕ್ಕೆ ಇನ್ನೊಂದು ಶಕ್ತಿಯಿಂದ ತೊಡಕುಂಟಾದಾಗ ಉದ್ಭವಿಸುತ್ತದೆ. ಪ್ರತಿಯೊಂದು ದ್ವೇಷದ ಹಿಂದೆಯೂ ಪ್ರೀತಿಯ ಛಾಯೆ ಇದ್ದೇ ಇರಬೇಕಾಗುತ್ತದೆ. ಹಾಗಿಲ್ಲದಿದ್ದರೆ ಅದು ದ್ವೇಷದಂತೆ ಕಂಡುಬರುವ ಮತ್ಸರವೆಂದೇ ಹೇಳಬಹುದು. ದ್ವೇಷದ ಹಿಂದೆ ಪ್ರೀತಿಯಿರುತ್ತದೆ ಎಂದ ಮಾತ್ರಕ್ಕೆ ಓರ್ವ ವ್ಯಕ್ತಿಯು ತಾನು ಈಗ ದ್ವೇಷಿಸುತ್ತಿರುವುದರ ಬಗ್ಗೆ ಹಿಂದೊಮ್ಮೆ ಪ್ರೀತಿಯ ಭಾವನೆಯಿಟ್ಟುಕೊಂಡಿದ್ದನೆಂಬ ತಪ್ಪು ತೀರ್ಮಾನಕ್ಕೆ ಬರುವಂತಿಲ್ಲ. ದ್ವೇಷವು ಪ್ರೀತಿಪಾತ್ರರೊಂದಿಗೆ ಕೆಲವೊಮ್ಮೆ ಉಂಟಾಗಬಹುದಾದರೂ ಪ್ರೀತಿಗೆ ತೊಡಕುಂಟು ಮಾಡಿದರೊಂದಿಗೆ ಉಂಟಾಗುವ ಸಂದರ್ಭಗಳೇ ಹೆಚ್ಚು. ತಮ್ಮ ತಂದೆಯನ್ನು ಕೊಂದ ವ್ಯಕ್ತಿಯೊಡನೆ ಮಕ್ಕಳಿಗೆ ದ್ವೇಷವಿದ್ದರೆ ಅದಕ್ಕೆ ತಂದೆಯ ಮೇಲಿನ ಪ್ರೀತಿಯೇ ಕಾರಣ. ಪ್ರಿತಿಯಿಲ್ಲದಿದ್ದರೆ ಇಲ್ಲಿ ದ್ವೇಷದ ಸಾಧ್ಯತೆಯಿರಲಾರದು. ತನ್ನ ಪ್ರೇಮಿಸಿ

ಇನ್ನೊಬ್ಬನೊಂದಿಗೆ ಲಲ್ಲೆ ಹೊಡೆಯುತ್ತ ತನ್ನನ್ನು ಮರೆತು ಹಾಯಾಗಿರುವ ಸಂದರ್ಭದಲ್ಲಿ ಉದ್ವಿಗ್ನತೆಯಿಂದ ಕೂಡಿದ ಒಂದು ಪ್ರಬಲವಾದ ದ್ವೇಷವು ಉತ್ಪತ್ತಿಯಾಗಿರಲೇಬೇಕಲ್ಲವೆ? ಆ ದ್ವೇಷ ಯಾರೊಂದಿಗೆ? ತನ್ನ ಪ್ರೇಯಸಿಯೊಂದಿಗೆಯೋ ಅಥವಾ ಆಕೆಯ ಹೊಸ ಪ್ರಿಯಕರನೊಂದಿಗೆಯೋ? ಬಹುಶಃ ಇಬ್ಬರೊಂದಿಗೂ ಇರಬಹುದು. ಆದರೆ ತನ್ನ ಪ್ರೇಯಸಿ ತನ್ನನ್ನು ಪ್ರೀತಿಸುತ್ತಿರುವಂತೆಯೇ ಇನ್ನೊಬ್ಬನಿಂದ ಅಡ್ಡಿಯುಂಟಾಯಿತೆಂದರೆ ಆ ದ್ವೇಷವು ಸಂಬಂಧಿತ ವ್ಯಕ್ತಿಗೆ ಮಾತ್ರವೇ ಸೀಮಿತವಾಗಿರುತ್ತದೆ. ತಮ್ಮ ಮಗಳನ್ನು ಹಾಳು ಮಾಡಿದವನ ಮೇಲಿನ ದ್ವೇಷ, ಆಸ್ತಿಯನ್ನು ಕಬಳಿಸಿದವರ ಮೇಲಿನ ದ್ವೇಷ... ಹೀಗೆ ಒಂದರ ಮೇಲಿನ ದ್ವೇಷಕ್ಕೆ ಇನ್ನೊಂದರ ಮೇಲಿನ ಪ್ರೀತಿಯು ಕಾರಣವಾಗಿರುತ್ತದೆ.

ಇಷ್ಟಕ್ಕೂ ಈ ದ್ವೇಷವೆಂದರೇನು? ಕೋಪವೆ ದ್ವೇಷವಲ್ಲ. ಕೋಪವೆಂಬುದು ಒಂದು ಉದ್ರೇಕ. ಅದು ನಮ್ಮ ಪ್ರೀತಿಪಾತ್ರರೊಳಗೂ, ಪ್ರೀತಿಯಿರುವಂತೆಯೇ ಬರಬಹುದು. ಅದು ಕ್ಷಣಿಕವಾದದ್ದು. ಕೋಪ ಇಳಿದ ನಂತರ ಉಂಟಾಗಬಹುದಾದ ಪಶ್ಚಾತ್ತಾಪದ ಭಾವವು ದ್ವೇಷದ ಭಾವನೆ ಕಡಿಮೆಯಾದಾಗ ಸಹ ಉಂಟಾಗದಿರಬಹುದು. ದ್ವೇಷವು ಒಮ್ಮೊಮ್ಮೆ ಸದಭಿರುಚಿಯ ಸ್ವಾರ್ಥದಿಂದ ಉದ್ಭವಿಸುವುದಾದರೆ ಕೆಲವೊಮ್ಮೆ ದುಷ್ಟ ಸ್ವಾರ್ಥದ ಫಲವಾಗಿ ಅದರಲ್ಲಿ ಮತ್ಸರವೂ ಬೆರೆತಿರುತ್ತದೆ. ಮತ್ಸರವು ಉರಿಯುತ್ತಿರುವ ದ್ವೇಷಕ್ಕೆ ಎಣ್ಣೆ ಹೊಯ್ದಂತೆ. ಸಾಮಾನ್ಯ ಏಕಮುಖ ದ್ವೇಷಕ್ಕಿಂತಲೂ ಪಾರಸ್ಪರಿಕವಾದ ಮತ್ಸರಪೂರಿತ ದ್ವೇಷವು ಹೆಚ್ಚು ಅಪಾಯಕಾರಿ.

ಪ್ರೀತಿ ಮತ್ತು ದ್ವೇಷಗಳು ಪರಸ್ಪರ ವಿರುದ್ಧ ಪರಿಣಾಮಗಳುಳ್ಳವಾದ್ದರಿಂದ ಒಂದು ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾಗಬಹುದಾದರೆ ಇನ್ನೊಂದು ಅಷ್ಟೇ ಮಾರಕವಾಗಿರುತ್ತದೆ. ಪ್ರೀತಿಯಿಂದ ದೊರಕುವ ಸುಖವು ದ್ವೇಷದಿಂದ ಎಂದೂ ಸಿಗಲಾರದು. ಪ್ರೀತಿಯು ಹೃದಯವನ್ನು ಪ್ರಫುಲ್ಲವಾಗಿರಿಸಿದರೆ ದ್ವೇಷ ಮತ್ಸರಗಳು ಅದನ್ನು ಸುಡುತ್ತ ಯಾವ ಹೊತ್ತಿಗೆ ಏನು ಅನಾಹುತಕ್ಕೆ ಕಾರಣವಾಗುತ್ತವೆಯೋ ಹೇಳಲಾಗುವುದಿಲ್ಲ. ಆದ್ದರಿಂದ ಮನುಷ್ಯನು ತನ್ನ ಹೃದಯದಿಂದ ದ್ವೇಷವನ್ನು ಕಿತ್ತೊಗೆದು ಪ್ರೀತಿದೇವತೆಯ ಮೂರ್ತಿಯನ್ನು ಪ್ರತಿಷ್ಠಾಪಿಸುವುದು ಅಗತ್ಯ ಮತ್ತು ಆರೋಗ್ಯಕರ. ದ್ವೇಷ ಸಾಧಿಸುವುದಕ್ಕಿಂತ ಮಿಗಿಲಾದುದನ್ನು ಪ್ರೀತಿಯು ಸಂಪಾದಿಸುತ್ತದೆ. ಒಂದು ಉದಾತ್ತವಾದ ಕ್ಷಮೆಯ ಆಶೀರ್ವಾದದಲ್ಲಿ ಅದೆಂತಹ ಗಾರುಡಿಗತನ!

ಪ್ರೀತಿ, ದ್ವೇಷಗಳ ಮಾನಸಿಕ ಕೋಲಾಹಲಗಳ ಬಗ್ಗೆ ಚಿಂತಿಸಿದಂತೆ ಅಲರ್ಜಿಕ್ ಭಾವನೆಯ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ಅದು ಸ್ವಭಾವಜನ್ಯವಾದದ್ದು ಆದರೂ ಲಾಂಗೂಲಾಚಾರ್ಯರು ಒಂದೆಡೆ ಎತ್ತಿದ್ದ ಬದನೆ, ಧೂಳು ಇತ್ಯಾದಿ ಅಲರ್ಜಿಗಳನ್ನೇನೋ ವರ್ಜಿಸಬಹುದು. ಆದರೆ ಹೆಂಡತಿಯೇ ಅಲರ್ಜಿಯಾಗಿದ್ದರೆ? ಎಂಬ ಪ್ರಶ್ನೆ ವಿಚಾರಿಗಳ ತಲೆ ತಿನ್ನದಿರುವುದಿಲ್ಲ. ಯಾರೊಂದಿಗೆ ನಾವು ಜೀವಮಾನವಿಡೀ ಕಳೆಯಬೇಕಾಗಿದೆಯೊ ಅವರ ಬಗೆಗೆ ಅಲರ್ಜಿಕ್ ಭಾವನೆಯಿದ್ದರೆ- ಅಯ್ಯೋ ಕಷ್ಟ, ಕಷ್ಟ! ನಾನು ಹಿಂದೊಂದು ಲೇಖನದಲ್ಲಿ ಹೇಳಿದ್ದಂತೆ ನಿರ್ಲಿಪ್ತ ಧೋರಣೆಯೊ ವಸ್ತುಸ್ಥಿತಿಗೆ ಒಗ್ಗಿಗೊಳ್ಳುವ ಯತ್ನವೊ ಇತ್ಯಾದಿ ಇತ್ಯಾದಿ ಉಪಶಾಮಕ ಚಿಕಿತ್ಸೆಗಳೇ ಇಲ್ಲಿ ಕೊನೆಯ ಮಾರ್ಗಗಳು.

ಮನೋಜನ್ಯವಾದ ಎಲ್ಲ ಗೋಜಲಿನ ಸಮಸ್ಯೆಗಳೂ ಹರಿತವಾದ ವಿವೇಚನಾ ಶಕ್ತಿ ಚಿಂತನೆ ಪ್ರಜ್ಞೆಗಳಿಂದ ಇತ್ಯರ್ಥಗೊಳ್ಳುತ್ತವೆ. ಗೀತೆ ಹೇಳುತ್ತದೆ.

"ಅಪಿ ಚೇದಸಿ ಪಾಪೇಭ್ಯಂ ಸರ್ವೇಭ್ಯಃ ಪಾಪಕೃತ್ತಮಃ ಸರ್ವಂಜ್ಞಾನಪ್ಲವೇನೇವ ವೃಜಿನಂ ಸಂತರಿಷ್ಯಸಿ" ಬಿದ್ದವನಾದರೂ ಆ ಪಾಪ ಸಾಗರವನ್ನು ಜ್ಞಾನವೆಂಬ ನಾವೆಯ ಮೂಲಕ ದಾಟಬಲ್ಲವನಾಗುತ್ತಾನೆ. ಮಾನವೀಯತೆಯ ಸಮ್ಯಕ್ ಜ್ಞಾನದಿಂದ ಸದ್‌ವ್ಯಕ್ತಿತ್ವದ ಅರಳುವಿಕೆಗೆ ತೊಡಕಾಗಿರುವ ಎಲ್ಲ ಶಕ್ತಿಗಳನ್ನೂ ನಿವಾರಿಸಬೇಕು. ಅದಕ್ಕಾಗಿ ನಿರಂತರ ಪ್ರಯತ್ನ ನಡೆಯಬೇಕು. ಏಕೆಂದರೆ, ಆರೋಗ್ಯವಂತ ಮನೋಭಾವನೆಯ ವೈಯಕ್ತಿಕ ವಿಕಾಸವೇ ವ್ಯಕ್ತಿತ್ವದ ನಿಜವಾದ ಸಮಗ್ರ ವಿಕಾಸ. ●

ನಿಮ್ಮ ಶಬ್ದ ಭಂಡಾರ ಬೆಳೆಯಲಿ

ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳ ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

1. ದಂಡಯಾತ್ರೆ
   ಅ) ಸೈನ್ಯ ಕಟ್ಟಿಕೊಂಡು ಹೋಗುವುದು
   ಆ) ಸಮೂಹವಾಗಿ ಕ್ಷೇತ್ರಗಳಿಗೆ ಹೋಗುವಿಕೆ
   ಇ) ನದಿ ದಾಟುವಿಕೆ
   ಈ) ಡಂಗುರ ಹೊಡೆಯುವಿಕೆ

2. ಚೇತನ
   ಅ) ನಿದ್ರೆ
   ಆ) ಜೀವವುಳ್ಳ
   ಇ) ಕೆಲಸ
   ಈ) ದಾಸ್ಯ

3. ವಲ್ಲಭ
   ಅ) ವೀಣೆ ಬಾರಿಸುವವ
   ಆ) ಅಡಿಗೆಯವ
   ಇ) ಇಳಿಜಾರು
   ಈ) ಒಡೆಯ

4. ಚಾಚರೆ
   ಅ) ಸೇವೆ
   ಆ) ಗಡಿಬಿಡಿ
   ಇ) ಮುಂದೆ ಚಾಚಿದ ಬಂಡೆ
   ಈ) ಬುದ್ಧಿವಂತಿಕೆಯ ಮಾತು

5. ರಾಜಾರೋಪ
   ಅ) ಅರಸನ ಅಪ್ಪಣೆ
   ಆ) ಬಹಿರಂಗವಾಗಿ
   ಇ) ಅರಾಜಕತೆ
   ಈ) ಒಪ್ಪಂದ

6. ಪಪ್ಪುಕ
   ಅ) ಕೊಳೆತ ಮಾಂಸ
   ಆ) ಬೇಟೆ ಎಬ್ಬಿಸುವುದು
   ಇ) ದುರಹಂಕಾರ
   ಈ) ಚಿಕ್ಕ ಹಪ್ಪಳ

7. ಪ್ರಭೃತಿ
   ಅ) ಸೇವಕ
   ಆ) ಸಂಬಳ ಕೊಡುವಾತ
   ಇ) ಹಿರಿಯ ವ್ಯಕ್ತಿ
   ಈ) ಬೆಳಗ್ಗೆ

8. ಚರಿತ್ರಾರ್ಹ
   ಅ) ಭಿಕ್ಷೆ ನೀಡಲು ಯೋಗ್ಯ
   ಆ) ಒಳ್ಳೆ ನಡತೆಯವ
   ಇ) ಗಳಿಕೆ
   ಈ) ಇತಿಹಾಸದಲ್ಲಿ ಸೇರತಕ್ಕ

9. ಗೊಂಗಡಿ
   ಅ) ಬೈರಾಗಿ
   ಆ) ದೊಡ್ಡಿ
   ಇ) ಗಲಿಬಿಲಿ
   ಈ) ಕಂಬಳಿ ಕೊಪ್ಪೆ

10. ಕುಳ
    ಅ) ಕೆರೆ
    ಆ) ಗೇಣೀದಾರ
    ಇ) ದುಷ್ಟ
    ಈ) ಅಂಡೆ

11. ಕೀಲಿತ
    ಅ) ಗಟ್ಟಿಯಾಗಿ ಸೇರಿಸಿದ
    ಆ) ನೆತ್ತರು ಸುರಿಯುವ
    ಇ) ಉರಿಯುವ
    ಈ) ಹಣ್ಣಾದ

12. ಉಬ್ಬಾಯ
    ಅ) ರಾಶಿ
    ಆ) ಜೋಡಣೆ
    ಇ) ಪಳಿಗೆ
    ಈ) ರಾಜರಲ್ಲಿ ಹೆಚ್ಚಿನವ

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

1. ದಂಡಯಾತ್ರೆ

ಅ) ಸೈನ್ಯ ಕಟ್ಟಿಕೊಂಡು ವಿರೋಧಿ ರಾಜರ ಮೇಲೆ ಏರಿಹೋಗುವುದು. ಉದಾ: ಕೃಷ್ಣ ದೇವರಾಯನ ಜೀವನ ದಂಡಯಾತ್ರೆಗಳಲ್ಲಿ ಕಳೆಯಿತು. (ಸಂ. ದಂಡ=ಸೈನ್ಯ+ಯಾತ್ರಾ =ಪ್ರಯಾಣ)

2. ಚೇತನ

ಈ) ಜೀವವುಳ್ಳ ಪದಾರ್ಥ, ಜೀವಿ, ಆತ್ಮ, ಇಂದ್ರಿಯಗ್ರಹಣಶಕ್ತಿಯುಳ್ಳ, ಪ್ರಜ್ಞಾವಂತ. ಉದಾ: ಅವನ ಚೇತನವೇ ಒಳ್ಳೆಯದಾಗಿಲ್ಲ (ಸಂ.)

3. ವಲ್ಲಭ

ಇ) ಒಡೆಯ, ವಿಶೇಷವಾಗಿ ಪ್ರಿಯನಾದ ಪತಿ, ಗಂಡ, ಯಜಮಾನ, ಉದಾ: ಅವಳು ವಲ್ಲಭನಿಗಾಗಿ ಜೀವ ಕೊಡಬಲ್ಲವಳಾಗಿದ್ದಳು. (ಸಂ)

4. ಚಾಚರೆ

ಇ) ಮುಂದೆ ಚಾಚಿ ಕೆಳಗೆ ನೆರಳು ಮಾಡಿದ ಬಂಡೆ. ಉದಾ: ಚಾಚರೆಯ ಕೆಳಗೆ ಕೂತು ತಪಸ್ಸು ಮಾಡುತ್ತಿದ್ದ (ದೇಶ್ಯ. ಚಾಚು= ಮುಂದೆ ನೀಡು+ಅರೆ=ಬಂಡೆ)

5. ರಾಜಾರೋಷ

ಅ) ಬಹಿರಂಗವಾಗಿ, ಎಲ್ಲರೂ ನೋಡುವಂತೆ. ಉದಾ: ರಾಜಾರೋಷಾಗಿ ಪ್ರಿಯಕರನನ್ನು ಭೆಟ್ಟಿಯಾದಳು (ಮರಾಠಿ- ರಾಜಾರೂಶ್-)

6. ಪಪ್ಪುರ

ಈ) ಬೇಟೆ ಎಬ್ಬಿಸುವುದು, ಪೊದೆಗಳನ್ನು ಬಡಿದು ಗದ್ದಲ ಎಬ್ಬಿಸಿ ತಲೆಮರೆಸಿಕೊಂಡ ಪ್ರಾಣಿಗಳನ್ನು ಬಹಿರಂಗಕ್ಕೆ ತರುವುದು (?)

7. ಪ್ರಭೃತಿ

ಇ) ಹಿರಿಯ ವ್ಯಕ್ತಿ, ಶ್ರೇಷ್ಠ, ಮೊದಲಿಗ. ಉದಾ: ಈ ವ್ಯವಹಾರದಲ್ಲಿ ಅನೇಕ ಪ್ರಭೃತಿಗಳು ಒಳಗೊಂಡಿದ್ದಾರೆ. (ಸಂ. ಪ್ರಭೃತಿ= ಮೊದಲ್ಗೊಂಡು)

8. ಚರಿತ್ರಾರ್ಹ

ಇ) ಇತಿಹಾಸದಲ್ಲಿ ಉಲ್ಲೇಖಿಸಲ್ಪಡತಕ್ಕಂಥ, ನೆನಪಿಡಲು ಯೋಗ್ಯವಾದ (ಘಟನೆ) ಉದಾ: ಈ ಸಂದರ್ಭ ಚರಿತ್ರಾರ್ಹವಾಗಿದೆ (ಸಂ. ಚರಿತ್ರ=ಇತಿಹಾಸ+ಅರ್ಹ=ತಕ್ಕ)

9. ಗೊಂಗಡಿ

ಇ) ಕಂಬಳಿ ಕೊಪ್ಪೆ, ತಲೆಬೆನ್ನು ಮುಚ್ಚುವಂತೆ ಕಂಬಳಿ ಅಥವಾ ಇತರ ದಪ್ಪನ್ನ ಬಟ್ಟೆಯಿಂದ ಮಾಡಿಕೊಂಡ ಕುಂಚಿಕೆಯಂಥ ರಚನೆ. ಉದಾ: ಗೊಂಗಡಿ ಹಾಕಿಕೊಂಡು ಮಳೆಯಲ್ಲಿ ನಟ್ಟಿ ಮಾಡುತ್ತಾರೆ. (ಮರಾಠಿ= ಘೋಂಗಡೀ)

10. ಕುಳ

ಈ) ಗೇಣೀದಾರ, ಆಸಾಮಿ, ವ್ಯಕ್ತಿ, ಕುಳವಾರು, ವ್ಯವಹಾರದಲ್ಲಿ ಸಂಬಂಧ ಬಂದ ವ್ಯಕ್ತಿ. ಉದಾ: ಅವನು ಗಟ್ಟಿ ಕುಳ (ಸಂ. ಕುಲ=ವ್ಯಾಪಾರಿ ?)

11. ಕೀಲಿತ

ಅ) ಗಟ್ಟಿಯಾಗಿ, ಸೇರಿಸಿದ, ಜಡಿದು ಕೂಡ್ರಿಸಿದ. ಉದಾ: ಮಂಗನ ಬಾಲ ಮರದ ಸೀಳಲ್ಲಿ ಕೀಲಿತವಾಗಿತ್ತು. (ಸಂ.ಕೀಲ-ದಿಂದ)

12. ಉಚ್ಛ್ರಾಯ

ಇ) ಏಳಿಗೆ, ಅಭ್ಯುದಯ. ಉದಾ: ಗುಪ್ತರ ಉಚ್ಛ್ರಾಯ ಕಾಲ (ಸಂ. ಉತ್=ಮೇಲೆ+ಶ್ರಾಯ=ಆಶ್ರಯ)

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

6- 8 ಸರಿಯಿದ್ದರೆ	...	ಸಾಧಾರಣ
9-10 "	...	ಉತ್ತಮ
11-12 "	...	ಅತ್ಯುತ್ತಮ

●ಗೋಪಾಲ ಆಶ್ರಿತ●

"ಗಂಗಾಸ್ನಾನಂ-ತುಂಗಾಪಾನಂ" ಈಗಲೂ ನಿಜವೇ?

ನಮಗೆ ಕುಡಿಯುವ ನೀರು ಬರುವುದು ನದಿಗಳಿಂದ, ಬಾವಿಗಳಿಗೆ ಮತ್ತು ಕೆರೆಗಳಿಂದ. ಆದರೆ ಇಂದು ನಮ್ಮ ದೇಶದ ದೊಡ್ಡ ನದಿಗಳೆಲ್ಲ ಚರಂಡಿಗಳಾಗಿದ್ದು ಮಾಲಿನ್ಯ ಅಪಾಯದ ಮಟ್ಟ ತಲಪಿದೆ. ಮಲಿನಗೊಂಡ ಈ ನದಿಗಳು ಜಲಚರಗಳಿಗೆ ಶಾಪವಾಗಿ ಪರಿಣಮಿಸಿವೆ. ನದೀ ದಡದ ಹತ್ತಿರ ತಿರುಗಾಡುವುದು ಆರೋಗ್ಯಕ್ಕೆ ಹಿತಕರವಾಗಿರದೆ, ಅಪಾಯಕರವೆನಿಸುವಂತಾಗಿದೆ.

ದಿಲ್ಲಿ ನಗರದ ಚರಂಡಿಗಳ ಮೂಲಕ ಹರಿಯುವ ಕೊಳೆಯ 1/3ದಷ್ಟು (3200 ಕಿಲೋಲೀಟರುಗಳಷ್ಟು) ಭಾರ ಪ್ರತಿ ದಿನ ಯಮುನಾ ನದಿ ಸೇರುತ್ತದೆ. ಆದ್ದರಿಂದ ದಕ್ಷಿಣ ದಿಲ್ಲಿಯ ನಿವಾಸಿಗಳಿಗೆ ಒದಗಿಸುವ ಯಮುನೆಯ ನೀರಿಗೆ ಹೆಚ್ಚಿನ ಪ್ರಮಾಣದಲ್ಲಿ ಔಷಧಿಗಳನ್ನು ಹಾಕಿ ಶುದ್ಧೀಕರಿಸಬೇಕಾಗುತ್ತದೆ. ಈ ನೀರು ರುಚಿ ಹಾಗೂ ವಾಸನೆಯಲ್ಲಿ ಔಷಧಮಯವಾಗಿರುತ್ತದೆ.

ಶ್ರೀನಗರದ ಮೂಲಕ ಹರಿಯುವ ಝೀಲಮ್‌ನಲ್ಲಿ ನೌಕಾ ವಿಹಾರ ಮಾಡುವುದು ಮಲೆತ ರಾಡಿಯ ಮೇಲೆ ವಿಹರಿಸಿದಂತೆ. ಪ್ರತಿದಿನ ನಗರದ ಚರಂಡಿಗಳಿಂದ ಹರಿದು ಬರುವ 51000 ಕಿಲೋಲೀಟರುಗಳಷ್ಟು ಕೊಳೆ ನದಿಯಲ್ಲಿ ಸೇರುವುದರಿಂದ ದೂರದವರೆಗೂ ಅಸಹ್ಯವಾಸನೆ ಹರಡಿರುತ್ತದೆ.

–ದಿಲ್ಲಿ, ಶ್ರೀ ನಗರಗಳಿಗೊದಗಿರುವ ಈ ಸ್ಥಿತಿ ಅಸಾದೃಶವೇನಲ್ಲ. ನಮ್ಮ ದೇಶದಲ್ಲಿ ಒಂದು ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆಯಿರುವ ಸುಮಾರು 142 ನಗರಗಳ ಪೈಕಿ ಕೇವಲ ಎಂಟು ನಗರಗಳಲ್ಲಿ ಮಾತ್ರ ಸರಿಯಾದ ಚರಂಡಿ ವ್ಯವಸ್ಥೆಯಿದ್ದು ಕೊಳೆಯನ್ನು ಶುದ್ಧೀಕರಿಸುವ ಸೌಲಭ್ಯವಿದೆ. 62 ನಗರಗಳಲ್ಲಿ ಈ ವ್ಯವಸ್ಥೆ ತಕ್ಕಮಟ್ಟದ್ದಾಗಿದೆ. ಉಳಿದ 72 ನಗರಗಳಲ್ಲಿ ಯಾವ ವ್ಯವಸ್ಥೆಯೂ ಇಲ್ಲ. ಕಸ, ಮಲಮೂತ್ರ ಮುಂತಾದ ಕೊಳೆಯಿಂದಲೇ ನಮ್ಮ ದೇಶದ ನದಿಗಳು ಪ್ರತಿಶತ 85 ರಷ್ಟು ಕಲುಷಿತಗೊಂಡಿವೆ. ಒಟ್ಟು ಸುಮಾರು ಏಳೂವರೆ ಕೋಟಿ ಜನಸಂಖ್ಯೆಯಿರುವ ಈ ನಗರಗಳಲ್ಲಿ ಶೇಖರವಾದ ಕೊಳೆಯಲ್ಲಿ ಪ್ರತಿಶತ 37 ರಷ್ಟು ಮಾತ್ರ ಶುದ್ಧೀಕರಣಗೊಳ್ಳುತ್ತದೆ.

ಚಿಕ್ಕ ನಗರ ಮತ್ತು ಹಳ್ಳಿಗಳ ಪಾಡಂತೂ ಹೇಳುವಂತಿಲ್ಲ. ಕೊಳೆ, ಮಲಮೂತ್ರ ಹರಿದು ಹೋಗಿ ಸೇರಿದ ಕೆರೆ, ಹಳ್ಳಗಳಲ್ಲಿಯೇ ಜನರು ಪಾತ್ರೆಗಳನ್ನು ತೊಳೆದು, ಬಟ್ಟೆ ಒಗೆದು ಸ್ನಾನ ಮಾಡುವುದಲ್ಲದೆ, ದನಕರುಗಳ ಮೈಯನ್ನು ತೊಳೆಯುತ್ತಾರೆ. ಅಲ್ಲದೆ ಅದೇ ನೀರನ್ನು ಕುಡಿಯಲು ಬಳಸುತ್ತಾರೆ. ಇಂಥ ಕಲುಷಿತಗೊಂಡ ನೀರಿನ ಬಳಕೆಯಿಂದ ರೋಗಗಳು ತಗಲಿದರೆ ಆಶ್ಚರ್ಯವಿಲ್ಲ.

ನದಿಗಳ

ನದಿಗಳ ಮಾಲಿನ್ಯವನ್ನು ಕೋಲಿಫಾರ್ಮ್ ಕೌಂಟ್‌ನಿಂದ ಅಳೆಯಲಾಗುತ್ತದೆ. ಒಂದೇ ಕೋಲಿ ಫಾರ್ಮ್ ಬ್ಯಾಕ್ಟೀರಿಯಾ ಇರುವ ನೂರು ಘನಸೆಂಟಿಮೀಟರಿನಷ್ಟು ನೀರಿನಲ್ಲಿ ರೋಗ ಕಾರಕ ವಾದ ಅನೇಕ ಜೀವಿಗಳಿದ್ದರೂ ಬರಿಗಣ್ಣಿಗೆ ಕಾಣುವುದಿಲ್ಲ. ಬ್ಯಾಕ್ಟೀರಿಯಾರಹಿತವಾದ ನಮೂನೆಯನ್ನು ಶುದ್ಧತೆಯ ಅಧಿಕೃತ ಅಳತೆಗೋಲನ್ನಾಗಿ ಮಾಡಿಕೊಳ್ಳಲಾಗಿದೆ.

ಕಸ ಅಥವಾ ಚರಂಡಿಯ ನೀರು ಹರಿದು ಬರದಂಥಾ ಒಂದು ಸ್ಥಳದಲ್ಲಿನ ಯಮುನಾ ನದಿಯ ನೂರು ಘನಸೆಂಟಿಮೀಟರಿನಷ್ಟು ನೀರಿನಲ್ಲಿ 7500 ಕೋಲಿಫಾರ್ಮ್ ಬ್ಯಾಕ್ಟೀರಿಯಾ ಕಂಡು ಬಂತು. ಅದೇ ನದಿಯ ತಗ್ಗು ಪ್ರದೇಶವಾದ ಒಖಲಾ ಎಂಬಲ್ಲಿ (ಎಲ್ಲ ತೆರನಾದ ಮಲಿನ ನೀರು ಹರಿದು ನದಿ ಸೇರುವಲ್ಲಿ) ಅಷ್ಟೇ ಪ್ರಮಾಣದ ನೀರಿನಲ್ಲಿ ಯಾರನ್ನೂ ದಿಗ್ಭ್ರಮೆ ಗೊಳಿಸಬಹುದಾದ 240 ಲಕ್ಷ ಕೋಲಿಫಾರ್ಮ್ ಇರುವುದು ಕಂಡು ಬಂತು.

ಸುದೈವದಿಂದ ಹರಿಯುವ ನದಿಯಲ್ಲಿ ಸ್ವಯಂಶುದ್ಧೀಕರಣ ವ್ಯವಸ್ಥೆ ಇರುವುದರಿಂದ ನೀರು ಕೆಡುವುದಿಲ್ಲ. ನೀರಿನಲ್ಲಿ ಯಾವುದೇ ಕಸವಿರಲಿ, ಮಲವಿರಲಿ, ಹೆಣಗಳಿರಲಿ, ಕೊಳೆತ ಎಲೆಗಿಡಗಳಿರಲಿ, ನೀರು ಹರಿದಂತೆ ಕರಗಿ ಅಥವಾ ತಳಸೇರಿ ಕೆಲವೇ ಕಿಲೋ ಮೀಟರಗಳ ಅಂತರದಲ್ಲಿ ಮತ್ತೆ ಪೂರ್ಣ ಶುದ್ಧವಾಗುತ್ತದೆ. ಸಾಮಾನ್ಯವಾಗಿ ವಾಯ್ಜುಣ ಜೀವಿ (Aerobes) ಮತ್ತು ಅವಾಯ್ಜುಣ (Anerobes) ಜೀವಿಗಳು ನೀರಿನಲ್ಲಿರುತ್ತವೆ. ವಾಯ್ಜುಣ ಜೀವಿಗಳು ಆಮ್ಲಜನಕವಿಲ್ಲದೆ ಬದುಕಲಾರವು. ಆದರೆ ಅವಾಯ್ಜುಣ ಜೀವಿಗಳು ಆಮ್ಲಜನಕವಿಲ್ಲದೆ ಬದುಕುತ್ತವೆ. ಇವು ನದಿ ತೀರದಲ್ಲಿನ ಘನ ವಸ್ತುಗಳನ್ನು ತಿಂದು ಹಾಕು ತ್ತವೆ. ವಾಯ್ಜುಣ ಜೀವಿಗಳು ನೀರಿನ ಮೇಲಿನ ಪದರುಗಳಲ್ಲಿ ಕರಗಿ ಬಂದ ಅಥವಾ ಮುಳು ಗಿದ ವಸ್ತುಗಳ ಮೇಲೆ ದಾಳಿ ಮಾಡುತ್ತವೆ. ಇದರಿಂದಾಗಿ ಜಟಿಲ ಸಾವಯವ ವಸ್ತುಗಳು ನಿರವಯವ ವಸ್ತುಗಳಾಗಿ ಪರಿವರ್ತನೆ ಹೊಂದುತ್ತವೆ. ಇದಲ್ಲದೆ ಮಾನವನ ಮಲದಲ್ಲಿನ ರೋಗಾಣುಗಳನ್ನು ಏಕಾಣು ಜೀವಿಗಳು (Aquatic Protozoa) ಕಬಳಿಸಿಬಿಡುತ್ತವೆ.

ವಾಯ್ಜುಣ ಜೀವಿಗಳು ರಾಡಿ ತಿನ್ನುತ್ತಿದ್ದಂತೆ ತಮ್ಮ ಸಂಖ್ಯೆ ಹೆಚ್ಚಿಸುತ್ತ ಹೋಗುತ್ತವೆ. ಜೊತೆಗೆ ದೊರಕುವ ಆಮ್ಲಜನಕವನ್ನೆಲ್ಲಾ ಕಬಳಿಸುತ್ತವೆ. ನೈಸರ್ಗಿಕವಾಗಿ ನದಿಗಳು ಸ್ವಯಂ

ಕಲುಷಿತಗೊಂಡ ನದಿಗಳ ಪಟ್ಟಿ ಬಹಳ ದೊಡ್ಡದಾಗಿದೆ. ಉತ್ತರ ಪ್ರದೇಶದ, ಬಿಹಾರ ಮತ್ತು ಪಶ್ಚಿಮ ಬಂಗಾಳದಲ್ಲಿ ಹರಿಯುವ ಗಂಗಾನದಿಗೆ ಈ ಮಾಲಿನ್ಯದ ಸೋಂಕು ಹೆಚ್ಚು ತಾಗಿದೆಯೆನ್ನಬಹುದು. ಲಕ್ಷಾವಧಿ ಹಿಂದುಗಳ ದೃಷ್ಟಿಯಲ್ಲಿ ಪವಿತ್ರವೆನಿಸಿರುವ ಗಂಗೆಯ ನೀರು ಇಂದು ಸ್ನಾನಕ್ಕೂ ಅಯೋಗ್ಯವಾಗಿದೆ. ಕ್ರಿಮಿನಾಶಕ ಗುಣವಿದೆಯೆನ್ನಲಾಗಿದ ಈ ನೀರಿ ನಲ್ಲಿ, ಇಂದು ಸ್ನಾನ ಮಾಡಿದರೆ ಅಥವಾ ಈ ನೀರನ್ನು ಕುಡಿದರೆ ಚರ್ಮ ರೋಗಗಳು ತಗಲುವ ಸಂಭವವಿದೆ. ಚರಂಡಿಗಳ ಮೂಲಕ ಹರಿದು ನದಿ ಸೇರುವ ಕೊಳೆ ಕಾರ್ಖಾನೆಗಳಿಂದ ಹರಿದು ಬರುವ ಕೊಳೆ ಹಾಗೂ ರಾಸಾಯನಿಕ ಗಳು. ಗಂಗೆಗೆ ಅರ್ಪಿಸಲಾದ ಅರೆಬೆಂದ ಹೆಣಗಳು, ಸತ್ತ ಪ್ರಾಣಿಗಳು, ನದಿ ನೀರನ್ನು ಎಷ್ಟು ಕಲುಷಿತಗೊಳಿಸುತ್ತವೆಂಬುದು ಊಹಿಸು ವುದೂ ಕಷ್ಟ.

ಛೋಟಾನಾಗಪುರದಿಂದ 540 ಕಿಲೋ ಮೀಟರ್ ದೂರದಲ್ಲಿರುವ ಕಲಕತ್ತಾವನ್ನು ತಲುಪುವ ಮೊದಲು ದಾಮೋದರ ನದಿ ಬಿಹಾರಿನ ಕಬ್ಬಿಣ ಅದಿರು, ಇದ್ದಿಲು, ಅಭ್ರಕ್, ಅಲ್ಯುಮಿನಿಯಮ್‌ಗಳ ಗಣಿ ಪ್ರದೇಶಗಳಲ್ಲಿ ಹರಿಯುತ್ತದೆ. ಬೋಕಾರೋ ಮತ್ತು ದುರ್ಗಾಪುರದಲ್ಲಿನ ಲೋಹ ಹಾಗೂ ರಾಸಾಯನಿಕ ಉದ್ಯಮಗಳಲ್ಲಿ [illegible] ತ್ಯಾಜ್ಯವುದರ ಮೂಲಕ [illegible] ಕೊಳೆ ಯೆಲ್ಲ ಈ ನದಿಯನ್ನು ಸೇರಿ ಸಾಗುತ್ತಿರು ತ್ತದೆ. ದುರ್ಗಾಪುರದ ಈ ಭಾಗದಿಂದ ಪತಿ

ಮಾಲಿನ್ಯ

ವಾಯು ಸಂಯೋಜಕಗಳಾಗಿರುತ್ತವೆ. ಅಂದರೆ ತಾವು ಹರಿದಂತೆ ವಾತಾವರಣದಿಂದ ಆಮ್ಲ ಜನಕವನ್ನು ಹೀರಿಕೊಳ್ಳುತ್ತವೆ. ಇದಲ್ಲದೆ ಶೈವಲ (algae) ಕೂಡಾ ಬಿಸಿಲಿನಲ್ಲಿ ದ್ಯುತಿ ಸಂಶ್ಲೇಷಣೆಯ ಮೂಲಕ ನದಿಗೆ ಸಾಕಷ್ಟು ಆಮ್ಲಜನಕವನ್ನು ಪೂರೈಸುತ್ತದೆ. ಆದರೆ ವಾಯ್ವಿಕ ಜೀವಿಗಳು ತಯಾರಿಸಿದ ನಿರವಯವ ಪದಾರ್ಥವನ್ನು ಶೈವಲ ಬಳಸಿಕೊಂಡು ಮತ್ತೆ ಜಟಿಲ ಸಾವಯವ ವಸ್ತುವನ್ನಾಗಿ ಪರಿವರ್ತಿಸುತ್ತದೆ. ಕೊಳೆಯ ಪರಿವರ್ತನೆಯಿಂದಾಗಿ ಹಾಗೂ ವಾಯ್ವಿಕ ಜೀವಿಗಳಿಗೆ ಬೇಕಾಗುವ ಆಹಾರ ಪೂರೈಕೆ ಕಡಿಮೆಯಾಗುವುದರಿಂದ, ಈ ಬ್ಯಾಕ್ಟೀರಿಯಾಗಳ ಸಂಖ್ಯೆ ಕಡಿಮೆಯಾಗಿ ನದಿಯಲ್ಲಿನ ಅವಶ್ಯಕ ಆಮ್ಲಜನಕದ ಕಬಳಿಕೆ ನಿಲ್ಲುತ್ತದೆ. ಈ ರೀತಿಯಾಗಿ ನೀರಿನ ಧಾರೆ ತನ್ನ ಶುದ್ಧತೆಯನ್ನು ಮರಳಿ ಪಡೆಯುತ್ತದೆ.

ಆದರೂ ನದಿಯು ಮತ್ತೆ ಮಲಿನಗೊಳ್ಳುವ ಸಾಧ್ಯತೆ ಇರುತ್ತದೆ. ಕೊಳೆಯ ಪ್ರಮಾಣ ಹೆಚ್ಚಿದಂತೆಲ್ಲ ವಾಯ್ವಿಕ ಜೀವಿಗಳಿಗೆ ನೀರಿನಲ್ಲಿನ ಆಮ್ಲಜನಕದ ಅಗತ್ಯ ಹೆಚ್ಚುತ್ತ ಹೋಗುತ್ತದೆ. ಆಮ್ಲಜನಕದ ಪೂರೈಕೆ ಇಲ್ಲದಾದಾಗ ಜಲಚರ ಏಕಾಣು ಜೀವಿಗಳು ಮತ್ತು ವಾಯ್ವಿಕ ಜೀವಿಗಳು ಸತ್ತು ಹೋಗುತ್ತವೆ. ಆಗ ತಳಭಾಗದಲ್ಲಿನ ಅವಾಯ್ವಿಕ ಜೀವಿಗಳು ನೀರಿನ ಮೇಲ್ಭಾಗಕ್ಕೆ ಗಂಧಕದ ಡೈ ಆಕ್ಸೈಡ್ ನಿರ್ಮಾಣವಾಗುತ್ತದೆ. ಇಂಥ ರಾಡಿಯಾದ ನೀರಿನ ಮೂಲಕ ಸೂರ್ಯಪ್ರಕಾಶ ಪ್ರವೇಶಿಸಲು ಸಾಧ್ಯವಾಗದೆ ಶೈವಲ ನಾಶವಾಗುತ್ತದೆ. ಆಮ್ಲಜನಕ ಮತ್ತು ಆಹಾರದ ಕೊರತೆಯಿಂದಾಗಿ ಮೀನುಗಳ ಸಂಖ್ಯೆಯೂ ಕುಗ್ಗುತ್ತದೆ. ಈ ರೀತಿಯಾಗಿ ನದಿ ಕೆಲವೊಮ್ಮೆ ಮಿತಿಮೀರಿ ಮಲಿನಗೊಳ್ಳುತ್ತದೆ.

ಇಂಥ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಉದ್ದೇಶದಿಂದಲೇ 1974ರಲ್ಲಿ ಭಾರತ ಸರಕಾರ ಜಲಮಾಲಿನ್ಯ ಪ್ರತಿಬಂಧಕ ಮತ್ತು ನಿಯಂತ್ರಣ ಮಸೂದೆಯನ್ನು ಅಂಗೀಕರಿಸಿತು. ಕೇಂದ್ರ ಜಲ ಮಾಲಿನ್ಯ ಪ್ರತಿಬಂಧಕ ಮತ್ತು ನಿಯಂತ್ರಣ ಮಂಡಳಿಯ ಆಶ್ರಯದಲ್ಲಿ ರಾಜ್ಯಮಟ್ಟದ ಜಲ ಮಂಡಳಿಗಳನ್ನು ಸ್ಥಾಪಿಸಿ ಕಾರ್ಯನಿರ್ವಹಿಸುವಂತೆ ಮಾಡಿತು. ನಾಗರಿಕರಲ್ಲಿ ಈ ಬಗ್ಗೆ ಅರಿವು ಮೂಡಿಸುವುದು ಇದರ ಮುಖ್ಯ ಉದ್ದೇಶ. ●

ತಿಂಗಳು ಸುಮಾರು 82000 ಟನ್ನಿನಷ್ಟು ಇದ್ದಿಲನ್ನು ತೊಳೆಯಲಾಗುತ್ತದೆ. ಅದರಲ್ಲಿ ಸುಮಾರು 18000 ಟನ್ನಿನಷ್ಟಾದರೂ ಕೊಳೆ ಹರಿದು ಬಂದು ಈ ನದಿಗೆ ಸೇರುತ್ತದೆ. ಈ ನೀರಿನಲ್ಲಿ ಪ್ರತಿ ಲೀಟರಿಗೆ 100,000 ಮಿಲಿಗ್ರಾಂ ಘನಕಣಗಳು ಇರುವುದು ಕಂಡು ಬಂದಿದೆ. (ಒಂದು ಲೀಟರ್ ನಿರಿನಲ್ಲಿ 100 ಮಿಲೀಗ್ರಾಂ ಘನ ಕಣಗಳನ್ನು) ಸಹಿಸಿಕೊಳ್ಳಬಹುದಾಗಿದೆ.

ಇದಲ್ಲದೆ ಭಾರತೀಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಿಂದ ಹೊರಹೊಮ್ಮುವ 15,000 ಕ್ಯುಬಿಕ್ ಮೀಟರ್ ಅದಿರು ಮಿಶ್ರಿತ ಕಸ, ಬೆಂಗಾಲ್ ಕಾಗದ ಕಾರ್ಖಾನೆಯಿಂದ ಹರಿದು ಬರುವ 12,000 ಕ್ಯುಬಿಕ್ ಮೀಟರ್ ಕಸ ಹಾಗೂ ರಾಸಾಯನಿಕ ವಸ್ತುಗಳ ಮಿಶ್ರಣ ಮತ್ತು ಸಿಂಧ್ರಿ ಗೊಬ್ಬರ ಕಾರ್ಖಾನೆಯಿಂದ ಕಸದಂತೆ ಹರಿದು ಬರುವ 10-15 ಟನ್ನುಗಳಷ್ಟು ಸಲ್ಫ್ಯೂರಿಕ್ ಆಮ್ಲ ಹಾಗೂ ಅಮೋನಿಯಾ ಈ ನದಿ ನೀರನ್ನು ಇನ್ನಷ್ಟು ಕಲುಷಿತಗೊಳಿಸುತ್ತವೆ. ಇದೇ ನದಿಗೆ ದುರ್ಗಾಪುರದ ಎಂಟು ಉದ್ಯಮಗಳು ಸುಮಾರು 1.59 ಲಕ್ಷ ಕ್ಯುಬಿಕ್ ಮೀಟರಿನಷ್ಟು ಪ್ರಮಾಣದಲ್ಲಿ ರಾಸಾಯನಿಕಗಳನ್ನು ಕಸದ ರೂಪದಲ್ಲಿ ಹರಿಸುತ್ತವೆಂಬುದು ಒಂದು ವೈಜ್ಞಾನಿಕ ಅಧ್ಯಯನದಿಂದ ತಿಳಿದುಬಂದಿದೆ. ಇಷ್ಟು ಭಾರಿ ಪ್ರಮಾಣದಲ್ಲಿ ಕೊಳೆ ಹರಿಯುವುದರಿಂದಾಗಿ ನೀರಿನಲ್ಲಿನ ಆಮ್ಲಜನಕದ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತದೆ.

ಚಂಬಲ್ ನದಿ ಮಧ್ಯ ಪ್ರದೇಶದ ಮೂಲಕ


ನಿಮ್ಮ ಮಗುವಿಗೆ ಪ್ರೋಟೀನ್ ಸಮೃದ್ಧ ಮೊಟ್ಟೆಗಳ ಪೌಷ್ಟಿಕ ಆಹಾರ ಊಣಿಸಿರಿ.
ಮೊದಲೇ-ಬೇಯಿಸಿದ
ಫೆರೆಕ್ಸ್-ಎಗ್®
6 ತಿಂಗಳಿಂದ.
ಹೊಸ ಫೆರೆಕ್ಸ್ - ಎಗ್‌ನಲ್ಲಿ ನಿಮ್ಮ ಮಗುವಿನ ಸರ್ವಾಂಗೀಣ ಬೆಳವಣಿಗೆಗೆ ಬೇಕಾದ ಪ್ರೋಟಿನ್ ಇದೆ. ಮಗುವಿನ ಕೋಮಲ ಪಚನ ಶಕ್ತಿಗೆ ಸಹಾಕಾರಿಯಾಗುವಂತೆ ಇದನ್ನು ಮೃದುವಾಗಿ ಮೊದಲೇ ಬೇಯಿಸಲಾಗಿದೆ.
ಫೆರೆಕ್ಸ್-ಬೆಳೆಯಲು ರುಚಿಕರ ಸಾಧನ
Farex-egg
GX 32 173 KAN

ಹರಿದು ಹೋಗುವುದರಿಂದ ಕೊಳೆ ನೀರಿನ ಸೋಂಕು ಅಲ್ಲಿನ ಜನರಿಗೂ ತಾಕಿದೆ. ಕಾಗದದ ಕಾರ್ಖಾನೆಗಳು, ಭಟ್ಟಿ ಕಾರ್ಖಾನೆಗಳು ಮತ್ತು ಬಟ್ಟೆ ಕಾರ್ಖಾನೆಗಳಂಥ ಸುಮಾರು 220 ಕಾರ್ಖಾನೆಗಳಿಂದ ಹದಿನೈದು ಕೋಟಿ ಗ್ಯಾಲನ್ನಿನಷ್ಟು ಕೊಳೆ ಹರಿದು ಬರುವುದರಿಂದ ಇಲ್ಲಿನ ಕೆರೆ ಹಾಗೂ ನದಿಗಳೆಲ್ಲ ಚರಂಡಿಗಳಾಗಿ ಮಾರ್ಪಟ್ಟಿವೆ. ಇಂದೂರಿನ ಮೂಲಕ ಹರಿಯುವ ಖಾನ್ ನದಿಗೆ ಕೇವಲ ಆರು ಕಾರ್ಖಾನೆಗಳಿಂದ ಸುಮ್ಮಾರು 90 ಲಕ್ಷ ಗ್ಯಾಲನ್ ನೀರು, ಚರಂಡಿಯ ಹೊಲಸು ಮತ್ತು ವಿಷಪೂರಿತ ರಾಸಾಯನಿಕಗಳು ಹರಿದು ಬರುತ್ತವೆ. ಇಂಥ ನೀರನ್ನು 18,000 ಜನಸಂಖ್ಯೆಯುಳ್ಳ ಹತ್ತಿರದ 23 ಹಳ್ಳಿಗಳಿಗೆ ಕುಡಿಯಲು ಸರಬರಾಜು ಮಾಡಲಾಗುತ್ತದೆ. ಆದ್ದರಿಂದ ಈ ಭಾಗದ ಜನರು ಜಠರಗಳ ಊತದಿಂದ ಬಳಲುತ್ತಿದ್ದಾರೆ. ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ ಹೆಚ್ಚು ಕಡಿಮೆ ಎಲ್ಲ ನದಿಗಳು, ಚರಂಡಿ ಹಾಗೂ ಉದ್ಯಮಗಳ ಕೊಳೆಯನ್ನು ಸ್ವೀಕರಿಸಿ ಮಾಲಿನ್ಯದ ಪ್ರಮಾಣವನ್ನು ಹೆಚ್ಚಿಸಿ ಕೊಳ್ಳುತ್ತಿವೆ.

ಉದ್ದಿಮೆಗಳಿಂದಾಗಿ ಚಂಬಲ್‌ನಲ್ಲಿ ಜಲಚರ ಜೀವನ ನಶಿಸಿ ಹೋಗಿದೆ. ಈ ನೀರನ್ನು ಸೇವಿಸಿದ ಅನೇಕ ಪ್ರಾಣಿಗಳು ಸತ್ತಿವೆ. ಈ ನದಿಯ ನೀರು ಭೂಮಿಯೊಳಗಿನಿಂದ ಹರಿದು ಊರೊಳಗಿನ ಬಾವಿಗಳಲ್ಲಿ ಸೇರಿ ಆ ನೀರನ್ನು ಕಲುಷಿತಗೊಳಿಸಿವೆ.

ವಿಷಪೂರಿತ ರಾಸಾಯನಿಕಗಳು ಒಂದು ಸಮಸ್ಯೆಯಾದರೆ, ಅನೇಕ ಉದ್ಯಮಗಳು ಅತಿ ಹೆಚ್ಚಿನ ಉಷ್ಣಾಂಶದಲ್ಲಿ ನೀರನ್ನು (ಕೊಳವೆಗಳ ಮೂಲಕ) ನದಿಗೆ ಹರಿಸುವುದು ಇನ್ನೊಂದು ಸಮಸ್ಯೆ. ಈ ಬಿಸಿ ನೀರಿನಿಂದ, ನೊರೆಯಾಗಿ ಹರಿಯುವ ನೀರಿನ ವೇಗ ಕಡಿಮೆಯಾಗುತ್ತದೆ. ಇದರಿಂದಾಗಿ ಅಡಿಯಲ್ಲಿರುವ ಪ್ರಾಣಿವರ್ಗ ನಾಶವಾಗುತ್ತದೆ. ಸುಮಾರು 25-30° ಸೆಂಟಿಗ್ರೇಡಿನಷ್ಟು ವ್ಯಾಪಕ ಉಷ್ಣಾಂಶ ಜಲಚರ ಪ್ರಾಣಿಗಳ ಜೀವಕ್ಕೆ ಹಿತಕರವಲ್ಲ. ಈ ಕಾರಣದಿಂದಾಗಿ ಶಾಖೋತ್ಪನ್ನ ಘಟಕಗಳೂ ಜಲಚರಗಳ ಪಾಲಿಗೆ ಅಪಾಯಕರ.

ಪಾದರಸವನ್ನು ಕಾಗದ ಮತ್ತು ರೇಯಾನ್ ಕಾರ್ಖಾನೆಗಳಲ್ಲಿ ಬಳಸುತ್ತಾರೆ. ವಿಷಕಾರಿಯಾದ ಪಾದರಸದ ಹಬೆ ಗಣನೆಗಿಂತ ಕಡಿಮೆ ಪ್ರಮಾಣದಲ್ಲಿ ಹವೆಯಲ್ಲೂ ಇರುತ್ತದೆ. ಆದರೆ ಇಂದು ರಾಸಾಯನಿಕ ಉದ್ಯಮಗಳಲ್ಲಿ, ಬಣ್ಣ, ಕಾಗದ ಮತ್ತು ಕೀಟನಾಶಕಗಳ ತಯಾರಿಕೆಯಲ್ಲಿ ಪಾದರಸವನ್ನು ಬಹಳ ಹೆಚ್ಚಿನ ಪ್ರಮಾಣದಲ್ಲಿ ಬಳಸಲಾಗುತ್ತಿದೆ. ಇಂಥ ಕಾರ್ಖಾನೆಗಳಿಂದ ಹರಿದು ಬರುವ ಮಲೆತ ನೀರಿನಲ್ಲಿ ಪಾದರಸದ ಅಂಶ ಸಾಕಷ್ಟಿರುತ್ತದೆ. ಇಂಥ ರಾಡಿ ನದಿ, ಕೆರೆ ಸೇರಿದಾಗ ಆ ನೀರು ಕಲುಷಿತಗೊಳ್ಳುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ಪಾದರಸವಿರುವ ನದಿ ತೀರದ ಮಣ್ಣನ್ನು ರೈತರು ತಮ್ಮ ಹೊಲಗಳಿಗೆ ಹಾಕುತ್ತಾರೆ. ಇಲ್ಲವೇ ತಗ್ಗುಗಳನ್ನು ತುಂಬುತ್ತಾರೆ. ಹಾಲು ಕೊಡುವ ಪ್ರಾಣಿಗಳು ಈ ಬರಡು ಭೂಮಿಯ ಒಣ ಹುಲ್ಲನ್ನು ತಿನ್ನುವುದರಿಂದ ಪಾದರಸ ಅವುಗಳ ದೇಹ ಸೇರುತ್ತದೆ. ಈ ಭಾಗದಲ್ಲಿನ ಆಕಳುಗಳ ಹಾಲಿ ನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಪಾದರಸವಿರು ತ್ತದೆ. ಇಂಥ ಹಾಲನ್ನು ಒಂದು ಮಗು ಪ್ರತಿ ದಿನ ಒಂದು ಲೀಟರಿನಂತೆ ಕುಡಿಯತ್ತ ಹೋದಲ್ಲಿ ವಾರವೊಂದಕ್ಕೆ ಆ ಮಗುವಿನ ದೇಹದಲ್ಲಿ ಮಿತಿ ಮೀರಿದ ಪ್ರಮಾಣದಲ್ಲಿ ಪಾದರಸ ಸೇರಿರುತ್ತದೆ. ಕೆಲವೇ ತಿಂಗಳುಗಳಲ್ಲಿ ಅದು ಮಗುವಿನ ಮಿದುಳು ಹಾಗೂ ನರಮಂಡಲವನ್ನೇ ಘಾಸಿಗೊಳಿಸಿ ಸಾವನ್ನುಂಟುಮಾಡುತ್ತದೆ. ಅಜ್ಞಾನಿಗಳಾದ ಹಳ್ಳಿಗರಿಗೆ ತಮ್ಮೆಡೆಗೆ ಧಾವಿಸುತ್ತಿರುವ ವಿನಾಶದ ಅರಿವು ಕೂಡ ಇಲ್ಲ.

ಪರಿಸ್ಥಿತಿ ಕೈ ಮೀರುವ ಮೊದಲೆ ಸರಕಾರ ಕ್ರಮ ಕೈಕೊಂಡರೆ ನಾಗರಿಕತೆಗೆ ಅಂಟಿದ, ಈ ಕಂಟಕವನ್ನು ತಕ್ಕ ಮಟ್ಟಿಗಾದರೂ ಪರಿಹರಿಸಿಕೊಳ್ಳುವುದು ಸಾಧ್ಯ. ●


ಜಗತ್ತಿನಲ್ಲಿ ಯಾವುದೂ ಪೂರ್ಣ ತಪ್ಪಾಗಿರುವುದಿಲ್ಲ. ಸಂಪೂರ್ಣವಾಗಿ ನಿಂತು ಹೋಗಿರುವ ಗಡಿಯಾರ ಕೂಡ ದಿನದಲ್ಲಿ ಎರಡು ಸಲ ಸರಿಯಾಗಿರುತ್ತದೆ.

—ಅಜ್ಞಾತ

ಅನುಬಂಧ

● ಶೈಲು ಕರ್ಯಾಲ್ ●

ಟ್ಯಾಕ್ಸಿ ಡೊಂಕು ಡೊಂಕಾದ ರಸ್ತೆಯಲ್ಲಿ ಓಡುತ್ತಿತ್ತು. 'ಇನ್ನೂ ಅರ್ಧ ಗಂಟೆಯ ದಾರಿ ಇದೆ' ಎಂದು ಕೊಂಡೆ. ರಾಜಪ್ಪ ಒಳ್ಳೇ ಅನುಭವಿ ಡ್ರೈವರ್. ಅಂಥ ಘಾಟಿ ರಸ್ತೆಯಲ್ಲೂ ಸಲೀಸಾಗಿ ಕಾರು ಓಡಿಸುತ್ತಿದ್ದ. ಆದರೂ ನನಗೆ, 'ಇನ್ನಷ್ಟು ವೇಗವಾಗಿ ಹೋಗಬಾರದಿತ್ತೇ, ಆದಷ್ಟು ಬೇಗ ಮದುವೆ ಛತ್ರ ತಲುಪಿದ್ದರೆ ಸಾಕಿತ್ತು' ಎಂದೆನಿಸುತ್ತಿತ್ತು. ಈ ಭಾವನೆಗೆ ಮುಕ್ಕಾಲು ಪಾಲು, ಕಾರಿನಲ್ಲಿದ್ದ ನನ್ನ ಸಹಪ್ರಯಾಣಿಕರ ನಾಟಕೀಯ ನಡವಳಿಕೆಯೂ ಕಾರಣವಾಗಿತ್ತೆನ್ನಬಹುದು. ಅಂದ ಮಾತ್ರಕ್ಕೆ ಸಹಪ್ರಯಾಣಿಕರ್‍ಯಾರೂ ನನಗೆ ಅಪರಿಚಿತರೇನಲ್ಲ; ನನ್ನ ಸಮೀಪದ ಬಂಧು ಮಿತ್ರರೇ! ನಮ್ಮ ಬಂಧುವೊಬ್ಬರ ಮದುವೆ ಸಮಾರಂಭಕ್ಕೆ ನಾವು ಹತ್ತೂ ಜನ ಸೇರಿ ಟ್ಯಾಕ್ಸಿ ಗೊತ್ತು ಮಾಡಿಕೊಂಡು ಹೊರಟಿದ್ದೆವು.



ಪತ್ತು ಜನರಲ್ಲಿ ಇಬ್ಬರು ಹೆಂಗಸರು. ಅದರಲ್ಲೂ ಒಬ್ಬಾಕೆ ಹರೆಯದ ಸುಂದರ ತರುಣಿ! ಕಾರಿ ನಲ್ಲಿದ್ದ ಉಳಿದವರ ನಾಟಕೀಯ ನಡವಳಿಕೆಯ ಮೂಲ ಕಾರಣ ಆ ತರುಣಿಯೇ! ಒಂದು ಗುಂಪಿನಲ್ಲಿ ಒಬ್ಬಾಕೆ ಹರೆಯದ ಸುಂದರಿ ಇದ್ದ ಮಾತ್ರಕ್ಕೆ ಉಳಿದ ಗಂಡಸರೆಲ್ಲಾ ಕೋತಿಗಳಂತೆ ಆಡುವುದರ ಮರ್ಮ ನನಗೆ ಅರ್ಥವಾಗದ್ದೇ ನಲ್ಲ. ಪ್ರತಿಯೊಬ್ಬ ಗಂಡಸೂ ಒಂದಲ್ಲ ಒಂದು ಕಾರಣದಿಂದ ಆಕೆಯನ್ನು ಮೆಚ್ಚಿಸಲು ಪ್ರಯತ್ನಿಸುವವರೇ! ಹಳಸಲು ಜೋಕುಗಳನ್ನು ಹೇಳುತ್ತಾ ಅವಳನ್ನು ನಗಿಸಲು ಯತ್ನಿಸುವವರೇ! ಯಾವುದಾದರೊಂದು ಮಾತಿನಿಂದ ಇನ್ನೊಬ್ಬನನ್ನು ಹೀನಾಯಿಸಿ ತನ್ನ ಶ್ರೇಷ್ಠತೆ ಯನ್ನು ಕೊಚ್ಚಿಕೊಳ್ಳುವವರೇ! ಈ ನಾಟಕೀಯ ವರ್ತನೆ ನನಗೆ ವಾಕರಿಕೆ ತರಿಸುತ್ತಿತ್ತು. ಅಂದ ಮಾತ್ರಕ್ಕೆ ನಾನೊಬ್ಬ ಪ್ರಾಯಸಂದ ಮುದುಕನೆಂದು ಭಾವಿಸಬೇಕಾಗಿಲ್ಲ. ನಾನಿನ್ನೂ ಅವಿ ವಾಹಿತ ತರುಣನೇ. ಆದರೆ ನಾನು ಬೆಳೆದ ವಾತಾವರಣವೋ, ಇಲ್ಲಾ ನಾನು ಬೆಳೆಸಿ ಕೊಂಡ ಸಂಸ್ಕೃತಿಯೋ ಅಥವಾ ನನಗೆ ಸಿಕ್ಕ ಸಂಗ ಪ್ರಭಾವವೋ ಒಟ್ಟಿನಲ್ಲಿ ನನಗೆ ಈ ಕ್ಷಣಿಕ ತೃಪ್ತಿಯ ನಾಟಕಗಳೆಲ್ಲಾ ಹಿಡಿಸುತ್ತಿರಲಿಲ್ಲ. ಇದರಿಂದ, ಹೆಚ್ಚಿನ ನನ್ನ ಸಮಪ್ರಾಯಸ್ಥರಿಗೆ ನನ್ನ ಸಹವಾಸ ಬೋರ್ ಹಿಡಿಸುತ್ತಿತ್ತು. ಅವ ರುಗಳ ಪಾಲಿಗೆ ನಾನೊಬ್ಬ 'ಗಾಂಧೀ'!

ಟ್ಯಾಕ್ಸಿ ಡ್ರೈವರ್ ರಾಜಪ್ಪನಿಗೆ ಮಾತ್ರ ನನ್ನ ಮಾತುಗಳೆಂದರೆ ಬಹಳ ಇಷ್ಟ. ಆತ ನನಗಿಂತ ಪ್ರಾಯದಲ್ಲಿ ಎಷ್ಟೋ ದೊಡ್ಡವನಾದರೂ ಚಿಕ್ಕಂದಿನಿಂದ ಅವನನ್ನು ಕಂಡು ಗೊತ್ತಿರುವುದರಿಂದ ಅವನೆಂದರೆ ತುಂಬಾ ಸಲಿಗೆ. ನಮ್ಮ ಹೆಚ್ಚಿನ ಟೂರ್‌ಪ್ರೋಗ್ರಾಂಗಳಿಗೆ ರಾಜಪ್ಪನ ಟ್ಯಾಕ್ಸಿಯೇ ಖಾಯಂ ವಾಹನವಾಗಿತ್ತು. ಇಂದಿನ ಪ್ರಯಾಣಕ್ಕೂ ಕೂಡಾ ಕಾರು ಗೊತ್ತು ಮಾಡಿದವನು ನಾನೇ. ಮೊದಲೆಲ್ಲಾ ರಾಜಪ್ಪನಿದ್ದರೆ ಗಂಟೆಗಳು ಕ್ಷಣಗಳಾಗುತ್ತಿದ್ದವು. ತನ್ನ ಅನುಭವದ ಸರಮಾಲೆಯಿಂದ ಒಂದೊಂದೇ ಮುತ್ತನ್ನು ಆಯ್ದು, ನಮಗೆ ರಸದೌತಣ ನೀಡುತ್ತಿದ್ದ. ಅವನ ಜೊತೆಗಿನ ಪ್ರಯಾಣ ಉಲ್ಲಾಸಕರವಾಗಿರುತ್ತಿತ್ತು. ಅವನ ಅನುಭವ ಪೂರಿತ ತಮಾಷೆಗಳು ನಮ್ಮ ಹೊಟ್ಟೆ ಹುಣ್ಣಾಗಿಸುತ್ತಿದ್ದವು. ಇನ್ನು, ನಾನೆಂದರಂತೂ ರಾಜಪ್ಪನಿಗೆ ವಿಪರೀತ ಸಲಿಗೆ! ನನ್ನ ಜೊತೆಗಿನ ಪ್ರಯಾಣಕ್ಕಂತೂ ಯಾವುದೇ ಪ್ರೋಗ್ರಾಂ ಇದ್ದರೂ ಕ್ಯಾನ್ಸಲ್ ಮಾಡಿ ಬರುತ್ತಿದ್ದ. ಹುಡುಗರೊಂದಿಗೆ ಹುಡುಗನಾಗಿ ನಕ್ಕು ಕಲೆತು ನಲಿಯುತ್ತಿದ್ದ.

ಆದರೆ ಈಗ ಎರಡು ವರ್ಷಗಳಿಂದ ರಾಜಪ್ಪ ಸಂಪೂರ್ಣ ಬದಲಾಗಿದ್ದ. ಮೊದಲಿನ ತಮಾಷೆಗಳಂತಿರಲಿ, ಮಾತೇ ಮರೆತನೇನೋ ಎಂಬಷ್ಟು ಮೌನಿಯಾಗಿ ಬಿಟ್ಟಿದ್ದ. ಅಂತರ್ಮುಖಿಯಾಗಿದ್ದ. ಯಾರೊಂದಿಗೂ ಬೆರೆಯುತ್ತಿರಲಿಲ್ಲ. ಇದೆಲ್ಲದರ ಹಿಂದೆ ದುರಂತ ಕತೆಯೊಂದಿತ್ತು.

ರಾಜಪ್ಪನಿಗೆ ಬಂಧು, ಬಳಗವೆಂದು ಯಾರೂ ಇರಲಿಲ್ಲ. ಪ್ರಾಯ ನಲವತ್ತಾಗಿದ್ದರೂ, ಇನ್ನೂ ಅವಿವಾಹಿತನಾಗಿದ್ದಾಗ, "ಯಾಕೋ ಈ ಒಂಟಿ ಜೀವನ ಸನ್ಯಾಸಿ ಥರಾ?" ಅಂತ ಕೇಳಿದ್ರೆ, "ಒಂಟಿಯಾಗಿರೋದೇ ಸುಖ, ಶೇಖರಣ್ಣಾ, ಮದುವೆಯಾದ್ರೆ ಹೆಂಡ್ತಿ, ಮಕ್ಳು, ಕಾಯಿಲೆ ಕಸಾಲೆ, ರಗಳೆಗಳೆಲ್ಲಾ ಶುರುವಾಗುತ್ತೆ. ಇದೆಲ್ಲಾ ಯಾರಿಗೆ ಬೇಕು ಹೇಳು. ಅಂದ ಮಾತ್ರಕ್ಕೆ ಸನ್ಯಾಸಿಯಾಗಿರಲೇ ಬೇಕೂಂತೇನೂ ಇಲ್ವಲ್ಲಾ?" ಎಂದು ಕಣ್ಣು ಮಿಟುಕಿಸಿದ್ದ!.

ಇಂಥ ರಾಜಪ್ಪ, ಒಂದ್ಸಾರಿ ಲಾಂಗ್‌ಟೂರ್ ಹೋದವನು, ಬರ್ತಾ ಹದಿನೆಂಟರ ಸುಂದರ ಹುಡುಗಿಯೊಬ್ಬಳನ್ನು ಜತೆಯಲ್ಲಿ ಕರೆತಂದು "ಶೇಖರಣ್ಣಾ ಇವ್ಳು ನನ್ನ ಹೆಂಡ್ತಿ, ಕೊಲ್ಲೂರು ಕ್ಷೇತ್ರದಲ್ಲಿ ಮದುವೆಯಾದ್ವಿ" ಅಂದಾಗ ನನಗೆ ಶಾಕ್! ರಾಜಪ್ಪನ ಮಗಳ ಪ್ರಾಯದ ಇಂಥ ರೂಪವತಿ ಹೆಣ್ಣು ಈ ಕೋಡಂಗಿಗೆ ಎಲ್ಲಿ ಸಿಕ್ಕಿದಳಪ್ಪ ಅಂತ ವಿಸ್ಮಯಗೊಂಡಿದ್ದೆ. ಅನಂತರ ರಾಜಪ್ಪನೇ ಗುಟ್ಟಾಗಿ ವಿಷಯ ವಿವರಿಸಿದ್ದ. ಜಯಂತಿಗೆ- ಅವನ ಹೆಂಡ್ತಿ ಹೆಸರು- ಮನೇಲಿ ಮಲತಾಯಿ ಕಾಟವಂತೆ. ಇಂಥ ಪರಿಸ್ಥಿತಿಯಲ್ಲೂ ಯಾರೊಡನೆಯೋ ಗುಟ್ಟಾಗಿ ಪ್ರೀತಿ ಬೆಳೆದು ಮುಟ್ಟು ನಿಂತಾಗ, ಆ ಪುಣ್ಯಾತ್ಮ ಪರಾರಿಯಾಗಿ ಬಿಟ್ಟನಂತೆ. ಇನ್ನು, ಮಲತಾಯಿಗೆ ವಿಷಯ ತಿಳಿದರೆ ಸಿಗಿದು ಹಾಕುವಳೆಂದು ಹೆದರಿದ ಜಯಂತಿ, ರಾತ್ರಿ ಹೊಳೆಗೆ ಹಾರಿ ಆತ್ಮಹತ್ಯೆಗೆ ಯತ್ನಿಸುವುದರಲ್ಲಿದ್ದಾಗ.



"'ನಮ್ಮ ಯಶಸ್ಸಿನ ಗುಟ್ಟು ಈ ಸೋಪು' ಅಂತ ಕ್ರಿಡಾಪಟುಗಳು ಹೇಳ್ತಿದ್ರಲ್ಲ...ಬರಿ ಆ ಸೋಪ್‌ಗಳೇ ಅಂಗಡೀಲಿ ಇದ್ದದ್ದು. ಅದಕ್ಕೆ ಬೇಡಾಂತ ಹಾಗೇ ಬಂದೆ."

ಟೂರ್‌ನಿಂದ ಕಾರಿನಲ್ಲಿ ವಾಪಸ್ಸಾಗುತ್ತಿದ್ದ ರಾಜಪ್ಪ ಅಕಸ್ಮಾತ್ ಕಂಡು ಅವಳನ್ನು ತಡೆದ ನಂತೆ. ಅವಳ ಕತೆ ಗೊತ್ತಾದ ಮೇಲೆ, ಅವಳ ಸ್ಥಿತಿಗೆ ಕನಿಕರಿಸಿಯೋ— ಅಥವಾ ಅವಳ ರೂಪಕ್ಕೆ ಮರುಳಾಗಿಯೋ ಅವಳನ್ನು ತಾನೇ ಮದುವೆಯಾಗುವ ನಿರ್ಧಾರ ಮಾಡಿದ್ದ. ಹಾಗೇ ಬರ್ತಾ ಕೊಲ್ಲೂರಿನಲ್ಲಿ ಮೂಕಾಂಬಿಕೆಯ ಸನ್ನಿಧಿಯಲ್ಲಿ ತಾಳಿ ಕಟ್ಟಿದ್ದ.

ರಾಜಪ್ಪನ ಉದ್ದೇಶ ಏನೇ ಇರಲಿ, ಇಷ್ಟು ವರ್ಷಗಳ ನಂತರದಲ್ಲಾದರೂ ಒಬ್ಬ ನಿರ್ಭಾಗ್ಯಳ ಬಾಳಿಗೆ ದಿಕ್ಕಾದುದಕ್ಕೆ ನನಗೆ ಖುಷಿಯೆನಿಸಿತು. ನನ್ನ ಖುಷಿಯನ್ನು ಅವನೆದುರು ತೋರಿಸಿಕೊಂಡೆ ಕೂಡಾ.

ಮದುವೆಯಾದ ಮೇಲೆ ರಾಜಪ್ಪ ತನ್ನ ಕೆಟ್ಟ ಚಾಳಿಗಳನ್ನೆಲ್ಲಾ ಮರೆತ. ಅದೆಲ್ಲ ಅಡಗಿತ್ತೋ ಪ್ರೀತಿ, ಜಯಂತಿಯನ್ನು ಕಂಡರೆ ಪ್ರಾಣ ಬಿಡುತ್ತಿದ್ದ. ಅವಳು ಸ್ವಲ್ಪ ನೊಂದರೂ ಅವನಿಂದ ಸಹಿಸಲಾಗುತ್ತಿರಲಿಲ್ಲ. ಅವಳು ಹಾಕಿದ ಗೆರೆಯನ್ನು ಕಿಂಚಿತ್ತೂ ದಾಟುತ್ತಿರಲಿಲ್ಲ. ಆದರೆ ಆಕೆ--- ಜಯಂತಿ--- ಅಂಥ ಯೋಗ್ಯ ಹೆಣ್ಣಾಗಿ ನನಗೇಕೋ ಕಾಣಲಿಲ್ಲ. ಆ ಸೌಂದರ್ಯದ ಹಿಂದಿನ ಗುಣ ಮೆಚ್ಚುವಂಥಾದ್ದಾಗಿರಲಿಲ್ಲ! ಮಲತಾಯಿಯ ಆಶ್ರಯ ದಲ್ಲಿ ಬೆಳೆದಾಕೆಯ ನಡತೆ ಹೊಗಳುವಂತಿರಲಿಲ್ಲ. ಮೊದಮೊದಲಲ್ಲಿ ರಾಜಪ್ಪನ ಬಗ್ಗೆ ಕೃತಜ್ಞಳಾಗಿದ್ದರೂ ಕ್ರಮೇಣ ತನ್ನ ನಿಜರೂಪ ತೋರಿಸಲಾರಂಭಿಸಿದಳು. ಯಾವಾಗ ನೋಡಿದರೂ ಸಿಡಿಮಿಡಿ. ರಾಜಪ್ಪನಲ್ಲಿ ದಿನಾ ಏನಾದರೊಂದು ಕೊಂಕು ತೆಗೆದು ಮುನಿಸಿಕೊಳ್ಳುವುದು ಮಾಮೂಲಾಗಿ ಹೋಯ್ತು. ಈ ನಡುವೆ ಅವಳಿಗೆ ಗರ್ಭಪಾತವಾಗಿಬಿಟ್ಟಿತು. ರಾಜಪ್ಪನೇನೋ ಅದನ್ನು ತನ್ನ ಮಗುವೆಂದೇ ಸ್ವೀಕರಿಸಲು ಸಿದ್ಧನಾಗಿದ್ದರೂ, ಆಕೆ ಮಾತ್ರ ಪೀಡೆ ತೊಲಗಿಮುದೇ ಒಳ್ಳೆಯದಾಯ್ತೆಂದು ಸಂತೋಷಪಟ್ಟಳು.

ಕೆಲವು ಸಮಯದ ನಂತರ ಜಯಂತಿ ಪುನಃ ಗರ್ಭಿಣಿಯಾದಳು. ಈಗಂತೂ ರಾಜಪ್ಪನ ಉಪಚಾರ ಕೇಳುವುದೇ ಬೇಡ. ಜಯಂತಿಯ ಸಿಡುಕು, ಜಗಳಗಂಟಿ ಸ್ವಭಾವವನ್ನು ತಿಲ ಮಾತ್ರವೂ ಹಚ್ಚಿಕೊಳ್ಳದೆ, ದಿನೇ 4ನೇ ಅವನ ಪ್ರೀತಿ ಹೆಚ್ಚುಚಿತ್ತಲೇ ಇತ್ತು, ನನಗನ್ನಿಸುತ್ತಿತ್ತು. ಅವರಿಬ್ಬರ ನಡುವಿನ ವಯಸ್ಸಿನ ಅಂತರ ಅವಳ ಸಿಡುಕಾಟಕ್ಕೆ ಮುಖ್ಯ ಕಾರಣವೆಂದು. ನಾನೇನಾದರೂ ಅಪರೂಪಕ್ಕೆಂದು ಅವರ ಮನೆಗೆ ಹೋದಾಗ ಕೂಡಾ, ನನ್ನೊಡನೆ ಅವಳ ನಡವಳಿಕೆ ಮುಜುಗರ ಹುಟ್ಟಿಸುವಂತಿರುತ್ತಿತ್ತು. ಆದರೆ ರಾಜಪ್ಪನಿಗೆ ಅವಳು ಮಾಡಿದ್ದೆಲ್ಲಾ ಚಂದವೇ!

ಈ ಸಲ ಆರೋಗ್ಯಕರವಾಗಿ ಜಯಂತಿ ಗಂಡು ಮಗುವನ್ನು ಹೆತ್ತಾಗ, ರಾಜಪ್ಪನಿಗೆ ಸ್ವರ್ಗಕ್ಕೆ ಮೂರೇ ಗೇಣು ಉಳಿದಿತ್ತು! ಅವನು 'ತನ್ನ ಹೆಂಡತಿ, ತನ್ನ ಮಗು' ಎಂದು ಅಷ್ಟೆಲ್ಲಾ ಹಾರಾಡುವುದನ್ನು ಕಂಡಾಗ 'ಸಂಸಾರವೇ ಬೇಡ' ಎನ್ನುತ್ತಿದ್ದ ರಾಜಪ್ಪ ಇವನೇಯೋ ಎಂದಾಲೋಚಿಸುತ್ತಿದ್ದೆ. ಮನೆಯಲ್ಲಿದ್ದಾಗ ಮಗುವನ್ನು ಬಿಟ್ಟು ಅರೆಕ್ಷಣ ಇರುತ್ತಿರಲಿಲ್ಲ ರಾಜಪ್ಪ. ನನಗೆ ಸಿಕ್ಕಿದಾಗ ಕೂಡಾ ಅಷ್ಟೇ. ಮಾತಿನಲ್ಲಿ ಬರೇ ಮಗುವಿನ ವಿಷಯವೇ ತುಂಬಿರುತ್ತಿತ್ತು. "ಹೆಂಡತಿಯನ್ನು ಹೊಗಳಿ ಆಯಿತು., ಈಗ ಮಗುವಿನ ಸರದಿಯೋ" ಎಂದು ನಾನು ಹಾಸ್ಯಮಾಡುತ್ತಿದೆ.

[illegible]

ದೊಡ್ಡ ದುರ್ಘಟನೆ!

ಮಗುವಿಗೆ ಮೂರು ತಿಂಗಳಾಗಿತ್ತು. ಅದೇ ಸಮಯದಲ್ಲಿ ಅವರ ಮನೆ ಪಕ್ಕದಲ್ಲಿದ್ದ ಖಾಲಿ ರೂಮೊಂದಕ್ಕೆ ಯಾವುದೋ ಸುಡುಗಾಡು ಟ್ರೈನಿಂಗ್ ಅಂತ ಹೇಳಿ, ಇಪ್ಪತ್ತೈದರ ತರುಣನೊಬ್ಬ ಸೇರಿಕೊಂಡ. ಒಳ್ಳೇ ಶೋಕೀವಾಲ. ಚಂದದ ಮಾತುಗಾರ. ಸ್ವಲ್ಪ ದುಡ್ಡಿದ್ದ ಮನುಷ್ಯನೇ ಇರಬೇಕು. ಒಟ್ಟಿನಲ್ಲಿ ಹುಡುಗಿಯರನ್ನು ಸೆಳೆಯಬೇಕಾದ್ದೆಲ್ಲಾ ಅವನಲ್ಲಿತ್ತು. ಪಕ್ಕದ ಮನೆಯಲ್ಲೇ ಇದ್ದ ಜಯಂತಿಯ ರೂಪ ಅವನನ್ನು ಆಕರ್ಷಿಸಿತು. ಜಯಂತಿಯ ಅವ್ಯಕ್ತ ಅತೃಪ್ತಿ ಅವನಿಗೆ ಅನುಕೂಲವಾಯಿತು. ಜಯಂತಿಗೆ ಅದಾವ ಪ್ರೇರಣೆಯೋ- ಒಟ್ಟಿನಲ್ಲಿ ಮೂರು ತಿಂಗಳ ನಂತರ ಟ್ರೈನಿಂಗ್ ಮುಗಿಸಿ ಆತ ಹಿಂತಿರುಗಿದಾಗ ಜಯಂತಿ ಕೂಡಾ ಅವನೊಡನೆ ಪರಾರಿಯಾಗಿದ್ದಳು! ಅದೂ ಮಗುವಿನ ಸಹಿತ!

ರಾಜಪ್ಪ ಹುಚ್ಚನಂತಾದ. ಕನಸಿನಲ್ಲೂ ಊಹಿಸಿರದ ಈ ಆಘಾತ ಅವನನ್ನೂ ಕಂಗೆಡಿಸಿತ್ತು. ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ ಜಯಂತಿ, ಪಂಚಪ್ರಾಣವೇ ಆಗಿದ್ದ ಮಗು, ಚಂದ್ರ--- ಅಗಲಿದುದು ರಾಜಪ್ಪನಿಗೆ ಚೇತರಿಸಿಕೊಳ್ಳಲಾಗದ ಏಟಾಗಿತ್ತು! ಜಯಂತಿ ಇಂಥ ಕ್ಷುದ್ರ ಹೆಣ್ಣೆಂದು ನಾನೂ ಭಾವಿಸಿರಲಿಲ್ಲ. ರಾಜಪ್ಪನ ಬಗ್ಗೆ ಕನಿಕರಿಸುವುದರ ವಿನಾ ಬೇರೇನೂ ನಾನು ಮಾಡುವಂತಿರಲಿಲ್ಲ.

ಅವನ ಈಗಿನ ಬದಲಾವಣೆಗೆ ಈ ಕಥೆ ಕಾರಣವಾಗಿತ್ತು. ಈಗ ಎಷ್ಟು ಮಾತನಾಡಿಸಿದರೂ ಅಷ್ಟೆ, ಸುಮ್ಮನೇ ಕೇಳುತ್ತಾ ಕೂರುತ್ತಾನೆ. ಹಾಂಹೂಂ ಎಂದು ಮಾತ್ರ ಅನ್ನುತ್ತಾನೆ. ಒಮ್ಮೊಮ್ಮೆ ಒಣನಗು ನಗುತ್ತಾನೆ. ಯಾರ ಸಮಾಧಾನದ ಮಾತುಗಳೂ ತನಗೆ ಕೇಳಿಸದಂತೆ ಇದ್ದು ಬಿಡುತ್ತಾನೆ.

ಜಯಂತಿ ಹೋದ ಹೊಸದರಲ್ಲಿ ಅವನ ಸಂಕಟ ನನ್ನ ಎದೆಗೆ ಚುಚ್ಚಿದಂತಾಗಿ, ಸಮಾಧಾನಿಸಲು ಯತ್ನಿಸಿದ್ದೆ. "ಅವಳು ಅಂಥಾ ಹೆಣ್ಣೆಂದು ತಿಳಿದ ಮೇಲೂ ಅವಳ ಬಗ್ಗೆ ನೀನು ಕೊರಗಿ ಏನು ಪ್ರಯೋಜನ ರಾಜಪ್ಪ?" ಅಂದಿದ್ದಕ್ಕೆ,

"ಅವಳು ನನ್ನನ್ನು ಮೋಸಮಾಡಿ ಹೋದಳೂಂತಾನೇ ಇರ್ಲಿ, ಮಗೂನಾದರೂ ನಂಗೊಪ್ಪಿಸಿ ಹೋಗಬಾರದಿತ್ತೇ" ಎಂದು ಅತ್ತುಬಿಟ್ಟಾಗ ನಾನೇನು ತಾನೇ ಹೇಳುವಂತಿದ್ದೆ?

ಛತ್ರ ಸಮೀಪಿಸಿ ಕಾರು ನಿಂತಾಗ ನನ್ನೆಲ್ಲಾ ಯೋಚನೆಗಳಿಗೂ ತೆರೆಬಿತ್ತು. ಎಲ್ಲಾ ಕಾರಿನಿಂದಿಳಿದೆವು. ಸ್ಮಿತಾಳನ್ನು- ಕಾರಿನಲ್ಲಿದ್ದ ಹುಡುಗಿ- ಯಾರು ಹೆಚ್ಚು ನಗಿಸಿದವೆಂದು ಬಹುಶಃ ಮನಸ್ಸಿನಲ್ಲಿ ಲೆಕ್ಕ ಹಾಕುತ್ತಾ ಎಲ್ಲಾ ಛತ್ರದತ್ತ ಕಾಲು ಹಾಕಿದರು. ಸ್ಮಿತಾ ನನ್ನ ಬಳಿ ಬಂದು ರಾಗವಾಗಿ,

"ಏನು ಶೇಖರ್, ತುಂಬಾ ಸಪ್ಪಗಿದ್ದೀರಿ?" ಎಂದಳು. ಕಾರಿನಲ್ಲಿ ಒಂದೊಂದು ಜೋಕಿಗೂ ಚೆಲ್ಲುಚಲ್ಲಾಗಿ ಹಲ್ಲು ಕಿರಿಯುತ್ತಿದ್ದ, ಅವಳ ಬಗ್ಗೆ ನನಗೆ ಒಳ್ಳೆಯ ಅಭಿಪ್ರಾಯವೇನೂ ಇರಲಿಲ್ಲ.

"ನಾನು ಇರೋದೆ ಹೀಗೆ. ನನಗೆ ಜೋಕ್ಸ್ ಹೇಳೋಕೆ ಗೊತ್ತಿಲ್ಲ" ಅಂದೆ ತಟಕ್ಕನೆ.

'ಹೇಳೋಕೆ ಗೊತ್ತಿಲ್ಲದೇ ಇದ್ರೂ, ಕೇಳಿ ನಗಬಾರದೆಂದಾದರೂ ಇದೆಯೆ?" ಯಾಕೋ ಬೇಕೆಂದೇ ನನ್ನನ್ನು ಕೆಣಕುತ್ತಿದ್ದಾಳೆ ಎನಿಸಿತು.

"ಆ ಹಳಸಲು ಜೋಕ್ಸ್‌ಗಳಿಗೆ ನಗೋದೇ! ಅದನ್ನು ಹೇಳಿದವರೂ, ನಕ್ಕವರೂ ಮೂರ್ಖರು!" ಅಂದುಬಿಟ್ಟೆ. ಸ್ಮಿತಾ ಅರೆಕ್ಷಣ ಪೆಚ್ಚಾದರೂ ಮರುಕ್ಷಣ ಸಾವರಿಸಿಕೊಂಡು ಕೊಂಕುನಗೆ ಬೀರುತ್ತಾ,

"ನಿಮಗೆ ಅಸೂಯೆಯೇನೋ? ಅಬ್ಬ, ಗಂಡಸಿಗೆ ಇಷ್ಟೊಂದು ಅಸೂಯೆ ಇರಬಾರದಪ್ಪ!" ಎನ್ನುತ್ತಾ ಬಳುಕುತ್ತಾ ಹೋದಳು. ನನ್ನ ಅಸಹನೆಗೆ ಕಾರಣ, ನಾನು ಎಲ್ಲರಂತೆ ನಕ್ಕು ನಗಿಸಲಾರದ ಅಸೂಯೆಯೇ ಕಾರಣವೇ ಎಂದು ಯೋಚಿಸಿದೆ. ಅಷ್ಟರಲ್ಲಿ ಕಾರಿನಿಂದಿಳಿದು ನನ್ನ ಬಳಿಬಂದ ರಾಜಪ್ಪ, "ಅವಳನ್ನು ಕಂಡರೆ ಅಸಹ್ಯ" ಎಂದ ಕರ್ಕಶವಾಗಿ. ಆ ಧ್ವನಿಯಲ್ಲಿ, ಮನಸ್ಸಲ್ಲಿ ಎಷ್ಟೋ ಹೊತ್ತಿನಿಂದ ಕುದಿಯುತ್ತಿದ್ದ ಲಾವಾರಸವನ್ನು ಹೊರಚೆಲ್ಲಿದ ರಭಸವಿತ್ತು. ಕಹಿಯಿತ್ತು! ನಾನು ಅವನನ್ನೇ ನೋಡಿದೆ. ಸ್ತ್ರೀ ದ್ವೇಷದ ಪಡಿಯಚ್ಚು ಅವನ ಮುಖದಲ್ಲಿ ಎದ್ದು ಕಾಣು

ತ್ತಿತ್ತು. ಇಷ್ಟು ಹೊತ್ತೂ ಅವಳ ಚೆಲ್ಲು ನಡವಳಿಕೆಗೆ ಬಹುಶಃ ಮನಸ್ಸಿನಲ್ಲೇ ಕುದಿಯುತ್ತಿದ್ದಿರಬಹುದು ಎಂದುಕೊಂಡೆ.

"ರಾಜಪ್ಪ ನೀನು ಇಲ್ಲೇ ಇರ್ತೀಯೋ ಇಲ್ಲಾ, ಛತ್ರದೊಳಗೆ ಬರ್ತೀಯೋ" ಕೇಳಿದೆ.

"ಇಲ್ಲೇ ಇರ್ತೀನಿ" ಅಂದ. ಮೊದಲಾಗಿದ್ದರೆ, ನಮ್ಮ ಜೊತೆಗೇ ಇದ್ದು ಸಮಾರಂಭಗಳಲ್ಲಿ ಪಾಲ್ಗೊಳ್ಳುತ್ತಿದ್ದ!

"ಸರಿ ಮತ್ತೆ ಊಟಕ್ಕಾಕುವಾಗ ಕರೀತೀನಿ" ಎಂದು ಛತ್ರದೊಳಗೆ ಕಾಲಿಟ್ಟೆ. ಒಳ ಹೋಗುತ್ತಿದ್ದ ಹಾಗೆಯೇ ಹಳೆಯ ಸ್ನೇಹಿತನೊಬ್ಬ ಎದುರಾದ, ನಮ್ಮ ಹರಟೆಯಲ್ಲಿ ರಾಜಪ್ಪ ನನ್ನ ತಲೆಯಿಂದ ದೂರವಾದ. ಒಂದೆರಡು ಸಲ ಸ್ಮಿತಾ ತಾನಾಗಿ ಬಂದು ಮಾತಾಡಿಸಿದಾಗ, ಗೆಳೆಯ ಹುಬ್ಬೇರಿಸಿದ. "ಯಾರಮ್ಮಾ ಹುಡುಗಿ, ಲವ್ವಾ?" ಎಂದು ಒಂದು ಥರವಾಗಿ ನಕ್ಕ. ನನಗೆ ಮೈಯೆಲ್ಲಾ ಉರಿದುಹೋಯಿತು. ಆದರೂ ಅಪರೂಪಕ್ಕೆ ಸಿಕ್ಕಿದ ಗೆಳೆಯನನ್ನು ನೋಯಿಸೋದೇಕೆ ಅಂತ ತಾಳ್ಮೆವಹಿಸಿ, ಬರೇ ನಕ್ಕು ಸುಮ್ಮನಾದೆ.

ಊಟದ ಹೊತ್ತಿಗಾಗುವಾಗ ಪಕ್ಕನೆ ರಾಜಪ್ಪನ ನೆನಪಾಯಿತು. 'ಛೆ! ಎಂಥ ಕೆಲ್ಸವಾಯಿತು.! ಒಬ್ನೇ ಏನು ಮಾಡ್ತಿದ್ದಾನೋ! ಕುಡಿಯುಲಾದರೂ ಸಿಕ್ಕಿದೆಯೋ ಇಲ್ಲವೋ! ಒಳಬಂದವನು ಅವನನ್ನು ಮರತೇಬಿಟ್ಟೆ' ಎಂದು ಹಳಹಳಿಸುತ್ತಾ ಹೊರಗೆ ಬಂದೆ. ಟ್ಯಾಕ್ಸಿ ಸಮೀಪಿಸಿದವನಿಗೆ ಅಚ್ಚರಿ ಕಾದಿತ್ತು. ರಾಜಪ್ಪ ಮುದ್ದು ಮಗುವೊಂದರ ಜೊತೆ ಆಡುತ್ತಾ ಮೈಮರೆತಿದ್ದ! ಅವನು ಮರೆತಿದ್ದ ಲವಲವಿಕೆ, ನಗೆಯೆಲ್ಲವೂ ಈಗ ತಾವೇ ತಾವಾಗಿ ವಿಜೃಂಭಿಸುತ್ತಿದ್ದವು. ಅವನನ್ನು ಮರುಳು ಮಾಡಿದ ಮಗುವನ್ನು ನೋಡಿದೆ. ಮೂರು ವರ್ಷದೊಳಗಿನ ಮುದ್ದಾದ ಗಂಡು ಮಗು. ಅದರ ಮುದ್ದುಮುಖ ತಟ್ಟನೆ ನನ್ನನ್ನೂ ಆಕರ್ಷಿಸಿತು. "ಯಾರ ಮಗು ರಾಜಪ್ಪ?" ಎಂದು ಕೇಳುತ್ತಾ ಸಮೀಪಿಸಿದೆ.

ನನ್ನ ಪ್ರಶ್ನೆ ರಾಜಪ್ಪನನ್ನು ಹೊರ ಪ್ರಪಂಚಕ್ಕೆ ಎಳೆದಂತಿತ್ತು. ಪಕ್ಕನೆ ನಾಚಿದವನಂತೆ ಕಂಡ. ಮರುಕ್ಷಣ ಸಾವರಿಸಿಕೊಂಡು ಹೇಳಿದ. "ಗೊತ್ತಿಲ್ಲ ಶೇಖ್ರಣ್ಣ, ಯಾರೋ ಮದುವೆಗೆ ಬಂದವರದ್ದಿರಬೇಕು. ಇದ್ದಕ್ಕಿದ್ದಂತೆ ನನ್ನ ಬಳಿ ಬಂದು 'ಅಪ್ಪಾ'ಂತ ಕರೀತು. ಯಾಕೋ ನಂಗೆ, ನನ್ನ ಮಗನನ್ನು ಕಂಡ ಹಾಗೇ ಆಗ್ತಿದೆ."- ಇಷ್ಟು ಹೇಳುವಷ್ಟರಲ್ಲಿ ರಾಜಪ್ಪನ ಕಣ್ಣಲ್ಲಿ ನೀರು ತುಳುಕಲಾರಂಭಿಸಿತ್ತು. ಮಗು ಅಪ್ಪಾಂತ ಕರೆಯುತ್ತಲೇ, ತನ್ನ ಮಗುವಿನ ನೆನಪಾಗಿ ಭ್ರಮಾಧೀನನಾಗಿದ್ದಾನೆ ಅಂದುಕೊಂಡೆ. ಅಂತೂ ಒಂದು ಗಳಿಗೆ ಯಾದರೂ ಅವನನ್ನು ಹಿಂದಿನ ರಾಜಪ್ಪನನ್ನಾಗಿಸಿದ ಮಗುವಿನ ಮೇಲೆ ಅಭಿಮಾನ ಉಕ್ಕಿ ಬಂತು. ಕೈನೀಡಿ, 'ಬಾರೋ ಪುಟ್ಟಾ" ಎಂದು ಕರೆದೆ. ಸಲೀಸಾಗಿ ಬಂದ ಯಾರನ್ನೂ ಹೊಂದಿಕೊಳ್ಳುವಂಥ ಮಗು! ಎತ್ತಿಕೊಳ್ಳುತ್ತಾ "ನಿನ್ನ ಹೆಸರೇನೊ ಮರೀ?" ಎಂದೆ.

"ಬಂಗಾರು" ಎಂದ ಮುದ್ದಾಗಿ.

"ಎಲ್ಲಿ ನಿನ್ನ ಅಪ್ಪ ಅಮ್ಮ?" ಎಂದೆ.

"ಅಪ್ಪ ಎಂದು ಮುದ್ದಾಗಿ ಹೇಳುತ್ತಾ ತನ್ನ ಪುಟ್ಟ ಕೈಯನ್ನು ರಾಜಪ್ಪನತ್ತ ತೋರಿದ. ರಾಜಪ್ಪ ಉದ್ರೇಕಗೊಂಡು ನಾನು ಹಿಡಿದು ಕೊಂಡಿದ್ದಂತೆಯೇ ಮಗುವಿಗೆ ಲೊಚಲೊಚನೆ ಮುದ್ದಿಟ್ಟ. "ಅಮ್ಮ ಎಲ್ಲಿ" ಎಂದೆ.

"ಅಲ್ಲಿ" ಎಂದು ಕೈತೋರಿದೆಡೆ ನೋಡಿದೆ. ಛತ್ರದ ಪಕ್ಕದಲ್ಲೇ ಮಂದಿರವಿತ್ತು. ಅದರ ಹೊರ ಜಗಲಿಯ ಕಂಬದ ಮರೆಯಿಂದ ಎರಡು ಕಣ್ಣುಗಳು ಈ ಕಡೆಯೇ ನೋಡುತ್ತಿರುವುದು ಅರಿವಾಯಿತು. ಕುತೂಹಲದಿಂದ ಆ ಕಡೆ ಹೆಜ್ಜೆ ಹಾಕಿದೆ. ಅಲ್ಲಿಗೆ ತಲುಪುವಷ್ಟರಲ್ಲಿ ಹೆಣ್ಣೊಂದು ಅವಸರವಸರವಾಗಿ ಅಲ್ಲಿಂದ ಮರೆಯಾಗುವ ಯತ್ನದಲ್ಲಿದ್ದುದನ್ನು ಕಂಡೆ. ನನಗೆ ಆಶ್ಚರ್ಯವೆನಿಸಿತು. ಮಗು "ಅಮ್ಮಾ...ಅಮ್ಮಾ.." ಎಂದು ಕೂಗುತ್ತಿತ್ತು. ಹಾಗಿದ್ದರೆ, ಆಕೆ ಈ ಮಗುವಿನ ಹೆತ್ತ ತಾಯಿಯಂತೂ ಹೌದು. ಮತ್ತೆ ಯಾಕೆ ಅಡಗಿ ಕೊಳ್ಳುತ್ತಾಳೆ? ಸಂದಿಗ್ಧದಲ್ಲಿ ಸಿಕ್ಕಿದ್ದಾಗ ಸ್ಮಿತಾ ಬಂದಳು. ನನ್ನ ಕೈಯಲ್ಲಿ ಮಗುವನ್ನು ನೋಡುತ್ತಲೇ,

'ಯಾರ ಮಗು ಶೇಖರ್?, ಓಹ್ ಎಷ್ಟು ಮುದ್ದಾಗಿದ್ದಾನೆ, ಎಂದು ನನ್ನ ಕೈಯಲ್ಲಿದ್ದಂತೆಯೇ ಮಗುವಿಗೆ ಮುತ್ತಿಟ್ಟಳು. ಅವಳ ಶರೀರ ಸ್ಪರ್ಶದಿಂದ ಅರೆಗಳಿಗೆ ಮೈ ಬಿಸಿ

ಘೇರಿತು. ಈ ಹುಡುಗಿ ಯಾಕೆ ನನ್ನ ಬೆನ್ನು ಹಿಡಿದಿದ್ದಾಳೆ ಎನ್ನಿಸಿತು ಮರುಕ್ಷಣ.

"ನಿಮ್ಮ ಮಗೂನಾ ಶೇಖರ್?" ತುಂಟತನದಿಂದ ಕೇಳಿದಳು ಸ್ಮಿತಾ.

"ಹೌದು" ಎಂದೆ ಬಿಗುವಾಗಿ.

"ಓಹೊ...ಈ ಸನ್ಯಾಸಿಗೆ ಮಗು ಹೇಗೆ ಹುಟ್ಟಿಪ್ಪಾ..." ಅನ್ನುತ್ತ 'ಬಾರೋ ಮುದ್ದೂ' ಎಂದು ಕೈನೀಡಿದಾಗ ಬಂಗಾರು ಅವಳ ಕೈಸೇರಿದ. ಅರೆನಿಮಿಷ ಏನೇನೋ ಮಾತಾಡುತ್ತಾ ಮಗುವನ್ನು ಮುದ್ದು ಮಾಡುತ್ತಿದ್ದ ಸ್ಮಿತಾ, "ಏನೋ ಇದು ಜೇಬಿನಲ್ಲಿ, ಚಾಕಲೇಟಾ?" ಅಂತ ಮಗುವಿನ ಜೇಬಿಗೆ ಕೈಹಾಕಿದಾಗ ಹೊರಬಂದ ಕಾಗದ ನನ್ನ ಗಮನ ಸೆಳೆಯಿತು.

"ಏನಿದೂ' ಎಂದು ಸ್ಮಿತಾ ಅದನ್ನು ಬಿಡಿಸುವಷ್ಟರಲ್ಲಿ "ಕೊಡಿಲ್ಲಿ" ಅಂತ ಕಿತ್ತುಕೊಂಡು ಬಿಡಿಸಿದೆ. ವಕ್ರವಕ್ರ ಅಕ್ಷರಗಳಲ್ಲಿ ಬರೆದಿದ್ದ ಪತ್ರವದು! ಆಸಕ್ತಿ ಕೆರಳಿ ಓದ ತೊಡಗಿದೆ.

"ಈ ಪತ್ರ ಓದುವ ಪುಣ್ಯಾತ್ಮರಿಗೆ ನಮಸ್ಕಾರಗಳು.

ನಾನೋರ್ವ ಹತಭಾಗ್ಯೆ. ಪಾಪಿಷ್ಠೆ. ನನ್ನ ಬಾಳು ಎಂಜಲು ನಾಯಿಗಿಂತಲೂ ಅಸಹ್ಯ! ಇದಕ್ಕೆ ಯಾರೂ ಕಾರಣರಲ್ಲ. ಎಲ್ಲವು ನನ್ನ ಸ್ವಯಂಕೃತಾಪರಾಧ! ನಾನು ಸಾಯುವುದರಲ್ಲಿದ್ದಾಗ ಕಾಪಾಡಿ ಮದುವೆಯಾದ ದೇವರಂಥ ಗಂಡನಿದ್ದೂ, ಯೌವನ, ಸೌಂದರ್ಯಕ್ಕೆ ಮರುಳಾಗಿ ಇನ್ನೊಬ್ಬನ ಹಿಂದೆ ಓಡಿಬಂದೆ. ಬಂದಮೇಲೆ ಗೊತ್ತಾಯಿತು, ನನ್ನನ್ನು ಕರೆದುಕೊಂಡು ಬಂದವನು ಎಂಥ ನೀಚ ಅಂತ. ಆತ ನನ್ನನ್ನು ಮದುವೆಯಾಗಲಿಲ್ಲ, ಇಟ್ಟುಕೊಂಡ! ಅಷ್ಟು ಮಾತ್ರವಲ್ಲ, ಇತರರಿಗೂ ಉಣಬಡಿಸಿ ನನ್ನ ಮೂಲಕ ಚೆನ್ನಾಗಿ ಸಂಪಾದಿಸಿಕೊಂಡ. ಅಲ್ಲಿಂದ ತಪ್ಪಿಸಿಕೊಳ್ಳಲೂ ಸಾಧ್ಯವಾಗದಂಥ ಬಿಗಿಕಾವಲು ಬೇರೆ ನನಗೆ! ನನ್ನ ಬಾಳು ನಾಯಿ ಪಾಡಾಯಿತು!

ನನ್ನ ಪಾಪಕ್ಕೆ ಪ್ರಾಯಶ್ಚಿತ್ತ ಅನುಭವಿಸಿದ್ದ ನನ್ನ ಶರೀರ ಎರಡೇ ವರ್ಷಗಳಲ್ಲಿ ಭಯಂಕರ ರೋಗದ ಗೂಡಾಯಿತು. ನನ್ನ ಸೌಂದರ್ಯ ಬತ್ತಿಹೋದಾಗ ಆತ ನನ್ನನ್ನು ಬೀದಿನಾಯಂತೆ ಹೊರಗಟ್ಟಿದ. ನಾನು ಎಂದಾದರೂ ಬಿದ್ದು ಹೋಗುವ ಜೀವ. ಆದರೆ ಈ ಮಗು... ಇದು, ನನ್ನನ್ನು ಕಾಪಾಡಿದ್ದ ಆ ದೇವರದ್ದು! ಇದರ ಬಾಳು ಹಾಳಾಗಬಾರದು. ಆ ದೇವರ ಮುಖ ನೋಡುವ ನೈತಿಕ ಧೈರ್ಯ ನನಗಿಲ್ಲದಿದ್ದರೂ ಮಗುವನ್ನು ಹೇಗಾದರೂ ಅವರ ಬಳಿ ಸೇರಿಸಬೇಕೆಂದು ಕಷ್ಟಪಟ್ಟು ಅವರಲ್ಲಿಗೆ ಹೊರಟಿದ್ದೇನೆ. ಆದರೆ ನನ್ನ ಕ್ರೂರ ರೋಗ ಅಲ್ಲಿವರೆಗೆ ನನ್ನನ್ನು ತಲುಪಿಸುವುದೋ ಇಲ್ಲವೋ ಗೊತ್ತಿಲ್ಲ. ದಾರಿಯಲ್ಲೇ ನಾನೆಲ್ಲಿಯಾದರೂ ಸತ್ತು ಹೋದರೆ, ಈ ಮಗುವನ್ನು ಕಂಡ ಪುಣ್ಯಾತ್ಮರು ದಯವಿಟ್ಟು ಇದನ್ನು ಅದರ ತಂದೆಯ ಬಳಿಗೆ ಸೇರಿಸಬೇಕೆಂದು ನನ್ನ ಪ್ರಾರ್ಥನೆ."

ಕೆಳಗೆ ರಾಜಪ್ಪನ ವಿಳಾಸವಿತ್ತು!

ನನಗೆ ಎಲ್ಲಾ ಅರ್ಥವಾಯಿತು ಹಾಗಾದರೆ ಆ ಹೆಂಗಸು...ಜಯಂತಿ! ಅಷ್ಟರಲ್ಲಿ ನನ್ನ ಬಳಿ ಬಂದಿದ್ದ ರಾಜಪ್ಪನಿಗೆ ಆ ಪತ್ರವನ್ನು ಕೊಟ್ಟು, ನಾನು ರಾಮಮಂದಿರದ ಬದಿಯಲ್ಲಿ ಓಡಿದೆ. ಒಳಹೊರಗೆ ಸುತ್ತಮುತ್ತ ಎಲ್ಲಾ ಕಡೆ ನೋಡಿದರೂ ಆಕೆಯ ಸುಳಿವಿರಲಿಲ್ಲ! ಮಗು ಸೇರಬೇಕಾದವರ ಕೈ ಸೇರಿತೆಂದು ಆಕೆ ಎಲ್ಲೋ ಹೊರಟು ಹೋದಳೇ!

ನಿಟ್ಟುಸಿರಿಡುತ್ತಾ ಕಾಲೆಳೆದುಕೊಂಡು ಬಂದಾಗ, ರಾಜಪ್ಪ ಬಂಗಾರುವನ್ನು ತನ್ನ ಕಾರಿನ ಬಾನೆಟ್ ಮೇಲೆ ಕೂರಿಸಿ ಕಣ್ಣೀರ ಕೋಡಿಯನ್ನೇ ಹರಿಸುತ್ತಿದ್ದ. ಬಂಗಾರು ತನ್ನ ಪುಟ್ಟ ಕೈಗಳಿಂದ ಅವನ ಕಣ್ಣೀರು ಒರೆಸುವ ಪ್ರಯತ್ನ ಮಾಡುತ್ತಿದ್ದ! ■

ಸ್ತುತಿ ಎಂಬ ಹೆಸರಿನ ಕನ್ಯೆ ಇನ್ನೂ ಅವಿವಾಹಿತಳಾಗಿಯೇ ಉಳಿದಿದ್ದಾಳೆ. ಕೈಯಲ್ಲಿ ಪುಷ್ಪಮಾಲೆ ಹಿಡಿದು, ಅವಳು ವರ ಸಂಶೋಧನೆಯಲ್ಲಿದ್ದಾಳೆ. ಆದರೆ ಅವಳಿಗಿನ್ನೂ ಅನುರೂಪ ವರ ದೊರೆತಿಲ್ಲ. ಕಾರಣವಿಷ್ಟೇ, ನಿಜವಾದ ವಿದ್ವಾನ್ ಮನುಷ್ಯ ಅವಳಿಂದ ದೂರ ದೂರ ಓಡಿ ಹೋಗುತ್ತಾನೆ. ಹಾಗೂ ಮೂರ್ಖರನ್ನಂತೂ ಸ್ವತಃ ಅವಳೇ ದೂರವಿಡುತ್ತಾಳೆ.

● ಅಮೃತ

ಗೇರು ಸೊಪ್ಪೆಯ ಕಾಳಿಮೆಣಸಿನ ರಾಣಿ

★ ಆರ್.ಬಿ. ಶ್ಯಾನಭಾಗ ★

ಉತ್ತರ ಕನ್ನಡ ಜಿಲ್ಲೆಯ ಗತಕಾಲದ ಇತಿಹಾಸ ಮುಸುಕಿನಲ್ಲಿ ಮರೆಯಾಗಿದೆ. ಸಂಶೋಧಕರ ಬೆಳಕನ್ನು ಕಾಣದಿರುವುದರಿಂದ ಜಿಲ್ಲೆಯ ಸಮಗ್ರ ಇತಿಹಾಸದ ಘಟನಾವಳಿಗಳನ್ನು ನಿರೂಪಿಸುವಾಗ ಬಿರುಕುಗಳು ಒಡೆದು ಕಾಣಿಸಿಕೊಳ್ಳುತ್ತಿವೆ. ಹೊನ್ನಾವರ ತಾಲ್ಲೂಕಿನಿಂದ 18 ಕಿ.ಮೀ. ದೂರದಲ್ಲಿ ಮೂಡಣ ದಿಕ್ಕಿಗೆ ಶರಾವತಿ ನದಿಯ ತಟದ ಮೇಲೆ ನೆಲೆಸಿರುವ ಗೇರುಸೊಪ್ಪೆಯ ಅರೆಮರೆಯಾದ ಇತಿಹಾಸವೇ ಇದಕ್ಕೆ ನೀಡಬಹುದಾದ ಸ್ಪಷ್ಟ ನಿದರ್ಶನ. ಹಾಡುವಳ್ಳಿ (ಸಂಗೀತ ಪುರ), ಕಾಯ್ಕಿಣಿ, ಮುರ್ಡೇಶ್ವರ, ಭಟ್ಕಳ ಹಾಗೂ ಮೂಡಬಿದ್ರೆಯ ಶಿಲಾಶಾಸನ ಹಾಗೂ ವೀರಗಲ್ಲುಗಳು ಗೇರುಸೊಪ್ಪೆಯ ಇತಿಹಾಸವನ್ನು ಸಮಗ್ರವಾಗಿ ಪರಿಚಯಿಸುವ ಕೈಗನ್ನಡಿಗಳೇ ಆಗಿವೆ. ಈ ನಿಟ್ಟಿನಲ್ಲಿ ಸಂಶೋಧಕರು ಕ್ಷ-ಕಿರಣವನ್ನು ಚೆಲ್ಲಬೇಕಾಗಿದೆ.

14ನೇ ಶತಮಾನದಲ್ಲಿ ಈ ಕುಗ್ರಾಮದಲ್ಲಿ ರಾಜಮನೆತನ ಒಂದು ವೈಭವದಿಂದ ಮೆರೆಯಿತು. ಶರಾವತಿ ನದಿಯ ದಡದಲ್ಲಿರುವ ಸಾಳುವಳ್ಳಿ ಗ್ರಾಮದ ಸೋಮವಂಶದ ಸಾಳ್ವರು ಗೇರುಸೊಪ್ಪೆಯನ್ನು ಆಳಿದ ಅರಸರು. ಈ ಅರಸರು ಕಾಶ್ಯಪ ಗೋತ್ರದವರು, ಜೈನ ಮತಾವಲಂಬಿಗಳು, ತುಳುನಾಡಿನ ಅಳಿಯ ಸಂತಾನವನ್ನು ಮೈಗೂಡಿಸಿಕೊಂಡವರು. ಹೊನ್ನನೆಂಬುವನು ಈ ಅರಸು ಮನೆತನದ ಮೂಲ ಪುರುಷ.

ಚೆಲುವಿನ ತಿಲಕ ಗೇರುಸೊಪ್ಪೆ

ಗೇರುಸೊಪ್ಪೆಯ ಕಾನಿನ ಒಡಲೊಳಗೆ ನೆಲೆಸಿರುವ ನಗಿರೆ ಗೇರುಸೊಪ್ಪೆಯ ರಾಜಧಾನಿಯಾಗಿತ್ತು. ಸಾಳ್ವ ದೊರೆಗಳ ಕಾಲದಲ್ಲಿ ಕಟ್ಟಲಾದ ಬಸದಿಗಳು ಈ ತಾಣದಲ್ಲಿರುವವುದರಿಂದ ಇದಕ್ಕೆ ನಗರ ಬಸದಿಕೇರಿ ಎನ್ನುತ್ತಾರೆ. ನಗಿರೆ ಗತಕಾಲದಲ್ಲಿ ಕ್ಷೇಮಪುರ, ಭಲ್ಲಾತಕೀಪುರ ಹಾಗೂ ಗೇರುಸೊಪ್ಪೆ ಎಂಬ ಹೆಸರಿನಿಂದ ಕರೆಯಲ್ಪಡುತ್ತಿತ್ತು. ತುಳು ಸಾಹಿತ್ಯದಲ್ಲಿ ಈ ನಗಿರೆ ಒಂದು ರಾಜ್ಯವಾಗಿ ಮೆರೆದ ಉಲ್ಲೇಖವಿವೆ. ಮೂಡಬಿದ್ರೆಯಲ್ಲಿ ದೊರೆತಿರುವ ಶಿಲಾಶಾಸನವು ನಗಿರೆ ರಾಜ್ಯವು (ಗೇರುಸೊಪ್ಪೆ) ತುಳು ದೇಶವೆಂಬ ಸುಂದರಿಯ


ಮೊಗದ ಮೇಲೆ ಚೆಲುವನ್ನು ಬೀರುತ್ತಿದ್ದ ತಿಲಕದಂತೆ ಕಂಗೊಳಿಸುತ್ತಿತ್ತೆಂದು ವರ್ಣಿಸಿದೆ.

ಪೋರ್ಚುಗೀಸರು ಗೇರುಸೊಪ್ಪೆಯನ್ನು 'ಗರ್ಸೋಪ' ಎಂದು ಉಚ್ಚರಿಸುತ್ತಿದ್ದರು. ವೆನಿಸ್ ದೇಶದ ಪ್ರವಾಸಿ ಸೀಜರ್ ಫ್ರೆಡರಿಕ್ ಗರ್ಸೋಪ (ಗೇರುಸೊಪ್ಪೆಯ) ರಾಣಿಯು ಬಿಜನೇಗರಕ್ಕೆ (ವಿಜಯನಗರ) ಅಧೀನಳಾಗಿದ್ದಳೆಂದು ತನ್ನ ಪ್ರವಾಸ ಕಥನದಲ್ಲಿ ಉಲ್ಲೇಖಿಸಿದ್ದಾನೆ.

ಜೋಗ ಜಲಪಾತವನ್ನು ಗೇರುಸೊಪ್ಪೆಯ ಜಲಪಾತ ಎಂದೂ ಶರಾವತಿ ನದಿಯನ್ನು ಗೇರುಸೊಪ್ಪೆಯ ಹೊಳೆ ಎಂದೂ ತೀರದಲ್ಲಿ ನೆಲೆಸಿರುವ ಗ್ರಾಮಸ್ಥರು ಹೆಸರಿಸಲು ಇವೆರಡು ಐತಿಹಾಸಿಕ ಸುಪ್ರಸಿದ್ಧವಾದ ಗೇರುಸೊಪ್ಪೆಯ ಸನಿಹದಲ್ಲಿ ಇರುವುದೇ ಕಾರಣಗಳೇ ಆಗಿವೆ.

ಗೇರುಸೊಪ್ಪೆಯಲ್ಲಿ ವಿಜಯನಗರ ಸೇನೆಯು ಇರುತ್ತಿಲ್ಲದೇ ಹೊನ್ನಾವರದಲ್ಲಿ ವಿಜಯನಗರದ ಪ್ರತಿನಿಧಿಗಳು ಇರುತ್ತಿದ್ದರು. ವಿಜಯನಗರದ ಆಸರೆಯಲ್ಲಿಯೇ ಗೇರುಸೊಪ್ಪೆಯ ರಾಜ್ಯದಾಡಳಿತವು ನಡೆಯುತ್ತಿತ್ತು. ನಮಗೆ ದೊರೆಯುವ ಗೇರುಸೊಪ್ಪೆಯ ಇತಿಹಾಸ 1398ರ ಇತ್ತೀಚಿನದೇ ಆಗಿರುವುದು. ಗೇರುಸೊಪ್ಪೆಯ ಹೈವನೆಂಬ ದೊರೆಯು ಮಡಿದ ನಂತರ ಯಾದವೀ ಕಲಹದಿಂದಾಗಿ ಗೇರುಸೊಪ್ಪೆಯು ಒಡೆದು ಸಂಗೀತಪುರ (ಹಾಡುವಳ್ಳಿ) ಎಂಬ ರಾಜ್ಯದ ಉದಯಕ್ಕೆ ಅವಕಾಶವನ್ನು ನಿರ್ಮಿಸಿತು. ಕ್ರಿ.ಶ. 1401 ರಿಂದ 1560ರ ವರೆಗಿನ ಆಳಿಕೆಯಲ್ಲಿ ಗೇರುಸೊಪ್ಪೆಯನ್ನು ಸಂಗೀರಾಯ ಕೇಶವ, ಇಮ್ಮಡಿ ಸಂಗೀರಾಯ ಭೈರವ, ಇಮ್ಮಡಿ ಭೈರವ, ಮಲ್ಲಿರಾಯ ದೇವರಸ ಒಡೆಯ, ಸಾಳ್ವ ಭೈರವ, ಮಲ್ಲಾ ರಾಮ ಸಾಳ್ವ, ಇಮ್ಮಡಿ ಭೈರವ ರಾಮ, ಪದುಮಲಿದೇವಿ, ದೇವರಾಯ ಹಾಗೂ ಚೆನ್ನ ಭೈರಾದೇವಿ ಎಂಬ ದೊರೆಗಳು ಆಳಿದರು.

ಕಿತ್ತೂರ ಚೆನ್ನಮ್ಮ, ಒನಕೆಯ ಓಬವ್ವ, ಬೆಳವಡಿಯ ಮಲ್ಲಮ್ಮ ಹಾಗೂ ಝಾಂಸಿ ಲಕ್ಷ್ಮೀಬಾಯಿ ರಾಣಿ ಮೊದಲಾದ ವೀರಾಂಗನೆಯರ ಮೇಲ್ಪಂಕ್ತಿಯಲ್ಲಿ ಗೇರುಸೊಪ್ಪೆಯ ಚೆನ್ನಭೈರಾದೇವಿಯು ಸೇರ್ಪಡೆಯಾಗಲು ಅರ್ಹಳೆನಿಸಿದ್ದಾಳೆ. ಪೋರ್ಚುಗೀಸರ ದುರಾಡಳಿತದ ವಿರುದ್ಧ ಸಮರಾಂಗಣವನ್ನೇ ಸಜ್ಜುಗೊಳಿಸಿದ ರಣಚಂಡಿ ಇವಳು.



ಇಕ್ಕೇರಿಯ ಕಾರಾಗೃಹದಲ್ಲಿ ಕಂಬನಿ ಮಿಡಿಯುತ್ತಿರುವ ಚೆನ್ನಭೈರಾದೇವಿ

ಐತಿಹಾಸಿಕ ಹರ್ವಕಾಲ

ಸಾಳ್ವ ದೊರೆಗಳ ಆಳಿಕೆಯ ಚರಿತ್ರೆಯಲ್ಲಿ ಚೆನ್ನಭೈರಾದೇವಿಯ ಆಳಿಕೆ ಸುವರ್ಣ ಕಾಲ ಎಂದು ಇತಿಹಾಸಿಕಾರರು ಬಣ್ಣಿಸಿರುವರು. ಕ್ರಿ.ಶ. 1562 ರಿಂದ 1606ರವರೆಗಿನ ಸುದೀರ್ಘ ಆಳ್ವಿಕೆಯನ್ನು ಮಾಡಿರುವ ಚೆನ್ನಭೈರಾದೇವಿಯಂತಹ ಇನ್ನೋರ್ವ ವಿರಾಂಗನೆಯು ದೇಶದ ಇತಿಹಾಸದಲ್ಲಿ ಗೋಚರಿಸಲಾರಳು. ಗೇರುಸೊಪ್ಪೆ ಮತ್ತು ಸಂಗೀತಪುರ ಎಂದು ಹೋಳಾಗಿ ಹೋಗಿರುವ ಎರಡು ರಾಜ್ಯಗಳು ಇವಳ ಧುರೀಣತ್ವದಲ್ಲಿ ಒಗ್ಗೂಡಿದವು. ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ, ಮಿರ್ಜಾನ, ಗೋಕರ್ಣ, ಚಂದಾವರ, ಹೊನ್ನಾವರ, ಭಟ್ಕಳ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು, ಉಪ್ಪುಂದ ಮತ್ತು ಬಾಸಿಗಳು ರಾಣಿಯ ಚಕ್ರಾಧಿಪತ್ಯದಲ್ಲಿ ಬರುವ ಪ್ರದೇಶಗಳಾಗಿದ್ದವು. ಪ್ರವಾಸಿ ಬುಕಾನಿನ್, ರಾಣಿ ಕೆಲ ಕಾಲ ಭಟ್ಕಳವನ್ನು ತನ್ನ

ರಾಜಧಾನಿಯನ್ನಾಗಿ ಮಾಡಿಕೊಂಡು ಗೇರು ಸೊಪ್ಪೆಯನ್ನು ಆಳಿರುವುದನ್ನು ತನ್ನ ಪ್ರವಾಸ ಕಥನದಲ್ಲಿ ಬರೆದಿದ್ದಾನೆ. ದೈವ ತುಳುವ ಕೊಂಕಣವನ್ನು ರಾಣಿ ಆಳಿರುವ ವೃತ್ತಾಂತಗಳು ಶಿಲಾಶಾಸನದಲ್ಲಿ ಲಭ್ಯವಿವೆಯಲ್ಲದೆ ಅವು ರಾಣಿಯನ್ನು ಮಹಾಮಂಡಳೇಶ್ವರಿ ಎಂದು ಹೊಗಳಿವೆ.

ರಾಣಿ ರಾಜಕೀಯ ವ್ಯವಹಾರದಲ್ಲಿ ನಿಪುಣೆ ಹಾಗೂ ಚತುರೆಯಾಗಿದ್ದಳಲ್ಲದೆ ಕಲೆ ಹಾಗೂ ಸಾಹಿತ್ಯದ ಪೋಷಕಿಯೂ ಆಗಿದ್ದಳು. ವಿಜಯನಗರದ ಆಳಸರೊಡನೆ ಸಖ್ಯ ಬೆಳೆಸಿಕೊಂಡಿದ್ದ ಆಕೆ ಅರೇಬಿಯಾ ಹಾಗೂ ಪರ್ಷಿಯಾ ದೇಶದಿಂದ ಕುದುರೆಗಳನ್ನು ಆಮದು ಮಾಡಿಕೊಳ್ಳಲು ಅನುಮತಿಸಿದ್ದಳು. ಹೊನ್ನಾವರ ಹಾಗೂ ಭಟ್ಕಳ ರೇವುಪಟ್ಟಣ ಮುಖೇನ ಈ ವ್ಯಾಪಾರಗಳು ನಡೆಯುತ್ತಿದ್ದವು. ಅರಬೀಯಾ ಕೆಂಟ ಹಾಗೂ ಪರ್ಶಿಯನ್ ಕೊಲ್ಲಿಯವರೆಗೆ ರಾಣಿಯ ವಿದೇಶಿ ವ್ಯಾಪಾರ ವ್ಯಾಪಿಸಿತ್ತು.

ಚೆನ್ನಭೈರಾದೇವಿಯು ವಿಜಾಪುರದ ಆದಿಲಶಾಹಿಗಳೊಡನೆ ಮೈತ್ರಿಯುಳ್ಳವಳಾಗಿದ್ದಳು. ಕರಾವಳಿಯಲ್ಲಿ ಕೊಳ್ಳೆ ಹೊಡೆಯುತ್ತ ಅಕ್ರಮ ವ್ಯವಹಾರ ನಡೆಸುತ್ತಿದ್ದ ಪೋರ್ಚಗೀಸರನ್ನು ಸದೆ ಬಡಿಯಲು ರಾಣಿ ಈ ದೊರೆಗಳೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದ್ದಳು. ಕ್ರಿ.ಶ. 1569ರಲ್ಲಿ ಪೋರ್ಚುಗೀಸರು ಬಸ್ರೂರನ್ನು ಮುತ್ತಿದಾಗ ರಾಣಿ ತನ್ನ ಸೇನಾಪಡೆಗಳನ್ನು ತೋಳೆದಾರ ಅರಸರ ನೆರವಿಗೆ ಕಳುಹಿಸಿ ಅಲ್ಲಿಯ ಸ್ಥಳೀಯರ ವಾಣಿಜ್ಯ ಹಿತಾಸಕ್ತಿಯನ್ನು ರಕ್ಷಿಸಿದಳು.

ರಣಚಂಡಿ

ಸಂಪದ್ಭರಿತವಾದ ಗೇರುಸೊಪ್ಪೆಯ ರಾಜ್ಯದಿಂದ ಮನಸೂರೆಗೊಂಡ ಕಲ್ಲಿಕೋಟೆ ಹಾಗೂ ಕಣ್ಣಾನೂರಿನ ದೊರೆಗಳು ರಾಣಿಯೊಂದಿಗೆ ಸ್ನೇಹಹಸ್ತ ಚಾಚಿದ್ದರು. ಪೋರ್ಚುಗೀಸರನ್ನು ಹೊರದಬ್ಬಲು ರಾಣಿ ಕಲ್ಲಿಕೋಟೆಯ ಅರಸ ಜಾಮೋರಿನ್‌ನೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದ್ದಳು. ಬಿಳಗಿ ಹಾಗೂ ಕೆಳದಿಯ ಅರಸರೊಡನೆ ರಾಣಿ ಸಂಘರ್ಷ ಮನೋಭಾವವನ್ನು ಹೊಂದಿದ್ದಳು. ಕ್ರಿ.ಶ. 1572ರಲ್ಲಿ ಗೇರುಸೊಪ್ಪೆಯನ್ನು ಕಬಳಿಸಲು ಹಳದೀಪುರ



ವೆಡೆಗೆ ಬಂದಿದ್ದ ಬಿಳಗಿ ದೊರೆ ನರಸಿಂಗನನ್ನು ತನ್ನ ಸೇನಾಪಡೆಯ ನೆರವಿನಿಂದ ಹಿಮ್ಮೆಟ್ಟಿಸಿದಳು.

ರಾಣಿ ಪೋರ್ಚುಗೀಸರ ಕಡುವೈರಿಯಾಗಿದ್ದಳು. ಕ್ರಿ.ಶ. 1569ರಲ್ಲಿ ಪೋರ್ಚುಗೀಸರು ವಿನಾಕಾರಣ ರಾಣಿಯೊಡನೆ ಕಾಲು ಕೆದರಿ ಜಗಳ ಹೂಡಿದರು. ಪೋರ್ಚುಗೀಸರು ಹಾಕುತ್ತಿದ್ದ ಬೆದರಿಕೆಗೆ ರಾಣಿ, ಸೊಪ್ಪು ಹಾಕದೇ ವೀರಾವೇಶದಿಂದ ರಣರಂಗವನ್ನೇ ಪ್ರವೇಶಿಸಿದಳು. ಹೊನ್ನಾವರದ ಕೋಟೆಯ ಹತ್ತಿರ ರಾಣಿ ಸೇನಾಪಡೆಗಳೊಡನೆ ಬಂದೂಕನ್ನು ಹಿಡಿದು ಸಶಸ್ತ್ರಳಾಗಿ ಸನ್ನದ್ಧಳಾದಳು. ಪೋರ್ಚುಗೀಸರ ಸಶಸ್ತ್ರ ನೌಕಾ ಪಡೆಗಳು ಹೊನ್ನಾವರದ ಬಂದರವನ್ನು ಪ್ರವೇಶಿಸುತ್ತಿದ್ದಂತೆ ಚೆನ್ನಭೈರಾದೇವಿಯ ಸೇನಾ ಪಡೆಗಳು ಗುಂಡಿನ ಸುರಿಮಳೆಗೈದು ಪೋರ್ಚುಗೀಸ್ ದಾಳಿಯನ್ನು ವಿಫಲಗೊಳಿಸಿದವು. ಈ ಕದನದಲ್ಲಿ ರಾಣಿ ಚಂಡಿಯಂತೆ ಹೋರಾಡಿರುವುದನ್ನು ಪೋರ್ಚುಗೀಸ್ ಇತಿಹಾಸಕಾರ ಅಂತೋನಿಯೋ ಪಿಂಟೋ ತನ್ನ ಪ್ರವಾಸ ಕಥನದಲ್ಲಿ ಚಿತ್ತಾಕರ್ಷಕವಾಗಿ ಬಣ್ಣಿಸಿದ್ದಾನೆ. ಕದನದಲ್ಲಿ ತಮಗೆ ಜಯ ಲಭಿಸುವುದೆಂಬ ಪೋರ್ಚುಗೀಸ್ ವೈಸ್‌ರಾಯನ ಲೆಕ್ಕಾಚಾರವೆಲ್ಲವೂ ತಲೆಕೆಳಗಾಯಿತು. ನಾಲ್ಕು ದಿನಗಳ ಘನಘೋರ ಕಾಳಗದಲ್ಲಿ ಪೋರ್ಚುಗೀಸರು ಮಣ್ಣು ಮುಕ್ಕಿದರಲ್ಲದೆ, ಅಪಾರ ನಷ್ಟ ಅನುಭವಿಸಿದರು.

ಕರಿಮೆಣಸಿನ ರಾಣಿ

ವಿಜಾಪುರದ ಸುಲ್ತಾನ ಇಬ್ರಾಹಿಂ ಆದಿಲ ಶಾಹ ಹಾಗೂ ಜಾಮೋರಿನ್ ದೊರೆಯ ನೆರವಿನಿಂದ ರಾಣಿ ಒಂದು ಸಲ ಪೋರ್ಚುಗೀಸರ ವಿರುದ್ಧ ಭೀಕರವಾಗಿ ಹೋರಾಡಿ ಅವರನ್ನು ಹೊನ್ನಾವರದಿಂದ ಓಡಿಸಿದಳು. ಯುದ್ಧದ ನಂತರ ರಾಣಿ ತನ್ನ ಪ್ರತಿಷ್ಠೆಗೆ ಚ್ಯುತಿ ಬಾರದಂತೆ ಪೋರ್ಚುಗೀಸರೊಂದಿಗೆ ವಾಣಿಜ್ಯ ಒಪ್ಪಂದವನ್ನು ಮಾಡಿಕೊಂಡಳು. ಅವರಿಗೆ ತನ್ನ ರಾಜ್ಯದಲ್ಲಿ ಕರಿಮೆಣಸಿನ ವ್ಯಾಪಾರಕ್ಕಾಗಿ ಉದಾರವಾದ ಅನುಮತಿಯನ್ನು ನೀಡಿದಳು. ಹಗೆತನವಿದ್ದ ಸಮಯದಲ್ಲಿಯೂ ರಾಣಿಯು ನೀಡಿದ ವಾಣಿಜ್ಯ ಔದಾರ್ಯಕ್ಕೆ ಬೆರಗಾಗಿ ಪೋರ್ಚುಗೀಸರು ಅವಳನ್ನು ಕರಿಮೆಣಸಿನ ರಾಣಿ ಎಂದು ಕೊಂಡಾಡಿದರು. ಕರಿಮೆಣಸಿನ ರಾಜ್ಯ ಎಂದು



ರಾಣಿಯ ಆರಾಧ್ಯ ದೇವತೆ ಗೇರು ಸೊಪ್ಪೆಯ ವೆಂಕಟರಮಣ ಸ್ವಾಮಿ

ಹೆಸರನ್ನು ಪಡೆದ ಗೇರು ಸೊಪ್ಪೆಯ ರಾಜ್ಯದಲ್ಲಿ ಮಿರ್ಜಾನ, ಹೊನ್ನಾವರ, ಭಟ್ಕಳ ಹಾಗೂ ಬೈಂದೂರು ರೇವು ಪಟ್ಟಣಗಳು ವ್ಯಾಪಾರಕ್ಕಾಗಿ ಪೋರ್ಚುಗೀಸರಿಗೆ ಸದಾ ತೆರೆದಿದ್ದವು. 500 ಖಂಡಿ ಕರಿಮೆಣಸು, 20 ಪರದಾನೆ ಅಕ್ಕಿಯನ್ನು ರಾಣಿ ಪ್ರತಿವರ್ಷ ಗೋವಾದ ಪೋರ್ಚುಗೀಸರಿಗೆ ರವಾನಿಸುತ್ತಿದ್ದಳೆಂದು ಗೋವೆಯ ವೈಸ್‌ರಾಯನಾಗಿದ್ದ ಡಾಂಮ್ ಮೇನೆಜೇಯಿಸನ ವರದಿಯಿಂದ ತಿಳಿದು ಬಂದಿದೆ. ಕರಿಮೆಣಸಿನ ಹೊರತಾಗಿ ಅಕ್ಕಿ ತಾಮ್ರ, ಹುರಿಹಗ್ಗ, ಕೊಬ್ಬರಿಗಳು ಮೇಲಿನ ಬಂದರಗಳ ಮುಖಾಂತರ ರಫ್ತಾಗುತ್ತಿದ್ದವು.

ಸಂಸ್ಕೃತಿಗೆ ರಾಜಾಶ್ರಯ

ಆಡಳಿತ ಹಾಗೂ ಸೈನ್ಯ ವ್ಯವಸ್ಥೆಯಲ್ಲಿ ರಾಣಿಯದು ಪಳಗಿದ ಹಸ್ತವಾಗಿತ್ತು. ಸ್ಥಳೀಯ ಆಡಳಿತ ಸಂಸ್ಥೆಯನ್ನು ನಿರ್ವಹಿಸಲು ಮಹಾಜನ ಮತ್ತು ಬುದ್ಧಿವಂತರೆಂಬ ಅಧಿಕಾರಿಗಳನ್ನು ನೇಮಿಸಿದ್ದಳು. ಆಯಕಟ್ಟಿನ ತಾಣಗಳಲ್ಲಿ ಕೋಟೆ ಹಾಗೂ ಸೈನ್ಯ ವ್ಯವಸ್ಥೆಯಿತ್ತು.

ಪರಧರ್ಮ ಸಹಿಷ್ಣುವಾಗಿದ್ದ ಚೆನ್ನಭೈರಾದೇವಿ ತನ್ನ ರಾಜ್ಯದಲ್ಲಿ ಮುಸ್ಲಿಮರು ತಮ್ಮ ಮತವನ್ನು ನಿರಾತಂಕವಾಗಿ ಆಚರಿಸಿಕೊಂಡು ಹೋಗುವ ಪರಿಸರವನ್ನು ಸೃಷ್ಟಿಸಿದಳು. ಜೈನ


ಸುವಾಸಿತ ಹಾಗೂ ಸ್ವಾದಿಷ್ಟ
ಮುಖಶುದ್ಧಿಗಾಗಿ
CHAMAN
ಚಮನ್
ಚಮನ್ ಇದು ಅತ್ಯಂತ ಸ್ವಾದಿಷ್ಟ ಹಾಗೂ ರುಚಿಕರವಾದ ಚೂರ್ಣವಾಗಿದೆ. ಇದನ್ನು ಸೇವಿಸುವದರಿಂದ ಬಾಯಿಯು ಸುವಾಸಿತವಾಗುತ್ತದೆ.
ಚಮನದಲ್ಲಿ ಏನೆಲ್ಲ ಇದೆ?
ಈ ಚಮನದಲ್ಲಿ ಜೇಷ್ಠಮಧು, ಕೇಶರ, ಏಲಕ್ಕಿ. ಲವಂಗ, ಪತ್ರಿ, ಜಾಜಿಕಾಯಿ, ಬಡಿಸೋಪ್, ಮೆಂಥಾಲ್‌ಗಳಂಥ ಅನೇಕ ಬಗೆಯ ಸುಗಂಧಿತ ಹಾಗೂ ರುಚಿಕರ ವಸ್ತುಗಳು ಒಳಗೊಂಡಿರುವವು. ಅದಕ್ಕೆಂದೇ ಇದು ಚಿಕ್ಕಮಕ್ಕಳಿಂದ ವೃದ್ಧರವರಿಗೆ ಎಲ್ಲರಿಗೂ ಅಚ್ಚುಮೆಚ್ಚು.
ಸ್ಟಾರ್ ಕಂಪನಿ, ಬೆಳಗಾಂವ್

ಮತಾವಲಂಬಿಯಾದ ಈ ರಾಣಿ ಜೈನಮತಕ್ಕೆ ರಾಜಾಶ್ರಯವನ್ನು ನಿಡಿದಳು. ಭಟ್ಕಳದ ರತ್ನತ್ರಯ ಬಸದಿ ಮತ್ತು ಗೇರುಸೊಪ್ಪೆಯ ಶಾಂತೇಶ್ವರ ಬಸದಿಗಳನ್ನು ಕಟ್ಟಿಸಿದಳು. ಅಲ್ಲದೆ ಬಸದಿ ಮತ್ತು ದೇವಾಲಯಗಳಿಗೆ ದತ್ತಿ ಬಿಟ್ಟಿದ್ದಳೆನ್ನುವ ವಿಷಯ ಶಿಲಾಶಾಸನಗಳಿಂದ ತಿಳಿದುಬಂದಿದೆ. ಪಡುಬಿದ್ರೆಯ ರಾಣಿ ಪದುಮಲಿದೇವಿಗೆ ಮುನಿಸುವ್ರತಂ ತೀರ್ಥಂಕರ ಬಸದಿಗಾಗಿ ನೆರವನ್ನು ನೀಡಿದಳು.

ದಕ್ಷಿಣ ಕನ್ನಡ ಜಿಲ್ಲೆಯ ಶಾಂತಿಕಾ ದೇವಾಲಯದ ದೈನಂದಿನ ಪೂಜಾ ವಿನಿಯೋಗಕ್ಕೆ ಹೊಸ ಗ್ರಾಮದಲ್ಲಿ ವಾಸವಾಗಿದ್ದ ಲಿಂಗಪ್ಪ ಹೆಬ್ಬಾರರಿಂದ ಚ್ಯುತಿ ಬಂದಾಗ ರಾಣಿ ಮಧ್ಯಸ್ಥಿಕೆ ವಹಿಸಿ ಪೂಜಾ ವ್ಯವಸ್ಥೆಯನ್ನು ಸರಿಪಡಿಸಿದಳು. ಗೋವರ್ಧನ ಗಿರಿಯ ಆಂಜನೇಯ ದೇವಾಲಯ, ಗೇರು ಸೊಪ್ಪೆಯ ವೆಂಕಟೇಶ್ವರ ದೇವಾಲಯ, ಭಟ್ಕಳದ ತಿರುವೆಂಗಳ ಮತ್ತು ಕೇತಪ್ಪ ನಾರಾಯಣ ದೇವಾಲಯ ಹಾಗೂ ಬೈಂದೂರಿನ ಶನೇಶ್ವರ ದೇವಾಲಯಗಳಿಗೆ ರಾಣಿ ದತ್ತಿಯನ್ನು ನೀಡಿದ್ದಳು.

ಕನ್ನಡ ಮತ್ತು ಸಂಸ್ಕೃತ ಭಾಷೆಗಗಳನ್ನಾಕೆ ಪೋಷಿಸಿದಳು. ಕನ್ನಡ ಮತ್ತು ಸಂಸ್ಕೃತ ಸಾಹಿತ್ಯ ಲೋಕದಲ್ಲಿ ವಿದ್ವನ್ಮಣಿಯಾಗಿ ಮೆರೆದ ಕವಿ ವರ್ಧಮಾನನನ್ನು ರಾಣಿಯು ತನ್ನ ದರಬಾರಿನಲ್ಲಿ ಸನ್ಮಾನಿಸಿದಳು.

ಗೇರುಸೊಪ್ಪೆಯ ಅವನತಿ

ರಾಣಿ ತನ್ನ ಸೇನಾಪತಿಯೊಡನೆ ಹೊಂದಿದ್ದ ಅನೈತಿಕ ಸಂಬಂಧವೇ ಗೇರುಸೊಪ್ಪೆ ರಾಜ್ಯದ ಅವನತಿಗೆ ಕಾರಣ ಎನ್ನಲಾಗುತ್ತಿದೆ. ಇದೇ ಕಾಲದಲ್ಲಿ ಪ್ರಾಬಲ್ಯಕ್ಕೇರಿದ ಇಕ್ಕೇರಿಯ ದೊರೆ ವೆಂಕಟಪ್ಪನಾಯಕ ತನ್ನ ಸೇನೆಯೊಡನೆ ಗೇರುಸೊಪ್ಪೆಯನ್ನು ಆಕ್ರಮಿಸಿದನು. ಚೆನ್ನಭೈರಾದೇವಿ ಕಲಿತನದಿಂದ ಕಾದಾಡಿದರೂ ಪತನ ಹೊಂದಿದಳು. ವೆಂಕಟಪ್ಪನಾಯಕ ರಾಣಿಯನ್ನು ಸೆರೆಹಿಡಿದು ಇಕ್ಕೇರಿಯ ಕಾರಾಗೃಹದಲ್ಲಿರಿಸಿದನು. ಗೇರುಸೊಪ್ಪೆ ಇಕ್ಕೇರಿ ರಾಜ್ಯದಲ್ಲಿ ಸೇರ್ಪಡೆಯಾಗಿ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು. ಬಂಧನಕ್ಕೆ ಒಳಗಾದ ಚೆನ್ನಭೈರಾದೇವಿ ಇಕ್ಕೇರಿಯ ಕಾರಾಗೃಹದಲ್ಲಿ ಕೊನೆಯುಸಿರೆದಳು.

ಕೆಳದಿ ಆಸ್ಥಾನದ ಅಂಗಣ್ಣ ಎಂಬ ಕವಿ ಗೇರುಸೊಪ್ಪೆಯು ಪತನವಾಗಿ ಇಕ್ಕೇರಿಯಲ್ಲಿ ಸೇರ್ಪಡೆಯಾದುದನ್ನು 'ಕೆಳದಿಯ ನೃಪವಿಜಯ' ಎಂಬ ಕಾವ್ಯದಲ್ಲಿ ಚಿತ್ತಾಕರ್ಷಕವಾಗಿ ವರ್ಣಿಸಿದ್ದಾನೆ.

ಇಂದು ಗೇರುಸೊಪ್ಪೆಯಲ್ಲಿ ಜೀರ್ಣಾವಸ್ಥೆಯಲ್ಲಿರುವ ಬಸದಿಯ ಶಿಲಾಕೃತಿಗಳು ದೊರೆಗಳ ಕಲಾ ಪ್ರೌಢಮೆಯನ್ನು ಬಿಂಬಿಸುವ ಜೀವಂತ ಸಾಕ್ಷಿಗಳಾಗಿವೆ. ಗೇರುಸೊಪ್ಪೆಯ ಇತಿಹಾಸ ಮಹಿಮಾ ಹಾಗೂ ಕಾನೂರು ಕಾನಿನಲ್ಲಿ ಹುದುಗಿಹೋಗಿವೆ. ಪ್ರಾಚ್ಯವಸ್ತು ಸಂಶೋಧನಾ ಇಲಾಖೆ ಹಾಗೂ ಪುರಾತತ್ವ ಇಲಾಖೆ ಗೇರುಸೊಪ್ಪೆಯ ಕಾನಿನಲ್ಲಿ ಉತ್ಖನನ ಕಾರ್ಯವನ್ನು ಕೈಕೊಂಡು ಗೇರುಸೊಪ್ಪೆಯ ಇತಿಹಾಸದ ಮೇಲೆ ಬೆಳಕನ್ನು ಚೆಲ್ಲಬೇಕಾಗಿದೆ.

ಗತಕಾಲದ ವೈಭವದಿಂದ ಮೆರೆದ ಹಂಪೆ ಕೊಂಪೆಯಾಗಿರುವಂತೆ ರಾಜವೈಭವದಿಂದ ಮೆರೆದ ಗೇರುಸೊಪ್ಪೆ ಕಾಯಿಸಿಪ್ಪೆಯಾಗಿದೆ. ಬಸದಿಗಳನ್ನು ನೋಡಲು ಬಂದಿರುವ ಪ್ರವಾಸಿಗಳು ದಂಡೆಯನ್ನು ದಾಟಿ ಕಾನಿನ ಒಡಲೊಳಗೆ ಪ್ರವೇಶಿಸುವುದು ಪ್ರಯಾಸಕರವಾಗಿರುವದರಿಂದ ಪ್ರಯಾಣವನ್ನು ಮುಂದುವರೆಸಲಾಗದೇ ನಿರುತ್ಸಾಹಿಗಳಾಗಿ ಹಿಂತಿರುಗಿ ಹೋಗುತ್ತಿದ್ದಾರೆ. ಪ್ರವಾಸಿಗಳು ನಗಿರೆಯನ್ನು ಸಂಪರ್ಕಿಸುವಂತಾಗಲು ದೋಣಿ ಹಾಗೂ ರಸ್ತೆ ವ್ಯವಸ್ಥೆಯನ್ನು ಸರಕಾರ ಕೈಕೊಳ್ಳ ಬೇಕಾಗಿದೆ. ಹಾಗೆಯೇ ಪ್ರವಾಸಿಗರಿಗೆ ಇನ್ನುಳಿದ ವ್ಯವಸ್ಥೆಯನ್ನೂ ಕಲ್ಪಿಸಿಕೊಡ ಬೇಕಾಗಿದೆ. ●

ಮನುಷ್ಯನ ಬಾಯಿಲೆಗೆ, ಅವನು ಏನು ತಿನ್ನುತ್ತಾನೆ ಎಂಬುದಕ್ಕಿಂತ ಅವನನ್ನು ಏನು ತಿನ್ನುತ್ತಿದೆ ಎಂಬುದೇ ಕಾರಣವಾಗಿರುತ್ತದೆ.

ಬಡವನ ಮಾಡಯ್ಯ ತಂದೆ...

●ಎಸ್.ಪಿ. ಶ್ಯಾನಭಾಗ●

ಈ ಲೇಖನದ ಹಣೆಪಟ್ಟಿಯನ್ನು ನೋಡಿದ ಯಾರೂ ಇದನ್ನು ಬರೆದವನಿಗೆ ತಲೆ ಸರಿಯಿಲ್ಲವೆಂದು ಹೇಳಬಹುದು. ಆದರೆ ನಿಜ ಹೇಳುವುದಾದರೆ ಈ ನಮ್ಮ ದೇಶದಲ್ಲಿ ಬಡವನಿಗಿರುವ ಸುಖ, ಸಂತೋಷ, ತೃಪ್ತಿ, ಸಮಾಧಾನಗಳು ಶ್ರೀಮಂತರಿಗೆ ಖಂಡಿತ ಇಲ್ಲವೆಂದು ಯಾವ ದೇವರ ಮೇಲಾದರೂ ಆಣೆ ಮಾಡಿ ಹೇಳುತ್ತೇನೆ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಬಡವ ಅನ್ನುವವ ಈ ಭೂಮಿಗೆ ಅವತರಿಸುವಾಗಲೆ ಅವನ ಅಮ್ಮನಿಗೆ ಹೆರಿಗೆ ಭತ್ಯ ಲಭ್ಯ. ಅನಂತರ ಆತ ಶಾಲೆಗೆ ಹೋಗುವಾಗ ಫೀ ಮಾಫ್, ಸ್ಲೇಟು, ಪುಸ್ತಕ ಎಲ್ಲಾ ಫ್ರೀ. ಉಪಾಹಾರಕ್ಕೆ ಉಪ್ಪಿಟ್ಟು, ಮಧ್ಯಾಹ್ನದ ಊಟ ಎರಡೂ ಶಾಲೆಯಲ್ಲೆ. ಆತ ಪ್ರಾಯಕ್ಕೆ ಬರುವಾಗ ಹಸಿರು ಕಾರ್ಡು, ಹಳದಿ ಕಾರ್ಡು, ಕೆಂಪು ಕಾರ್ಡು ಹೀಗೆ ಬಗೆ ಬಗೆಯ ಕಾರ್ಡುಗಳು ಅವನಿಗಾಗಿ ಕಾದು ನಿಂತಿರುತ್ತವೆ. ಹೀಗಾಗಿ ದವಸ ಧಾನ್ಯಗಳೆಲ್ಲ ಅಗ್ಗದ ದರದಲ್ಲಿ ಲಭ್ಯ. ಒಂದು ವೇಳೆ ಆತ ರೈತನಾಗಿದ್ದರಂತೂ ಭಾಗ್ಯದ ಬಾಗಿಲು ತೆರೆದಂತೆಯೆ. ಬೆಳೆ ಸಾಲ, ತಗಾವಿ ಸಾಲ, ನೇಗಿಲು ಭಾಗ್ಯದ ಸಾಲ, ಗೊಬ್ಬರ ಸಾಲ, ಪಂಪ್‌ಸೆಟ್ ಸಾಲ, ಎಮ್ಮೆ ಸಾಲ, ಎತ್ತಿನ ಸಾಲ, ಎತ್ತಿನಬಂಡಿ ಸಾಲ, ಮನೆ ಕಟ್ಟಲು ಸಾಲ.

ಇಷ್ಟೆಲ್ಲ ಸಾಲಗಳನ್ನು ತೆಗೆದುಕೊಂಡು ಸುಸ್ತಾದ ಮೇಲೆ ಜೀವನ ಸಂಜೆಯಲ್ಲಿ ವೃದ್ಧಾಪ್ಯ ವೇತನ! ಮಕ್ಕಳಿದ್ದರೂ ಇಲ್ಲವೆಂದೋ ಎಲ್ಲರೂ ಬೇರೆಯಾಗಿರುವುದರಿಂದ ತಾನು ಅಸಲೀ ಬಡವನೆಂದೋ ಒಂದು ಸರ್ಟಿಫಿಕೇಟ್ ತಂದರಾಯಿತು -ವೃದ್ಧಾಪ್ಯ ವೇತನ ಸ್ಯಾಂಕ್ಷನ್! ಹೀಗೆ ಜೀವನವಿಡೀ ಸಾಲವೇ ಅವನ ಆದಾಯ! ಅಕಸ್ಮಾತ್ತಾಗಿ ಯಾವನೋ ಒಬ್ಬ "ಈ ಯಾವ ಸಾಲವೂ ಬೇಡ. ಈ ಪರಿ ಸಾಲ ತೆಗೆದುಕೊಂಡರೆ ಅದನ್ನು ತೀರಿಸುವ ಬಗೆ ಹೇಗೆ?" ಎಂದು ಕೇಳಿದರೆ ಅವನಂಥಾ ಹುಚ್ಚ ಈ ಜಗತ್ತಿನಲ್ಲೆ ಇಲ್ಲ ಎಂದು ಸಾಲಾನುಭವಿಗಳೂ ಸಾಲವಿತರಕರೂ ತೀರ್ಮಾನಿಸುತ್ತಾರೆ. ಏಕೆಂದರೆ ಅವನಿಗೆ ಸಾಲ ಬೇಕೋ, ಬೇಡವೊ? ಎನ್ನುವುದು ಇಲ್ಲಿ ಅಷ್ಟು ಮುಖ್ಯವೇ ಅಲ್ಲ. ಅವನಿಗೆ ಅಥವಾ ಅವನಂಥವರಿಗೆ ಇಂತಿಷ್ಟು ಸಾಲ ವಿತರಿಸಲೇಬೇಕು ಎಂದು 'ಮೇಲಿಂದ' ಆರ್ಡರ್ ಬಂದಿರುತ್ತದೆ. ಹೀಗಾಗಿ ಒಂದು ರೀತಿಯಲ್ಲಿ ಸಾಲ ಕೊಡುವ ಸಲುವಾಗಿ ಸರಕಾರವೇ ಬಡವರನ್ನು ಹುಡುಕುತ್ತಿರುತ್ತದೆ. ಇಷ್ಟು ಸಾಲವನ್ನು ಪಡೆದೂ ಅವನಿಗೆ ಸಾಲ ಸಿಗದೇ ಹೋದರೆ ಸಾಲ ಮೇಳ ಇದ್ದೇ ಇದೆ. ಅಲ್ಲಿ 'ಸೋಸುವ ಕ್ರಿಯೆ' ಮುಗಿದು ಕೈಗೆ ಹತ್ತಿದ ಸಾಲವೇ ಪಾಲಿಗೆ ಬಂದ ಪಂಚಾಮೃತ.

ಇನ್ನು ಸಾಲದ ಮರುಪಾವತಿಯ ಬಗ್ಗೆ ತಲೆಬಿಸಿ ಮಾಡಿಕೊಳ್ಳುವ ಬಡವರು ಈ ಪುಣ್ಯಭೂಮಿಯಲ್ಲಿ ಬೆರಳೆಣಿಕೆಗೂ ಸಿಗುವುದಿಲ್ಲ. ಸಾಲ ಕೊಟ್ಟವರಿಗೆ ಅದರ ಬಗ್ಗೆ ಅಷ್ಟಾಗಿ 'ಖಬರ್' ಇಲ್ಲದ ಮೇಲೆ ಸಾಲ ತೆಗೆದುಕೊಂಡವರು ಇನ್ನೇನು ತಾನೆ ಮಾಡಿಯಾರು? ಕೊಟ್ಟ ಸಾಲವನ್ನು ತಿರುಗಿ ಕೊಟ್ಟರೆ ತನಗೇನು ಲಾಭವಾಯಿತು? ಎಂಬ ಮೂಲಭೂತ ತತ್ವ ಇಲ್ಲಿ. ಸಾಲ ತಿರುಗಿ ಕೊಟ್ಟವನಿಗಿಂತ ದಕ್ಕಿಸಿಕೊಂಡವನೇ ಜಾಣ ಎನ್ನುವ ಮಾತು ಬಹುತೇಕ ಸಂದರ್ಭಗಳಲ್ಲಿ ಸಿದ್ಧವಾಗಿಬಿಟ್ಟಿದೆ. ಏಕೆಂದರೆ ಸರಕಾರ ಆಗಿಂದಾಗ್ಗೆ ಬಡ್ಡಿ ಮನ್ನಾ, ಸುಸ್ತಿ ಬಡ್ಡಿ ಮನ್ನಾ ಚಕ್ರಬಡ್ಡಿ ಮನ್ನಾ ಮಾಡುತ್ತ ಹೋಗುತ್ತದೆ. ಸಾಲ ತೆಗೆದುಕೊಂಡವರು 'ಬಡ್ಡಿ ಮಕ್ಕಳು' ಆಗದಿರಲಿ ಎಂಬುದೇ ಇದರ ಹಿಂದಿರುವ ಮೂಲ ಉದ್ದೇಶ. ಅಲ್ಲದೆ ಕೆಲವು ವೇಳೆ ಬಡ್ಡಿಯೊಂದನ್ನೇ ಅಲ್ಲ, ಅಸಲನ್ನೂ ಮನ್ನಾ ಮಾಡಿಬಿಡಲಾಗುತ್ತದೆ. ಆಗ



ಸಾಲವನ್ನೋ ಬಡ್ಡಿಯನ್ನೋ ಮರುಪಾವತಿ ಮಾಡಿದವನು ಮಹಾಮೂರ್ಖ ಎನಿಸಿಕೊಳ್ಳು ತ್ತಾನೆ. ಹೀಗೆ ಸಾಲವನ್ನು ತಿರುಗಿ ಕೊಟ್ಟವನು ಕೋಡಂಗಿಯಾಗಿ ಸಾಲಗಾರರೆಲ್ಲ ವೀರಭದ್ರ ರಾಗುತ್ತಾರೆ.

ಇನ್ನು ನಮ್ಮ ಸರಕಾರವೋ ಬಡವರ ಸರಕಾರ. ಈ ದೇಶದ ಬಡ ಪ್ರಜೆಗಳೇ ರಾಜಾಧಿರಾಜರು, ಪ್ರಜಾಸಾರ್ವ ಭೌಮರು. ಮಂತ್ರಿ ಮಹೋದಯರು, ಅಧಿಕಾರಿಗಳು, ಸಿಬ್ಬಂದಿ ವರ್ಗವೆಲ್ಲ ಬಡ ಪ್ರಜೆಯ ನಿಷ್ಠಾ ವಂತ ಸೇವಕರು! ಈ ದೇಶದ ಎಲ್ಲ ಕಾರು ಭಾರು ನಡೆಯುವುದೇ ಬಡ ಬೋರೇಗೌಡನ ಹೆಸರಿನಲ್ಲಿ!

ಚುನಾವಣೆ ಬಂದರಂತೂ ಮುಗಿದೇ ಹೋಯಿತು. ರಾಜಕೀಯ ಮಾಡುವ ಮಂದಿ ಗೆಲ್ಲ ಬಡವರೇ ದೇವರಾಗಿ ಬಿಡುತ್ತಾರೆ. ದೇಶ ಸೇವಕರು ತಮ್ಮ ಭೀಮಕಾಯದ ದೇಹವನ್ನು ಹಿಡಿಯಾಗಿಸಿ ಬಡವರ ಅರಮನೆಯತ್ತ ಪಾದ ಬೆಳೆಸುತ್ತಾರೆ. ಎಲ್ಲಿಲ್ಲದ ನಗು, ಅನುಕಂಪ, ಸಹಾನುಭೂತಿಯ ಪೂರವನ್ನೇ ಹರಿಸಿ ಓಟ ಗಾಗಿ ಕೈಚಾಚುತ್ತಾರೆ.

ನಮ್ಮ ದೇಶದಲ್ಲಿ ಅಸಲಿ ಮಾಲುಗಳಿಗಿಂತ ನಕಲಿ ಮಾಲುಗಳೇ ಜಾಸ್ತಿ, ನಕಲಿ ಜನರಂತೆ. ನಮ್ಮಲ್ಲಿ ನಕಲಿ ಡಾಕ್ಟರರೂ, ನಕಲಿ ಔಷಧಿ ಗಳೂ, ನಕಲಿ ಡಿಗ್ರಿಗಳೂ ನಕಲಿ ರೇಶನ್ ಕಾರ್ಡುಗಳೂ ಇರುವಹಾಗೆ ನಕಲಿ ಬಡವರೂ ಇದ್ದಾರೆ. ತಿಂಗಳೊಂದಕ್ಕೆ ನಾಲ್ಕಾರು ಸಾವಿರ ಆದಾಯ ತರುವ ಘಟಾನುಘಟಿಗಳೂ ಹಸಿರು ಕಾರ್ಡಿನಲ್ಲಿ ಆಹಾರ ಪದಾರ್ಥಗಳನ್ನು ಲಪಟಾಯಿಸುತ್ತಾರೆ. 'ಬಡವ' ಅನ್ನುವ ಒಂದು ಸರ್ಟಿಫಿಕೇಟ್ ತೋರಿಸಿದರೆ ಸಾಕೇ ಸಾಕು ಇದೂ ಅಲ್ಲದೆ ನಮ್ಮನ್ನು ಆಳುವ ಜನರಿಗೂ ಬಡವ ಬೇಕು, ಬಡತನ ಬೇಕು. ಒಂದುವೇಳೆ ಬಡವರೇ ಇಲ್ಲದಿದ್ದರೆ ಅವರು ಯಾರ ಹೆಸರಿ ನಿಂದ ರಾಜ್ಯಭಾರ ಮಾಡಬೇಕಾಗುತ್ತಿತ್ತು?

ಹೀಗೆ, ನಮ್ಮ ದೇಶದಲ್ಲಿ ಬಡವ ಅನ್ನಿಸಿ ಕೊಂಡವ ಬೆವರಿಳಿಸಿ ದುಡಿಯಬೇಕು ಎಂದಿಲ್ಲ. ಹುಟ್ಟಿನಿಂದ ಚಟ್ಟದವರೆಗೂ ಅವನು 'ಕುಡಿದ ನೀರು ಅಲ್ಲಾಡದ ಹಾಗೆ' ಸರಕಾರ ಅವನನ್ನು ಸಾಕಿ ಸಲಹುತ್ತದೆ. ಇಂಥ ಸಂತೃಪ್ತ ಬಾಳು ಶ್ರೀಮಂತರಿಗೆ ಉಂಟೇ? ನೂರಾರು ಕಿರಿಕಿರಿ. ಟ್ಯಾಕ್ಸಿನವರ ಕಾಟ, ನೌಕರರ ಕಾಟ, ವಿದ್ಯುಚ್ಛಕ್ತಿ ಖೋತಾ ಎಲ್ಲ ಕೂಡಿ ಬೀಪಿ ಏರಿ ಆಯುಷ್ಯಪೂರ್ತಿ ನರಳು ವುದೇ ಆಗಿಬಿಡುತ್ತದೆ.

ಈಗ ನೀವೆ ಹೇಳಿ ಬಡವರಾಗಿರುವುದು ಒಳ್ಳೆ ಯದೋ ಅಥವಾ ಶ್ರೀಮಂತರಾಗಿರು ವುದೋ? ●

ಇದೂ ಹೇಗೆ ಜೀವ ಇದು ಜೀವನ

ನನ್ನ ಮಿತ್ರನೊಡನೆ ಹೋಗುತ್ತಿರುವಾಗ ರಸ್ತೆ ಬದಿಯ ದೊಡ್ಡ ಮರವೊಂದರ ಅಡಿ ಕುಳಿತು ಹಸ್ತ ನೋಡಿ ಭವಿಷ್ಯ ಹೇಳುತ್ತಾ ಜನರನ್ನು ಆಕರ್ಷಿಸುತ್ತಿದ್ದ ಓರ್ವ ವ್ಯಕ್ತಿ ಕಂಡ.

"ನಿಮ್ಮ ಭವಿಷ್ಯವನ್ನು ಈಗಲೇ ಹೇಳಿ ನಿಮ್ಮ ಜೀವನವನ್ನು ಹಸಿರಾಗಿಡುವುದೇ ನನ್ನ ಜೀವನದ ಉಸಿರು". ಎಂಬ ಬರಹವಿದ್ದ ಬಟ್ಟೆಯ ಬೋರ್ಡೊಂದನ್ನು ಮರಕ್ಕೆ ತಗುಲಿ ಹಾಕಲಾಗಿತ್ತು.

ಎಲ್ಲಿಗೆ ಹೋದಾಗಲೂ ಏನಾದರೂ ಕೀಟಲೆ ತರಲೆ ಮಾಡುವುದು ನನ್ನ ಮಿತ್ರನ ಸ್ವಭಾವ. "ಇವನ ಬಂಡವಾಳವನ್ನು ಬಯಲಿಗೆ ಹಾಕುತ್ತೇನೆ ನೋಡ್ತಾ ಇರು" ಎಂದು ನನಗೆ ಮಾತ್ರ ಕೇಳಿಸುವಂತೆ ಹೇಳಿ ಆ ಜ್ಯೋತಿಷಿಯ ಎದುರು ಆತ ಕುಳಿತೇ ಬಿಟ್ಟ.

ನಮಗಿಂತ ಮೊದಲು ಬಂದಿದ್ದ [illegible]ಬ್ಬರಿಗೆ ಭವಿಷ್ಯ ಹೇಳಿ [illegible] ನಮ್ಮತ್ತ ತಿರುಗಿ "ಪ್ರಶ್ನೆ ಜಾತಕ ಏನಾದರೂ ಕೇಳಿಸುತ್ತೀರಾ" ಎಂದು ವಿಚಾರಿಸಿದ ಆ ಜ್ಯೋತಿಷಿ.

"ನಾವು ಭವಿಷ್ಯ ಕೇಳಿಸುತ್ತೇವೆಯೋ ಇಲ್ಲವೋ ಎಂಬುದೇ ನಿಮಗೇ ತಿಳಿಯದ ಮೇಲೆ ನಮ್ಮ ಭವಿಷ್ಯವನ್ನು ಇನ್ನೇನು ತಾನೇ ಹೇಳ್ತೀರಾ?" ನನ್ನ ಮಿತ್ರನ ವ್ಯಂಗ್ಯ ಪ್ರಶ್ನೆ ತಮ್ಮ ಸರದಿಗಾಗಿ ಕಾದಿದ್ದ ನಾಲ್ಕಾರು ಗಿರಾಕಿಗಳು ನಮ್ಮತ್ತ ತೀಕ್ಷ್ಣವಾಗಿ ನೋಡುವಂತೆ ಮಾಡಿತು.

ಈ ಮಾತಿಗೆ ಬೇಸರ ತೋರಿಸದ ಆ ಜ್ಯೋತಿಷಿ "ಒಳ್ಳೆ ಮಾತು ಹೇಳಿದ್ರಿ! ಹಾಗೆ ಜನರನ್ನು ಕೇಳೋದು ನನ್ನ ಕೆಲಸ. ನನ್ನ ಬಗ್ಗೆ ನಿಮಗೆ ಏನೂ ಸರಿಯಾಗಿ ತಿಳಿದಿಲ್ಲ ಅಂತಾಯ್ತು. ನನ್ನ ಅಜ್ಜ ಹಿಮಾಲಯದಾಗ ಹನ್ನೆರಡು ವರ್ಷ ಒಬ್ಬ ಬೈರಾಗಿಯ ಸೇವೆ ಮಾಡಿ ಈ ವಿದ್ಯೆಯನ್ನು ಕಲಿತನಂತೆ. ಅದು ನಮಗೆ ರಕ್ತಗತವಾಗಿ ಬಂದುಬಿಟ್ಟಿದೆ! ಮುಂದಿನ ನಿಮಿಷದಿಂದ ಹಿಡಿದು ನೂರೊಂದು ವರ್ಷದೊರೆಗಿನ ಭವಿಷ್ಯವನ್ನು ಕರಾರುವಾಕ್ಕಾಗಿ ಹೇಳಬಲ್ಲೆ!! ಬೇಕಿದ್ರೆ ಪರೀಕ್ಷೆ ಮಾಡಿ ನೋಡ್ರಿ ಸ್ವಾಮಿ" ಎಂದು ಹೇಳಿ ತನ್ನ ಬಗ್ಗೆ ಅತೀ ಎನ್ನುವಷ್ಟು ಹೊಗಳಿಕೊಂಡ.

"ನೂರೊಂದು ವರ್ಷ ನಾವು ಬದುಕಬೇಕಲ್ಲ ಪರೀಕ್ಷೆ ಮಾಡಲು. ಅದೆಲ್ಲಾ ಬದಿಗಿರಲಿ. ಮುಂದಿನ ಎರಡೇ ಎರಡು ನಿಮಿಷದಲ್ಲಿ ನನ್ನ ಜೀವನದಲ್ಲಿ ಏನು ನಡೆಯುತ್ತದೆ ಹೇಳಿ ನೋಡೋಣ, ನೀವು ಹೇಳಿದ್ದು ನಿಜವಾದ್ರೆ ಈ ಹತ್ತು ರೂಪಾಯಿ ನಿಮಗೆ ಒಂದು ವೇಳೆ ಸುಳ್ಳಾದ್ರೆ?" ಎನ್ನುತ್ತಾ ಹತ್ತು ರೂಪಾಯಿ ನೋಟೊಂದನ್ನು ತೆಗೆದು ಆತನ ಮುಂದೇ ಇಟ್ಟೇ ಬಿಟ್ಟ ನನ್ನ ಮಿತ್ರ.

"ನಾನು ಹೇಳಿದ ಭವಿಷ್ಯ ಸುಳ್ಳಾಗುತ್ತದೆಯೇ? ನೋಡ್ತಾಯಿರಿ! ಹೇಳಲಿ ತಾನೆ ಎಂದು ಜ್ಯೋತಿಷಿ ಪ್ರಶ್ನಿಸಿದಾಗ ಅಲ್ಲಿದ್ದವರಲ್ಲೂ ಕುತೂಹಲ ಮೂಡಿತು.

"ಹೇಳಿ ನೋಡೋಣ." ನನ್ನ ಮಿತ್ರ ಉತ್ಸಾಹದಿಂದ ಹೇಳಿದ.

"ಮುಂದಿನ ಎರಡು ನಿಮಿಷಗಳೊಳಗೆ ನೀವು ಪುಕ್ಕಟೆಯಾಗಿ ನಿಮ್ಮ ಈ ಹತ್ತು ರೂಪಾಯಿಗಳನ್ನು ಕಳೆದುಕೊಳ್ಳುತ್ತೀರಿ ಬೇಕಿದ್ರೆ ಪರೀಕ್ಷಿಸಿ" ಎನ್ನುತ್ತಾ ತನ್ನ ಮುಂದೆ ನನ್ನ ಮಿತ್ರ ಇಟ್ಟಿದ್ದ ನೋಟನ್ನು ಸರಕ್ಕನೆ ತೆಗೆದುಕೊಂಡು ಗೆಲುವಿನ ನಗು ನಕ್ಕುಬಿಟ್ಟ, ಆ ಜ್ಯೋತಿಷಿ.

ಕೆ. ಶ್ರೀಧರ ಬೆಳ್ಳಣ್ಣಿ.

ಬಲಗೈಯಲಿ ತುಂಬಿದ ತರಕಾರಿ ಚೀಲ, ಎಡಗೈಯಲ್ಲಿ ಒಂದು ವರ್ಷದ ಮಗುವಿನೊಂದಿಗೆ ಸುಮಾರು ಇಪ್ಪತ್ತೈದು ವರ್ಷದ ಸುಂದರ ತರುಣಿಯೊಬ್ಬಳು ತುಂಬಿದ ಬಸ್ಸಿನಲ್ಲಿ ನಾನು ಕುಳಿತಿರುವ ಸೀಟಿಗೆ ಒರಗಿಕೊಂಡು ನಿಂತಿದ್ದಳು. ಮಂಗಳವಾರ ಸಂತೆಯ ದಿನವಾದ್ದರಿಂದ, ತರಕಾರಿ ತುಂಬಿದ ಚೀಲ ಹಿಡಿದ ಹೆಂಗಳೆಯರ ಸಂಖ್ಯೆಯೇ ಬಸ್ಸಿನ ತುಂಬ ಜಾಸ್ತಿ. ಮುಂದಿನ ಬಾಗಿಲಿನ ಹತ್ತಿರ ಸುಮಾರು ಹದಿನೈದಿಪ್ಪತ್ತು ಜನ ಹೆಂಗಸರು ಹುಡುಗಿಯರು ನಿಂತಿದ್ದರು.

ಬಸ್ ತುಂಬಾ ಗದ್ದಲವಿತ್ತು. ಬಸ್ಸು ಹೋಗುತ್ತಿರುವಾಗ ನನ್ನ ಸೀಟಿಗೆರಗಿ ನಿಂತಿದ್ದ ತರುಣಿಯ ಮೈಕೈ ನನಗೆ ತಾಗಿ ಕಸಿವಿಸಿಯಾಗುತಿತ್ತು. ಜ್ಯೂಬಿಲಿ ಸರ್ಕಲ್ ಹತ್ತಿರ ಟಿಕೇಟ್ ಕೊಡಲು ಬಸ್ ನಿಲ್ಲಿಸಿದಾಗ "ತುಂಬಾ ರಶ್. ನಿಂತ್ಕೊಳ್ಳಕ್ಕೂ ಆಗಲ್ಲ. ಸ್ವಲ್ಪ ಮಗುವನ್ನೆತ್ತಿಕೊಳ್ತೀರಾ" ಎಂದು ಆಕೆ ನನ್ನನ್ನು ಕೇಳಿದಳು. ಒಂದು ಕ್ಷಣ ಅವಳಿಗೆ ನನ್ನ ಸ್ಥಳವನ್ನು ಬಿಟ್ಟುಕೊಡುವ ಮನಸ್ಸಾದರೂ ಅವಳ ಸಾನಿಧ್ಯ ತಪ್ಪಿಹೋಗಬಹುದೆಂದು ಮಗುವನ್ನೆತ್ತಿ ನನ್ನ ತೊಡೆಯ ಮೇಲೆ ಕೂಡ್ರಿಸಿಕೊಂಡೆ. ಅವಳಿಗೆ ಕೇಳುವಂತೆ ಮಗುವಿನೊಂದಿಗೆ ಮಾತಾಡುತ್ತಾ ಅದು ಇದು ತಮಾಷೆ ಮಾಡುತ್ತಿದ್ದೆ. ಆಗೊಮ್ಮೆ ಈಗೊಮ್ಮೆ ಅವಳು ನೋಡಿ ನಗುತ್ತಿದ್ದಳು. ಇಷ್ಟರಲ್ಲಿ ಹೆಡ್ ಪೋಸ್ಟ್ ಆಫೀಸ್ ಬಂತು. ಇಳಿಯಲು ತಯಾರಾದ ಆ ತರುಣಿ ನನ್ನಿಂದ ಮಗುವನ್ನು ಎತ್ತಿಕೊಳ್ಳುವಾಗ, "ತುಂಬಾ ಉಪಕಾರವಾಯಿತು ಭಾವ ನಮ್ಮನೆಗೊಮ್ಮೆ ಬನ್ನಿ" ಎಂದು ತನ್ನ ವಿಳಾಸ ಹೇಳಿ ಹೊರಟು ಹೋದಳು. ನಾನು ಒಂದು ಕ್ಷಣ ತಬ್ಬಿಬ್ಬಾದೆ. ನನ್ನೊಂದಿಗಿದ್ದ ಗೆಳೆಯರು ಆಗಲೇ ನನ್ನನ್ನು ಚುಡಾಯಿಸಲು ಆರಂಭಿಸಿದ್ದರು.

ರೂಮಿಗೆ ಹೋಗಿ ಈ ವಿಷಯ ಕುರಿತು ಎಲ್ಲ ಗೆಳೆಯರೊಂದಿಗೆ ಚರ್ಚೆಯಾಯಿತು.. ಅವಳ ಮನೆಗೆ ಹೋಗುವುದೋ ಬೇಡವೋ ಎಂಬ ಯೋಚನೆಯಲ್ಲಿರುವಾಗಲೇ 'ಸುಂದರ ತರುಣಿಯೊಬ್ಬಳು ತಾನಾಗಿ ಮನೆಗೆ ಆಹ್ವಾನಿಸಿದಾಗ ತಿರಸ್ಕರಿಸುವುದೆ? ಅದೂ ನಿನ್ನಂಥ ವಿದ್ಯಾರ್ಥಿ ...ಹೋಗಲೇ ಬೇಕು. ಎನ್ನುವ ಒಮ್ಮತದ ಒತ್ತಡ ಗೆಳೆಯರ ಕಡೆಯಿಂದ. ಕೊನೆಗೊಮ್ಮೆ ಗೆಳೆಯ ಕಿಟ್ಟುವಿನೊಡನೆ ಮರುದಿನ 9-30ಕ್ಕೆ ತರುಣಿಯ ವಿಳಾಸ ಹಿಡಿದು ಮನೆಗೆ ಹೋದದ್ದಾಯಿತು.

ಮನೆ ಮುಂದೆ ಒಂದು ಸ್ಕೂಟರ್ ಇತ್ತು. ನಾವು ಅನುಮಾನದಿಂದಲೇ ಗೇಟುದಾಟಿ ಮನೆಯ ಬೆಲ್ ಬಾರಿಸಿದೆವು. ಬಾಗಿಲು ಅದೇ ತರುಣಿ ಆಶ್ಚರ್ಯಗೊಂಡಂತೆ ಕಂಡರೂ ಮುಗುಳ್ನಗೆಯಿಂದ ಸ್ವಾಗತಿಸಿ ಒಳಗೆ ಕರೆದೊಯ್ದು, "ಕುಳಿತುಕೊಳ್ಳಿ, ನಮ್ಮ ಮನೆಯವರು ಈಗ ಬರುತ್ತಾರೆ" ಎನ್ನುತ್ತಾ ಒಳಸರಿದಳು. ಈಗ ನಮಗೆ ನಿಜಕ್ಕೂ ಹೆದರಿಕೆಯಾಗಿತ್ತು. ಕುಳಿತಲ್ಲಿಯೇ ನಮ್ಮ ಚಡಪಡಿಕೆ ಹೆಚ್ಚಾಗುತಿತ್ತು. ಅಷ್ಟರಲ್ಲಿ ತರುಣನೊಬ್ಬ ಒಳಗಡೆಯಿಂದ ಬಂದು "ಹಲೋ ಜಿ.ಜಿ. ಹೇಗಿದ್ದೀರಾ? ಅಂತ ನನ್ನ ಕೈ ಕುಲುಕಿದರು.! ಅತೀವ ಆಶ್ಚರ್ಯದಿಂದ ನನಗೆ ಮಾತನಾಡುವುದೇ ಕಷ್ಟವಾಗಿತ್ತು. ಅವರು ವಿಜಯ್- ನಮ್ಮ ತಾಯಿಯ ಕಡೆಯ ಸಂಬಂಧಿಯಾಗಿದ್ದರು. ನಾನು ನನ್ನ ಊರನ್ನು ಬಿಟ್ಟು ವರ್ಷಗಳೇ ಕಳೆದಿದ್ದರಿಂದ ಅವರಿಗೆ ಮದುವೆಯಾದ ವಿಚಾರ ನನಗೆ ತಿಳಿದಿರಲಿಲ್ಲ. ನನಗೆ ಇವರ ಪರಿಚಯ ವಿರದಿದ್ದರೂ, ವಿಜಯ್ ನನ್ನನ್ನು ಗುರುತಿಸಿದ್ದರು. ಅವರ ಹೆಂಡತಿ ಕಾಫಿ ಹಿಡಿದು ಬಂದಾಗ. "ನನ್ನ ಶ್ರೀಮತಿ ಕಾಂಚನಾದೇವಿ" ಎಂದು ಪರಿಚಯಿಸಿದರು. ಎರಡೂ ಕೈ ಎತ್ತಿ "ನಮಸ್ಕಾರ" ಎಂದೆ. ಸ್ವಲ್ಪ ಹೊತ್ತು ಕೂತು ಉಭಯಕುಶಲೋಪರಿ ಮಾತನಾಡಿ ರೂಮಿಗೆ ಹಿಂದಿರುಗುವಾಗ ಏನೇನೋ ವಿಚಾರಗಳಿಂದ ಕಲಕಿದ್ದ ಮನಸ್ಸು ತಿಳಿಯಾಗಿತ್ತು. ನನ್ನ ಗೆಳೆಯರೂ ವಿಷಯ ತಿಳಿದಾಗ ನಾಚಿಕೆಪಟ್ಟುಕೊಂಡು ತಪ್ಪಿಗಾಗಿ ನೊಂದು ಕೊಂಡರು.

ಹೆಗಡೆಮನೆ ಗಣಪತಿ.

ಮುಂಬಯಿ

ಹಾಗೂ

ಸ್ತನದ ಕ್ಯಾನ್ಸರ್

● ಸಲಿಲ್ ತ್ರಿಪಾಠಿ ●

ಭಾರತದ ಎರಡನೆಯ ಮಹಾನಗರ ಮುಂಬಯಿ. ಆದರೆ ಸ್ತನದ ಕ್ಯಾನ್ಸರಿನ ವಿಷಯದಲ್ಲಿ ಮಾತ್ರ ಮೊದಲಸ್ಥಾನ ಗಳಿಸಿರುವುದು ಈ ನಗರಕ್ಕೆ ಸಲ್ಲುತ್ತಿರುವ ವಿಪರೀತ ಗೌರವ! ಮಹಿಳೆಯರಿಗೆ ಬರುವ ಕ್ಯಾನ್ಸರಿನಲ್ಲಿ, ನಮ್ಮ ದೇಶದ ಮಟ್ಟಿಗೆ ಹೇಳುವುದಾದರೆ, ಗರ್ಭಕೋಶದ ಕ್ಯಾನ್ಸರಿಗೆಯೇ ಆಗ್ರಪಟ್ಟ ಸಲ್ಲುತ್ತಿದೆ; ಆದರೆ ಮುಂಬಯಿ ಮಹಾನಗರದಲ್ಲಿ ಮಾತ್ರ ಈಗ ಮಹಿಳೆಯರನ್ನು ಕೊಲ್ಲುವ ಕ್ಯಾನ್ಸರುಗಳಲ್ಲಿ ಸ್ತನದ ಕ್ಯಾನ್ಸರ್ ಮೊದಲ ಸ್ಥಾನಕ್ಕೇರಿದೆ.

ಸಾಮಾನ್ಯವಾಗಿ ಕ್ಯಾನ್ಸರಿನಲ್ಲಿ ಬಹುಮುಖ್ಯ ಪಾತ್ರವಹಿಸುವುದು ಜನಗಳ ವರ್ತನೆ ಮತ್ತು ಜೀವನಕ್ರಮ. ಈ ಎರಡರಲ್ಲೂ ಸಾಕಷ್ಟು ಸ್ಥಿತ್ಯಂತರಗಳನ್ನುಕಂಡ ಮುಂಬಯಿ ಮಹಿಳೆಯರ ಕ್ಯಾನ್ಸರಿನಲ್ಲಿ ರಾಷ್ಟ್ರೀಯ ಪ್ರವೃತ್ತಿಯಿಂದ ಭಿನ್ನ ಮಾರ್ಗವನ್ನು ತುಳಿದು ಗರ್ಭಕೋಶದ ಕ್ಯಾನ್ಸರನ್ನು ದ್ವಿತೀಯ ಸ್ಥಾನಕ್ಕೆ ತಳ್ಳಿ ಸ್ತನದ ಕ್ಯಾನ್ಸರಿಗೆ ಆಗ್ರಪಟ್ಟ ಕಟ್ಟಿದೆ. 1964ರಲ್ಲಿ ಇಲ್ಲಿ ಇದರ ಪ್ರಮಾಣ ಲಕ್ಷವೊಂದಕ್ಕೆ 12.6 ಇದ್ದರೆ 1984ರಷ್ಟೊತ್ತಿಗೆ ಅದು 14.4ಕ್ಕೇರಿತು. ಆದರೆ ಈಗ ಈ ಪ್ರಮಾಣ ತ್ವರಿತವಾಗಿ ಇನ್ನೂ ಜಾಸ್ತಿಯಾಗಬಹುದೆಂಬ ಭಯ ಇಲ್ಲಿಯ ಡಾಕ್ಟರುಗಳಿಗಿದೆ.

ಭಾರತೀಯ ಮಹಿಳೆಯರಲ್ಲಿ ಗರ್ಭಕೋಶದ ಕ್ಯಾನ್ಸರಿನ ಆಪಾತ ಹೆಚ್ಚಿರುವುದಕ್ಕೆ ಕಾರಣ ಅಪ್ರಾಪ್ತ ವಯಸ್ಸಿನಲ್ಲಿ ಮದುವೆ ಹಾಗೂ ಆನಂತರ ಮೇಲಿಂದ ಮೇಲೆ ಗರ್ಭಧಾರಣೆಗಳೇ ಎಂಬುದು ಸುಸ್ಪಷ್ಟವಿದೆ. ಆದರೆ ನಗರವಾಸಿ ಮಹಿಳೆಯರಲ್ಲಿ ಈಗ ಮದುವೆಯನ್ನು ಸಾಕಷ್ಟು ಕಾಲ ಮುಂದೂಡುವ, ಮದುವೆಯ ನಂತರವೂ ಗರ್ಭಧಾರಣದಲ್ಲಿ ಸಾಕಷ್ಟು ಅಂತರ ಉಳಿಸಿಕೊಳ್ಳುವ, ಕೆಲವೊಮ್ಮೆ ಗರ್ಭಧಾರಣವನ್ನೇ ತಡೆಗಟ್ಟುವ ಪ್ರವೃತ್ತಿ ಬೆಳೆಯುತ್ತಿದೆ. ಇದರಿಂದಾಗಿ ಗರ್ಭಕೋಶದ ಕ್ಯಾನ್ಸರಿಗಿದ್ದ ಕಾರಣಗಳೇ ನಶಿದ್ದರೂ ಇನ್ನೊಂದು ಬಗೆಯ ಕ್ಯಾನ್ಸರಿಗೆ ಹೆಚ್ಚಿನ ಅವಕಾಶ ಪ್ರಾಪ್ತವಾದಂತಾಗಿದೆ. ಅದುವೆ ಸ್ತನದ ಕ್ಯಾನ್ಸರ್ ಎನ್ನುತ್ತಾರೆ ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ನಿರ್ದೇಶಕ ಡಾ. ಡಿ.ಜೆ. ಜೆಸ್ಸಾವಾಲಾ. "ಕ್ಯಾನ್ಸರ್ ಹೊರಗಿನಿಂದ ಬಂದು ಅಂಟುವ ರೋಗವಲ್ಲ. ಅದು ಶರೀರಾಂತರ್ಗವಾದುದಾದ್ದರಿಂದ ನೀವು ಹೇಗೆ ಯಾವ ರೀತಿ ಜೀವಿಸುತ್ತೀರೆಂಬುದನ್ನೇ ಅದು ಅವಲಂಬಿಸಿದೆ" ಎನ್ನುತ್ತಾರವರು.


ಮುಂಬಯಿಯಲ್ಲಿ ಕೆಲವು ಕೋಮುಗಳ ಸ್ತ್ರೀಯರು ಉಳಿದ ಸ್ತ್ರೀಯರಿಗಿಂತ ಹೆಚ್ಚಾಗಿ ಸ್ತನದ ಕ್ಯಾನ್ಸರಿಗೆ ಪಕ್ಕಾಗುತ್ತಾರೆ. ಪಾರ್ಸಿಗಳ (ಬೃಹನ್ನಗರದ 80 ಲಕ್ಷ ಜನಸಂಖ್ಯೆಯಲ್ಲಿ 71000 ಪಾರ್ಸಿಗಳಿದ್ದಾರೆ.) ಉದಾಹರಣೆಯನ್ನಿಲ್ಲಿ ಕೊಡಬಹುದು. ಈ ಜನಾಂಗದ ಸ್ತ್ರೀಯರಲ್ಲಿ ಸ್ತನದ ಕ್ಯಾನ್ಸರಿನ ಆಪಾತ ರಾಷ್ಟ್ರೀಯ ಸರಾಸರಿಯ ಎರಡು ಪಟ್ಟನ್ನು ಮೀರಿದೆ. ಪಾರ್ಸಿ ಸ್ತ್ರೀಯರು ತೀರ ತಡವಾಗಿ

(ವರದಿ: 'ಇಂಡಿಯಾ ಟುಡೆ')

ಮದುವೆಯಾಗುತ್ತಾರೆ. (ಇಲ್ಲವೆ ಅವಿವಾಹಿತೆಯರಾಗೇ ಉಳಿಯುವುದೂ ಇದೆ). ಕಡಿಮೆ ಮಕ್ಕಳನ್ನು ಹೆರುತ್ತಾರಾದ್ದರಿಂದ ಸ್ತನದ ಕ್ಯಾನ್ಸರಿಗೆ ಇವರು ಫಲವತ್ತಾದ ಕ್ಷೇತ್ರವಾಗಿ ಪರಿಣಮಿಸಿದ್ದಾರೆ. ಕ್ಯಾನ್ಸರ್ ಹೆಚ್ಚಾಗಿ ವಯಸ್ಸಾದ ಮಹಿಳೆಯರಿಗೇ ಬರುತ್ತದೆ. ಪಾರ್ಸಿಯರಲ್ಲಿ ಮಹಿಳೆಯರು ಹೆಚ್ಚು ಕಾಲ ಬದುಕುವುದರಿಂದ ಇಲ್ಲಿ ಈ ಕ್ಯಾನ್ಸರ್ ಪ್ರಮಾಣವನ್ನು ನಾವು ಹೆಚ್ಚಾಗಿ ನೋಡುತ್ತೇವೆ. "ಮುಂಬಯಿ ತೀವ್ರವಾಗಿ ಪಾಶ್ಚಾತ್ಯೀಕರಣಗೊಳ್ಳುತ್ತಿದೆ. ಅದರ ಬೆಲೆಯನ್ನು ನಾವು ತೆರಲೇಬೇಕು" ಎನ್ನುತ್ತಾರೆ. ಡಾ. ಜೆಸ್ಸಾವಾಲಾ.

ನಂಬಲು ಕಷ್ಟವೆನಿಸಿದರೂ ಡಾ. ಜೆಸ್ಸಾವಾಲಾ ಹೇಳುವುದು ಶತಃಸತ್ಯ. ಪಾಶ್ಚಾತ್ಯ ಮಹಿಳೆಯರು ಹೆಚ್ಚೆಚ್ಚಾಗಿ ಸ್ತನದ ಕ್ಯಾನ್ಸರಿಗೆ ಬಲಿಯಾಗುತ್ತಾರೆ; ಆದರೆ ಪೌರಸ್ತ್ಯ ರಾಷ್ಟ್ರಗಳ ಮಹಿಳೆಯಲ್ಲಿ ಇದರ ಆಪಾತ ಕಡಿಮೆ ಪ್ರಾಯಶಃ ಮಕ್ಕಳಿಗೆ ಸ್ತನಪಾನ ಮಾಡಿಸುವ ಪ್ರವೃತ್ತಿ ಇವರಲ್ಲಿನ್ನೂ ಉಳಿದು ಬಂದಿರುವುದೂ ಇದಕ್ಕೆ ಕಾರಣವಾಗಿರಬೇಕು.) ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್‌ನವರು ದಿಬ್ರುಗಡ, ಚಂಡಿಗಡ ಮತ್ತು ತಿರುವಾಂಕೂರಿನಲ್ಲಿ ನಡೆಸಿದ ಅಧ್ಯಯನಗಳಿಂದ ಕಂಡು ಬಂದ ಅಂಶವೆಂದರೆ ಅಶಿಕ್ಷಿತ ಮತ್ತು ಬಡ ಹೆಂಗಸರಲ್ಲಿ ಗರ್ಭಕೋಶದ ಕ್ಯಾನ್ಸರ್ ಹೆಚ್ಚಾಗಿ ಕಂಡುಬಂತು. ಹಾಗೂ ಶ್ರೀಮಂತ ಮತ್ತು ಸುಶಿಕ್ಷಿತ ಹೆಂಗಸರಲ್ಲಿ ಸ್ತನದ ಕ್ಯಾನ್ಸರ್ ಪ್ರಮಾಣ ಹೆಚ್ಚಿಗೆ ತೋರಿ ಬಂತು ಎಂಬುದು.

ಸ್ತನದ ಕ್ಯಾನ್ಸರಿನ ಸರಿಯಾದ ಕಾರಣವಿನ್ನೂ ನಿಗೂಢವಾದರೂ ಪುರಾವೆಗಳಿಂದ ಗೊತ್ತಾದ



ಅಂಶವೆಂದರೆ, ಓಸ್ಟ್ರೋಜೆನ್ ಎಂಬ ಹಾರ್ಮೋನು ಹುಟ್ಟಿಕೊಳ್ಳುವುದಕ್ಕೆ ಕಾರಣ ವಾಗುವ ಕೊಬ್ಬಿನ ಪದಾರ್ಥಗಳ ಸೇವನೆ, ಎಸಿಟೇಟುಗಳು ಹಾಗೂ ಕೊಲೆಸ್ಟರಾಲ್ ಇದರ ಮೂಲದಲ್ಲಿವೆ. ಓಸ್ಟ್ರೋಜೆನ್ ಹಾರ್ಮೋನಿನಿಂದಾಗಿ ಮೊಲೆಗಳಲ್ಲಿ ಗಡ್ಡೆಗಳು ಹುಟ್ಟಿಕೊಳ್ಳುತ್ತವೆ. ಮೈನರೆತಂದಿನಿಂದ ಮುಟ್ಟುನಿಲ್ಲುವವರೆಗಿನ ಅವಧಿಯಲ್ಲಿ ಗರ್ಭ ಧಾರಣಕ್ಕೆ ಅವಳು ಫಲವತ್ತಾಗಿರುವ ಕಾಲ ದಲ್ಲಿ ಸ್ತ್ರೀಯ ದೇಹದಲ್ಲಿ ಸಾಕಷ್ಟು ಬಗೆಯ ಹಾರ್ಮೋನುಗಳಿಗೆ ಸಂಬಂಧಿಸಿದಂತೆ ಸ್ಥಿತ್ಯಂತ ರಗಳಾಗುತ್ತಲೇ ಇರುತ್ತವೆ.

ಆದ್ದರಿಂದ, ಸಂತಾನೋತ್ಪತ್ತಿ ಕ್ರಿಯೆ ಬೇಗ. ಪ್ರಾರಂಭವಾಗುವುದರಿಂದ ಸ್ತನಗಳು ರೋಗ ಗ್ರಸ್ತ (malignant)ವಾಗುವ ಸಂಭವ ಕಡಿಮೆಯಾಗುತ್ತದೆ ಎಂದು ಡಾಕ್ಟರುಗಳು ನಂಬುತ್ತಾರೆ. ಒಂದು ವೇಳೆ ಹದಿನೆಂಟರ ಹರಯದಲ್ಲೇ ಮಗುವಿಗೆ ಮೊಲೆ ಯೂಡಿಸಿದರೆ ಆ ತಾಯಿಗೆ ಸ್ತನದ ಕ್ಯಾನ್ಸರ್ ಬರುವ ಸಾಧ್ಯತೆ ಶೇಕಡಾ 70ರಷ್ಟು ಕಡಿಮೆ ಎಂದೂ ಕೆಲವು ಡಾಕ್ಟರುಗಳು ಭಾವಿಸಿದ್ದಾರೆ. "ಮೊದಲ ಮಗುವಿನ ಜನನ ಕಾಲಕ್ಕೆ ತಾಯಿಯ ವಯಸ್ಸೇನೆಂಬುದು ಬಹು ಮಹತ್ವದ ಸಂಗತಿ" ಎನ್ನುತ್ತಾರೆ. ಡಾ. ಜೆಸ್ಸಾವಾಲಾ.

ಸ್ತನದ ಕ್ಯಾನ್ಸರಿನಿಂದ ಮುಕ್ತವಾಗುವುದಕ್ಕಿ ರುವ ಮುಖ್ಯ ಉಪಾಯವೆಂದರೆ ರೋಗವನ್ನು ಶೀಘ್ರ ಪತ್ತೆಹಚ್ಚುವುದು. ಟಾಟಾ ಮೆಮೋರಿ ಯಲ್ ಸೆಂಟರಿನಲ್ಲಿ ದಾಖಲಾದ ಈ ರೋಗದ ಮೊದಲ ಹಂತ (ಮೊಲೆಯಲ್ಲಿ ಎರಡು ಸೆಂಟಿ ಮೀಟರಿಗಿಂತ ಚಿಕ್ಕದಾದ ಗಂಟು ಕಾಣಿಸಿಕೊಳ್ಳುವಿಕೆ)ದಲ್ಲಿರುವ ಶೇಕಡಾ 75 ರಷ್ಟು ಮಹಿಳೆಯರು ಮುಂದೆ ಹದಿನೈದು ವರ್ಷ ಬದುಕಿದರು. "ಹೆಣ್ಣಿಗೆ ತರುಣ ವಯಸ್ಸಿ ನಲ್ಲೇ ಕ್ಯಾನ್ಸರ್ ಆದರೆ ಅದು ಭರದಿಂದ ಬೆಳೆದು ಅಪಾಯ ಕಾರಿಯೆನಿಸಬಹುದಾಗಿದೆ" ಎನ್ನುತ್ತಾರೆ ಡಾ॥ ಜೆಸ್ಸಾವಾಲಾ.

ಮಹಿಳೆಯರು ತಮ್ಮ ಸ್ತನಗಳ ಕ್ಯಾನ್ಸರ್ ಪರೀಕ್ಷೆಯಿಂದಲೇ ಸ್ತನದ ಪತ್ತೆಹಚ್ಚಿಕೊಳ್ಳ ಬಹುದಾಗಿದೆ. ಇದಕ್ಕೆ ಸಾಕಷ್ಟು ಪ್ರಚಾರ ನೀಡಿದಾಗಲೂ ಕ್ಯಾನ್ಸರ್ ಮೊದಲ ಹಂತ ದಲ್ಲಿರುವಾಗಲೇ ಗುರುತಿಸಿ ಶುಶ್ರೂಷೆಗೆಂದು ಬರುವ ಸ್ತ್ರೀಯರ ಸಂಖ್ಯೆ ಸಾಕಷ್ಟಿಲ್ಲವೆನ್ನು ತ್ತಾರೆ ಐಸಿಎಂಆರ್‌ನ ನ್ಯಾಶನಲ್ ಕ್ಯಾನ್ಸರ್ ರಿಜಿಸ್ಟ್ರಿಯ ಗೌರವ ಸಲಹೆಗಾರ ಡಾ. ಎಲ್.ಡಿ. ಸಂಘವಿಯವರು. "ಈ ಬಗ್ಗೆ ಜಾಗ್ರತಿಯಿದ್ದರೆ ಮೊದಲ ಹಂತದಲ್ಲಿರುವ ಅನೇಕರನ್ನು ಪತ್ತೆಹಚ್ಚಬಹುದಿತ್ತು" ಎಂದವರು ನಂಬುತ್ತಾರೆ. ಟಾಟಾ ಮೆಮೋ ರಿಯಲ್ ಸೆಂಟರಿನ ಈ ಅಂಕಿ ಅಂಶಗಳನ್ನು ನೋಡಿ: ಮೊದಲ ಹಂತದ ರೋಗಿಗಳು ಶೇಕಡಾ 9.6, ಎರಡನೇ ಹಂತದವರು (ಕಂಕುಳವರೆಗೂ ಕ್ಯಾನ್ಸರ್ ವಿಸ್ತಾರಗೊಂಡ ಸ್ಥಿತಿ) ಶೇಕಡಾ 44, ಮತ್ತು ಅಂತಿಮ ಹಂತ ವನ್ನು ತಲುಪಿದವರು ಶೇಕಡಾ 29.6. ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಅಂಕಿ ಅಂಶಗಳೂ ಇದೇ ರೀತಿಯಾಗಿವೆ: ಮೊದಲ ಹಂತದ ರೋಗಿಗಳು ಶೇಕಡಾ 14, ಎರಡನೆ ಹಾಗೂ ಮೂರನೆ ಹಂತದವರು ಅನುಕ್ರಮ ವಾಗಿ ಶೇಕಡಾ 60 ಹಾಗೂ 26.

ಡಾ. ಸಂಘವಿಯವರು ಸ್ತ್ರೀಯರಲ್ಲಿ ಈ ಕುರಿತು ಪ್ರಜ್ಞೆ ಬೆಳೆಯುವ ಸಾಧ್ಯತೆಯನ್ನೇ ತಳ್ಳಿ ಹಾಕಿದರೆ ಡಾ. ಪ್ರಫುಲ್ಲ ದೇಸಾಯಿ, "ಹೆಂಗಸರಿಗೆ ತಮ್ಮ ಸ್ತನಗಳಲ್ಲಾಗುವ ಸ್ಥಿತ್ಯಂತ ರಗಳ ಬಗ್ಗೆ ಡಾಕ್ಟರಿಗಿಂತ ಹೆಚ್ಚು ಗೊತ್ತು." ಎಂದು ಅಭಿಪ್ರಾಯಪಡುತ್ತ "ಅವರು ಈ ಕುರಿತು ಬೇಗನೆ ತಿಳಿದುಕೊಂಡು ಡಾಕ್ಟರು ಗಳಿಗೆ ವರದಿ ಮಾಡಬಹುದು" ಎಂಬ ಆಶೆ ತಳೆಯುತ್ತಾರೆ.

"ಸ್ತನದ ಸ್ವ-ಪರೀಕ್ಷೆಯಲ್ಲಿ ಕಂಡುಬರುವ ಗಂಟುಗಳ ಪೈಕಿ ಶೇಕಡಾ 90ರಷ್ಟು ಪ್ರಕರಣ ಗಳು ಭಯಾನಕವಲ್ಲ" ಎಂಬ ಸಮಾಧಾನಕರ ಸಂಗತಿಯನ್ನು ಡಾ॥ ದೇಸಾಯಿ ಹೇಳುತ್ತಾರೆ. ಸ್ತನದ ಕ್ಯಾನ್ಸರ್ ವಂಶಪಾರಂಪರಿಕವಾಗಿ ಬರು ವಂಥದಲ್ಲ; ಆದರೆ ಒಂದೊಂದು ಕುಟುಂಬದಲ್ಲಿದು ಕಾಣಬಹುದಾಗಿದೆ. ಸೋದರ ಸಂಬಂಧಿಗಳಲ್ಲಿ ಮದುವೆಯಾದರೆ ಸ್ತನ ಕ್ಯಾನ್ಸರಿನ ಭಯ ಹೆಚ್ಚು. ಅಂಡಾಶಯ ಗಳನ್ನು ತೆಗೆದುಹಾಕುವುದರಿಂದ ಸ್ತನದ

ಕ್ಯಾನ್ಸರಿನ ಸಾಧ್ಯತೆಯನ್ನು ಕಡಿಮೆ ಮಾಡಬಹುದೆಂದೂ ಗೊತ್ತಾಗಿದೆ. ಗರ್ಭನಿರೋಧಕ (ಮಾತ್ರೆಗಳೂ ಸೇರಿದಂತೆ)ಗಳ ಸೇವನೆಯಿಂದ ಸ್ತನದ ಕ್ಯಾನ್ಸರ್ ಉತ್ತೇಜಿತವಾಗುವುದೂ ಇಲ್ಲ.

ಪಾರ್ಸಿ ಜನಾಂಗ ಪತ್ರಿಕೆ 'ಪಾರ್ಸಿಯಾನಾ'ದ ಸಂಪಾದಕ ಜಹಾಂಗೀರ್ ಪಟೇಲರು, "ನಮ್ಮ ಜನಾಂಗದಲ್ಲಿ ಈ ಕುರಿತು ಇನ್ನೂ ಪ್ರಜ್ಞೆ ಬೆಳೆದಿಲ್ಲ. ಶಸ್ತ್ರ ವೈದ್ಯರು ಬರಿ ದೇಹವನ್ನು ಕತ್ತರಿಸುತ್ತಾರೆ. ಮತ್ತು ಅಲೋಪಥಿ ವೈದ್ಯರು ನಿಮ್ಮ ದೇಹವನ್ನು ಔಷಧಿಗಳಿಂದ ತುಂಬುತ್ತಾರೆ. ಎಂದು ನಮ್ಮ ಬಹುತೇಕ ಜನ ಇಂದಿಗೂ ನಂಬುತ್ತಾರೆ. ತಮ್ಮಲ್ಲಿ ಕ್ಯಾನ್ಸರ್ ಪ್ರಮಾಣ ಹೆಚ್ಚುತ್ತಿರುವುದು ಅವರಿಗೆ ಗೊತ್ತಿದೆಯಾದರೂ ಅದರಿಂದ ಯೋಗ್ಯ ಪಾಠ ಕಲಿತು ತಿಳುವಳಿಕೆ ಮೂಡಿಸಿಕೊಳ್ಳುವ ಪ್ರಯತ್ನ ಮಾತ್ರ ಆಗುತ್ತಿಲ್ಲ" ಎಂದು ವ್ಯಥೆ ಪಡುತ್ತಾರೆ.

ಸುಧಾರಿಸಿದ ಉಪಕರಣಗಳು ಕ್ಯಾನ್ಸರ್ ಪತ್ತೆಯನ್ನು ಸುಲಭವಾಗಿಸಿವೆ. ಕೈಗೆ ಗೊತ್ತಾಗದ್ದನ್ನು ಈಗ ಝೆರೊಮೆಮೊಗ್ರಾಮ್ಸ್ ಎತ್ತಿತೋರಿಸುತ್ತದೆ. ಮ್ಯಾಸ್ಟೆಕ್ಟೊಮಿ★ ಈಗ ಹಳೆಯ ಪದ್ಧತಿ ಎನಿಸಬಹುದು. "1988ರಲ್ಲಿ ನಾವು ಮ್ಯಾಸ್ಟೆಕ್ಟೊಮಿಯಿಂದ ದೂರಸರಿಯಬೇಕು. ಅದು ಮಾನಸಿಕವಾಗಿ ತುಂಬ ತೊಳಲಾಟವುಂಟು ಮಾಡುವಂಥದು," ಎನ್ನುತ್ತಾರೆ ಡಾ॥ ದೇಸಾಯಿ. ಮ್ಯಾಸ್ಟೆಕ್ಟೊಮಿಯ ಸಹಾಯವಿಲ್ಲದೆ ಇತ್ತೀಚೆಗೆ ಶಸ್ತ್ರಚಿಕಿತ್ಸೆ ನಡೆಸಿ ಗಂಟುಗಳನ್ನು ತೆಗೆದು ಹಾಕಿದ 200 ಪ್ರಕರಣಗಳ ಪೈಕಿ ಶೇಕಡಾ ಎಂಟರಷ್ಟು ಮಾತ್ರ ಮತ್ತೆ ಗಂಟು ಬೆಳೆದ ಉದಾಹರಣೆಗಳಿವೆ. ಸುಧಾರಣೆಯಾದಂತೆಲ್ಲ ಬರುವ ದಿನಗಳಲ್ಲಿ ಈ ಕಾರಣದಿಂದ ಸಾಯುವ ಜೀವಗಳನ್ನು ಅದರಿಂದ ಪಾರುಮಾಡಬಹುದು. ★

★ ಮ್ಯಾಸ್ಟೆಕ್ಟೊಮಿಯೆಂದರೆ ಸ್ತನಗಳಲ್ಲಿಯ ದೂಷಿತ ಭಾಗಗಳನ್ನು ತೆಗೆದುಹಾಕಲು ನಡೆಯಿಸುವ ಶಸ್ತ್ರಕ್ರಿಯೆ. ●

ಆರ್ಯನೆಂದರಾರು:

ನ ವೈರಮುದ್ದೀಪಯತಿ ಪ್ರಶಾಂತಂ
ನ ದರ್ಪಮಾರೋಹತಿ ನಾಸ್ತಮೇತಿ ।
ನ ದುರ್ಗತೋಽಸ್ಮೀತಿ ಕರೋತ್ಯಕಾರ್ಯಂ
ತಮಾರ್ಯಶೀಲಂ ಪರಮಾಹುರಾರ್ಯಾಃ ॥

ತಣಿದುಹೋದ ಹಗೆತನವನ್ನು ಪುನಃ ಕೆದಕದವನು
ದರ್ಪವನ್ನಾಗಲಿ ಅತಿ ದೈನ್ಯವನ್ನಾಗಲಿ ತೋರಿಸದವನು,
ಕಷ್ಟಕಾಲ ಬಂದರೂ ಅಕಾರ್ಯಮಾಡಲೊಲ್ಲದವನು-
ಅವನೇ ಆರ್ಯಶೀಲನೆಂದು ಆರ್ಯರು ಹೇಳುವರು.

★ ★ ★

ನ ಸ್ವೇ ಸುಖೇ ವೈ ಕುರುತೇ ಪ್ರಹರ್ಷಂ
ನಾನ್ಯಸ್ಯ ದುಃಖೇ ಭವತಿ ಪ್ರಹೃಷ್ಟಃ ।
ದತ್ವಾ ಚ ಪಶ್ಚಾತ್ ಕುರುತೇ ನ ತಾಪಂ
ಸ ಕಥ್ಯತೇ ಸತ್ಪುರುಷಾರ್ಯಶೀಲಃ ॥

ಸ್ವಂತ ಸುಖದಲ್ಲೇ ಹರ್ಷಗೊಳ್ಳದವನು,
ಪರದುಃಖದಲ್ಲಿ ಉತ್ಸಾಹ ತಾಳದವನು,
ದಾನಕೊಟ್ಟು ಪಶ್ಚಾತ್ತಾಪ ಪಡದವನು,-
ಅವನೇ ಆರ್ಯಶೀಲ, ಅವನೆ ಸತ್ಪುರುಷ.

● ಮಹಾಭಾರತ.

ಕ್ರಿಕೆಟ್ ಪಟು ಜಿತೇಂದ್ರ ಸಿಂಗ್

ಕಾಲಿಲ್ಲದಿದ್ದರೂ ಊನನಲ್ಲ

● ಎಸ್.ಎಚ್. ಪ್ರಾಟಿ ●

ದೈಹಿಕವಾಗಿ ಸಂಪೂರ್ಣ ಶಕ್ತರಾಗಿರುವವರು ಮಾತ್ರ ಕ್ರೀಡೆಗಳಲ್ಲಿ ಭಾಗವಹಿಸುವುದು ಸಾಧ್ಯ ಎಂಬುದು ಸಾಮಾನ್ಯ ನಂಬುಗೆ. ಆದರೆ ಕಲಕತ್ತಾದ 21ರ ಹರೆಯದ ವೇಗದ ಬೌಲರ್ ಜಿತೇಂದ್ರ ಸಿಂಗ್ ಇದಕ್ಕೊಂದು ಅಪವಾದ. ಅಪಘಾತದಲ್ಲಿ ಬಲಗಾಲು ಕಳೆದುಕೊಂಡರೂ, ಛಲ ಬಿಡದ ತ್ರಿವಿಕ್ರಮನಂತೆ ಕಾರ್ಬನ್ ಫೈಬರ್‌ನ ಕೃತಕ ಕಾಲಿನೊಂದಿಗೆ ಮರಳಿ ಕ್ರಿಕೆಟ್ ಮೈದಾನಕ್ಕೆ. ಜಿತೇಂದ್ರಸಿಂಗರ ಕಥೆ ಮನೋದಾರ್ಢ್ಯವಿದ್ದಲ್ಲಿ ಏನನ್ನಾದರೂ ಸಾಧಿಸಬಹುದೆಂಬುದನ್ನು ಬಿಂಬಿಸುತ್ತದೆ.

ಚಿಕ್ಕಂದಿನಿಂದಲೇ ಕ್ರಿಕೆಟ್ ಆಡುವ ಹವ್ಯಾಸ ಬೆಳೆಸಿಕೊಂಡಿದ್ದ ಜಿತೇಂದ್ರ, 1981ರಲ್ಲಿ ಆರಂಭಿಕ ವೇಗದ ಬೌಲರ್‌ನಾಗಿ ಭಾರತದ ಕಿರಿಯರ ತಂಡದಲ್ಲಿ ಆಡಿದ್ದರು. ಆಗ ಅವರ ಸಾಧನೆ ಎಲ್ಲರ ಗಮನ ಸೆಳೆದಿತ್ತು. ನಂತರ 1982 ರಲ್ಲಿ ವಿಜಯ ಮರ್ಚಂಟ್ ಟ್ರೋಫಿಯಲ್ಲಿ ಪೂರ್ವ ವಲಯದ ಪರವಾಗಿ 11 ಓವರ್‌ಗಳಲ್ಲಿ ಕೇವಲ 21 ಓಟಗಳನ್ನಿತ್ತು ಏಳು ವಿಕೆಟ್‌ಗಳನ್ನು ಕೆಡವಿದ್ದರು. 1983ರಲ್ಲಿನ ಅವರ ಸಾಧನೆಯೂ ಬಹಳ ಭರವಸೆದಾಯಕವಾಗಿತ್ತು. ಪೂರ್ವವಲಯದ ಕಿರಿಯರ ತಂಡದ ಪರವಾಗಿ ಬಲಾಢ್ಯ ಉತ್ತರ ವಲಯದ ವಿರುದ್ಧ 31 ಓವರ್‌ಗಳಲ್ಲಿ 77 ಓಟಗಳನ್ನಿತ್ತು ಐದು ವಿಕೆಟ್ ಪಡೆದಿದ್ದರು. ಅದೇ ವರ್ಷ ಅವರನ್ನು ಬಂಗಾಲದ 15 ವರ್ಷದೊಳಗಿನ ಅತ್ಯುತ್ತಮ ಆಟಗಾರ ಎಂದು ತೀರ್ಮಾನಿಸಲಾಯಿತು. 1982-83 ಮತ್ತು 1983-84ರಲ್ಲಿ ಅವರು 19 ವರ್ಷದೊಳಗಿನವರ ಕೂಚ್ ಬಿಹಾರ ಟ್ರೋಫಿಯಲ್ಲಿ ಬಂಗಾಲ ತಂಡವನ್ನು ಪ್ರತಿನಿಧಿಸಿದ್ದರು. 1984ರಲ್ಲಿ ಈಡನ್ ಗಾರ್ಡನ್ಸ್‌ನಲ್ಲಿ ಭಾರತದ ಟೆಸ್ಟ್ ಪಂದ್ಯದ ಆರಂಭಕ್ಕಿಂತ ಮುನ್ನ ನೆಟ್ ಅಭ್ಯಾಸದ ಕಾಲಕ್ಕೆ ಖ್ಯಾತ ಬ್ಯಾಟ್ಸ್‌ಮನ್ ಸುನೀಲ ಗಾವಸ್ಕರರಿಗೆ ಬೌಲ್ ಮಾಡುವ ಅವಕಾಶ ಜಿತೇಂದ್ರಗೆ ಲಭ್ಯವಾಗಿತ್ತು. ಅವರ ಎರಡು ಎಸೆತಗಳು ಗಾವಸ್ಕರ್‌ರನ್ನು ವಂಚಿಸಿದ ನಂತರ ಆ ಮಹಾನ್ ಆಟಗಾರ "ಈ ಬೌಲರ್‌ನ ಬಗ್ಗೆ ಸ್ವಲ್ಪ ಲಕ್ಷ್ಯವಿರಲಿ" ಎಂದು ಹೇಳಿದ್ದರು.

ಆದರೆ 1986ರ ಸೆಪ್ಟೆಂಬರ್ 29 ಜಿತೇಂದ್ರರ ಪಾಲಿಗೆ ಬಹಳ ಕೆಟ್ಟ ದಿನ. ಸ್ಕೂಟರ್‌ನ ಮೇಲೆ ಹಿಂಬದಿ ಸೀಟ್‌ನಲ್ಲಿ ಕುಳಿತುಕೊಂಡು ಹೊರಟಿದ್ದಾಗ ತುಂಬಿದ್ದ ಟ್ರಕ್ಕೊಂದು ಬಂದು ಡಿಕ್ಕಿ ಹೊಡೆಯಿತು. "ನನ್ನ ಬಲಗಾಲು ಸರಿಯಾಗಿ



ತನ್ನ ಕ್ರೀಡೋತ್ಸಾಹಕ್ಕೆ ಪುಟಕೊಟ್ಟು ಮತ್ತೆ ಆಡಲಾರಂಭಿಸಲು ಕಾರಣರಾದವರೊಂದಿಗೆ ಜಿತೇಂದ್ರ ಸಿಂಗ್

ಟ್ರಕ್ಕಿನ ಗಾಲಿಯ ಕೆಳಗೆ ಸಿಲುಕಿತು. ಮೊಣಕಾಲಿನಿಂದ ಕೆಳಗಿನ ಭಾಗವೆಲ್ಲ ಅಪ್ಪಚ್ಚಿಯಾಗಿತ್ತು. ಆದರೆ ಆ ಭೀಕರ ನೋವಿನ ಮಧ್ಯವೂ ನಾನು ಸ್ಮೃತಿ ಕಳೆದುಕೊಂಡಿರಲಿಲ್ಲ. ಭಾರಿ ರಕ್ತ ಸ್ರಾವವಾಗುತ್ತಿರುವುದು ನನ್ನ ಅರಿವಿಗೆ ಬಂದಿತ್ತು" ಎಂದು ಜಿತೇಂದ್ರ ಆ ದುರ್ಘಟನೆಯನ್ನು ನೆನಪಿಸಿಕೊಳ್ಳುತ್ತಾರೆ.

ಆಸ್ಪತ್ರೆಯಲ್ಲಿ ಜಿತೇಂದ್ರರ ಬಲಗಾಲನ್ನು ಮೊಣಕಾಲಿನವರೆಗೆ ಕತ್ತರಿಸಲಾಯಿತು. ಸ್ಮೃತಿ ಮರಳಿದ ನಂತರ ಜಿತೇಂದ್ರರಿಗೆ ಬಂದ ಮೊದಲ ಯೋಚನೆಯೆಂದರೆ ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತವನ್ನು ಪ್ರತಿನಿಧಿಸುವ ತನ್ನ ಕನಸು ನುಚ್ಚು ನೂರಾಯಿತಲ್ಲ ಎಂಬುದು. ಆದರೆ ಪುನಃ ಸ್ಥೈರ್ಯ ಮರಳಿದ ನಂತರ ಅವರು ತಮ್ಮ ಕುಟುಂಬದ ಸದಸ್ಯರಿಗೆ ಹೇಳಿದರಂತೆ "ನಾನು ಖಂಡಿತ ಮತ್ತೆ ಮೊದಲಿನಂತೆ ಬೌಲ್ ಮಾಡಲಾರಂಭಿಸು ತ್ತೇನೆ" ಎಂದು. ಸುಧಾ ಚಂದ್ರನ್ ಕೃತಕ ಅಲ್ಯು ಮಿನಿಯಂ ಕಾಲಿನೊಂದಿಗೆ ನೃತ್ಯ ಪ್ರದರ್ಶನ ನೀಡುತ್ತಾಳೆಂದ ಮೇಲೆ ತಾನೂ ಅಂಥ ಕಾಲಿ ನೊಂದಿಗೆ ಕ್ರಿಕೆಟ್ ಆಡಬಲ್ಲೆ ಎಂಬುದು ಅವರ ಆಲೋಚನೆ. ದುಃಖತಪ್ತರಾಗಿದ್ದ ಕುಟುಂಬದ ಸದಸ್ಯರಿಗೆ ಜಿತೇಂದ್ರರ ಮನೋಸ್ಥೈರ್ಯ ಹೊಸ ಆಸೆ ಮೂಡಿಸಿತು. ಹತ್ತು ಜನ ಮಕ್ಕಳ ಕುಟುಂಬದಲ್ಲಿ ಜಿತೇಂದ್ರ ಕೊನೆಯವರು. ಅವರಿಗೆ ನಾಲ್ವರು ಸೋದರಿಯರು, ಐವರು ಸೋದರರಿದ್ದಾರೆ. "ಜಿತೇಂದ್ರನ ಸ್ಥೈರ್ಯವನ್ನು ನೋಡಿ ನಾವು ಸೋದರರೆಲ್ಲ ಸೇರಿಕೊಂಡು ಅವನು ಮೊದಲಿನಂತಾಗಲು ಸರ್ವ ಪ್ರಯತ್ನ ಮಾಡಲು ನಿರ್ಧರಿಸಿದೆವು" ಎಂದು ಜಿತೇಂದ್ರರ ಸೋದರ ಕನ್ಹಯ್ಯಾ ಸಿಂಗ್ ಹೇಳುತ್ತಾರೆ.


'ಹೋಯಿತು!'
'It's gone!'
'ಗಾಯಬ!'
ಹೋಯಿತು!
ಎಲ್ಲಾ ತರಹದ ನೋವುಗಳು, ಯಾತನೆಗಳು ಕ್ಷಣಾರ್ಧದಲ್ಲಿ ಮಾಯವಾಗುತ್ತೆ!
ಹತ್ತು ನೈಸರ್ಗಿಕ ಔಷಧಾಂಶಗಳನ್ನು ಉಪಶಮನ ನೀಡುವ ಬಾಮ್‌ನೊಂದಿಗೆ ಬ್ಲೆಂಡ್ ಮಾಡಲಾಗಿದೆ
ಅದೇ ಅಮೃತಾಂಜನ್. 90 ವರ್ಷಗಳಿಗೂ ಮಿಕ್ಕಿನ ಕಾಲದಿಂದ ನಂಬಿಕೆಗೆ ಪಾತ್ರವಾದುದು
ತಲೆನೋವು, ಮೈನೋವು ಅಥವಾ ಉಳುಕುಗಳ ಚಿಹ್ನೆ ಕಂಡ ತಕ್ಷಣ ಮೃದುವಾಗಿ
ಅಮೃತಾಂಜನ್
ಮಿಂಚಿನ ವೇಗದಲ್ಲಿ ಮಂದಹಾಸ ಮರಳುವುದು!
ಅಮೃತಾಂಜನ್ ಲಿಮಿಟೆಡ್
OBM 831 KN

ಕಾಲು ಕತ್ತರಿಸಿದ ಆರು ತಿಂಗಳ ನಂತರ ಜಿತೇಂದ್ರ ಜಯಪುರಕ್ಕೆ ಹೋದರು. ಅಲ್ಲಿ 'ಜಯಪುರ ಕಾಲು' ಕೂಡಿಸಿಕೊಂಡು ಕಲಕತ್ತಾಕ್ಕೆ ಮರಳಿದ ಜಿತೇಂದ್ರ ಅಲ್ಲಿಯ ಕ್ಲಬ್ಬೊಂದರಲ್ಲಿ ಮತ್ತೆ ಕ್ರಿಕೆಟ್ ಆಡಲಾರಂಭಿಸಿದರು. ಆದರೆ ಆ ಅಲ್ಯುಮಿನಿಯಂ ಕಾಲು ಬಹಳ ಭಾರವಾಗಿತ್ತು. ಅಲ್ಲದೆ ಯಾವಾಗಲೂ ಆ ಕಾಲಿನ ಸಾಕೆಟ್ ಚರ್ಮವನ್ನು ಘರ್ಷಿಸುತ್ತಿದ್ದುದರಿಂದ ಮೊಣಕಾಲಿನ ಮೇಲಿನ ಭಾಗದಲ್ಲಿ ಗಾಯವಾಗಿ ಕೀವು ತುಂಬುವ ಸಂಭವವಿರುತ್ತಿತ್ತು.

ಆಗ ಅಂಗವಿಕಲರ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸರಕಾರಿ ಒಡೆತನದ ರಾಷ್ಟ್ರೀಯ ಅಂಗವಿಕಲರ ಸಂಸ್ಥೆಯ ಕೃತಕ ಅಂಗಜೋಡಣೆ ತಜ್ಞ ಇಂಜಿನಿಯರ್ ಚಪಲ್ ಖಾಸ್ನಬಿಸ್‌ರನ್ನು ಸಂಪರ್ಕಿಸುವಂತೆ ಜಿತೇಂದ್ರರಿಗೆ ತಿಳಿಸಲಾಯಿತು. "ಜಿತೇಂದ್ರ ಮೊದಲ ಬಾರಿ ನನ್ನನ್ನು ಭೆಟ್ಟಿಯಾದಾಗ ತೊಡೆಯ ಎಲುವುಗಳನ್ನು ಬಲಪಡಿಸಲೆಂದು ಆಗಲೇ ಸಾಕಷ್ಟು ಕಠಿಣ ವ್ಯಾಯಾಮ ಮಾಡಿದ್ದ. ಆದರೆ ಅವನ ಅಲ್ಯುಮಿನಿಯಂ ಕಾಲು ಬಹಳ ಭಾರವಾಗಿದ್ದುದರಿಂದ ಮೊದಲಿನಷ್ಟು ವೇಗವಾಗಿ ಬೌಲ್ ಮಾಡಲು ಅವನಿಗೆ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ನಾನು ಕಲಕತ್ತಾದಲ್ಲಿರುವ ಹಿಂದುಸ್ತಾನ್ ಸೀಬಾ ಗೈಗಿ ಸಂಸ್ಥೆಯ ಪ್ಲಾಸ್ಟಿಕ್ ಮತ್ತು ಅಪಿಟಿವ್ಸ್ ವಿಭಾಗದ ಸಮೀರ ಮುಖರ್ಜಿಯವರೊಂದಿಗೆ ಇದರ ಬಗ್ಗೆ ಚರ್ಚಿಸಲು ನಿರ್ಧರಿಸಿದೆ. ಅಲ್ಲದೆ ಕಡಿಮೆ ಭಾರದ ಕೃತಕ ಕಾಲನ್ನು ತಯಾರಿಸುವುದಕ್ಕಾಗಿ ಗಟ್ಟಿಯಾದ ಹೊರಮೈಯುಳ್ಳ ವಸ್ತುವೊಂದನ್ನು ಸೂಚಿಸುವಂತೆ ಕೇಳಿಕೊಳ್ಳುವುದೂ ನನ್ನ ಉದ್ದೇಶವಾಗಿತ್ತು" ಎಂದು ಖಾಸ್ನಬಿಸ್ ಹೇಳುತ್ತಾರೆ.

ಮುಖರ್ಜಿಯವರ ಸಲಹೆಯಂತೆ ಖಾಸ್ನಬಿಸ್ ಗ್ಲಾಸ್ ಫೈಬರ್‌ನ ಹೊಸ ಕಾಲು ತಯಾರಿಸಿದರು. ಜಿತೇಂದ್ರ ಈ ಹೊಸಕಾಲಿನೊಂದಿಗೆ ಮತ್ತೆ ಕ್ರಿಕೆಟ್ ಆಡಲಾರಂಭಿಸಿದರು. 1987ರ ಡಿಸೆಂಬರ್‌ನಲ್ಲಿ ಅವರು ಭಾರತೀಯ ಕ್ರಿಕೆಟ್ ತಂಡದೊಂದಿಗೆ ಅಭ್ಯಾಸದಲ್ಲೂ ತೊಡಗಿದ್ದರು. ಆದರೆ ಅವರಿಗೆ ಮೊದಲಿನಂತೆ ಗಂಟೆಗೆ 105-110 ಕಿಲೋ ಮೀಟರ್ ವೇಗದಲ್ಲಿ ಬೌಲ್‌ಮಾಡಲು ಸಾಧ್ಯವಾಗಲಿಲ್ಲ. ಗ್ಲಾಸ್‌ಫೈಬರ್‌ನ ಕಾಲು ಸಹ ಸಾಕಷ್ಟು ಭಾರವಾಗಿತ್ತು.



"ನನಗೆ ಐಶ್ವರ್ಯವೇನೂ ಬೇಕಾಗಿಲ್ಲ...ನಿನ್ನ ಮುಂದಿನ ಅವತಾರಗಳ, ಟಿ.ವಿ ಧಾರಾವಾಹಿಗೆ ಹಗ್ಗೇ ನನಗೆ ರೈಟ್ ಕೊಟ್ಟು ಬಿಡು"

ಪುನಃ ಜಿತೇಂದ್ರ ಖಾಸ್ನಬಿಸ್‌ರ ಮೊರೆ ಹೊಕ್ಕರು. ಖಾಸ್ನಬಿಸ್ ಈ ಬಾರಿ ಕಾರ್ಬನ್ ಫೈಬರ್‌ನ ಕಾಲು ತಯಾರಿಸಲು ನಿರ್ಧರಿಸಿದರು. ಆದರೆ ಕಾರ್ಬನ್ ಫೈಬರ್‌ನಂಥ ವಸ್ತುಗಳು ಅಷ್ಟು ಸುಲಭವಾಗಿ ದೊರಕುವುದಿಲ್ಲ. ಆದ್ದರಿಂದ ಖಾಸ್ನಬಿಸ್ ಮುಖರ್ಜಿಯವರ

ಸಹಾಯ ಕೋರಿದರು. ಕೊನೆಗೆ ಫ್ರಾನ್ಸಿನ ಬ್ರೋಶಿಯರ್ ಎಸ್.ಎ. ಎಂಬ ಮೂರು ಮೀಟರ್ ಕಾರ್ಬನ್ ಫೈಬರ್‌ನ ಬಟ್ಟೆಯನ್ನು ಉಚಿತವಾಗಿ ನೀಡಿತು. ಕಲಕತ್ತಾದ ಸೀಬಾಗೈಗಿ ಕಂಪನಿ ಅಂಟು ಸಾಮಗ್ರಿಯನ್ನು ಉಚಿತವಾಗಿ ನೀಡಲೊಪ್ಪಿಕೊಂಡಿತು.

ಕಾರ್ಬನ್ ಫೈಬರ್‌ನ ಸಾಮಗ್ರಿಗಳು ಸ್ಟೀಲಿಗಿಂತ ನಾಲ್ಕುಪಟ್ಟು ಹೆಚ್ಚು ಶಕ್ತಿಶಾಲಿಯಾಗಿರುತ್ತವೆ. ಬಾಹ್ಯಾಕಾಶ ಸಂಶೋಧನೆಯಿಂದ ಹಿಡಿದು ಕ್ರೀಡೆಗಳವರೆಗೆ ಅನೇಕ ರಂಗಗಳಲ್ಲಿ ಇದನ್ನು ಬಳಸಲಾಗಿದೆ. ಇದರ ಉಪಯೋಗವನ್ನು ಮೊದಲು ಕಂಡುಕೊಂಡದ್ದು ಜಪಾನ್. ಮೊದಲು ರೇಷ್ಮೆ ನೇಯ್ಗೆಗೆ ಹೆಸರಾಗಿದ್ದ ಬ್ರೋಶಿಯರ್ ಎಸ್.ಎ ಕಂಪನಿ ನಂತರ ಈ ಕಾರ್ಬನ್ ಫೈಬರ್‌ನ ಬಟ್ಟೆ ಉತ್ಪಾದನೆ ಆರಂಭಿಸಿತು.

ಕಾರ್ಬನ್ ಫೈಬರ್‌ನ ಬಟ್ಟೆಯು ಜಿತೇಂದ್ರರ ಕಾಲಿನ ಆಕಾರಕ್ಕೆ ಹೊಂದುವಂತೆ ಸುತ್ತಿ ಅಂಟು ಸಾಮಗ್ರಿಯನ್ನು ಸವರಿ ನಾಲ್ಕು ಗಂಟೆಗಳವರೆಗೆ 100 ಡಿಗ್ರಿ ಸೆಂಟಿಗ್ರೇಡ್ ಕಾವಿನ ಭಟ್ಟಿಯಲ್ಲಿಟ್ಟು ಭದ್ರಪಡಿಸಲಾಯಿತು. "ನಾವು ಈ ಕಾಲನ್ನು ಆರು ಅಡಿ ಎತ್ತರದಿಂದ ನೆಲಕ್ಕೆ ಒಗೆದರೂ ಸುತ್ತಿಗೆಯಿಂದ ಬಡಿದರೂ ಅದು ಮುರಿಯಲಿಲ್ಲ" ಎಂದು ಮುಖರ್ಜಿ ಹೇಳುತ್ತಾರೆ.

ರಬ್ಬರಿನಿಂದ ಮಾಡಿದ ಪಾದವನ್ನು ಹೊಂದಿರುವ ಈ ಕಾರ್ಬನ್ ಫೈಬರ್ ಕಾಲು 1.4 ಕೆ.ಜಿ ತೂಕದ್ದು. ಇದಕ್ಕೂ ಮೊದಲಿನ ಗ್ಲಾಸ್ ಫೈಬರ್ ಕಾಲಿನ ಭಾರ 2.1 ಕೆ.ಜಿ.ಯಷ್ಟಿತ್ತು.

1987ರ ಡಿಸೆಂಬರ್ ಅಂತಕ್ಕೆ ಹೊಸ ಕಾಲನ್ನು ಕೂಡಿಸಿಕೊಂಡ ಜಿತೇಂದ್ರ ಕ್ರಿಕೆಟ್ ರಂಗದಲ್ಲಿ ಹೊಸ ಆತ್ಮವಿಶ್ವಾಸದೊಂದಿಗೆ ಆಡುತ್ತ ಮುನ್ನಡೆ ಇಡುತ್ತಿದ್ದಾರೆ. ●

ಗೋಮಾಂತರ ವಿಜಯ

1948ರಲ್ಲಿ ಸರದಾರ ವಲ್ಲಭಭಾಯಿ ಪಟೇಲರು ಮುಂಬಯಿ ಬಂದರದಿಂದ ಹಡಗವೊಂದರಲ್ಲಿ ಹೊರಟಿದ್ದರು. ಗೋವೆಯ ಸಮೀಪಕ್ಕೆ ಹಡಗು ಬಂದಾಗ ಸರದಾರ ಪಟೇಲರು ಗೋವೆಯನ್ನಷ್ಟು ನೋಡಲೆಂದು ಹಡಗನ್ನು ಗೋವೆಗೆ ಇನ್ನಷ್ಟು ಸಮೀಪ ಒಯ್ಯಲು ಕಪ್ತಾನನಿಗೆ ತಿಳಿಸಿದರು. ಕಪ್ತಾನ ಗೋವೆಗೆ ಸಮೀಪವಿರುವ, ಸಮುದ್ರ ಪ್ರದೇಶದ ಮೇಲೆ ಪೋರ್ಚುಗೀಜರಿಗೆ ಅಧಿಕಾರವಿರುವುದನ್ನು ಹೇಳಲು ಸರದಾರರು ಮುಗುಳ್ನಕ್ಕು "ಇರಲಿ ಇರಲಿ. ಸಮೀಪ ಹೋಗಿ ನೋಡೋಣ" ಎಂದರು. ಕಪ್ತಾನ ಸರದಾರರನ್ನು ಸಂತೋಷಪಡಿಸಲು ಹಡಗನ್ನು ಪೋರ್ತುಗೀಜ ಸಮುದ್ರದಲ್ಲಿ ಒಂದು ಮೈಲು ಒಳಕ್ಕೆ ಸಾಗಿಸಿದ.

"ಹಡಗದಲ್ಲಿ ಎಷ್ಟು ಜನ ಸೈನಿಕರಿದ್ದಾರೆ?" ಎಂದು ಸರದಾರರು ಕೇಳಲು ಕಪ್ತಾನ "800" ಎಂದುತ್ತರವಿತ್ತ. "ಗೋವೆಯನ್ನು ಗೆಲ್ಲಲು ಇಷ್ಟು ಜನ ಸಾಕೆ?" ಕೇಳಿದರು ಸರದಾರ ಪಟೇಲರು. ಕಣ್ಣು ರೆಪ್ಪೆ ಕೂಡಾ ಮಿಟುಕಿಸದೆ ಕಪ್ತಾನ "ಸಾಕೆಂದು ನನಗನಿಸುತ್ತದೆ" ಎಂದುತ್ತರವಿತ್ತ. "ಸರಿ ಹಾಗಾದರೆ ಹೇಗೂ ಬಂದಿದ್ದೇವೆ. ಹೋಗಿ ಗೋವೆಯನ್ನು ಗೆಲ್ಲೋಣ" ಸರದಾರರೆಂದರು.

ಕಪ್ತಾನ ಅವರ ಮುಖವನ್ನೊಮ್ಮೆ ನೋಡಿ ಆ ಮಾತನ್ನು ಮತ್ತೊಮ್ಮೆ ಅನ್ನಲು ಕೇಳಿಕೊಂಡ. ಸರದಾರರು ಗಂಭೀರವಾಗಿ ಪುನಃ ಅದೇ ಮಾತನ್ನಂದರು.

"ನನಗೆ ಲಿಖಿತ ಆಜ್ಞೆ ಕೊಡಿ ಸ್ವಾಮಿ. ರಿಕಾರ್ಡಿಗೆ ಅದು ಬೇಕು" ಎಂದ ಕಪ್ತಾನ.

ಆಗ ಸರದಾರರು ಮತ್ತೆ ಮುಗುಳ್ನಕ್ಕು "ಬೇಡ. ತಿರುಗಿ ಹೋಗುವುದು ವಾಸಿ ಎಂದು ಕಾಣುತ್ತದೆ. ನಿಮಗೆ ಗೊತ್ತಿದೆಯಲ್ಲ. ಜವಾಹರಲಾಲರು. ಅವರು ಇಂಥ ಕಾರ್ಯಕ್ಕೆ ಆಕ್ಷೇಪವೆತ್ತಿಯಾರು!" ಎಂದರು. ●

ಜೀವನದರ್ಶನ-10 ★ ಕೆ.ಟಿ ಪಾಂಡುರಂಗಿ

ಅಸೂಯೆ-ಹರ್ಷ

ಮನುಷ್ಯನ ಸ್ವಭಾವದಲ್ಲಿ ಕೆಲವು ಪ್ರತಿಕೂಲ ಗುಣಗಳಿವೆ. ಕೆಲವು ಅನುಕೂಲ ಗುಣಗಳಿವೆ. ಇವುಗಳಲ್ಲಿ ಕೆಲವು ಪರಸ್ಪರ ಸಂಬಂಧವುಳ್ಳವುಗಳಾಗಿದ್ದು. ಒಂದು ಹೆಚ್ಚಿದ್ದರೆ ಇನ್ನೊಂದು ಕಡಿಮೆಯಾಗಿರುವದು. ಸನ್ನಿವೇಶ ಬಲದಿಂದ ಪ್ರತಿಕೂಲ ಗುಣ ಹೆಚ್ಚು ಒತ್ತಡದಿಂದ ಪ್ರಕಟವಾಗುತ್ತಿದ್ದಾಗ ಅದನ್ನು ವಿಫಲ ಗೊಳಿಸುವ ಅನುಕೂಲ ಗುಣವನ್ನು ಪ್ರಯತ್ನಪೂರ್ವಕವಾಗಿ ಬೆಳೆಸಿಕೊಂಡರೆ ಆ ಪ್ರತಿಕೂಲ ಗುಣದ ಒತ್ತಡವು ಕಡಿಮೆಯಾಗಿ ವ್ಯಕ್ತಿಗೂ ಸಮಾಜಕ್ಕೂ ಹಿತವಾಗುವುದು. ಹೀಗೆ ಮಾಡಬೇಕಾದರೆ ಅವೆರಡೂ ಗುಣಗಳ ಕಾರಣ ಮೀಮಾಂಸವನ್ನು ಜಾಗೂಕತೆಯಿಂದ ಮಾಡಿದರೆ ಅವುಗಳಲ್ಲಿ ಗ್ರಾಹ್ಯ ಯಾವುದು ಅಗ್ರಾಹ್ಯ ಯಾವುದು ಎಂಬ ವಿವೇಚನೆಯುಂಟಾಗಿ ಅವುಗಳಲ್ಲಿ ಸಮತೋಲನವನ್ನು ಉಂಟು ಮಾಡಲು ಅಥವಾ ಪ್ರತಿಕೂಲವಾದದ್ದರ ಒತ್ತಡವನ್ನು ಕಡಿಮೆ ಮಾಡಲು ಸಹಾಯವಾಗುವದು.

ಉದಾಹರಣೆಗೆ ಅಸೂಯೆ ಮತ್ತು ಹರ್ಷ ಇಂಥ ಎರಡು ಗುಣಗಳು. ಅಸೂಯೆ ಅಂದರೆ ಹೊಟ್ಟೆ ಕಿಚ್ಚು. ಬೇರೆಯವರು ಮುಂದೆ ಬಂದರೆ, ಯಶಸ್ಸನ್ನು ಗಳಿಸಿದರೆ ಕಾರ್ಯಸಿದ್ಧಿಯನ್ನು ಪಡೆದರೆ ಚೆನ್ನಾಗಿ ಇದ್ದರೆ ಸಹಜವಾಗದಿರುವ ಸ್ವಭಾವ. ಈ ಗುಣ ಅಥವಾ ದೋಷ ಸ್ವಲ್ಪ ಹೆಚ್ಚು ಕಡಿಮೆ ಎಲ್ಲರಲ್ಲಿಯೂ ಇದ್ದೇ ಇರುತ್ತದೆ. ಕೆಲವರಿಗೆ ಬಹಳ ಕಡಿಮೆಯಾಗಿರುತ್ತದೆ. ಅತಿಯಾಗಿರುತ್ತದೆ ಅಥವಾ ಸುಪ್ತವಾಗಿರುತ್ತದೆ. ಇನ್ನು ಕೆಲವರಿಗೆ ಅತಿಯಾಗಿರುತ್ತದೆ. ಕೆಲವರಿಗೆ ಕೆಲವು ವಿಷಯಗಳಲ್ಲಿರುತ್ತದೆ. ಇನ್ನು ಕೆಲವರಿಗೆ ಬೇರೆ ವಿಷಯಗಳಲ್ಲಿರುತ್ತದೆ. ಸಾಮಾನ್ಯವಾಗಿ ಒಂದೇ ಕಾರ್ಯಕ್ಷೇತ್ರಕ್ಕೆ ಸೇರಿದವರಿಗೆ ಪರಸ್ಪರ ಅಸೂಯೆ ಇರುವದು ಹೆಚ್ಚು. ಕೆಲವರಿಗೆ ಸ್ವತಃ ಅಸೂಯೆ ಇಲ್ಲದಿದ್ದರೂ ಬೇರೆಯವರು ಒರೆ ಹಚ್ಚಿದಾಗ ಬರುವದುಂಟು. ನಿಷ್ಕಾರಣವಾಗಿ ಎಲ್ಲದಕ್ಕೂ ಅಸೂಯೆ ಪಡುವ ಎಲ್ಲರೊಡನೆಯೂ ಅಸೂಯೆ ಪಡುವ ಅಸೂಯಾ ಮೂರ್ತಿಗಳೂ ಕೆಲವರಿರುವರು.

ಅಸೂಯೆಯ ಮುಖ್ಯ ಕಾರಣ ಪರಸ್ಪರ ತುಲನೆ. ಪ್ರತಿಯೊಬ್ಬ ಮನುಷ್ಯನೂ ತನ್ನ ವ್ಯಕ್ತಿತ್ವದ ವಿಷಯದಲ್ಲಿ ಅಭಿಮಾನ-ಪ್ರೀತಿ-ಆದರವುಳ್ಳವನಾಗಿರುತ್ತಾನೆ. ಇದು ಸಹಜವಾದುದು. ಆದರೆ ಇಂಥ ಸ್ವಅಭಿಮಾನವನ್ನು ಕಾಯ್ದುಕೊಂಡು ಹೋಗಲು ತನ್ನಂಥ ಪರಿಸರದಲ್ಲಿದ್ದ ಬೇರೆಯವರೊಡನೆ ತನ್ನನ್ನು ಹೋಲಿಸಿಕೊಳ್ಳುತ್ತ ಹೋಗುತ್ತಾನೆ. ಇಂಥ ಹೋಲಿಕೆಯಲ್ಲಿ ಕೆಲವರು ತನಗಿಂತ ಕಡಿಮೆಯಾಗಿರುವದು ಕೆಲವರು ತನಗಿಂತ ಹೆಚ್ಚಾಗಿರುವದು ಕಂಡ ಬರುತ್ತದೆ. ಇಂಥ ಪ್ರಸಂಗದಲ್ಲಿ ತನಗಿಂತ ಕಡಿಮೆಯಿದ್ದವರಿಗಿಂತ ತಾನು ಶ್ರೇಷ್ಠ ಎಂದು ಭಾವಿಸಿ ಉಬ್ಬುತ್ತಾನೆ. ತನಗಿರುವ ಹೆಚ್ಚಿನ ಸನ್ನಿವೇಶದ ಅನುಕೂಲ ಅವರಿಗಿರುವ ಕಡಿಮೆ ಸನ್ನಿವೇಶಗಳ ಅನುಕೂಲ ಇವನ್ನೆಲ್ಲ ಗಮನಿಸುವ ಗೋಡವೆಗೆ ಹೋಗದೆ ತಾನು ಸ್ವರೂಪತಃ ಶ್ರೇಷ್ಠನು ಎಂದು ಉಬ್ಬುತ್ತಾನೆ. ಆದರೆ ತನಗಿಂತ ಹೆಚ್ಚಿನವರ ವಿಷಯ ಬಂದಾಗ ಅದನ್ನು ಒಪ್ಪಿಕೊಳ್ಳುವದಕ್ಕೇ ಹಿಂಜರಿಯುತ್ತಾನೆ. ಅವರಲ್ಲಿ ಏನಾದರೂ ಕೊರತೆ ಕಾಣಲು ಪ್ರಯತ್ನಿಸುತ್ತಾನೆ. ಅವರಿಗೆ ಕೆಲವು ಅನಗತ್ಯ ಅನುಕೂಲಗಳಿವೆ ಎಂದು ಭಾವಿಸುತ್ತಾನೆ. ಅವರ ಹೆಚ್ಚು ಗಾರಿಕೆ ಕೇವಲ ಪ್ರಚಾರ ಎಂದು ಸಾಧಿಸಲು ಪ್ರಯತ್ನಿಸುತ್ತಾನೆ. ಅಂತೂ ತಮ್ಮಿಬ್ಬರ ಹೋಲಿಕೆಗೆ ನಿಷ್ಪಕ್ಷಪಾತವಾದ ಮಾನದಂಡವನ್ನು ಉಪಯೋಗಿಸುವುದಿಲ್ಲ. ಇದರಿಂದ ಅಸೂಯೆ ಉಂಟಾಗುತ್ತದೆ. ಆ ಇನ್ನೊಬ್ಬನು ಮುಂದೆ ಬಂದಷ್ಟೂ ಈ ಅಸೂಯೆ ಹೆಚ್ಚುತ್ತ ಹೋಗುತ್ತದೆ. ಇದರ ದುಷ್ಪರಿಣಾಮ ಅವನ ಮೇಲೆಯೂ ಸಮಾಜದ ಮೇಲೆಯೂ ಆಗುತ್ತದೆ.

ಇದರಿಂದ ಪಾರಾಗಬೇಕಾದರೆ ನಮಗಿಂತ ಹೆಚ್ಚು ಯೋಗ್ಯತೆಯಿದ್ದವರೂ ಗುಣ ವಂತರೂ ಕಾರ್ಯ ಸಿದ್ಧಿಯನ್ನು ಪಡೆದವರನ್ನೂ ನೋಡಿ ಸಂತೋಷ ಪಡುವ ಹರ್ಷ ಪಡುವ ಸ್ವಭಾವವನ್ನು ಬೆಳೆಸಿಕೊಳ್ಳ ಬೇಕು. ಅಂದರೆ ಅವರ ಪ್ರಯತ್ನದಂತೆ ನಾವೂ ಪ್ರಯತ್ನಪಟ್ಟು ಮುಂದೆ ಬರುವ ಉತ್ಸಾಹ ಮೂಡತ್ತದೆ. ಆತ್ಮ ವಿಶ್ವಾಸ ಹೆಚ್ಚುತ್ತದೆ. ಅಸೂಯೆ ಕಡಿಮೆಯಾಗುತ್ತದೆ. ಅಸೂಯೆ ಬೇರೆಯವರಿಗಿಂತ ನಮಗೇ ಹೆಚ್ಚು ಹಾನಿಕರ. ●

ಇಲ್ಲಿ ಜನಸಾಮಾನ್ಯರೆಲ್ಲ ಬಲಿಪಶುಗಳು

● ಬದರೀನಾಥ್ ●

ಕಳೆದ ಆಗಸ್ಟ್ ಆರರಂದು ಬೆಳಗಿನ ಹತ್ತೂವರೆಯ ಸಮಯ. ಬಿಹಾರದ ಮಣಿಹಾರ ಘಾಟಿನಲ್ಲಿ ಗಂಗೆಯ ದಡದ ಮೇಲೆ ನೂರಾರು ಜನರ ಗದ್ದಲ ಉಗಿದೋಣಿಯನ್ನೇರಿ ಉಕ್ಕಿ ಹರಿಯುತ್ತಿದ್ದ ಗಂಗೆಯನ್ನು ದಾಟಿ ಸಾಹೇಬಗಂಜಿಗೆ ಹೋಗಲು ಟಿಕೆಟ್ ಪಡೆದುಕೊಂಡು ತಮ್ಮ ಸರದಿಗಾಗಿ ಜನ ಕಾಯುತ್ತಿದ್ದರು. ಸಾಹೇಬಗಂಜಿನಾಚೆಗೆ ದೇವಗಡವೆಂಬ ಊರಿದೆ. ಅಲ್ಲಿಯ ವೈದ್ಯನಾಥ ಮಂದಿರದಲ್ಲಿ ನಡೆಯುವ ಶ್ರಾವಣೀ ಜಾತ್ರೆಯಲ್ಲಿ ಭಾಗವಹಿಸಲೆಂದು ಹೊರಟಿದ್ದವರೇ ಹೆಚ್ಚು ಮಂದಿ ಸಾಹೇಬಗಂಜಿನಲ್ಲಿಳಿದು ಅಲ್ಲಿಂದ ಗಂಗಾಜಲವನ್ನು ತುಂಬಿಕೊಂಡು ದೇವಗಡದಲ್ಲಿ ವೈದ್ಯನಾಥ ಶಿವನ ಪೂಜೆಗೈಯುವ ಹಂಬಲದಿಂದ ನಡೆದಿದ್ದ ಸ್ತ್ರೀಪುರುಷರನೇಕರು ಕಾವಿ ಬಟ್ಟೆ ತೊಟ್ಟು ಭಕ್ತಿಯಿಂದ ಶಿವನಾಮ ಭಜಿಸುತ್ತಿದ್ದರು. ಮುಂದಾಗಲಿರುವುದರ ಕಲ್ಪನೆ ಕಿಂಚಿತ್ತೂ ಅವರಿಗಿರಲಿಕ್ಕಿಲ್ಲ. ಅವರೀಗ ಏರುತ್ತಿದ್ದುದು ಒಂದು ಹಳೆಗಾಲದ ಉಗಿ ದೋಣಿ. ಪ್ರಾಯಶಃ ಗಂಗೆಯ ಸೇವೆಯಲ್ಲೇ ಆ ದೋಣಿ ಮಾಗಿರಬೇಕು. ಇಷ್ಟೊಂದು ಮನುಷ್ಯರನ್ನು ಹೊತ್ತಿದ್ದ ಆ ದೋಣಿಯಲ್ಲಿ ೫೦ ಕ್ವಿಂಟಾಲು ಗೋಧಿ, ೨೦ ಕ್ವಿಂಟಾಲು ರಾಗಿ, ಕೋಳಿಗಳು ತುಂಬಿದ್ದ ಕೆಲವು ಬುಟ್ಟಿಗಳು, ಒಂದು ದೊಡ್ಡ ಮೋಟರ್‌ಸೈಕಲ್ಲು, ಎರಡು ಮೊಪೆಡ್‌ಗಳು ಹಾಗು ನಾಲ್ಕು ಸೈಕಲ್ಲುಗಳನ್ನು ಹೇರುವುದರೊಟ್ಟಿಗೆ ಕೆಲವು ಆಡುಗಳನ್ನು ಕೂಡ ತುರುಕಲಾಯಿತು. ಈಗ ಮಾತ್ರ ಪ್ರಯಾಣಿಕರು ಪ್ರತಿಭಟಿಸಿದರು. ಈ ಪ್ರಯಾಣಿಕರಲ್ಲಿ ೨೭ ವರ್ಷದ ಇಂದ್ರಜಿತ್‌ಕುಮಾರ್ ದಾಸ ಮತ್ತು ಅವನ ಪತ್ನಿ ೨೨ ವರ್ಷದ ಅನುಪಮಾ ಕೂಡ ಇದ್ದರು. ಜುಲೈ ೨೦ ರಂದಷ್ಟೇ ವಿವಾಹಿತರಾಗಿದ್ದ ಇವರು ಹೊಳೆದಾಟಿ ತಮ್ಮೂರು ಜಗತ್ಪುರಕ್ಕೆ ನಡೆದಿದ್ದರು.

ಗಂಗೆಯ ಪಾತ್ರ ತುಂಬ ವಿಶಾಲವಾದುದು; ಮಹಾಪೂರ ಬಂದಾಗಲಂತೂ ಅದರ ಹರಹು ಇನ್ನು ವಿಸ್ತಾರವಾಗುತ್ತದೆ. ಈ ಉಗಿ ದೋಣಿ ಲಂಗರು ಬಿಚ್ಚಿ ನೀರಿನಲ್ಲಿ ನೂರು ನೂರಿಪ್ಪತ್ತು ಗಜಗಳಷ್ಟು ದೂರ ಹೋಗುವಷ್ಟರಲ್ಲೇ ಒಂದೆರಡು ಸಲ ಆಚೀಚೆ ಮತ್ತಾವ ಪೂರ್ವ ಸೂಚನೆಯನ್ನು ಕೊಡದಂತೆ ಇದ್ದಕ್ಕಿದ್ದಂತೆ ನೀರಿನಲ್ಲಿ ಮುಳುಗಿಬಿಟ್ಟಿತು.

ಈ ಆಕಸ್ಮಿಕದಲ್ಲಿ ೩೦೦ಕ್ಕಿಂತ ಹೆಚ್ಚು ಜನ ಪ್ರಾಣಕ್ಕೆರವಾದರು. ಮೂರು ದಿನಗಳ ನಂತರ ಬಿಹಾರ ಸರಕಾರ ಕೂಡ ಈ ಸಂಖ್ಯೆಯನ್ನು ಒಪ್ಪಿಕೊಂಡಿತು... ಆದರೆ ಈ ಉಗಿ ದೋಣಿಯ ಮಾಲಿಕ ನೃಪೇಂದ್ರಪ್ರಸಾದ್ ಸಿಂಗ್ ಮತ್ತು ವ್ಯವಸ್ಥಾಪಕ ನಾಗೇಶ್ವರಸಿಂಗರ ಮೇಲೆ ಈ ಘಟನೆಯ ಪರಿಣಾಮವೆಂತಾಗಿದೆಯೆಂಬುದು ಇನ್ನೂ ನಿಗೂಢವಾಗಿಯೇ ಉಳಿದಿದೆ. ಅವರಿಬ್ಬರ ಮಟ್ಟಿಗೆ ಹೇಳುವುದಾದರೆ ತಮ್ಮ ದೋಣಿ ಎಷ್ಟು ಹೆಚ್ಚು ಜನಗಳನ್ನು, ಸರಕನ್ನು ಹೊತ್ತೊಯ್ಯುತ್ತದೋ ಅಷ್ಟೂ ಅವರಿಗೆ ಅನುಕೂಲವೇ. ಈ ದೋಣಿಯ ಸಾಮರ್ಥ್ಯ ೧೩೫ ರಿಂದ ೧೫೦ ಜನರನ್ನು ಸಾಗಿಸುವುದು ಎಂದು ರಾಜ್ಯ ಸರ್ಕಾರದ ನೌಕಾಸಾರಿಗೆ ಇಲಾಖೆಯು ನೀಡಿದ ಅನುಮತಿ ಪತ್ರದಲ್ಲಿ ಹೇಳಿದೆ. ಆದರೆ ಮಣಿಹಾರಘಾಟಿನಲ್ಲಿಯ

(ಕೃಪೆ: 'ಫ್ರಂಟ್‌ಲೈನ್')

ರಿಜಿಸ್ಟ್ರಿಯ ಪ್ರಕಾರ ಆ ದಿನದ ಆ ವಿಶಿಷ್ಟ ಯಾತ್ರೆಗಾಗಿ ಮಾರಾಟವಾದದ್ದು ೫೩೫ ಟಿಕೆಟ್ಟುಗಳು! ಯಾತ್ರಿಕರ ಸಂಖ್ಯೆಯೇ ಗರಿಷ್ಠ. ಸಾಮರ್ಥ್ಯದ ಮೂರೂವರೆ ಪಟ್ಟು ಇದ್ದರೆ ಧಾನ್ಯ, ಪಕ್ಷಿ, ಪ್ರಾಣಿಗಳು ಹಾಗು ಬೇರೆ ವಾಹನಗಳ ರೂಪದಲ್ಲಿ ಇನ್ನಷ್ಟು ಭಾರವನ್ನು ದೋಣಿ ಆ ದಿನ ಹೊರಬೇಕಾಗಿ ಬಂತು. ಅಂದು ಆ ನತದೃಷ್ಟ ಉಗಿದೋಣಿಯಲ್ಲಿ ಪ್ರಯಾಣಿಸಿಯೂ ಬದುಕುಳಿದ ಒಬ್ಬ ಸುದೈವಿ ಹೇಳುವಂತೆ, "ಅಂದು ದೋಣಿಯ ಮೇಲ್ಮಟ್ಟದ ಮೇಲೆ ಕುಳಿತಿದ್ದ ನಾವು ಕೆಲವರು, ದೋಣಿ ತೀವ್ರವಾಗಿ ವಾಲುತ್ತಿದ್ದಂತೆಯೇ ನೀರಿಗೆ ಎಸೆಯಲ್ಪಟ್ಟೆವು. ಅನಂತರ ಹೇಗೋ ಪ್ರಯಾಸ ಪಟ್ಟು ದಂಡೆಯನ್ನು ತಲುಪಿದೆವು. ಇನ್ನನೇಕರನ್ನು, ಈ ಅಪಘಾತ ಸಂಭವಿಸಿದ ಕೆಲ ನಿಮಿಷಗಳಲ್ಲಿಯೇ ಧಾವಿಸಿ ಬಂದ ನಾಡ ನೌಕೆಗಳವರು ಸಾಹಸ ಪಟ್ಟು ಸುಮಾರು ನೂರು ಜನಗಳಾದರೂ ಅಂತು ಈಜಿ ಬದುಕಿದರು ಇಲ್ಲವೇ ರಕ್ಷಿಸಲ್ಪಟ್ಟರು.".

ಈ ಆಕಸ್ಮಿಕದಲ್ಲಿ ಮುಳುಗಿದವರ ಸಂಬಂಧಿಕರನ್ನೊಳಗೊಂಡು ಸಾವಿರಾರು ಜನ ಕ್ಷಿಪ್ರದಲ್ಲೇ ಅಲ್ಲಿಗೆ ಧಾವಿಸಿದರು. ಅವರಲ್ಲಿ ಹಲವರು ತಟ್ಟನೆ ನೀರಿಗಿಳಿದು ಸಾಕಷ್ಟು ಪ್ರಯತ್ನಿಸಿದಾಗ ಆರು ಶವಗಳು ದೊರೆತವು. ಆದರೆ ಅಪಘಾತ ಸ್ಥಳಕ್ಕೆ ಮೊದಲು ಬಂದ ಸರಕಾರಿ ಅಧಿಕಾರಿಗಳೆಂದರೆ ಮಣಿಹಾರಿಯ ಬಿ.ಡಿ.ಓ. ಮತ್ತು ಸರ್ಕಲ್ ಆಫೀಸರ್, ಅವರಿಬ್ಬರೂ ಬಂದಾಗ ಆಗಲೇ ಮಧ್ಯಾಹ್ನ ೧೨-೩೦. ಈ ವಿಳಂಬದಿಂದ ರೊಚ್ಚಿಗೆದ್ದ ಜನ ಅವರಿಬ್ಬರನ್ನು ಥಳಿಸಿಬಿಟ್ಟಿತು. ಅವರನ್ನು ಉಳಿಸಿಕೊಳ್ಳುವುದಕ್ಕಾಗಿ ಹೆಚ್ಚಿ ಸಂಖ್ಯೆಯಲ್ಲಿ ಪೊಲೀಸರನ್ನು ಕರೆಸಬೇಕಾಯಿತು. ಅಪರಾಹ್ನ ಎರಡೂವರೆಯ ಹೊತ್ತಿಗೆ ಬಂದ ಜಿಲ್ಲಾ ಮಟ್ಟದ ಅಧಿಕಾರಿಗಳು ಮುಂದಿನ ಎರಡು ದಿನಗಳ ಕಾಲ ಯಾವುದೇ ಪರಿಣಾಮಕಾರಿ ಕ್ರಮ ಕೈಗೊಳ್ಳುವಲ್ಲಿ ವಿಫಲರಾದರು. ಅವರು ಮಾಡಿದ್ದೆಂದರೆ ಜಿಲ್ಲಾ ಕೇಂದ್ರವಾದ ಕಟಿಹಾರ ಹಾಗೂ ಮಣಿಹಾರಿಗಳ ನಡುವೆ ಅಲೆಯುವುದು. ಕಟಿಹಾರ ಪಟ್ನಾದಾಗ ತೀವ್ರ ಸಹಾಯ ಕೋರಿ ರಾಜ್ಯ ಸರ್ಕಾರಕ್ಕೆ ಸಂದೇಶ ಕಳಿಸುವುದು.

ಅಪಘಾತ ಸಂಭವಿಸಿದ ರಾತ್ರಿ ಮಧ್ಯ ರಾತ್ರಿಯ ನಂತರ-ಬಿಹಾರದ ಮುಖ್ಯ ಕಾರ್ಯದರ್ಶಿ ಅರುಣ ಪಾಠಕರು ಕೇಂದ್ರ ಸಂರಕ್ಷಣ ಕಾರ್ಯದರ್ಶಿಗೆ ಫೋನ್ ಮಾಡಿ ನೌಕಾಪಡೆಯ ಮುಳುಗುಗಾರರನ್ನು ಸೈನ್ಯಪಡೆಯ ಈಜುಗಾರರನ್ನು ನೆರವಿಗೆ ಕಳಿಸುವಂತೆ ಕೋರಿದರು. ಆದರೆ ಮರು ಸಂಜೆ ಅಲ್ಲಿಗೆ ಬಂದ ನೌಕಾಪಡೆಯ ಮುಳುಗುಗಾರರಿಗೆ ಅಂದು ಕೆಲಸ ಪ್ರಾರಂಭಿಸಲು ಶಕ್ಯವಾಗ ಇಲ್ಲ. ಯಾಕೆಂದರೆ, ರಾತ್ರಿ ಕೆಲಸ ಮಾಡಲು ಅಗತ್ಯವಾದ ಸರ್ಚ್ ಲೈಟುಗಳನ್ನು ಜಿಲ್ಲಾ ಆಡಳಿತ ಪೂರಯಿಸಿರಲಿಲ್ಲ.

ಮುಖ್ಯಮಂತ್ರಿ ಭಗವತ್ ಝಾ ಅಝಾದರು ಘಟನಾ ಸ್ಥಳಕ್ಕೆ ಬಂದಾಗ ಕೋಪದಿಂದ ಕುದಿಯುತ್ತಿದ್ದ ಜನಜಂಗುಳಿಯನ್ನು ಅವರು ಎದುರಿಸಬೇಕಾಯಿತು. ಅವರ ಸಂಗಡ ಇಬ್ಬರು ಮಂತ್ರಿಗಳೂ ಬಿಹಾರದ ಪೊಲೀಸ್ ಡೈರೆಕ್ಟರ್ ಜನರಲ್ ಜೆ.ಎಂ. ಕುರೇಶಿಯವರೂ ಬಂದಿದ್ದರು. ಜನಜಂಗುಳಿಯ ಸಿಟ್ಟು ತಕ್ಷಣ ಪರಿಹಾರ ಕಾರ್ಯ ಪ್ರಾರಂಭಿಸುವುದರಲ್ಲಿ ಜಿಲ್ಲಾ ಆಡಳಿತ ವಿಫಲವಾದುದಕ್ಕಷ್ಟೇ ಸೀಮಿತವಾಗಿ ಉಳಿಯಲಿಲ್ಲ. ಮುಂಚೆ ಈ ದೋಣಿ ಸೇವೆಯನ್ನು ರೈಲ್ವೆ ಆಡಳಿತ ನಿರ್ವಹಿಸುತ್ತಿತ್ತು. ಆಗೆಲ್ಲ ಅತ್ಯಂತ ಕಾರ್ಯಕ್ಷಮವಾಗಿ ನಡೆಯುತ್ತಿದ್ದ ವ್ಯವಸ್ಥೆಯನ್ನು ಬದಲಿಸಿ ನಡುವೆಯೇ ಅದನ್ನು ಖಾಸಗಿಯವರಿಗೆ ವಹಿಸಿಕೊಡಲಾಯಿತು. ಉತ್ತರ ಪ್ರದೇಶ-ಬಿಹಾರಗಡಿಯಲ್ಲಿರುವ ಬಕ್ಸರಿನಿಂದಾರಂಭಿಸಿ ಬಿಹಾರ-ಪಶ್ಚಿಮ ಬಂಗಾಲ ಗಡಿಯಲ್ಲಿರುವ ಸಕ್ರಿಘಾಟಿನವರೆಗೂ ಗಂಗೆಯಲ್ಲಿ ನೌಕಾ ಸಂಪರ್ಕವೊದಗಿಸುವ ವ್ಯವಸ್ಥೆಯನ್ನು ಬಿಹಾರದಲ್ಲಿ ಮೂವರು ಖಾಸಗಿ ಗುತ್ತಿಗೆದಾರರು ನೋಡಿಕೊಳ್ಳುತ್ತಿದ್ದಾರೆ. ನೃಪೇಂದ್ರಪ್ರಸಾದ್ ಸಿಂಗ್ ಉರುಫ್ ಬಚಾಸಿಂಗ್, ಗೋರಖನಾಥ್ ಉಪಾಧ್ಯಾಯ, ಮತ್ತು ಭಗ್ಗುಸಿಂಗ್ ಎಂಬವರೇ ಈ ಮೂವರು ಮಹನೀಯರು.

ಖಾಸಗೀಯವರ ದೋಣಿ ಸೇವೆಯನ್ನು ಸುರಕ್ಷಿತತೆಯ ದೃಷ್ಟಿಯಿಂದ ಮಾತ್ರ ನಿಲ್ಲಿಸಬೇಕೆಂಬುದು ಜನತೆಯ ಬೇಡಿಕೆಯಲ್ಲ. ಈ ಗುತ್ತಿಗೆದಾರರು ಆಂತರಿಕ ಜಲಪರ್ಯಟನಕ್ಕೆ

ಸಂಬಂಧಿಸಿದಂತಿರುವ ನಿಯಮಗಳನ್ನೆಲ್ಲ ಮುರಿಯುತ್ತಿದ್ದಾರಲ್ಲದೆ ಗುಂಡಾಗಳನ್ನು ತಮ್ಮ ಸೇವೆಯಲ್ಲಿಟ್ಟುಕೊಂಡು ಮನಬಂದಷ್ಟು ಹಣವನ್ನು ಪ್ರಯಾಣದರವೆಂದು ಪ್ರಯಾಣಿಕರಿಂದ ಹಿಂಡುತ್ತಾರೆಂಬುದೂ ಅವರ ದೂರಾಗಿತ್ತು. ಇದಕ್ಕೆಲ್ಲ ಪರಿಹಾರವೇನೆಂದರೆ ಪುನಃ ಇದನ್ನು ನಡೆಸಲು ರೈಲ್ವೆ ಇಲಾಖೆಗೇ ಒಪ್ಪವಿಸುವುದೊಂದೇ.

ಮರುದಿನ ಐದು ಸಾವಿರ ಜನ ಊರಲ್ಲಿ ಮೋರ್ಚಾ ತೆಗೆದು ಸರ್ಕಾರವು ಈ ದೋಣಿ ದುರಂತದ ನಂತರ ತೋರಿದ ನಿರ್ಲಕ್ಷ್ಯವನ್ನು ಖಂಡಿಸಿತು. ಅದರಿಂದ ಆಗಬಹುದಾದ ಅನಾಹುತಗಳನ್ನು ತಪ್ಪಿಸಲೆಂದು ಸರಕಾರ 300 ಜನ ಬಿಹಾರ ಮಿಲಿಟರಿ ಪೊಲೀಸರನ್ನು 39 ಜನ ಇನ್ಸ್‌ಪೆಕ್ಟರುಗಳನ್ನು ನೇಮಿಸಿತು. ಬಿಹಾರ ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರೂ ಲೋಕಸಭೆಯಲ್ಲಿ ಕಟಿಹಾರ ಮತಕ್ಷೇತ್ರವನ್ನು ಪ್ರತಿನಿಧಿಸುವ ಸದಸ್ಯರು ಆದ ತಾರೀಖ್ ಅನ್ವರ್ ಮತ್ತು ಮಣಿಹಾರ್ ಘಾಟದ ವಿಧಾನ ಸಭಾಸದಸ್ಯ ಮುಬಾರಕ್ ಹುಸೇನ್ ಇಬ್ಬರೂ ಈ ಜನಜಂಗುಳಿಯನ್ನು ಕುರಿತು ಮಾತಾಡ ಲೆತ್ನಿಸಿದರು. ಈ ದೋಣಿದುರಂತ "ದೈವೀ ಪ್ರ

ಇದು ಇವರ

'ತೆರೆಗಳನ್ನಾಳುವ ರಾಣಿ' ಎಂದು ಒಂದೊಮ್ಮೆ ಬ್ರಿಟನ್ನಿಗೆ ಗೌರವ ಸಲ್ಲುತ್ತಿತ್ತು. ಆದರೆ ಇಂದು ಅದು ಇತಿಹಾಸಕ್ಕೆ ಸೇರಿ ಹೋದ ಮಾತು. ಬಿಹಾರದಲ್ಲಿ ಮಾತ್ರ ಗಂಗೆಯ ತೆರೆಗಳನ್ನಾಳುವ ವಂಶಗಳು ಇನ್ನೂ ರಾಜಾರೋಷವಾಗಿ ಮೆರೆಯುತ್ತಿದೆ.

ಗಂಗೆಯನ್ನು ದಾಟಿಸುವ ಗುತ್ತಿಗೆಯನ್ನು ಹಿಡಿಯುವವರಲ್ಲಿ ಬಚ್ಚಾಸಿಂಗ್, ಗೋರಖನಾಥ ಉಪಾಧ್ಯಾಯ, ಲಾಲಮೋಹರ್ ಉಪಾಧ್ಯಾಯ, ನೃಪೇಂದ್ರ ಪ್ರಸಾದ್ ಸಿಂಗ್ ಉರ್ಫ್ ಬಚ್ಚಾಸಿಂಗ್, ರತ್ನೇಶ ನಾರಾಯಣಸಿಂಗ್ ಮತ್ತು ಅಮರೇಂದ್ರ ನಾರಾಯಣಸಿಂಗರದು ದೊಡ್ಡ ಹೆಸರು. ಬಿಹಾರದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಹರಿಯುವ ಗಂಗೆ ಈ ರಾಜ್ಯವನ್ನು ವಸ್ತುತಃ ಉತ್ತರ, ದಕ್ಷಿಣಗಳಾಗಿ ಇಬ್ಭಾಗಿಸುತ್ತದೆ. ದಂಡೆಯ ಎರಡೂ ಬದಿಗಳಲ್ಲಿ ೧೦೦ ಕ್ಕಿಂತ ಹೆಚ್ಚು ಘಾಟುಗಳಿವೆ. ಈ ಎಲ್ಲ ಘಾಟುಗಳ ಮೂಲಕ ನೌಕಾಸಾರಿಗೆ ನಿರ್ವಹಿಸುವ ಗುತ್ತಿಗೆ ಈ ಐದಾರು ಮನೆತನಗಳ ಸ್ವತ್ತಾಗಿಯೇ ಉಳಿದಿದೆ. ಇದು ಬ್ರಿಟಿಶರ ಕಾಲದಿಂದಲೂ ನಡೆದುಕೊಂಡು ಬಂದ ಪದ್ಧತಿಯೇ ಆಗಿರುವುದರಿಂದ ಇವರೆಲ್ಲ ಬಹು ಭದ್ರವಾಗಿ ತಳವೂರಿದ್ದಾರೆ. ಅಪಾರ ಧನಸಂಪತ್ತು ಮತ್ತು ರಾಜಕೀಯ ವರ್ಚಸ್ಸನ್ನು ಇವರು ಗಳಿಸಿಕೊಂಡಿದ್ದಾರೆ. ಇದರಿಂದಾಗಿ ರಾಜ್ಯ ಹಾಗೂ ಕೇಂದ್ರ ಸರಕಾರಗಳೆರಡರಲ್ಲೂ ಮಂತ್ರಿಗಳು ಮತ್ತು ಪ್ರಭಾವಿ ಅಧಿಕಾರಿಗಳೊಂದಿಗೆ ನೇರ, ಘನಿಷ್ಠ ಸಂಪರ್ಕ ಬೆಳೆಸಿ ಉಳಿಸಿಕೊಳ್ಳಲು ಇವರಿಗೆ ಶಕ್ಯವಾಗಿದೆ.

ಬಿಹಾರದಲ್ಲಿ ಗಂಗಾ ನದಿಯಲ್ಲಿ ದೋಣಿ ಸೇವೆಗಳನ್ನು ಹೇಗೆ ಗುತ್ತಿಗೆ ಕೊಡಲಾಗುತ್ತದೆಂಬುದು ಗುಟ್ಟೇನಲ್ಲ. ಈ ಗುತ್ತಿಗೆದಾರರೆಲ್ಲ ತಮ್ಮ ದೋಣಿಗಳ ಸಾಮರ್ಥ್ಯವನ್ನು ಮೀರಿ ಪ್ರಯಾಣಿಕರನ್ನೂ ಸರಕನ್ನೂ, ದನಕರುಗಳನ್ನೂ ಹೊತ್ತು ಸಾಗಿಸುತ್ತವೆಂಬುದು ಆ ರಾಜ್ಯದಲ್ಲಿ ಪ್ರತಿಯೊಬ್ಬರಿಗೂ ಗೊತ್ತಿದ್ದ ಸಂಗತಿ. ಅಂತರ್ಜಲ ಸಾರಿಗೆ ನಿಯಮಗಳನ್ನು ಅವುಗಳ ಬೇಕಾಬಿಟ್ಟಿ ಉಲ್ಲಂಘನೆಯ ಮೂಲಕವೇ ಇವರೆಲ್ಲ ·ಅನುಸರಿಸುತ್ತಾರೆ. ಇವರ ವರ್ಚಸ್ಸು ಎಷ್ಟು ಪ್ರಬಲವಾಗಿದೆಯೆಂದರೆ, ಮಣಿಹಾರಘಾಟ ಮತ್ತು ಸಾಹೇಬಗಂಜಗಳ ನಡುವಿನ ಸಾರಿಗೆಯನ್ನು ಒಂದು ಕಾಲಕ್ಕೆ ರೈಲ್ವೆ ಇಲಾಖೆಯೇ ನೋಡಿಕೊಳ್ಳುತ್ತಿತ್ತು. ರೈಲ್ವೆಗೆ ಕಲ್ಲಿದ್ದಲಿನ ಕೊರತೆಯೆಂಬಂತಹ ಕ್ಷುಲ್ಲಕ ಕಾರಣವನ್ನು ಮುಂದೊಡ್ಡಿ ಬಿಹಾರ ಸರಕಾರ ಅದನ್ನು ರೈಲ್ವೆಯಿಂದ ಕಸಿದು ಬಚ್ಚಾಸಿಂಗನ

ಕೋಪದಿಂದ ಆಯಿತು" ಎಂದು ಅವರು ನುಡಿಯುತ್ತಿದ್ದಂತೇ ಜನತೆ ಪೂರ್ತಿ ತಾಳ್ಮೆ ಕಳೆದುಕೊಂಡಿತು. ವೇದಿಕೆಗೆ ನುಗ್ಗುತ್ತಿದ್ದ ಜನತೆಯ ಕ್ಷೋಭೆಯಿಂದ ಈ ಇಬ್ಬರೂ ಜನ ಪ್ರತಿನಿಧಿಗಳನ್ನು ಪಾರು ಮಾಡಲು ಪೊಲೀಸರು ಲಾಠೀ ಚಾರ್ಜಿಗೆ ಇಳಿಯಬೇಕಾಯಿತು.

ಜನಕ್ಷೋಭೆ ಎಷ್ಟೊಂದು ತೀವ್ರವಾಗಿತ್ತೆಂದರೆ ಆಗಸ್ಟ್ ಏಳರಂದು ಒಂದು ಸಾವಿರ ಜನ ಸಾಹೇಬಗಂಜಿನಲ್ಲಿ ದೋಣಿಯ ಟಿಕೆಟ್ ಕಚೇರಿಯನ್ನು ಸುಟ್ಟು ಹಾಕಿತು. ಮಣಿಹಾರ ಘಾಟಿನಲ್ಲಿಯ ಜನ ಜಿಲ್ಲಾ ಆಡಳಿತದ ಪ್ರತಿಯೊಂದು ಕೃತಿಯನ್ನು ಸಂದೇಹದಿಂದಲೇ ನೋಡುತ್ತಿತ್ತು. ಮುಳುಗಿದ್ದ ದೋಣಿಯನ್ನು ಎತ್ತಿ ಎಳೆದು ದಂಡೆಗೆ ತರಲೆಂದು ಜಿಲ್ಲಾ ಆಡಳಿತ ಒಂದು ಎಳೆ ದೋಣಿಯನ್ನು ತರಿಸಿತು. ಅದು ದುರ್ಘಟನೆಯ ಸ್ಥಳವನ್ನು ಸಮೀಪಿಸುತ್ತಿದ್ದಂತೆಯೇ ಜನ ತೀವ್ರ ಪ್ರತಿಭಟನೆಯೊಡ್ಡಿ ಅದನ್ನು ಹಿಂದಕ್ಕೆ ತರಿಸಿತು. ಈ ಎಳೆದೋಣಿಯನ್ನು ಸರಕಾರ ತರಿಸಿದ ಉದ್ದೇಶವೇನೆಂದರೆ ಆಗಲೇ ಮುಳುಗಿದ ಉಗಿ ದೋಣಿಯನ್ನು ನದಿಯ ಪಾತ್ರದ ಉಸಿರಿನಲ್ಲಿ ಇನ್ನಷ್ಟು ಆಳವಾಗಿ ತಳ್ಳಿ ಅದರಲ್ಲಿ ಸತ್ತ ಜನರ ಸಂಖ್ಯೆಯನ್ನು ಎಂದೂ


ಸಾಮ್ರಾಜ್ಯ!

ಕೊಟ್ಟಿತು.

ಬಿಹಾರದ ಅನೇಕ ರಸ್ತೆ ಮತ್ತು ರೇಲ್ವೆ ಸೇತುವೆಗಳ ನಿರ್ಮಾಣಕ್ಕೆ ಅಡ್ಡಗಾಲು ಹಾಕಿ ತಲೆತಲಾಂತರಗಳವರೆಗೆ ತಡೆದು ನಿಲ್ಲಿಸಲಾಗಿದೆ. ಒಂದೇ ಉದಾಹರಣೆಯನ್ನು ಇಲ್ಲಿ ನೋಡಬಹುದು. ಪಾಟ್ನಾದ ಬಳಿ ಗಂಗೆಯ ಮೇಲೆ ರಸ್ತೆ ಸೇತುವೆಯೊಂದನ್ನು ನಿರ್ಮಿಸಿದರೆ ದಕ್ಷಿಣೋತ್ತರ ಬಿಹಾರಗಳನ್ನು ಕೂಡಿಸಿದಂತಾಗುವುದು ಎಂಬ ದೃಷ್ಟಿಯಿಂದ ೧೯೧೬ರಲ್ಲಿಯೇ ಆಗಿನ ಬ್ರಿಟಿಶ್ ಸರಕಾರ ಯೋಜನೆಯೊಂದನ್ನು ಸಿದ್ಧಪಡಿಸಿತು. ಆದರೆ ಅಲ್ಲಿಯ ಸಾರಿಗೆ ಗುತ್ತಿಗೆದಾರರ ವರ್ಚಸ್ಸು ಎಷ್ಟೊಂದು ಬಲವಾಗಿತ್ತೆಂದರೆ ೧೯೧೬ ರಿಂದ ೧೯೭೧ರ ವರೆಗೆ ಅಂದರೆ ಮುಂದಿನ ೫೫ ವರ್ಷಗಳ ವರೆಗೆ ಈ ಸೇತುವೆ ನಿರ್ಮಾಣ ಕಾರ್ಯ ಪ್ರಾರಂಭವಾಗದಂತೆ ತಡೆಹಿಡಿಯಲಾಯಿತು. ಮುಂದೆ ೧೯೭೧ ರಲ್ಲಿ ಆಗಿನ ಪ್ರಧಾನಿ ಇಂದಿರಾಗಾಂಧಿಯವರು ಈ ಸೇತುವೆ ನಿರ್ಮಾಣವಾಗಲೇಬೇಕೆಂದು ಪಟ್ಟು ಹಿಡಿದಾಗಲೇ ಅದರ ರಚನೆಯಾಯಿತು. ಆದರೆ ಚೋದ್ಯವೆಂದರೆ ಅದುವರೆಗೆ ಈ ಸೇತುವೆಗಳ ನಿರ್ಮಾಣವನ್ನು ವಿರೋಧಿಸಿ ತಡೆಯುತ್ತ ಬಂದಿದ್ದ ಗುತ್ತಿಗೆದಾರನಿಗೆ ಸೇತುವೆಗಾಗಿ ಸಾರ್ವಜನಿಕರ ಮೇಲೆ ವಿಧಿಸಲಾದ ಜಕಾತಿಯನ್ನು ವಸೂಲು ಮಾಡುವ ಗುತ್ತಿಗೆಯನ್ನು ನೀಡಲಾಯಿತು!

ಇಲ್ಲಿಯ ನೌಕಾ ಸಾರಿಗೆಯಲ್ಲಿ ಆಗಾಗ ಸಂಭವಿಸುವ ಅಪಘಾತಗಳನ್ನು ಸಾಮಾನ್ಯವಾಗಿ ಸರಕಾರದ ಸಾರಿಗೆ ಅಧಿಕಾರಿಗಳ ಸಂಬಂಧಪಟ್ಟ ಇತರ ಅಧಿಕಾರಿಗಳೂ ದುರ್ಲಕ್ಷಿಸಿಬಿಡುತ್ತಾರೆ. ಪೋಲೀಸು ಹಾಗೂ ಗುತ್ತಿಗೆದಾರರ ನಡುವಂತೂ ಅಪೂರ್ವ ಸಖ್ಯವಿದೆ. ಅಂತೆಯೆ ಚಿಕ್ಕಪುಟ್ಟ ನಾಡ ದೋಣಿಗಳು ಸಹ ನದಿಯಲ್ಲಿ ಸಾರಿಗೆ ನಡೆಸದಂತೆ ಅವರು ಕ್ರಮ ಕೈಕೊಳ್ಳುತ್ತಾರೆ. ೧೯೭೬ ರ ನವೆಂಬರ್ ೨೯ ರಂದು ನಡೆದೊಂದು ಘಟನೆಯನ್ನು ನೋಡಬಹುದು. ಅಂದು ಬಕ್ಸಾರದಲ್ಲಿ ಒಂದು ಚಿಕ್ಕ ನಾಡ ದೋಣಿಯಲ್ಲಿ ಕೆಲವರು ಪ್ರಯಾಣಿಕರು ಏರಿದರು. ಅದು ಗೊತ್ತಾಗುತ್ತಲೇ ಅಲ್ಲಿಯ ಗುತ್ತಿಗೆದಾರ ಸ್ಥಳಕ್ಕೆ ಧಾವಿಸಿ ಬಂದ. ಅವನ ಆಜ್ಞೆಯ ಪ್ರಕಾರ ಆ ನಾಡ ದೋಣಿಗೆ ನಾವಿಕರನ್ನು ಪ್ರಯಾಣಿಕರನ್ನು ಬಿಗಿದು ಕಟ್ಟಿ ಎಲ್ಲರ ಕಣ್ಣೆದುರಿಗೇ ಅವರನ್ನು ನೀರಿನಲ್ಲಿ ಮುಳುಗಿಸಿಬಿಡಲಾಯಿತು.

ಅಂಥವರ ಆಜ್ಞೆಯನ್ನು ಉಲ್ಲಂಘಿಸುವ ಎದೆ ಯಾರಿಗಿದೆ ನಮ್ಮ ಈ ಪ್ರಜಾರಾಜ್ಯದಲ್ಲಿ? •



ಈ ವ್ಯಕ್ತಿಗೆ ಸಾಮಾಜಿಕ ರಕ್ಷಣೆ ಪಡೆಯುವ ಅರ್ಹತೆ ಇದೆ.

ಇವರನ್ನು ಗುರುತಿಸಲು ನೀವು ನಮಗೆ ಸಹಾಯ ಮಾಡುವಿರಾ?

[illegible]

[illegible]

ಭಾರತ ಸರ್ಕಾರ

ವೈಯಕ್ತಿಕ ಅಪಘಾತ ವಿಮಾ ಸಾಮಾಜಿಕ ರಕ್ಷಣಾ ಯೋಜನೆ.

ಯುನೈಟೆಡ್ ಇಂಡಿಯಾ
ಇನ್ಶೂರೆನ್ಸ್ ಕಂಪನಿ ಲಿಮಿಟೆಡ್

(ಜನರಲ್ ಇನ್ಶೂರೆನ್ಸ್ ಕಾರ್ಪೋರೇಷನ್ ಆಫ್ ಇಂಡಿಯಾದ ಅಂಗಸಂಸ್ಥೆ)
24, ವೈಟ್ಸ್ ರೋಡ್, ಮದರಾಸ್-600 014

ಎಲ್ಲೆಡೆಯೂ ತಲುಪಲು ಸಹಾಯ ಮಾಡಿರಿ.

Mudra:M:UI:3598 Kan

ಹೊರಬರದಂತೆ ಮಾಡುವುದೇ ಆಗಿದೆಯೆಂದು ಜನರು ಭಾವಿಸಿದ್ದರು. ರಾಜ್ಯಸರ್ಕಾರ ವಿಶೇಷತಃ ಕಟಿಹಾರ್ ಜಿಲ್ಲಾ ಆಡಳಿತ ಮತ್ತು ಜನತೆಯ ನಡುವೆ ಈ ರೀತಿ ಸಂಶಯದ ಅಪನಂಬಿಕೆಯ ವಾತಾವರಣ ಹುಟ್ಟಿಕೊಳ್ಳುವುದಕ್ಕೆ ಕಾರಣವೇನೆಂಬುದಕ್ಕೆ ಯಾರು ಹೆಚ್ಚು ಆಳವಾಗಿ ಯೋಚಿಸುವ ಅಗತ್ಯವೇ ಇಲ್ಲ; ಅಷ್ಟೆಂದು ಸ್ಪಷ್ಟವಿದೆ ಅಲ್ಲಿಯ ಪರಿಸ್ಥಿತಿ.

ಸೈನ್ಯವ ತನ್ನ ಯಾಂತ್ರಿಕ ದೋಣಿಗಳನ್ನು ತಂದು ಮುಳುಗಿದ ದೋಣಿಯನ್ನು ಮೇಲೆತ್ತಲು ಯತ್ನಿಸಿತಾದರೂ ಪ್ರಯತ್ನ ಫಲಿಸಲಿಲ್ಲ. ಕಡೆಗೆ ಇನ್ನೊಂದು ಉಗಿದೋಣಿ ಹಾಗು ಹರಗೋಲಿನ ನೆರವಿನಿಂದ ಆಗಸ್ಟ್ 9 ರಂದು ಅದನ್ನು ಪ್ರವಾಹದ ನಟ್ಟ ನಡುವಿನ ತನಕ ಎಳೆದು ನಿಲ್ಲಿಸಲು ಯತ್ನಿಸಲಾಯಿತು. ಆದರೆ ಅದನ್ನು ಎತ್ತಿ ಪ್ರವಾಹ ಮಧ್ಯದಲ್ಲಿ ನಿಲ್ಲಿಸಲು ಸಾಧ್ಯವಾದದ್ದು ಆಗಸ್ಟ್ ೧೧ರಂದು ಮಾತ್ರ. ಆದರೆ ಮಹಾಪೂರದಿಂದಾಗಿ ಪ್ರವಾಹದ ನೆರವು ವಿಪರೀತವಾಗಿದ್ದರಿಂದ ಅದನ್ನು ಕೂಡಲೇ ದಂಡೆಗೆ ತರಲು ಮಾತ್ರ ಶಕ್ಯವಾಗಲಿಲ್ಲ.

ಇಲ್ಲಿಯೂ ಸರಕಾರದ ವರ್ತನೆ ಕೆಲವೆಡೆ ಅರ್ಥವಾಗದಷ್ಟು ವಿಚಿತ್ರವಾಗಿದೆ. ನಾರ್ತ್-ಈಸ್ಟ್ ಫ್ರಾಂಟೆಯರ್ ರೈಲ್ವೆಯ ಅಧಿಕಾರಿಗಳು ಮುಳುಗಿದ ದೋಣಿಯನ್ನು ತಾವು ಎತ್ತುವುದಾಗಿ ತಾವಾಗಿಯೇ ಮುಂದೆ ಬಂದರೂ ಜಿಲ್ಲಾ ಆಡಳಿತದ ಅಧಿಕಾರಿಗಳು ಅದಕ್ಕೆ ಒಪ್ಪಿಗೆ ನೀಡಲಿಲ್ಲ. ಕಲಕತ್ತಾ ಪೋರ್ಟ್ ಟ್ರಸ್ಟ್ ಕೂಡ ಈ ಕಾರ್ಯಕ್ಕೆ ಮುಂದೆ ಬಂದಿತ್ತಾದರೂ ಅದಕ್ಕೂ ಪ್ರೋತ್ಸಾಹ ದೊರೆಯಲಿಲ್ಲ. ಇದರಿಂದಾಗಿ ಜನ ಇನ್ನಷ್ಟು ರೊಚ್ಚಿಗೆದ್ದರು.

ಇದೇ ಬಚ್ಚಾಸಿಂಗ್‌ನಿಗೆ ಸೇರಿದ್ದ 'ನಾರಾಯಣಿ' ಎಂಬ ನೌಕೆಯು ಪಾಟ್ನಾದ ಉತ್ತರಕ್ಕೆ ಪಹಲೇಜಘಾಟಿನ ಬಳಿ ಗಂಗೆಯನ್ನು ದಾಟುವಾಗ ಮುಳುಗಿ 100 ಜನರನ್ನು ಆಹುತಿ ತೆಗೆದುಕೊಂಡಿತ್ತು. ಸ್ವಾತಂತ್ರ್ಯ ಬಂದ ಹೊಸತರಲ್ಲಿ ಕೂಡ ಬಚ್ಚಾಸಿಂಗ್ ಸಾಕಷ್ಟು ಪ್ರಭಾವಿ ವ್ಯಕ್ತಿಯೇ ಆಗಿರಬೇಕು. ಈ ದುರ್ಘಟನೆಯ ಮೇಲೆ ಸಲೀಸಾಗಿ ತೆರೆ ಎಳೆಯಲು ಆಗಲೇ



"ನ್ಯಾಯಾಧೀಶರಿಗೇ ಅನ್ಯಾಯ ಮಾಡಿದೆಯಾ?"
"ಮತ್ತೇನ್ಮಾಡ್ಲಿ? ಸಿಕ್ಕಿಬಿದ್ರೆ ದಂಡ ಕಟ್ಟಲು ಹಣ ಬೇಕಲ್ಲಾ."

ಅವನಿಗೆ ಸಾಧ್ಯವಾಯಿತು. ಮೊನ್ನಿನ ದುರಂತದಲ್ಲಿ 300ಕ್ಕೂ ಹೆಚ್ಚು ಜನ ಅಮಾಯಕರನ್ನು ಕಬಳಿಸಿದ ಉಗಿ ದೋಣಿ, ಅಲ್ಲಿಯ ಜನರ ಪ್ರಕಾರ, ಪ್ರಯಾಣಿಕರ ಸಾರಿಗೆಗೆಂದು ಮಾಡಿಸಿದ್ದಲ್ಲವೇ ಅಲ್ಲ. ಪ್ರಯಾಣಿಕರ ಸಾರಿಗೆಗೆ ಬಳಸಲಾರಂಭಿಸುವ ಮುನ್ನ ಅದನ್ನು ಗಂಗಾ ಪ್ರವಾಹದಲ್ಲಿ ಕಲ್ಲುಗಳನ್ನು ದನಗಳನ್ನು ಸಾಗಿಸುವುದಕ್ಕೆ ಮಾತ್ರ ಬಳಸಲಾಗುತ್ತಿತ್ತಂತೆ.

ಮಣಿಹಾರಘಾಟಿನಲ್ಲಿ ಈ ದುರ್ಘಟನೆಯಲ್ಲಿ ಅಸುನೀಗಿದವರ ದುಃಖತಪ್ತ ಸಂಬಂಧಿಕರು ಹಲವಾರು ದಿನಗಳ ಕಾಲ ಬೀಡುಬಿಟ್ಟಿದ್ದರು. ನವವಿವಾಹಿತ ಇಂದ್ರಜಿತ್‌ಕುಮಾರ್ ದಾಸನ ಶವವನ್ನು ಅವರ ಹೆಂಡತಿಯ ಸೋದರರು ಅನೇಕ ದಿನ ಬರ್ಫಾದಲ್ಲಿಟ್ಟು ರಕ್ಷಿಸಿಕೊಂಡು ಬಂದರು. ತಮ್ಮ ಸೋದರಿಯ ಶವ ಸಿಕ್ಕ ನಂತರ ಎರಡಕ್ಕೂ ಜೊತೆಯಾಗಿಯೇ ಅಂತ್ಯಸಂಸ್ಕಾರ ನಡೆಸಬೇಕೆಂಬುದು ಅವರ ಇಚ್ಛೆಯಾಗಿತ್ತು. ಇಂದ್ರಜಿತ್ ಕುಮಾರನು ಹೆಂಡತಿಯನ್ನು ಉಳಿಸಲು ಹೋರಾಡಿ ತನ್ನ ಪ್ರಾಣವನ್ನೇ ತೆತ್ತಿದ್ದನು.

ಭೋಯಿವಾದೇವಿಯೆಂಬ ವೃದ್ಧೆ ತನ್ನ

ಮಗಳು ಮತ್ತು ಐವರು ಮೊಮ್ಮಕ್ಕಳೊಂದಿಗೆ ಪಾರಾದದ್ದು ಮಾತ್ರ ಒಂದು ಆಶ್ಚರ್ಯವೇ. ದೋಣಿ ಹೊರಳಿದಾಗ ಇವರೆಲ್ಲ ಎಸೆಯಲ್ಪಟ್ಟದ್ದು. ಆದರೆ ಅಲ್ಲಿ ನೀರಿನ ಆಳ ಹೆಚ್ಚರಲಿಲ್ಲವಾದ್ದರಿಂದ ಪರಸ್ಪರರನ್ನು ತಬ್ಬಿಕೊಂಡು ಅವರೆಲ್ಲ ನೀರಲ್ಲೇ ಸ್ವಲ್ಪ ಹೊತ್ತು ಉಳಿದರು. ನೆರೆಯ ಹಳ್ಳಿಗರು ನದಿಗಿಳಿದು ಇವರನ್ನೆಲ್ಲ ಬದುಕಿಸಿದರು ರಾಮನಾಥ ಚೌಧುರಿ, ಅವರ ಹೆಂಡತಿ ತಾರಾದೇವಿ ಹಾಗೂ ಅವರ ನಾಲ್ವರು ಮಕ್ಕಳು ಕೂಡ ಇದೇ ರೀತಿ ಸುದೈವದಿಂದಲೇ ಬದುಕಿ ಉಳಿದರು.

ಭಾಗವತ್ ಪಾಸ್ವಾನ್ ಮಾತ್ರ ಇಷ್ಟು ಸುದೈವಿಯಾಗಿರಲಿಲ್ಲ. ಅವನು ಉಳಿದರೂ ಆತನ 11 ವರ್ಷದ ಮಗ ಮಂಟುಪಾಸ್ವಾನ್ ಸತ್ತುಹೋದ. ಬೋಲಾ ತಿವಾರಿ ಹೇಗೋ ಈಜಿ ದಂಡೆಗೆ ಬಂದನಾದರೂ ಅವನ ತಂದೆ ಹಾಗು 35 ವರ್ಷದ ಅಕ್ಕ ಇನ್ನೂ 16 ಜನ ಯಾತ್ರಿಗಳೊಡನೆ ನೌಕೆಯೊಡನೆಯೇ ನೀರಿನ ತಳಕ್ಕೆ ಹೋದವರು ಮೇಲೇಳಲಿಲ್ಲ.

ಬಿಹಾರ ಸರಕಾರ ಈ ದುರ್ಘಟನೆಯ ಬಗ್ಗೆ ವಿಚಾರಣೆ ನಡೆಸಲು ತಿಳಿಸಿ ವಿಭಾಗೀಯ ಕಮೀಶನರನ್ನು ನೇಮಿಸಿದೆ. ಈ ದುರ್ಘಟನೆಯ ಹಿಂದಿನ ಎಲ್ಲ ಅಂಶಗಳನ್ನು ಈ ಏಕ ಸದಸ್ಯ ಆಯೋಗ ಪರಿಶೀಲಿಸಿ ಪರಿಹಾರ ಸೂಚಿಸುವುದು. ತಪ್ಪಿತಸ್ಥರನ್ನು ಬಯಲಿಗೆಳೆಯುವುದು. ಕಾನೂನಿನಲ್ಲೂ ಸಾರಿಗೆ ನಿಯಮಗಳಲ್ಲೂ ಇರಬಹುದಾದ ದೋಷಗಳನ್ನು ಕಂಡುಹಿಡಿದು ಸುಧಾರಣೆಗಳನ್ನು ಸೂಚಿಸುವುದು ಎಂದು ಸರಕಾರ ಹೇಳುತ್ತಲೇ ಇದೆ. ●

ಕಡಲ ದುರಂತಗಳು

ಸಂಕಟಗ್ರಸ್ತವಾದ ಅಥವಾ ಅಪಘಾತಕ್ಕೀಡಾದ ಯಾವುದೇ ನೌಕೆಯನ್ನು ಕಂಡರೂ ಅನ್ಯ ಶಕ್ತ ನೌಕೆಗಳು ತಮ್ಮಿಂದಾದ ಸಹಾಯ ನೀಡಬೇಕೆಂದೂ ಸಂಕಟದಲ್ಲಿರುವ ನೌಕೆಯಲ್ಲಿನ ಜನರನ್ನು ರಕ್ಷಿಸಬೇಕೆಂದೂ ಹೇಳುವ ಅಂತರರಾಷ್ಟ್ರೀಯ ಕಾನೂನಿಗಳಿಗೇನೂ ಕೊರತೆ ಇಲ್ಲ. ಆದರೆ 1988ರ ಜೂನ್ 9 ರಂದು ಚೀನಿ ಸಮುದ್ರದಲ್ಲಿ ಸಂಭವಿಸಿದ ಒಂದು ನೌಕಾ ದುರಂತದಲ್ಲಿ ಈ ಕಾನೂನುಗಳ ವಾಸ್ತವತೆಯನ್ನು ಪ್ರಶ್ನಿಸುವ ಸಂದರ್ಭ ಬಂದೊದಗಿದೆ.

ಒಂದು ನೂರ ಹತ್ತು ವಿಯೆಟ್ನಾಮಿಗಳನ್ನೊಳಗೊಂಡ ಹಡಗವು ದಕ್ಷಿಣ ಚೀನಿ ಸಮುದ್ರದಲ್ಲಿ ಸಂಕಟಗ್ರಸ್ತವಾಗಿ ತೇಲುವದನ್ನು ಅಮೆರಿಕದ ನೌಕಾದಳದ 'ದುಬುಕ್' ಎಂಬ ನೌಕೆಯು ಪತ್ತೆ ಹಚ್ಚಿತು. ಆ ನೌಕೆಗೆ ತುಸು ನೀರು ಮತ್ತು ಆಹಾರವನ್ನೊದಗಿಸಿ ಈ ಶಕ್ತನೌಕೆಯು ತನ್ನ ಪ್ರಯಾಣವನ್ನು ಪರ್ಶಿಯನ್ ಕೊಲ್ಲಿಯತ್ತ ಮುಂದುವರೆಸಿತೇ ವಿನಾ ಆ ವಿಪನ್ನ ನೌಕೆಯಲ್ಲಿನ ಯಾವುದೇ ಜನರನ್ನು ತನ್ನೊಳಗೆ ಸೇರಿಸಲಿಲ್ಲ. ಗ್ರಸ್ತ ನೌಕೆಯ ಜನರೆಲ್ಲಾ ಸಮುದ್ರದ ವಿಶಾಲತೆಯಲ್ಲಿ ತೇಲಿ ತೇಲಿ ದಿನಗಟ್ಟಲೇ ಕಡಲ ಕ್ರೂರ ಅಲೆಗಳೊಡನೆ ಅಸಹಾಯಕವಾದ ಜೀವನ ಯುದ್ಧ ನಡೆಸಿದರು. ಹಸಿವಿನಲ್ಲಿ ಬಳಲುತ್ತಿದ್ದ ನಾವಿಕರು ಅದೆಂತಹ ಕೃತ್ಯವನ್ನೂ ಮಾಡಲು ಹಿಂಜರಿಯುವುದಿಲ್ಲವೆಂಬುದಕ್ಕೆ ಉದಾಹರಣೆಯೋ ಎಂಬಂತೆ ಒಬ್ಬ ಬಾಲಕ, ಇನ್ನೊಬ್ಬ ಯುವಕ, ಮತ್ತೊಬ್ಬ ಯುವತಿಯನ್ನು ನೀರಲ್ಲಿ ಮುಳುಗಿಸಿ, ಕೊಂದು ಅವರ ದೇಹದ ಭಾಗಗಳನ್ನು ತುಂಡು ತುಂಡಾಗಿ ಬೇಯಿಸಿ ತಿಂದರು. ಜೂನ್ 28, 1988ರಂದು ಫಿಲಿಫಿನ್ ದ್ವೀಪದ ಬೆಸ್ತರು ಈ ವಿಪನ್ನ ನೌಕೆಯನ್ನು ಕಂಡು ಅದರಲ್ಲಿ ಇನ್ನೂ ಬದುಕಿದ್ದ 52 ಜನರನ್ನು ತಮ್ಮೊಡನೆ ಸೇರಿಸಿ ಉಳಿಸಿದರು. ಉಳಿದ 58 ಜನರೂ ಪ್ರಕೃತಿಯ ನಿಯಮಕ್ಕನುಸಾರವಾಗಿ ನೀರಲ್ಲಿ ಮುಳುಗಿಯೋ, ಹಸಿವು ಬಿಸಿಲಿನಿಂದಲೋ ಅಸುನೀಗಿದ ಭಯಾನಕ ನಿಜ ಜೀವನ ದರ್ಶನವನ್ನೊಂದೆಡೆ ಇತ್ತರೆ, ಇನ್ನೊಂದೆಡೆ 'ದುಬುಕ್' ನ ಕಮಾಂಡರ ಕ್ಯಾಪ್ಟನ್ ಅಲೆಕ್ಸಾಂಡರ್ ಬಾಲಿಯನ್‌ನನ್ನು ಪಾಟೀಸವಾಲಿಗೊಳಪಡಿಸಿ ಅವನನ್ನು ಕಮಾಂಡರಿಕೆಯಿಂದ ಮಾತ್ರ ತೆಗೆದು ಹಾಕಲಾಯಿತು ಎಂಬ ಅರ್ಥಪೂರ್ಣ ಸಂಗತಿ ನಮ್ಮನ್ನು ಎದುರಿಸುತ್ತದೆ.

"ಆರಬಿ"

("ಟೈಮ್" ಪತ್ರಿಕೆಯಲ್ಲಿನ ಸಮಾಚಾರದ ಆಧಾರದಿಂದ)



●ಎಸ್.ಎನ್.ಲಕ್ಷ್ಮೀಪತಿ●

ಕರ್ಮಯೋಗಿ
ಡಾ|| ನೀಲರತನ್ ಸರಕಾರ್

ಸುಂದರ ಬನವೆಂಬ ಖ್ಯಾತಿಯ ಬಂಗಾಲದ ಮತ್ತೊಬ್ಬ ಸುಪುತ್ರ ಡಾ|| ನೀಲರತನ್ ಸರಕಾರ್. ಆದರೆ ನಮಗೆ ಅವರ ನೆನಪು ಇಂದು ಕೇವಲ ಎನ್.ಆರ್.ಎಸ್. ಆಸ್ಪತ್ರೆಯ ರೂಪದಲ್ಲಿ ಉಳಿದಿದೆ. ಡಾ|| ನೀಲರತನ್ ಸರಕಾರ್ ಹುಟ್ಟಿದ್ದು ಗಾಂಧಿ ಜನ್ಮದಿನದಂದೇ. ಆದರೆ ಎಂಟು ವರ್ಷ ಮೊದಲು (1861). ಪಶ್ಚಿಮ ಬಂಗಾಲದ ಡೈಮಂಡ್ ಹಾರ್ಬರಿನ ಹತ್ತಿರದ ನೇತಾರ ಎಂಬ ಹಳ್ಳಿಯಲ್ಲಿ. ಅದು ಸರಕಾರರ ಪೂರ್ವಜರ ಊರು. ಅವರ ತಂದೆ ನಂದಲಾಲ್ ಸರಕಾರ್. ಬಡಕುಟುಂಬದವರು. ತುಂಡು ಭೂಮಿಯಷ್ಟೆ ಅವರಿಗಿದ್ದ ಆಸ್ತಿ. ಉದರ ನಿಮಿತ್ತ ಸಂಸಾರದ ಮಂದಿ ಗೆಲ್ಲ ವಿದ್ಯೆಯನ್ನು ಆಶ್ರಯಿಸುವ ಅನಿವಾರ್ಯ ಸಂದರ್ಭ. ನೀಲರತನರು ಮೂರು ವರ್ಷದವರಿದ್ದಾಗ ಚಂಡಮಾರುತವೊಂದು ನೇತಾರ ಗ್ರಾಮವನ್ನು ನೆಲಸಮ ಮಾಡಿತು. ಆಗ ನಂದಲಾಲರು ಸಂಸಾರ ಸಮೇತರಾಗಿ,ಪತ್ನಿಯ ತವರೂರಾದ ಜಯನಗರಕ್ಕೆ ಬಂದರು. ಆ ಊರು ಆ ಕಾಲಕ್ಕೆ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಹೆಸರು ಮಾಡಿತ್ತಲ್ಲದೆ ಬ್ರಾಹ್ಮೊ ಸಮಾಜದ ಪ್ರಭಾವ ಆ ಸುತ್ತಮುತ್ತಲಿನ ಹಳ್ಳಿಗೆಲ್ಲ ವ್ಯಾಪಿಸಿತ್ತು. ನೀಲರತನರ ವಿದ್ಯಾಭ್ಯಾಸ ಜಯನಗರದಲ್ಲೇ ಆರಂಭವಾಯಿತು. ಹಳ್ಳಿಯ ವಾತಾವರಣದಲ್ಲಿ ಬೆಳೆದ ನೀಲರತನ್ ಸಹಜವಾಗಿಯೇ ಧೈರ್ಯ ಹಾಗೂ ವಿಚಾರಶೀಲತೆಯನ್ನು ಮೈಗೂಡಿಸಿಕೊಂಡರು. ಮನೆಯಲ್ಲಿ ಎಲ್ಲರೂ ಈ ಹುಡುಗನ ಭವಿಷ್ಯ ಜೀವನದ

ಬಗ್ಗೆ ಆಶಾ ಭಾವನೆಯನ್ನು ಇಟ್ಟುಕೊಂಡಿದ್ದರು. ತಂದೆ ತಾಯಿಗಳಿಗೆ ನೀಲರತನ್ ದೊಡ್ಡ ಇಂಜಿನೀಯರ್‌ನಾಗುವನೆಂಬ ನಂಬಿಕೆ. ಅವರ ನಂಬಿಕೆ ಹುಸಿಯಾಗದಂಥ ಸ್ಪಷ್ಟ ಸೂಚನೆಗಳನ್ನು ಬಾಲಕ ತೋರಿಸುತ್ತಿದ್ದ. ನೀಲರತನ್ 14 ವರ್ಷದ ಬಾಲಕನಾಗಿದ್ದಾಗ, ಹಾಸಿಗೆ ಹಿಡಿದ ತಾಯಿ ಸರಿಯಾದ ವೈದ್ಯೋಪಚಾರ ದೊರೆಯದೆ ಮೃತಪಟ್ಟಳು. ಈ ಘಟನೆಯಿಂದ ನೊಂದ ಬಾಲಕನ ಮನದಲ್ಲಿ ವೈದ್ಯಕೀಯ ಅಭ್ಯಾಸವನ್ನು ಮಾಡಬೇಕೆಂಬ ಛಲ ಮೊಳಕೆಯೊಡೆಯಿತು. 1876ರಲ್ಲಿ ಎಂಟ್ರೆನ್ಸ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದ ರತನ್ ವೈದ್ಯಕೀಯ ಕಾಲೇಜಿಗೆ ಸೇರಬಹುದಿತ್ತು. ಆದರೆ ಮನೆಯಲ್ಲಿ ಕಿತ್ತು ತಿನ್ನುವ ಬಡತನ, ಅವರನ್ನು ಕಲಕತ್ತ ಮೆಡಿಕಲ್ ಕಾಲೇಜಿಗೆ ಹೋಗಗೊಡಲಿಲ್ಲ. ಪುಟಿಯುವ ಬಯಕೆಯೆದುರು ಯಾವುದು ತಾನೇ ಸಾಟಿ? ಕ್ಯಾಂಪ್ ಮೆಡಿಕಲ್ ಕಾಲೇಜಿಗೆ ಸೇರಿಯೇ ಬಿಟ್ಟರು ರತನ್. ಕಲಕತ್ತ ನಗರ ಪಾಲಿಕೆ ನಿರ್ವಹಿಸುತ್ತಿದ್ದ ಈ ಮಹಾವಿದ್ಯಾಲಯ 1867ರ ಜುಲೈ 1ರಂದು ಆರಂಭಗೊಂಡಿತ್ತು. ಮುಂದೆ 1874ರಲ್ಲಿ ಬಂಗಾಲದ ಗವರ್ನರ್ ಆಗಿದ್ದ ಸರ್ ಜಾರ್ಜ್ ಕ್ಯಾಂಪ್‌ಬೆಲ್‌ನ ಸ್ಮರಣಾರ್ಥ ಕ್ಯಾಂಪ್ ಮೆಡಿಕಲ್ ಕಾಲೇಜ್ ಎಂಬ ಹೆಸರಿಟ್ಟಿದ್ದರು. ಇಲ್ಲಿ ಶಿಕ್ಷಣ ಮಾಧ್ಯಮ ಬಂಗಾಲಿ. ಹೀಗಾಗಿ ರತನ್‌ರಿಗೆ ದೊರೆತದ್ದು ದೇಶೀಯ ವೈದ್ಯಕೀಯ ವಿದ್ಯೆ.

1879ರಲ್ಲಿ ವೈದ್ಯಕೀಯ ಡಿಪ್ಲೊಮಾ ಪಡೆದ ರತನರು ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದರು. ಮನೆಯ ಪರಿಸ್ಥಿತಿಯೇನೂ ಸುಧಾರಿಸಿರಲಿಲ್ಲ. ರತನ್ ಸರಕಾರಿ ಕೆಲಸ ಹುಡುಕಬೇಕು ಇಲ್ಲವೆ ಸ್ವತಂತ್ರವಾಗಿ ದುಡಿಯಬೇಕಾದ ಅವಶ್ಯಕತೆ ಬಹಳವಾಯಿತು. ಆದರೆ ಅವರು ಇವೆರಡಕ್ಕೂ ಕೈಹಾಕಲಿಲ್ಲ. ಜ್ಞಾನದಾಹದ ಮುಂದೆ ಗೇಣುದ ಹೊಟ್ಟೆಯ ಹಸಿವು ಪೈಪೋಟಿಯಲ್ಲಿ ಸೋತಿತ್ತು. ಮಾನವ ಹಿತವೇ ಪರಮೋಚ್ಚ ಧ್ಯೇಯವಾಗಿರುವ ವೈದ್ಯ ವಿಜ್ಞಾನದಲ್ಲಿ ಆಳ ಜ್ಞಾನದ ಸಂಪತ್ತಿನ ಸೂರೆ ಮಾಡುವ ಆಸೆ ದಿನೇ ದಿನೇ ವೃದ್ಧಿಸಿತು. ರತನರ ಪಥದ ದಿಶೆ ಬದಲಾಯಿತು. 1883ರಲ್ಲಿ ಎಫ್.ಎ. 1885ರಲ್ಲಿ ಬಿ.ಎ. ಪದವಿ ಗಳಿಸಿದರು. ಬಡತನ ಕೊನೆಗೂ ರತನರನ್ನು ಕೆಲಸಕ್ಕೆ ದೂಡಿತು. ಈಗ ರತನರ ಆಯ್ಕೆ ಮಾತ್ರ ಬೋಧನಾ ವೃತ್ತಿ. ಸೆರಾಂಪುರ ಬಳಿಯ ಪ್ರೌಢ ಶಾಲೆಯೊಂದರ ಮುಖ್ಯೋಪಾಧ್ಯಾಯರಾಗಿ ಕೆಲಕಾಲ ಸೇವೆ ಸಲ್ಲಿಸಿದ ಅವರು ನಂತರ ಕಲ್ಕತ್ತಾದ ಡಾ|| ಅಘೋರನಾಥ ಚಟ್ಟೋಪಾಧ್ಯಾಯರ ಶಾಲೆಯಲ್ಲಿ ಕೆಲಸಕ್ಕೆ ಸೇರಿಕೊಂಡರು. ಡಾ|| ಅಘೋರನಾಥರು ಎಡಿನ್‌ಬರ್ಗ್ ವಿಶ್ವ ವಿದ್ಯಾನಿಲಯದಿಂದ ರಸಾಯನ ಶಾಸ್ತ್ರದಲ್ಲಿ ಡಾಕ್ಟರ್ ಆಫ್ ಸೈನ್ಸ್ ಪದವಿಯನ್ನು ಪಡೆದ ಮೊಟ್ಟ ಮೊದಲ ಭಾರತೀಯ. ಇವರು ಭಾರತದ ಕೋಗಿಲೆ ಶ್ರೀಮತಿ ಸರೋಜಿನಿ ನಾಯ್ಡು ಅವರ ತಂದೆ.

ರತನರನ್ನು ಜ್ಞಾನದಾಹ ಮತ್ತೆ ಕಲ್ಕತ್ತ ಮೆಡಿಕಲ್ ಕಾಲೇಜಿಗೆ ಸೇರಿಕೊಳ್ಳುವಂತೆ ಮಾಡಿದ್ದರಿಂದ ಅವರು ಉಪಾಧ್ಯಾಯ ವೃತ್ತಿಗೆ ಅಂಟಿಕೊಳ್ಳಲಿಲ್ಲ. ಆ ಕಾಲೇಜಿನ ಅತ್ಯುತ್ತಮ ಪ್ರತಿಭಾಶಾಲಿ ವಿದ್ಯಾರ್ಥಿ ಎಂಬ ಹಣೆಪಟ್ಟಿ ಹೊತ್ತು ಗುಡ್‌ವೇ ಬಹುಮಾನ ಗಳಿಸಿದರು. 1888ರಲ್ಲಿ ಎಂ.ಬಿ. ಪದವಿ ಪಡೆದು ಮೇಯೋ ಮತ್ತು ಚಾಂದನಿ ಆಸ್ಪತ್ರೆಯಲ್ಲಿ ಹೌಸ್ ಸರ್ಜನ್ ಆಗಿ ಕೆಲಸಕ್ಕೆ ಸೇರಿಕೊಂಡರು. ಅಲ್ಲಿಗೂ ಅವರ ಜ್ಞಾನದಾಹ ತಣಿಯಲಿಲ್ಲ. ಮುಂದಿನ ವರ್ಷ ಎಂ.ಎ. ಅದರ ಮರುವರ್ಷ ಎಂ.ಡಿ.

ನಂತರವೇ ಅವರು ಪೂರ್ಣ ಮನಸ್ಕರಾಗಿ ವೈದ್ಯಕೀಯ ಸೇವೆಗೆ ಪಾದಾರ್ಪಣೆ ಮಾಡಿದರು. ಆದರೆ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಸರ್ಕಾರಿ ಸೇವೆಗೆ ಮಾತ್ರ ಹಂಬಲಿಸಲಿಲ್ಲ. ಅಂದು ಭಾರತೀಯ ವೈದ್ಯರ ಸ್ಥಿತಿ ತುಂಬಾ ಹೀನವಾಗಿತ್ತು. ಕೇವಲ ಉಪ ಸಹಾಯಕ ಸರ್ಜನ್ ಹುದ್ದೆಯೇ ಭಾರತೀಯ ವೈದ್ಯರುಗಳಿಗೆ ದೊರಕುತ್ತಿದ್ದ ಅತ್ಯುನ್ನತ ಹುದ್ದೆ. ಹೆಚ್ಚು ಪ್ರಭಾವವುಳ್ಳ ಕೆಲವೇ ಮಂದಿ ಮಾತ್ರ ಐ.ಎಂ.ಎಸ್. ಹುದ್ದೆಗೆ ಸೇರಬಹುದಿತ್ತು. ಈ ಹುದ್ದೆಗಳು ವಿಶೇಷವಾಗಿ ಯುರೋಪಿಯನ್ ಡಾಕ್ಟರ್‌ಗಳ ಪಾಲಾಗುತ್ತಿದ್ದವು. ಖಾಸಗಿಯಾಗಿ ವೈದ್ಯಕೀಯ ವೃತ್ತಿ ನಡೆಸಲು ಭಾರತೀಯ ವೈದ್ಯರಿಗೆ ಅವಕಾಶವೇ ಇರಲಿಲ್ಲ. ಅವರೇ ಸ್ವತಂತ್ರವಾಗಿ ವೃತ್ತಿ

ಯಲ್ಲಿ ಅನುಭವ ಪಡೆದಿದ್ದರೂ ಭಾರತೀಯ ವೈದ್ಯ ಏಳು ರೂಪಾಯಿಗಳಿಗಿಂತ ಹೆಚ್ಚು ಫೀ [illegible] ಅದೇ [illegible] ಅರ್ಹತೆಯಿದ್ದರೂ ಯುರೋಪಿಯನ್ ವೈದ್ಯ [illegible] 16 ರೂ. [illegible]. ಆಂಗ್ಲರ ಈ ಪಕ್ಷಪಾತ ನೀತಿಯ ವಿರುದ್ಧ [illegible] ಡಾ|| [illegible] ಸರಕಾರ್.

ಅವರು ಈ ಅಲಿಖಿತ ನಿಯಮದ ಬುಡಕ್ಕೇ ಕೊಡಲಿ ಪೆಟ್ಟುಕೊಟ್ಟರು. ಗೆಳೆಯ ಡಾ|| ಸುರೇಶ್ ಪ್ರಸಾದ್ ಸರ್ವಾಧಿಕಾರಿ ಮತ್ತು ಡಾ|| ನೀಲರತನ್ ಇಬ್ಬರೂ ತಮ್ಮ ಫೀಯನ್ನು 16 ರೂಪಾಯಿಗೆ ಏರಿಸಿಕೊಂಡರು. ಈ ಘಟನೆ ಕಲ್ಕತ್ತಾದಲ್ಲಿ ಅನೇಕರು ಹುಬ್ಬೇರಿಸುವಂತೆ ಮಾಡಿತು. ಡಾ|| ರತನರ ಧೈರ್ಯಕ್ಕೆ ತಲೆದೂಗಿ ಎಲ್ಲೆಲ್ಲೂ ಗುಜುಗುಜು ಜೊತೆಗೆ ಟೀಕೆಗಳ ಸುರಿಮಳೆ. ಅವರ ಈ ದಿಟ್ಟಕ್ರಮದಿಂದಾಗಿ ಮೊದಲ ಬಾರಿಗೆ ಭಾರತೀಯ ವೈದ್ಯರಿಗೆ ಮರ್ಯಾದೆ ಮತ್ತು ಆತ್ಮ ಗೌರವಗಳು ದೊರಕುವಂತಾಯಿತು. ದೇಶದಲ್ಲಿ ಬ್ರಿಟಿಷ್ ವೈದ್ಯರ ಪ್ರಭಾವವನ್ನು ಕುಗ್ಗಿಸುವುದು ಹಾಗೂ ಇವರಿಂದ ನಡೆಯುತ್ತಿದ್ದ ಭಾರತೀಯರ ಶೋಷಣೆಯನ್ನು ನಿವಾರಿಸುವುದು ತಮ್ಮ ಆದ್ಯ ಕರ್ತವ್ಯವೆಂದು ರತನ್ ಭಾವಿಸಿದರು. ಈ ದಿಶೆಯಲ್ಲಿ ಅವರ ಹೋರಾಟ ಫಲ ನೀಡಿತು. ಟೀಕೆಗಳು ಏನೇ ಬಂದರೂ ತಾವು ಹಿಡಿದ ಕಾರ್ಯವನ್ನು ಬಿಡದೆ ಮುನ್ನುಗ್ಗುತ್ತಿದ್ದರು. ಈ ಕ್ರಮ ದೇಶೀಯ ವೈದ್ಯರಿಗೆ ಆತ್ಮ ಸ್ಥೈರ್ಯವನ್ನೂ ರತನರಿಗೆ ಖ್ಯಾತಿಯನ್ನೂ ತಂದು ಕೊಟ್ಟಿತು.

ಡಾ|| ರತನರು ರೋಗಿಗಳನ್ನು ಪರಿಶೀಲಿಸುತ್ತಿದ್ದ ವೈಖರಿ ಅವರ ವೃತ್ತಿ ಸಾಫಲ್ಯಕ್ಕೆ ಸಾಕ್ಷಿಯಾಗಿತ್ತು. ಈ ಒಂದು ವಿಶೇಷತೆಯಿಂದಾಗಿ ಅವರಿಗೆ ಅಪಾರ ಜನಮನ್ನಣೆ ಹಾಗೂ ಆದರಗಳು ದೊರೆತವು. ಇದಕ್ಕೆ ಕಳಶವಿಟ್ಟಂತೆ ಡಾ|| ರತನರು ವಿಶಾಲ ಹೃದಯದವರೂ, ದಯಾಳುವೂ ಆಗಿದ್ದರು.

ಸಕಾರಣವಲ್ಲದ ವಿದೇಶೀ ವೈದ್ಯರ ಫೀ ವಸೂಲಿಯನ್ನು ಖಂಡಿಸುತ್ತಿದ್ದ ರತನರು ಅದೇ ವೇಳೆಗೆ ದೇಶೀಯ ಖೋಟಾ ವೈದ್ಯರ ಬಗ್ಗೆಯೂ ಕಿಡಿ ಕಾರುತ್ತಿದ್ದರು. ಅಜ್ಞಾನ-ಮೂಢನಂಬಿಕೆ ಹೇಡಿತನಗಳ ವಿರುದ್ಧ ಜೀವನವಿಡಿ ಅವರ ಹೋರಾಟ ನಿಲ್ಲಲೇ ಇಲ್ಲ. ಭಾರತದ ಸಾಮಾಜಿಕ ಮಟ್ಟ ಸ್ಥಿತಿಯನ್ನೂ ಉತ್ತಮ ಪಡಿಸಲು ಇರುವ ಮಾರ್ಗವೆಂದರೆ ಮೆಡಿಕಲ್ ಕಾಲೇಜುಗಳಲ್ಲಿ ವೈದ್ಯಕೀಯ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುವುದು ಎಂಬುದು ಡಾ|| ರತನರ ಪ್ರತಿಪಾದನೆಯಾಗಿತ್ತು. ಓಗೆ ಮಾಡುವುದರಿಂದ ಜನರ ಅಜ್ಞಾನ ಮೂಢನಂಬಿಕೆಗಳ ಲಾಭ ಪಡೆದು ಅವರನ್ನು ಕೊಳ್ಳೆ ಹೊಡೆಯುತ್ತಿದ್ದ ಅರೆಬೇಕಾಯಿ ಪಂಡಿತರನ್ನು ನಿವಾರಿಸಬಹುದೆಂಬುದು ರತನರ ನಂಬಿಕೆ. ಜೊತೆಗೆ ಬ್ರಿಟಿಷ್ ವೈದ್ಯರ ಶೋಷಣೆಯಿಂದ ಬಡ ಭಾರತೀಯರನ್ನು ಸಂರಕ್ಷಿಸಬಹುದೆಂದೂ ಮನಗಂಡು ಜನರಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಲು ತಮ್ಮ ಜೀವಿತವನ್ನು ಮುಡಿಪಾಗಿಟ್ಟರು.

ಡಾ|| ನೀಲರತನರ ಮನೆಯಲ್ಲಿ ವೈದ್ಯಕೀಯ ಹೊತ್ತಿಗೆಗಳ ಜೊತೆಗೆ ಅನೇಕ ಬಗೆಯ ಶಸ್ತ್ರಚಿಕಿತ್ಸಕಗಳೂ ತುಂಬಿದ್ದವು. ಇವುಗಳನ್ನು ಬಳಸಿ ಅನೇಕ ಬಗೆಯ ಕಾಯಿಲೆಗಳಿಗೆ ತಮ್ಮದೇ ಆದ ಹೊಸ ಹೊಸ ರೋಗನಿವಾರಣಾ ವಿಧಾನಗಳನ್ನು ಅವರು ಕಂಡು ಹಿಡಿದರು. ಕಾಯಿಲೆಯನ್ನು ವಾಸಿ ಮಾಡುವ ಕ್ರಮದಲ್ಲಿ ಅನೇಕ ಹೊಸಬಗೆಯ ವಿಧಾನಗಳನ್ನು ಸಂಶೋಧಿಸಿದರು. ಅಂದು ಭಾರತದಲ್ಲಿ ಸಾರ್ವತ್ರಿಕವಾಗಿ ಬಳಕೆಗೆ ಬರುವ ಮುನ್ನವೇ ಎಲೆಕ್ಟ್ರೋ ಕಾರ್ಡಿಯೋಗ್ರಾಮ್ ಯಂತ್ರವನ್ನು ಆಮದು ಮಾಡಿಕೊಂಡು ವೈದ್ಯಕೀಯ ವಿದ್ಯಾರ್ಥಿಗಳಿಗೆ ಅದನ್ನು ಬಳಸುವ ವಿಧಾನವನ್ನು ಹೇಳಿಕೊಟ್ಟರು. ಅವರ ಅನೇಕ ವಿದ್ಯಾಥಿಗಳು ಮುಂದೆ ಪ್ರಸಿದ್ಧ ಹೃದಯ ರೋಗ ತಜ್ಞರೆಂಬ ಖ್ಯಾತಿಗೆ ಪಾತ್ರರಾದರು.

1895ರಲ್ಲಿ ರತನರು ಸಹಚರರಾದ ಡಾ|| ಸುರೇಶ್ ಪ್ರಸಾದ್ ಸರ್ವಾಧಿಕಾರಿ ಡಾ|| ಅಮೂಲ್ಯ ಚಂದ್ರ ಬೋಸ್, ಡಾ|| ರಾಧಾ ಗೋವಿಂದಕರ್ ಮತ್ತಿತರ ಪ್ರಗತಿಪರ ವೈದ್ಯರ ಗುಂಪು ಕಟ್ಟಿ 'ಕಾಲೇಜ್ ಆಫ್ ಫಿಜೀಶಿಯನ್ಸ್ ಅಂಡ್ ಸರ್ಜನ್ಸ್' ಎಂಬ ಕಾಲೇಜನ್ನು ಸ್ಥಾಪಿಸಿ

ವರು. ಇವರ ಅವಿರತ ಶ್ರಮದ ಫಲವಾಗಿ ಈ ಕಾಲೇಜು ಕಲ್ಕತ್ತಾ ಮೆಡಿಕಲ್ ಸ್ಕೂಲಿನೊಂದಿಗೆ ಸೇರ್ಪಡೆಯಾಯಿತಲ್ಲದೆ ಮುಂದೆ 'ಮೆಡಿಕಲ್ ಸ್ಕೂಲ್ ಅಂಡ್ ಕಾಲೇಜ್ ಫಾರ್ ಫಿಜೀಶಿಯನ್ಸ್ ಆಫ್ ಬೆಂಗಾಲ್' ಎಂಬ ವೈದ್ಯಕೀಯ ಸಂಸ್ಥೆಯಾಗಿ ರೂಪುಗೊಂಡಿತು. 1916ರಲ್ಲಿ ಪೂರ್ಣಮಟ್ಟದ ವೈದ್ಯಕೀಯ ಕಾಲೇಜಾಗಿ ಮೇಲ್ದರ್ಜೆಗೇರಿ ಮನ್ನಣೆ ಪಡೆಯಿತು.

ಡಾ॥ ನೀಲರತನರು ವಿವಿಧ ಚಟುವಟಿಕೆಗಳಲ್ಲಿ ತಮ್ಮನ್ನು ಆತ್ಮ ಪೂರ್ವಕವಾಗಿ ತೊಡಗಿಸಿಕೊಂಡದ್ದು ಜನರಲ್ಲಿ 'ಸ್ವದೇಶಾಭಿಮಾನ'ವನ್ನು ಉಕ್ಕಿಸಲು ನೆರವಾಯಿತು. ಗಾಂಧೀಜಿಯ ಕರೆಗೆ ಓಗೊಟ್ಟು, ಸ್ವದೇಶೀ ಚಳವಳಿಯಲ್ಲಿ ನೀಲರತನ ಧುಮುಕಿದರು. ಈ ದಿಶೆಯಲ್ಲಿ ಅವರು ಸ್ಥಾಪಿಸಿದ ಸಾಬೂನು ಕಾರ್ಖಾನೆ ಚಹದ ತೋಟಗಳು ಹಾಗೂ ಚರ್ಮದ ಕಾರ್ಖಾನೆ ಕೆಲವು ಉದಾಹರಣೆಗಳು ಮಾತ್ರ. ಸಾಬೂನು ಕಾರ್ಖಾನೆ ಎಂಬ ಹೆಸರನ್ನು ಹೊತ್ತು ಆ ಕಾಲಕ್ಕೆ ಅತ್ಯುತ್ತಮ ಗುಣಮಟ್ಟದ ವಿವಿಧ ಬಗೆಯ ಸಾಬೂನುಗಳನ್ನು ತಯಾರಿಸುತ್ತಿತ್ತು. 1906ರಲ್ಲಿ ಅದು ತನ್ನ ಉತ್ತಮ ಮಟ್ಟದ ತಯಾರಿಕೆಗಾಗಿ ಚಿನ್ನದ ಪದಕವನ್ನೂ ಗಳಿಸಿತು.

ನೀಲರತನರ ಮತ್ತೊಂದು ಅಪೂರ್ವ ಕೊಡುಗೆಯೆಂದರೆ ಕಲ್ಕತ್ತೆಯ ರಾಷ್ಟ್ರೀಯ ಚರ್ಮದ ಕಾರ್ಖಾನೆ. ಪ್ರಾಣಿಗಳ ಚರ್ಮ ಹದ ಮಾಡುವ ಕೆಲಸ ಎಂದರೆ ಅಂದಿನ ಕಾಲದಲ್ಲಿ ತಾತ್ಸಾರ. ಆದರೆ ನೀಲರತನರು ಇದನ್ನು ಮನಸ್ಸಿಗೆ ಹಾಕಿಕೊಳ್ಳಲಿಲ್ಲ. ತನ್ನ ಸೋದರ ಸಂಬಂಧಿಯೊಬ್ಬನನ್ನು ಮದರಾಸಿಗೆ ಕಳುಹಿಸಿಕೊಟ್ಟು, ಚರ್ಮ ಹದ ಮಾಡುವ ತರಬೇತಿ ಕೊಡಿಸಿದರು. ಜೊತೆಗೆ ಲಂಡನ್ನಿನಲ್ಲಿ ಚರ್ಮದ ತಾಂತ್ರಿಕತೆಯಲ್ಲಿ ತರಬೇತಿ ಪಡೆದ ಯುವಕನೊಬ್ಬನನ್ನು ತಾವು ಸ್ಥಾಪಿಸಿದ ಕಾರ್ಖಾನೆಗಳ ಕೆಲಸಕ್ಕೆ ನೇಮಿಸಿಕೊಂಡರು. ಇವರು ಸ್ಥಾಪಿಸಿದ ಕಲ್ಕತ್ತೆಯ ರಾಷ್ಟ್ರೀಯ ಚರ್ಮದ ಕಾರ್ಖಾನೆ ಪ್ರಥಮ ಜಾಗತಿಕ ಯುದ್ಧ ಮುಗಿಯುವವರೆಗೂ ಲಾಭಗಳಿಕೆಯಲ್ಲಿ ವಿಕ್ರಮವನ್ನೇ ಸ್ಥಾಪಿಸಿತಾದರೂ ಯುದ್ಧಾನಂತರ ನಷ್ಟಕ್ಕೆ ಗುರಿಯಾಯಿತು.

ನೀಲರತನರು ಸುಮಾರು 50 ವರ್ಷಕ್ಕೂ ಮೇಲ್ಪಟ್ಟು ದೇಶದ ಶಿಕ್ಷಣ ಕ್ಷೇತ್ರದ ಜೊತೆ

ತಮ್ಮನ್ನು ನಿಕಟವಾಗಿ ತೊಡಗಿಸಿಕೊಂಡಿದ್ದರು. 1893ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದ ಸೆನೆಟ್ಟಿಗೆ ಸದಸ್ಯರಾಗಿ ಚುನಾಯಿತರಾದರು. ಅಂದು ವಿಶ್ವವಿದ್ಯಾಲಯದಲ್ಲಿ ವಿಜ್ಞಾನಕ್ಕೆ ಪ್ರತ್ಯೇಕ ವಿಭಾಗಗಳಿರಲಿಲ್ಲ. ವಿದ್ಯಾರ್ಥಿಗಳು ಐಚ್ಛಿಕ ವಿಷಯವಾಗಿ ಮಾತ್ರ ವಿಜ್ಞಾನವನ್ನು ಆಯ್ಕೆ ಮಾಡಿಕೊಳ್ಳಬಹುದಿತ್ತು.

ನೀಲರತನರ ವೈಜ್ಞಾನಿಕ ದೃಷ್ಟಿಕೋನದ ಫಲವಾಗಿ 1898ರಲ್ಲಿ ಒಂದು ವಿಜ್ಞಾನ ಆಯೋಗದ ನೇಮಕವಾಯಿತು. ಇವರ ಅವಿಶ್ರಾಂತ ಸೇವೆಗೆ ಬೆನ್ನೆಲುಬಾಗಿ ಆಚಾರ್ಯ ಜಗದೀಶಚಂದ್ರ ಬೋಸ್, ಮಹೇಂದ್ರಲಾಲ್ ಸರಕಾರ್, ಪಿ.ಕೆ. ರೇ ಮತ್ತಿತರರು ನಿಂತರು. ವಿಶ್ವವಿದ್ಯಾಲಯದಲ್ಲಿ ಶರೀರ ವಿಜ್ಞಾನವನ್ನು ಬೋಧಿಸಲು ಸ್ವತಃ ನೀಲರತನರೇ ಮುಂದೆ ಬಂದರು. ನಂತರ ಆ ವಿಶ್ವವಿದ್ಯಾಲಯದ ವಿಜ್ಞಾನ ವಿಭಾಗದ 'ಡೀನ್' ಆಗಿ ಚುನಾಯಿತರಾಗಿದ ಅವರು 1919ರಿಂದ 1921ರವರೆಗೆ ಉಪಕುಲಪತಿಗಳಾಗಿಯೂ ನೇಮಕಗೊಂಡರು. ತಮ್ಮ ಅಧಿಕಾರಾವಧಿಯಲ್ಲಿ ವಿಶ್ವವಿದ್ಯಾಲಯದ ಚಟುವಟಿಕೆಗಳು ವಿಸ್ತರಿಸುವಂತೆ ನೋಡಿಕೊಂಡರು. ಖ್ಯಾತ ದಾನಿ ರಾಸ್ ಬಿಹಾರಿ ಘೋಷ್ ಮತ್ತು ತಾರಕನಾಥ ಪಲಿತರೊಂದಿಗಿದ್ದ ತಮ್ಮ ಸ್ನೇಹವನ್ನು ಸದುಪಯೋಗಿಸಿಕೊಂಡ ರತನ್ ವಿಶ್ವ ವಿದ್ಯಾಲಯದ ವಿಜ್ಞಾನ ವಿಭಾಗಗಳನ್ನೂ ಮತ್ತಷ್ಟು ಅಭಿವೃದ್ಧಿ ಪಡಿಸಿದರು. ಅನೇಕ ಶಿಕ್ಷಣ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕವನ್ನಿರಿಸಿಕೊಂಡಿದ್ದ ಅವರು ಆಚಾರ್ಯ ಜಗದೀಶ್ ಚಂದ್ರ ಬೋಸರು ಸ್ಥಾಪಿಸಿದ ಬೋಸ್ ಇನ್‌ಸ್ಟಿಟ್ಯೂಟಿನ ಆಡಳಿತ ಮಂಡಳಿಗೆ ಸದಸ್ಯರೂ, ಡಾ॥ ಮಹೇಂದ್ರ ಲಾಲ್ ಸರಕಾರರು ಸ್ಥಾಪಿಸಿದ 'ಇಂಡಿಯನ್ ಅಸೋಸಿಯೇಷನ್ ಫಾರ್ ಕಲ್ಟಿವೇಶನ್ ಆಫ್ ಸೈನ್ಸ್' ಸಂಸ್ಥೆಯ ಅಧ್ಯಕ್ಷರೂ ಆಗಿದ್ದರು.

ಡಾ॥ ನೀಲರತನ ಸರಕಾರರು ರಾಷ್ಟ್ರ ಕವಿ ರವೀಂದ್ರನಾಥ ಠಾಗೂರರ ಆಪ್ತ ಸ್ನೇಹಿತರು. ಅವರ ಖಾಸಗಿ ವೈದ್ಯರೂ ಆಗಿದ್ದರು. ಇಷ್ಟೆಲ್ಲ ಆದರೂ ಡಾ॥ ನೀಲರತನ್ ಸರಕಾರರ ಸಾಧನೆಗಳನ್ನು ದೇಶ ಪುರಸ್ಕರಿಸಲಿಲ್ಲವೆಂಬುದು ನಿಜ. ತಮ್ಮ ಅವಿಶ್ರಾಂತ ದುಡಿಮೆಯಿಂದ ಅವರು ಖ್ಯಾತಿಯನ್ನು ಗಳಿಸಿದರು. ಅವರ ವೈಜ್ಞಾನಿಕ ಮನೋಭಾವಕ್ಕೆ ಕೊಡುಗೆಯಾಗಿ 'ನೈಟ್' ಪದವಿ 1918ರಲ್ಲಿ ಲಭಿಸಿತು. ವಿಜ್ಞಾನದ ಗುಟ್ಟನ್ನು ಪಾಶ್ಚಾತ್ಯರ ಮನೆಯಿಂದ ತಂದು ತಮ್ಮ ಮನೆ ಹೊಸಲಿನಲ್ಲಿ ನಿಲ್ಲಿಸಿದರು. ವಿಜ್ಞಾನಕ್ಕೆ ಮಾನವಕುಲ ಶರಣಾಗುವುದೊಂದೇ ದೇಶದ ಏಳಿಗೆಯ ದಾರಿ ಎಂದು ದೇಶ ವಾಸಿಗಳ ಮನದಲ್ಲಿ ಭರವಸೆ ಹುಟ್ಟಿಸಿದರು. ರತನರಿಗೆ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಡಿ.ಎಸ್.ಸಿ. ಪದವಿಯನ್ನು ನೀಡಿ ಎಡಿನ್‌ಬರ್ಗ್ ವಿಶ್ವವಿದ್ಯಾಲಯವೂ ಸನ್ಮಾನಿಸಿತು. 1912 ರಿಂದ 1927ರವರೆಗೆ ಬಂಗಾಳದ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಸೇವೆ ಸಲ್ಲಿಸಿದರು.

1930ರಲ್ಲಿ ಕೇವಲ ಎರಡು ತಿಂಗಳೊಳಗೆ ನೀಲರತನರು ತಮ್ಮ ಧರ್ಮಪತ್ನಿ ಶ್ರೀಮತಿ ನಿರ್ಮಲಾ ದೇವಿ ಹಾಗೂ ಸಹೋದರಿಯನ್ನು ಕಳೆದುಕೊಂಡರು. ಈ ಘಟನೆಯ ನಂತರ ರತನರ ಆರೋಗ್ಯ ವಿಷಮಿಸಿತು. 1940ರಲ್ಲಿ ಹಾಸಿಗೆ ಹಿಡಿದ ರತನ್ 1943ರ ಮೇ 18ನೇ ತಾರೀಖು ಬಿಹಾರಿನ ಗಿರಿದ್‌ದಲ್ಲಿ ಕೀರ್ತಿಶೇಷರಾದರು.

(ಆಧಾರ)

ಒಂದು ವೇಳೆ ಅಂಟಾರ್ಕ್ಟಿಕದ ಮಂಜು ಕರಗಿ ಹೋದರೆ ಏನಾದೀತು? ಪ್ರಳಯವಾಗಬಹುದು ಎನ್ನಲಾಗಿದೆ. ಅದರ ಮಂಜೇನಾದರೂ ಈ ಕಡೆ ಆ ಕಡೆ ಹರಡಲು ಆರಂಭಿಸಿದರೆ ಭೂಮಿಯೆಲ್ಲ ಜಲಾವೃತವಾಗುವುದು. ಈ ಮಂಜಿನ ಹರಡುವಿಕೆ ಯಾವ ಕಡೆಗೆ ಇದೆಯೆಂದು ತಿಳಿಯುವ ಪ್ರಯತ್ನಗಳು ನಡೆಯುತ್ತಿವೆ. ಈ ಸಂಶೋಧನೆಯ ಸಂಬಂಧದಲ್ಲಿಯೇ ಸುತ್ತಮುತ್ತಲಿನ ವಾತಾವರಣದಿಂದ ಎಷ್ಟು ಆವಿ ಬರುತ್ತದೆ, ಎಷ್ಟು ಮಂಜು ಗಾಳಿಯಲ್ಲಿ ಹಾರಿ ಹೋಗುತ್ತದೆ, ಎಷ್ಟು ಬಂಡೆಗಳು ಸಮುದ್ರದೊಳಕ್ಕೆ ಬೀಳುತ್ತವೆ, ಉಷ್ಣ ಪ್ರವಾಹಗಳಿಂದ ಎಷ್ಟು ಮಂಜು ಕರಗುತ್ತದೆ ಎಂಬುದೇ ವಿಚಾರಗಳನ್ನು ಪರಿಗಣಿಸಲಾಗುತ್ತಿದೆ.


ಜಡೆಮುನಿ ಭೂತ



ಬಿಂದು:

ಬೇಸಿಗೆ ರಜೆ
ರಣರಣ ಬಿಸಿಲಲಿ ಕುಣಿವವಳ ಕರೆದು
ಅಜ್ಜಿ ಪ್ರೀತಿಯಿಂಧ ಗದರಿದಳು
ಮಗೂ.
ಆಡಬೇಡ ಈ ಬಿಸಿಲಲ್ಲಿ
ಹುಣಿಸೇ ಮರದ ಕೆಳಗೆ
ಅಲ್ಲಿ
ಆವೇಳೆಯಲ್ಲಿ ಜಡೆಮುನಿ ಭೂತ
ಸುಳಿಯುತ್ತದೆ.
ಮೈಯೆಲ್ಲ ಜಡೆಯಾದ ಜಡೆಮುನಿ
ಅದರ ದೃಷ್ಟಿ ಬಿದ್ದರೆ
ರಕ್ತಕಾರಿ ಸಾಯುತ್ತಾರಂತೆ.
ಆದರೆ
ಉಪಾಯವಾಗಿ
ಅದರ ಕೂದಲೊಂದ
ಕಿತ್ತಿಟ್ಟುಕೊಂಡರೆ
ಗುಲಾಮನಾಗಿ,
ಕೇಳಿದ್ದ ಕೊಡುವುದಂತೆ.
ಬೇಕಾದ್ದು ಕೊಡುವ ಜಡೆಮುನಿ
ನಿತ್ಯ ನಿರೀಕ್ಷೆ
ನೆಲದ ಹಾವ ಹಿಡಿಯಲು
ನೀಲಿಯಲಿ ತೇಲುವ
ಗರುಡಗನಸುಗಳು.
ಕೇಳಬಹುದೇನು ಅವನನ್ನು?
ಅಮ್ಮ ಬಚ್ಚಿಟ್ಟ ಕೋಡುಬಳೆಗಳ
ನನ್ನ ಓಂದಿನ ಸೀಟಿನ ಸವಾರಿಗೆ
ಅಪ್ಪಸಿಗೊಂದು ಸ್ಯೆಕಲ್ಲ

● ಭಾಗ್ಯ. ಸಿ.ಹೆಚ್. ●



ಪುಸ್ತಕದಲಿ ಮರಿ ಮಾಡಲಿಡುವಂಥ
ಪುಟ್ಟ ನವಿಲುಗರಿಯ!
ಅಮ್ಮನಿಗೆ
ಲಲಿತತ್ತೆ ಉಡುವಂಥ ಸೀರೆ
ನನಗೆ ಮಿನ್ನಿಯ ಥರದ ಫ್ರಾಕು!
ಎಲ್ಲಕ್ಕಿಂತ
ಈ ಗಣಿತ ಮೇಷ್ಟ್ರರ ಏಟಿಂದ ಮುಕ್ತಿ!
ಹರಾಟತ್ತನೆ
ಕೆಂಪೆಲೆಯುಡುಗೆಯ ಮರದ ನಡುವೆ
ಕೂಗಿದ ಕೋಗಿಲೆ ದನಿ
ಜಡೆಮುನಿಯ ಕಾಲ ಸಪ್ಪಳದಂತೆ
ಕೇಳಿಸಿತು.!
ರಕ್ತ ಕಾರುವ ಭಯಕಿಂತ
ಕೂದಲ ಕೀಳುವ ಕನಸ ಸವಾರಿ!
ನಿರೂರಿಸುವ ಹುಣಿಸೆ ಕಾಯಿಗೆ
ಗುರಿಯಿಡುವುದಕಿಂತ
ಕಳೆದವು ಬೇಸಿಗೆಗಳು
ಜಡೆಮುನಿ ಭೂತನ ತಪಸ್ಸಿನಲ್ಲೆ.

ಎರಡು:-

ಮೊನ್ನೆ
ಇದ್ದಕ್ಕಿದ್ದಂತೆ
ಜಡೆಮುನಿ ಭೂತನ್ನ
ನೆನೆಸುತ್ತಾ
ಮಗಳಿಗೆ ಕಥೆ ಹೇಳಹೊರಟರೆ
ಟಿ.ವಿಯಲ್ಲಿ 'ಹಿ-ಮ್ಯಾನ್' ನೋಡಲು
ಹಾರುತ್ತಾ ಹೋಗಿ ಬಿಟ್ಟಳು.

ಪದಾರ್ಥ ಚಿಂತಾಮಣಿ

• ಪಾವೆಂ •

– : 117 : –

'ವೈಖರಿ'ಯ ಪತನ - 'ಮನ್ನೂನಿ'ನ ಕಥೆ

ಒಳ್ಳೇ ಅರ್ಥ ಕೊಡುವ ಪದಗಳು ತಮ್ಮ ದುರ್ದೈವದಿಂದಲೋ ಏನೋ ದುಷ್ಟಾರ್ಥಕ್ಕೆ ತಿರುಗುವುದು ಭಾಷೆಗಳಲ್ಲಿ ಸಾಧಾರಣ ಸಂಗತಿ. ಈಗೀಗ ಪತ್ರಪತ್ರಿಕೆಗಳಲ್ಲಿ ಸರಕಾರದ ಅಥವಾ ಅಧಿಕಾರಿ ವರ್ಗದ ಅಕರ್ಮಣ್ಯತೆ ಅಥವಾ ದುಷ್ಕರ್ಮಣ್ಯತೆಯನ್ನು ವರ್ಣಿಸುವಾಗ 'ವೈಖರಿ' ಎಂಬ ಪದ ತುಂಬಾ ಚಾಲ್ತಿಗೆ ಬಂದಿದೆ. ಜನತಾ (ಅಥವಾ ಕಾಂಗ್ರೆಸ್) ಸರಕಾರದ 'ಆಡಳಿತ ವೈಖರಿ' ಇಂಥಿಂಥಾ ಅಧಿಕಾರಿಯ 'ಕಾರ್ಯವೈಖರಿ' ಇತ್ಯಾದಿ.

'ವೈಖರಿ' ಶಬ್ದದ ವ್ಯುತ್ಪತ್ತಿ ಸಂದಿಗ್ಧವೇ ಆಗಿದ್ದರೂ ಉಪನಿಷತ್ತು, ಯೋಗಶಾಸ್ತ್ರ ಮೊದಲಾದ ಪುರಾತನ ಗ್ರಂಥಗಳಲ್ಲಿ ಕಾಣಿಸಿಕೊಳ್ಳುವ ಈ ಪದ ಕಾರ್ಯಕ್ಕಲ್ಲ, ವಾಕ್ಕಿ(ಮಾತು)ಗೆ ಸಂಬಂಧಿಸಿದ್ದು. ವಾಕ್ ಶಕ್ತಿ ಮತ್ತು ವಾಗ್ದೇವತೆಯನ್ನು ಅದು ನಿರ್ದೇಶಿಸುತ್ತದೆ. ವಾಕ್ಕಿನ ಉತ್ಪತ್ತಿಯನ್ನು ಉಸಿರಿನ ಪ್ರಥಮ ಚಲನೆಯಿಂದಾರಂಭಿಸಿ ಅದು ಸ್ಪಷ್ಟ ಧ್ವನಿಯಾಗಿ ಪೂರ್ಣ ಅರ್ಥ ಕೊಡುವ ಪದ ಅಥವಾ ವಾಕ್ಯದ ಉನ್ಮೇಷಣ ಅಥವಾ ಉಚ್ಚಾರವಾಗುವವರೆಗಿನ ನಾಲ್ಕು ಹಂತಗಳಲ್ಲಿ (ಪರಾ ಪಶ್ಯಂತಿ, ಮಧ್ಯಮಾ ಮತ್ತು ವೈಖರಿ) ಕೊನೆಯ ಹಂತವೇ ವೈಖರಿ. ಒಟ್ಟಾರೆ ವಾಣಿ, ಭಾಷಣ ಎಂದೂ ಸ್ಪಷ್ಟವಾದ ಮಾತೆಂದೂ ಕೊನೆಯಲ್ಲಿ ಮಾತಿನ ಚಾತುರ್ಯವೆಂದೂ ಈ ಶಬ್ದ ಅರ್ಥ ಸಂಪತ್ತನ್ನು ಬೆಳೆಸಿಕೊಂಡಿತು. ಅನಂತರ ಅರ್ಥದ ಉದಾತ್ತತೆ ಸ್ವಲ್ಪ ಇಳಿಮುಖವಾಗಿ 'ವಾಗ್ವೈಖರೀ ಶಬ್ದಝರೀ' (ಮಾತಿನ ಚಮತ್ಕಾರ, ಶಬ್ದಗಳ ಧಬಧಬ) ಎಂದು ಬರೇ ಮಾತುಗಳಿಂದ ಮರುಳುಗೊಳಿಸುವ (ಒಳಗೆ ಹೆಚ್ಚು ಹುರುಳಿಲ್ಲದೆ) ರೀತಿಗೆ ವೈಖರಿಯನ್ನು ಅನ್ವಯಿಸಲಾಯಿತು.

ಆದರೂ ವೈಖರಿಯೆಂಬುದು ಮಾತಿಗೆ ಮಾತ್ರ ಈಚೆಗಿನವರೆಗೆ ಸಲ್ಲುತ್ತಿತ್ತು. ವೈಖರಿಯೆಂಬುದು ಚಮತ್ಕಾರ ಎಂಬರ್ಥಕ್ಕೆ ಇಳಿದ ಮೇಲೆ ಯಾರೋ ಅದನ್ನು ಮಾತಿನಿಂದ ಕೃತಿಗೆ ಎಳೆದರು. ಕಾರ್ಯ ವೈಖರಿ, ಆಡಳಿತ ವೈಖರಿ ಇತ್ಯಾದಿಗಳು ಚಾತುರ್ಯ ಎಂಬುದಕ್ಕೆ ಸಾರ್ವತ್ರಿಕವಾಗಿ ಸಲುವಳಿಯಾದದ್ದು ಈಗ ಕೆಲ ದಶಕಗಳೊಳಗಿನ ಮಾತು. ಯಾಕೆಂದರೆ, ಪರಿಷತ್ತಿನ ಬೃಹತ್ ನಿಘಂಟಿನಲ್ಲಿ 'ಕಾರ್ಯವೈಖರಿ'ಯ ದಾಖಲೆ ಇಲ್ಲ. ಒಮ್ಮೆ ಹೀಗಾದ ಮೇಲೆ ಅದು ಕಾರ್ಯದ ಅಥವಾ ವರ್ತನೆಯಲ್ಲಿನ ಧೂರ್ತತನ (ಚತುರ=ಧೂರ್ತ)ಕ್ಕೂ ಕಡೆಗೆ ಅವ್ಯವಸ್ಥಿತತೆಗೂ ಅಚಾತುರ್ಯಕ್ಕೂ ಅನ್ವಯವಾಗ ತೊಡಗಿ ಈಗಂತೂ ದೇಶಿ ಸರಸ್ವತಿಯನ್ನು ಬಹುದೂರ ಹಿಂದೆ ಬಿಟ್ಟು ಅನಿಷ್ಟ ಅರ್ಥಕ್ಕೆ ಮೀಸಲಾಗುವ ಪರಿಸ್ಥಿತಿ ಬಂದಿದೆ.

ಹೀಗೆ ವಿರುದ್ಧಾರ್ಥಕ್ಕೆ ತಿರುಗಿದ ಇನ್ನೊಂದು ಪದವೆಂದರೆ 'ಕಾಯಕ'. ಕಾಯಕ, ಕಾಯಿಕ, ಸಂಸ್ಕೃತದಲ್ಲಿ ಶಾರೀರಿಕ, ದೈಹಿಕ (ಕಾಯ=ದೇಹ) ಎಂದಷ್ಟೇ ಪರಿಮಿತಾರ್ಥ ಹೊಂದಿದೆ. ಬಸವಣ್ಣನವರ ವೀರ ಶೈವ ಚಳವಳಿಯಲ್ಲಿ ಅದನ್ನು ಘನತೆಗೇರಿಸಿ ಪ್ರಾಮಾಣಿಕವಾದ ಪರಿಶ್ರಮದಿಂದ, ಶಿವಾರ್ಪಣ ಭಾವದಿಂದ ಮಾಡಿದ ಯಾವುದೇ ಕಸುಬಿನಿಂದ ಸಂಪಾದಿಸಿದ ಧನ ಎಂಬರ್ಥ ಕೊಡಲಾಯಿತು. ಕಾಯಕ ಪ್ರತಿಯೊಬ್ಬನ

ಅವಶ್ಯ ಕರ್ತವ್ಯವೆಂದೂ ಅದು ಪ್ರಾಮಾಣಿಕವಾಗಿದ್ದಷ್ಟು ಕಾಲ ಅದರಲ್ಲಿ ಮೇಲು ಕೀಳೆಂಬುದಿಲ್ಲವೆಂದೂ ಉಪದೇಶಿಸಲಾಯಿತು. ಹೀಗೆ ಉದಾತ್ತ ಅರ್ಥ ಹೊಂದಿದ ಪದವನ್ನು ವ್ಯಂಗ್ಯವಾಗಿ ದುಷ್ಟವೃತ್ತಿ, ಕೆಟ್ಟ ಕೆಲಸ, ಮರೆಮೋಸ ಎಂಬುದಾಗಿ ವಿರುದ್ಧಾರ್ಥದಲ್ಲಿ ಬಳಸಲು ಪ್ರಾರಂಭವಾಗಿಬಿಟ್ಟುದು ಅರ್ಧ ಶತಮಾನಕ್ಕಿಂತಲೂ ಹಿಂದೆ ಎಂಬುದು ಪರಿಷತ್ ನಿಘಂಟು ಕೊಡುವ ಪ್ರಯೋಗಗಳಿಂದ ವಿದಿತವಾಗುತ್ತದೆ.

ಹೀಗೆ ವಿರುಧ್ಧಾರ್ಥಕ್ಕೆ ತಿರುಗಿದ ಶಬ್ದಗಳ ಉದಾಹರಣೆಗಳು ಎಲ್ಲ ಭಾಷೆಗಳಲ್ಲಿ ಸಿಗುತ್ತವೆ. ಅಲಂಕಾರ ಶಾಸ್ತ್ರದಲ್ಲಿ ಈ ಒಲವಿಗೆ ಲಕ್ಷಣಾವೃತ್ತಿಯಲ್ಲಿ ಸ್ಥಾನ ಕೊಡುತ್ತಾರೆ. ಕ್ಷುಲ್ಲಕನನ್ನು "ದೊಡ್ಡ ಮನುಷ್ಯ ಇದ್ದೀ ಬಿಡು" ಎನ್ನುವಾಗ, ಅಸಜ್ಜನನನ್ನು "ಸಜ್ಜನ" ಎನ್ನುವಾಗ (ಇಂಗ್ಲಿಷಿನಲ್ಲಿ ವ್ಯಂಗ್ಯವಾಗಿ Gentleman ಶಬ್ದವನ್ನು ನೋಡಬಹುದು) ಬೈಗಳನ್ನು 'ಆಶೀರ್ವಾದ' ಎನ್ನುವಾಗ ನಾವು ಲಕ್ಷಣಾವೃತ್ತಿಯನ್ನು ಬಳಸುತ್ತೇವೆ. ಹೆಡ್ಡನನ್ನು 'ಭೂಪತಿ' ಎನ್ನುವುದು, ಯಾವುದಾದರೂ ಅಸ್ವಾಭಾವಿಕ, ವಿಲಕ್ಷಣ ವರ್ತನೆ ಅಥವಾ ವೇಷವನ್ನು 'ಅವತಾರ' ಎನ್ನುವುದು ಇದೇ ಚೌಕಟ್ಟಿನಲ್ಲಿ ಬರುತ್ತದೆ. ಆದರೆ ಇಂಥ ಉದಾಹರಣೆಗಳು 'ವೈಖರಿ' ಮತ್ತು 'ಕಾಯಕದ' ಹಾಗೆ ಕಾಯಂ ಆಗಿ ತಮ್ಮ ಉದಾತ್ತ ಅರ್ಥವನ್ನು ಕಳೆದುಕೊಳ್ಳುವ ಗಂಡಾಂತರ ಮಟ್ಟವನ್ನು ತಲುಪುದಿಲ್ಲ.

ವಿಶೇಷವೆಂದರೆ, ಮರಾಠಿ, ಹಿಂದಿ, ಬಂಗಾಲಿ, ಮೊದಲಾದ ನೆರೆಭಾಷೆಗಳಲ್ಲಿ ವೈಖರಿ ಮತ್ತು ಕಾಯಕ (ಈ ಭಾಷೆಗಳಲ್ಲಿ ಕಾಯಕವಿಲ್ಲ, ಕಾಯಿಕ ಇದೆ) ಇಂಥ ವಿಪರೀತವೃತ್ತಿಯನ್ನು ಪಡೆದಿಲ್ಲ

ತದ್ವಿರುದ್ಧವಾಗಿ 'ಚಾಣಾಕ್ಷ' ಶಬ್ದವನ್ನು ತೆಗೆದುಕೊಳ್ಳಿ. ಚಾಣಾಕ್ಷನಾದ ರಾಜಕಾರಣಿ, ಚಾಣಾಕ್ಷನಾದ ಅಧಿಕಾರಿ, ಆಡಳಿತಗಾರ, ಎಂದೆಲ್ಲ ವರ್ಣಿಸುತ್ತೇವಲ್ಲ, ಇದು ಸಂಸ್ಕೃತವೆಂದೇ ಹಲಗಾಲ ನನ್ನ ತಲೆಯಲ್ಲಿತ್ತು 'ಚಾಣ' ಎಂದರೆ 'ಶಾಣ' (ಮಸೆಗಲ್ಲು)ದ ಒಂದು ರೂಪ; ಅದಕ್ಕೆ ಸಾಣೆಹಿಡಿದ ಆಯುಧವೆಂದೂ ಅರ್ಥ ಇದೆ. (ಉದಾ: ಚಾಣದಿಂದ ಕೊರೆ), ಅಕ್ಷ=ಕಣ್ಣು ಹೀಗೆ ಚಾಣಾಕ್ಷ ಎಂದರೆ ಚುರುಕು ಕಣ್ಣಿನವ. ಇದು ನಾನು ಕಲ್ಪಿಸಿಕೊಂಡ ನಿಷ್ಪತ್ತಿ. ಇದು ವಾದಸಾಧ್ಯವಾದರೂ ನಿಜವಾಗಿದ್ದದ್ದಲ್ಲ. ಚಾಣಾಕ್ಷ ಶಬ್ದ ನಮಗೆ ಮರಾಠಿಯಿಂದ ಬಂದದ್ದು, ಮರಾಠಿಯವರು ಅದನ್ನು 'ಚಾಣಕ್ಯ' ಶಬ್ದದಿಂದ ವಿಕಾರ ಹೊಂದಿದ್ದೆಂದೇ ನಿಶ್ಚಯಿಸಿದ್ದಾರೆ. ಮರಾಠಿಯಲ್ಲಿ ಚಾಣಾಕ್ಯ ಚಾಣಾಕ್ಷ ಎಂಬೆರಡು ರೂಪಗಳಲ್ಲಿ ಅದು ಚಲಾವಣೆಯಲ್ಲಿದೆ. ಚಾಣಕ್ಯನಿಗೆ ಎಲ್ಲ ಬಗೆಯ ಧೂರ್ತತನವನ್ನು ಆರೋಪಿಸಲಾಗಿದ್ದರೂ ಚಾಣಕ್ಷ ಎಂಬ ಶಬ್ದರೂಪಕ್ಕೆ ದೂರದರ್ಶಿ ಇನ್ನೊಬ್ಬನ ಇರಾದೆಗಳನ್ನು ಸರಿಯಾಗಿ ತರ್ಕಿಸಬಲ್ಲವ, ಜಾಣ ಎಂಬರ್ಥಗಳು ನಡೆಯುತ್ತವೆ. ಚಾಣಕ್ಯನಿಗೆ ಆರೋಪಿಸಲಾದ ಎಲ್ಲ ವಕ್ರಬುದ್ಧಿಯೂ ಚಾಣಾಕ್ಷನಿಗೆ ದಾಟಿಲ್ಲ. ಅವನ ಪುಣ್ಯ! ಆದರೆ 'ಜಾಣ' 'ಜಾಣತನ' 'ಬುದ್ಧಿವಂತ' ಬುದ್ಧಿವಂತಿಕೆ' ಇವೆಲ್ಲ ಶಬ್ದಗಳು ಚುರುಕು ತಲೆಯನ್ನು ಸೂಚಿಸಿದರೂ ನೈತಿಕ ಅಥವಾ ಧರ್ಮದೃಷ್ಟಿಯಲ್ಲಿ ತಟಸ್ಥ (neutral) ಅರ್ಥವನ್ನಷ್ಟೇ ಸೂಚಿಸುತ್ತವಲ್ಲವೆ? ಚುರುಕುಮತಿಯವರೆಲ್ಲ ಸಂಭಾವಿತರಾಗಿರ ಬೇಕಿಲ್ಲ ತಾನೆ?

ಅಂದ ಹಾಗೆ ಚಾಣಕ್ಯ ಎಂದರೇನು? ಅದು ಆ ಮಹಾ ರಾಜಕಾರಣಿಯ ಅಂಕಿತನಾಮವಲ್ಲ. ಅಂಕಿತ ನಾಮ ವಿಷ್ಣುಶರ್ಮನೆಂದು. ಚಾಣಕ್ಯ ಅವನ ಕುಂನಾಮ. ಚಣ, ಚಣಕ ಎಂದರೆ ಕಡಲೆ. ಚಾಣಕ್ಯ ಎಂದರೆ ಕಡಲೆ ಗದ್ದೆಯ ಒಡೆಯ ಅಥವಾ ಅದರ ಸಮೀಪ ಮನೆಯುಳ್ಳವನೆಂದೆ? ಯಾಕಾಗದು? ನಮ್ಮಲ್ಲಿ 'ಬಸರೀಗಿಡದ' 'ಕಬಂಬ' 'ತೋಂಟದಾರ್ಯ' ಎಂದೆಲ್ಲ ಅಡ್ಡ ಹೆಸರುಗಳಿಲ್ಲವೆ?

ನಾವೀಗ ನಮ್ಮ ಹಿಂಗಾರಿ ಮತ್ತು ಮುಂಗಾರಿ ಮಳೆ ಮತ್ತು ಮಳೆಗಾಲಗಳಿಗೆ ಇಂಗ್ಲೀಷಿನ 'ಮಾನ್ಸೂನ್' ಎಂಬ ಪದವನ್ನು ಹೆಚ್ಚು ಹೆಚ್ಚಾಗಿ ಬಳಸತೊಡಗಿದ್ದೇವಲ್ಲವೆ? ಅದು ವಾಸ್ತವಿಕವಾಗಿ ಇಂಗ್ಲೀಷ್ ಪದವೇ ಅಲ್ಲ; ಇಂಗ್ಲೀಷಿನವರು ಪೋರ್ಚುಗೀಸರ "ಮೋನ್‌ಶಾಂವ್" (moncao) ಪದವನ್ನು ತಮ್ಮ ಬಾಯಿಗೆ ಸರಿಹೊಂದಿಸಿಕೊಂಡದ್ದು, ಪೋರ್ಚುಗೀಸರು ಮಲಯ ಭಾಷೆಯಿಂದ ಮೂಸಿಮ್ ಎಂದಿದ್ದದ್ದನ್ನು ತಮ್ಮ ನಾಲಿಗೆಗೆ ಅಳವಡಿಸಿಕೊಂಡದ್ದು ಮಲಯಿ ಭಾಷೆಗೆ ಅರಬ್ಬಿಯಿಂದ (ಅರಬ್ಬಿ ಮೊಸಿಮ್) ಬಂದದ್ದು. ಅರಬ್ಬಿಯಲ್ಲಿ "ಮೊಸಿಮ್" ಎಂದರೆ ಕಾಲ ಕಾಲಕ್ಕೆ ಅಥವಾ ಋತುಮಾನಕ್ಕೆ ಅನುಸಾರವಾದದ್ದು ಎಂದರ್ಥ. ಏಪ್ರಿಲಿನಿಂದ ಅಕ್ಟೋಬರ್‌ವರೆಗೆ ನೈಋತ್ಯದಿಂದ, ಅಕ್ಟೋಬರ್‌ದಿಂದ ಏಪ್ರಿಲ್‌ವರೆಗೆ ಈಶಾನ್ಯದಿಂದ ಪ್ರತಿವರ್ಷ ಬೀಸುವ ಹಿಂದೂ ಸಾಗರದ ಗಾಳಿಗಳ ಗುಂಟ ಅರಬರು ಶತಮಾನಗಳ ಕಾಲದಿಂದ ಅರಬ್ಬಿ ಸಮುದ್ರವನ್ನು ಹಡಗುಗಳಲ್ಲಿ ಅಡ್ಡಹಾಯ್ದು ಭಾರತದ ಪಶ್ಚಿಮ ಕರಾವಳಿ ಮತ್ತು ಮಲಯ ಮೊದಲಾದ ಪೂರ್ವದೇಶಗಳೊಡನೆ ವ್ಯಾಪಾರ ನಡೆಸುತ್ತ ಇದ್ದರು. ಈ ಗಾಳಿಗಳ ಗುಂಟ ಸಾಗಿದರೆ ಕರಾವಳಿಯ ಗುಂಟ ಬರುವುದಕ್ಕಿಂತ ನೂರಾರು ಮೈಲು ಹತ್ತಿರವಾಗುತ್ತಿತ್ತು. ಪೋರ್ಚುಗೀಸರು ಆಫ್ರಿಕದ ಕೇಪ್ ಆಫ್ ಗುಡ್ ಹೋಪನ್ನು ಸುತ್ತುವರಿದು ಭಾರತ ಮತ್ತು ಪೂರ್ವ ಏಶಿಯದ ದೇಶಗಳಿಗೆ ಬರಲು ಹವಣಿಸಿದಾಗ ಅವರಿಗೆ ಈ ಗಾಳಿಗಳ ಗುಟ್ಟು ತಿಳಿಯಿತು. ಮಲಯದಲ್ಲಿ ಅವರು ಈ ಗಾಳಿಗಳ (ಅಂದರೆ ಮೌಸಮ್ಮಗಳಿಗೆ= ಋತುಗಳಿಗೆ ಸರಿಯಾಗಿ ಬೀಸುವ ಗಾಳಿಗಳ) ಅರಬ್ಬಿ ಹೆಸರನ್ನು ಹೆಕ್ಕಿಕೊಂಡರು ಎಂಬ ಇತಿಹಾಸವನ್ನು ಈ ಪದ ಒಳಗೊಂಡಿದೆ.

ಅಂಗಾಮಿ

ನೂರಾರು ಮಕ್ಕಳ ತಾಯಿ

● ವಿನುತಾ ●

ಮಹಾಭಾರತದ ಗಾಂಧಾರಿಗೆ ನೂರಾಒಂದು ಮಕ್ಕಳು ಎಂಬುದು ಎಲ್ಲರಿಗೂ ತಿಳಿದ ವಿಚಾರವೇ. ಆದರೆ ಈ ಇಪ್ಪತ್ತನೇ ಶತಮಾನದಲ್ಲಿ ಯಾರಿಗಾದರೂ ನೂರಾಮೂರು ಮಕ್ಕಳಿದ್ದಾರೆಂದರೆ, ಮೂಗಿನ ಮೇಲೆ ಬೆರಳಿಟ್ಟು, ಹೌದೇ ಎಂದು ಆಶ್ಚರ್ಯಚಕಿತರಾಗುತ್ತಾರೆ. ಜಗತ್ತಿನ ಮಕ್ಕಳೆಲ್ಲರಿಗೂ ತಾಯಿಯಾಗುವಂತಹ ಮಾತೃಹೃದಯ ಹೆಣ್ಣಿಗಿದೆ. ಈ ಅರ್ಥದಲ್ಲಿ ನೋಡುವುದಾದರೆ ನಾಗಾಲ್ಯಾಂಡಿನ ಅರವತ್ತು ವರ್ಷದ ಜಪುಟೋ ಅಂಗಾಮಿ ನೂರಾಮೂರು ಮಕ್ಕಳ ತಾಯಿ. ಆದರೆ ಅವಳ ಸ್ವಂತ ಮಗು ಮಾತ್ರ ಒಂದೇ ಒಂದು. ಉಳಿದ ಮಕ್ಕಳೆಲ್ಲ ತಬ್ಬಲಿಗಳು ಅಥವಾ ಸಮಾಜದಿಂದ ಬಹಿಷ್ಕೃತವಾದವು.

ಅಂಗಾಮಿಯ ಈ ಹೊಸ ಬದುಕು ಪ್ರಾರಂಭವಾದದ್ದು ಹದಿನೈದು ವರ್ಷಗಳ ಹಿಂದೆ. ಭಾರತೀಯ ಸೈನ್ಯದಲ್ಲಿ ಸೈನಿಕನಾಗಿದ್ದ ಅಂಗಾಮಿಯ ಪತಿ 1965ರಲ್ಲಿ ಅಸುನೀಗಿದ ನಂತರ ಅಂಗಾಮಿ ಕೊಹಿಮಾ ಸರ್ಕಾರಿ ಆಸ್ಪತ್ರೆಯಲ್ಲಿ ನರ್ಸ್ ಕೆಲಸಕ್ಕೆ ಸೇರಿಕೊಂಡಳು. ಹತ್ತು ವರ್ಷದ ಮಗಳು ನೆಬಿಯೋ ಜೊತೆ ಯಾಂತ್ರಿಕವಾದ ಜೀವನ ನಡೆಸುತ್ತಿದ್ದ ಅಂಗಾಮಿಯ ಬದುಕಿನಲ್ಲಿ ಬದಲಾಗುತ್ತಿದ್ದುದೆಂದರೆ ರೋಗಿಗಳ ಮುಖಗಳು ಮಾತ್ರ.

ಆದರೆ ಈ ಬದುಕು ಅದೆಷ್ಟು ನಿಗೂಢ! ಜೀವನದ ಯಾವುದೇ ಒಂದು ಕ್ಷಣದಲ್ಲಿ ಕೂಡಾ ಅದ್ಭುತವಾದದ್ದೇನೋ ಸಂಭವಿಸಿಬಿಡಬಹುದು. ಅಷ್ಟೇ ಅಲ್ಲ ಆ ಘಟನೆ ನಮ್ಮ ಇಡೀ ಬದುಕಿನ ಧ್ಯೇಯಧೋರಣೆಗಳನ್ನೇ ಬದಲಿಸಿಬಿಡಬಹುದು. ಜಪುಟೋ ಅಂಗಾಮಿಯ ಬದುಕಿನಲ್ಲೂ ಅಂತಹುದೇ ಒಂದು ದಿನ ಬಂದಿತು. ಅಂಗಾಮಿ ಕೆಲಸ ಮಾಡುತ್ತಿದ್ದ ಆಸ್ಪತ್ರೆಯಲ್ಲಿ ಒಂದು ಗಂಡು ಮಗುವಿಗೆ ಜನ್ಮ ನೀಡಿ ತಾಯಿ ಮರಣ ಹೊಂದಿದಳು. ಆ ಮಗುವಿನ ತಂದೆ ಅದನ್ನು ನೋಡಿಕೊಳ್ಳಲಾಗುವುದಿಲ್ಲ ಎಂದು ಆಸ್ಪತ್ರೆಯಲ್ಲಿಯೇ ಬಿಟ್ಟು ಹೋದ. ಹೀಗೆ ತಬ್ಬಲಿಯಾದ ಆ ಮಗುವಿನ ಬಗ್ಗೆ ಅಂಗಾಮಿಯ ಅಂತಃಕರಣ ಮಿಡಿಯಿತು. ಆಕೆಯ ಮಾತೃಹೃದಯ ಕರಗಿ ನೀರಾಗಿ ಹರಿಯಿತು. ಆ ಮಾತೃಹೃದಯದ ಮಮತೆಯ ಮಹಾಪೂರದಲ್ಲಿ ಕೊಚ್ಚಿಕೊಂಡು ಹೋದ ಅಂಗಾಮಿಯ ಮನಸು ದೃಢ ನಿರ್ಧಾರವೊಂದನ್ನು ಕೈಗೊಂಡಿತು. ಆ ನಿರ್ಧಾರ ಅವಳ ಇಡೀ ಬದುಕನ್ನೇ ತಿರುಗುಮುರುಗಾಗಿಸಿ ಅವಳಲ್ಲಿ ಸುಪ್ತವಾಗಿ ಅಡಗಿದ್ದ ಚೈತನ್ಯವೊಂದನ್ನು ಹೊರ ತಂದಿತು. ಆ ಚೈತನ್ಯವೇ ಜಗತ್ತಿನ ಮಕ್ಕಳೆಲ್ಲರಿಗೂ ತಾಯಿಯಾಗಬಲ್ಲ ಪ್ರಕೃತಿ ದತ್ತವಾದ ಮಾತೃವಾತ್ಸಲ್ಯ.

ಅಂಗಾಮಿ ಆ ಮಗುವನ್ನು ಮನೆಗೆ ಕರೆತಂದು [illegible] ಅಂಗಾಮಿ ಎಂದು ಹೆಸರಿಟ್ಟಳು. ಆ ನಂತರ ಒಂದು ವರ್ಷದ ಅವಧಿಯಲ್ಲಿ ಅಂಗಾಮಿ ಹೀಗೆ ಕರೆತಂದ ಮಕ್ಕಳು ಐದು. ಅಂಗಾಮಿ ನೌಕರಿಗೆ ಹೋಗುವುದರಿಂದ ಈ ಮಕ್ಕಳನ್ನು ನೋಡಿಕೊಳ್ಳುವ ಹೊಣೆ ಹನ್ನೊಂದು ವರ್ಷದ ನೆಬಿಯೋ ಮೇಲೆ

[illegible] ಈ ಪುಟ್ಟ ಹುಡುಗಿ ಪುಟ್ಟ ತಾಯಿ [illegible].

ದಿನದಿಂದ ದಿನಕ್ಕೆ ತಬ್ಬಲಿ ಮಕ್ಕಳ ಸಂಖ್ಯೆ ಏರುತ್ತಲೇ ಹೋಯಿತು. 1982ರ ಹೊತ್ತಿಗೆ ಅಂಗಾಮಿ 72 ಮಕ್ಕಳ ಹೊಣೆ ಹೊತ್ತಿದ್ದಳು. ಅವಳ ಮನೆಯಲ್ಲಿರುವ ಮೂರು ಕೋಣೆಗಳೊಳಗೆ ಇಷ್ಟು ಮಂದಿ ಮಕ್ಕಳೊಂದಿಗೆ ದಿನ ಕಳೆಯುವುದು ದುಸ್ತರವಾಯಿತು. ಆಗ ಕೊಹಿಮಾ ಸರ್ಕಾರ ನೀಡಿದ ಸ್ಥಳದಲ್ಲಿ ಬಿದಿರು ಮತ್ತು ತಗಡಿನಿಂದ ಮನೆಯನ್ನು ಕಟ್ಟಿಸಿ ಅದಕ್ಕೆ 'ಕೊಹಿಮಾ ತಬ್ಬಲಿ ಮತ್ತು ಬಹಿಷ್ಕೃತ ಮಕ್ಕಳ ಮನೆ' ಎಂದು ಹೆಸರಿಟ್ಟಳು. ಅದರಲ್ಲಿ ಒಂದು ಪ್ರೈಮರಿ ಸ್ಕೂಲನ್ನು ಸಹ ತೆರೆಯಲಾಯಿತು.

ನಾಗಾಲ್ಯಾಂಡಿನ ರಾಜಧಾನಿಯಾದ ಕೊಹಿಮಾ 1.25 ಲಕ್ಷ ಜನಸಂಖ್ಯೆಯುಳ್ಳ ಪುಟ್ಟ ನಗರ. ಆದ್ದರಿಂದ ಅಂಗಾಮಿಯ ಈ ಸಮಾಜ ಸೇವೆಯ ಕೆಲಸ ಸಾಕಷ್ಟು ಜನರ ಗಮನ ಸೆಳೆದಿದೆ. ಅಲ್ಲಿಯ ಕೆಲವು ಗಣ್ಯವ್ಯಕ್ತಿಗಳ ಪತ್ನಿಯರು ಈ ತಬ್ಬಲಿ ಮಕ್ಕಳ ತಾಯಂದಿರು! ಒಂದು ಕಾಲದಲ್ಲಿ ಅಂಗಾಮಿಯ ಸಹಾಯವನ್ನು ಬಯಸಿದ ಈ ಹೆಂಗಸರು ಈಗ ಅಂಗಾಮಿಯ ಈ ಸಮಾಜಸೇವೆಯ ಬಗ್ಗೆ ಯಾವುದೇ ಕಾಳಜಿಯನ್ನು ತೋರಿಸುತ್ತಿಲ್ಲ. ಅಪರೂಪಕ್ಕೊಮ್ಮೆಯಾದರೂ ಈ ತಾಯಂದಿರು ಬಂದು ತಮ್ಮ ಮಕ್ಕಳು ಹೇಗೆ ಬೆಳೆಯುತ್ತಿದ್ದಾರೆ ಎಂದು ನೋಡುವ ಕುತೂಹಲವನ್ನು ತೋರಿಸುವುದಿಲ್ಲವಲ್ಲ ಎಂದು ಅಂಗಾಮಿ ಆಶ್ಚರ್ಯಚಕಿತಳಾಗುತ್ತಾಳೆ.

ಈಗ ಐದು ವರ್ಷಗಳ ಹಿಂದೆ ಕಸದ ತೊಟ್ಟಿಯಲ್ಲಿ ಸಿಕ್ಕ ಸುಂದರ ಮಗುವನ್ನು ನೆನಪಿಸಿಕೊಳ್ಳುತ್ತಾ ಅಂಗಾಮಿ ಆಶ್ಚರ್ಯದಿಂದ ಕೇಳುತ್ತಾಳೆ "ಇಂತಹ ಸುಂದರ ಮಕ್ಕಳನ್ನು ಅವು ಜೀವನ ಆರಂಭಿಸುವ ಮುನ್ನವೇ ನಾವು ಗೋರಿಯಲ್ಲಿಡಲು ಯಾಕೆ ಪ್ರಯತ್ನಿಸುತ್ತೇವೆ?" ಆದರೆ ಮೊಗ್ಗುಗಳು ಅರಳುವ ಮುನ್ನವೇ ಚಿವುಟಿ ಹಾಕುವಂತಹ ಕಲ್ಲೆದೆಯ ತಾಯಂದಿರು ಇರುವುದು ಸುಳ್ಳಲ್ಲ ಎನ್ನುವುದಕ್ಕೆ ಇನ್ನೇನು ಸಾಕ್ಷಿ ಬೇಕು?

ಮುಂಜಾನೆ ನಾಲ್ಕು ಗಂಟೆಗೆ ಈ ಎಲ್ಲಾ ಮಕ್ಕಳನ್ನು ಎಲೆಕ್ಟ್ರಿಕ್ ಗಡಿಯಾರ ಎಬ್ಬಿಸುತ್ತದೆ. ಪ್ರಾರ್ಥನೆಯ ನಂತರ ವ್ಯಾಯಾಮ. ಜಾನ್ ಎಂಬ ಒಂಬತ್ತು ವರ್ಷದ ಹುಡುಗ ಸೈನಿಕನೊಬ್ಬನಿಂದ ಕಲಿತ ವ್ಯಾಯಾಮಗಳನ್ನು [illegible] ಮಕ್ಕಳಿಗೆ ಹೇಳಿ ಕೊಡುತ್ತಾನೆ. ಬೆಳಗಿನ ಉಪಹಾರವೆಂದರೆ [illegible] ಮಾತ್ರ. ಒಮ್ಮೊಮ್ಮೆ ಯಾರಾದರೂ ಬ್ರೆಡ್ ಕಳಿಸಿಕೊಟ್ಟಾಗ ಆ ಬೆಳಿಗ್ಗೆ ಈ ಮಕ್ಕಳಿಗೆಲ್ಲ ಹಬ್ಬದ ಸಡಗರ!

ಈ ಮಕ್ಕಳ ಯಾವ ಕೆಲಸಕ್ಕೂ ಕೆಲಸದವರನ್ನು ನೇಮಿಸಿಕೊಂಡಿಲ್ಲ. ಅಡಿಗೆ, ಬಟ್ಟೆ ಮುಂತಾದ ಎಲ್ಲಾ ಕೆಲಸವನ್ನೂ ಈ ಮಕ್ಕಳೇ ಮಾಡುತ್ತಾರೆ. ಚಿಕ್ಕ ಮಕ್ಕಳ ಜವಾಬ್ದಾರಿಯನ್ನು ದೊಡ್ಡ ಹುಡುಗರು ನೋಡಿಕೊಳ್ಳುತ್ತಾರೆ. ಈ ಚಿಕ್ಕ ವಯಸ್ಸಿನಲ್ಲಿಯೇ ಆ ಮಕ್ಕಳಿಗೆ ಬದುಕಿನ ಕಷ್ಟಸುಖದ ಅರಿವಿದೆ.

ತಮ್ಮ ಬದುಕಿನ ಹಿನ್ನಲೆಯನ್ನು ಕೆಲವು ಮಕ್ಕಳು ಅರಿತಿದ್ದಾರೆ. ಆದರೂ ಚಿಕ್ಕ ಮಕ್ಕಳು ಕೆಲವೊಮ್ಮೆ "ನಮಗೇಕೆ ತಂದೆ ಇಲ್ಲ?" ಎಂದು ಕೇಳುತ್ತವೆ. ಈ ಕೊರತೆಯನ್ನು ತುಂಬಲಾಗದ ಅಸಹಾಯಕತೆಯ ಅರಿವು ಅಂಗಾಮಿಗಿದೆ. ಅವರು ಸಾಕಷ್ಟು ದೊಡ್ಡವರಾದ ನಂತರ ಅವರ ಬದುಕಿನ ಬಗ್ಗೆ ತಿಳಿಸುವ ನಿರ್ಧಾರ ಅಂಗಾಮಿಯದು. ಈ ಸತ್ಯ ಅವರಿಗೆ ತಮ್ಮ ಕಾಲಮೇಲೆ ತಾವು ನಿಂತು ಬದುಕನ್ನು ಎದುರಿಸುವ ಸಾಮರ್ಥ್ಯ ನೀಡಬಹುದು ಎಂದು ಅಂಗಾಮಿ ನುಡಿಯುತ್ತಾಳೆ.

ದುಃಖದ ಸಂಗತಿ ಎಂದರೆ. ಸಿಕೋಲೆ ಎಂಬ ಹದಿನಾಲ್ಕು ವರ್ಷದ ಹುಡುಗಿ ಬರೆದ ಕವಿತೆಯೊಂದರ ವಸ್ತು ತಂದೆತಾಯಿಯರ ಪ್ರೀತಿಗಾಗಿ ಅವಳ ಹಂಬಲ; ಆದರೆ ದೈವನಿಯಮವೇ ಬೇರೆ ಎಂಬ ಕಟು ವಾಸ್ತವವನ್ನು ಕುರಿತಾಗಿದ್ದು. ಎರಡು ವರ್ಷದ ಹಿಂದೆ ಮರಣ ಹೊಂದಿದ ಲಾಸ್ಲಿ ಎಂಬ ಹದಿನಾರು ವರ್ಷದ ತರುಣಿ ತನ್ನ ಕವನದಲ್ಲಿ ಆಶ್ಚರ್ಯದಿಂದ ಕೇಳುತ್ತಾಳೆ- ತನ್ನನ್ನು ಬಿಟ್ಟು ತನ್ನ ತಾಯಿ ನೆಮ್ಮದಿಯಿಂದಿರುವಳೆ? ಎಂದು. ಈ ಪದ್ಯವನ್ನು ಎಲ್ಲಾ ಮಕ್ಕಳು ಪ್ರತಿನಿತ್ಯ ಬೆಳಿಗ್ಗೆ ಹಾಡುತ್ತಾರೆ.

ತನ್ನ ಪರಿಶ್ರಮಕ್ಕೆ ತಕ್ಕ ಪ್ರತಿಫಲವನ್ನು ಪಡೆದಿದ್ದೇನೆ ಎಂಬ ಸಂತೃಪ್ತಿ ಅಂಗಾಮಿಗಿದೆ. ಇತೀಚೆಗೆ ಅಂಗಾಮಿ ಮಲೇರಿಯಾಕ್ಕೆ ತುತ್ತಾದಾಗ

'ಅನೇಕ ಮಕ್ಕಳು ಇಡೀ ರಾತ್ರಿ ಅಂಗಾಮಿಯ ಬಳಿಯೇ ಕುಳಿತಿದ್ದರಂತೆ!

ತಾಯಿ ಮಗಳ ಈ ಅಗಾಧ ಪರಿಶ್ರಮಕ್ಕೆ ಕೋಹಿಮಾ ಸರ್ಕಾರ ನೀಡುತ್ತಿರುವ ಧನ ಸಹಾಯ ವರ್ಷಕ್ಕೆ ಕೇವಲ 30,000 ರೂಪಾಯಿಗಳು. ಕೇಂದ್ರ ಸಮಾಜ ಕಲ್ಯಾಣ ಇಲಾಖೆ ಕೂಡಾ ಇಷ್ಟೇ ಹಣವನ್ನು ನೀಡುತ್ತಿದೆ. ಈ ಹಣ ಇಷ್ಟೆಲ್ಲಾ ಮಕ್ಕಳ ಜೀವನ ನಿರ್ವಹಣೆಗೆ ಸಾಕಾಗುವುದಿಲ್ಲ. ಆದ್ದರಿಂದ ಅನಿವಾರ್ಯವಾಗಿ ಹಲವು ಮಕ್ಕಳು ಕೆಲಸಕ್ಕೆ ಹೋಗಬೇಕಾಗಿದೆ. ನೀತು ಮತ್ತು ಅಸು ಎಂಬ ಹದಿನಾರು ವರ್ಷದ ಮಕ್ಕಳು ಹಗಲು ಗ್ಯಾರೇಜಿನಲ್ಲಿ ಕೆಲಸ ಮಾಡಿ ರಾತ್ರಿ ಶಾಲೆಗೆ ಹೋಗುತ್ತಾರೆ. ಭಾನುವಾರದ ದಿನ ಕೆಲವು ಮಕ್ಕಳು ಶ್ರೀಮಂತರ ಬಂಗಲೆಗಳ ಹೂದೋಟದಲ್ಲಿ ಕೆಲಸ ಮಾಡಿ ಹಣ ಸಂಪಾದಿಸುತ್ತಾರೆ. ಹೆಣ್ಣು ಮಕ್ಕಳು ಮನೆಯಲ್ಲಿಯೇ ಕುಳಿತು ನಾಗಾ ಶಾಲುಗಳನ್ನು ಹೆಣೆಯುತ್ತಾರೆ.

ಅಂಗಾಮಿಗೆ ಬರುವ ಸಂಬಳ ತಿಂಗಳಿಗೆ 500 ರೂಪಾಯಿಗಳು. ಈ ಹಣ ತಿಂಗಳ ಹಾಲಿನ ಖರ್ಚಿಗೇ ಸಾಕಾಗುವುದಿಲ್ಲ. ರೋವಿನೊ ಎಂಬ ಮಗು ಸಣ್ಣದಿರುವಾಗ ಹಾಲು ಕುಡಿಸಲು ಹಣವಿಲ್ಲವೇ ಸೋಯಬೀನಿನ ರಸವನ್ನೇ ಅದಕ್ಕೆ ಕುಡಿಸಬೇಕಾಯಿತು ಎಂದು ಅಂಗಾಮಿ ನೆನಪಿಸಿಕೊಳ್ಳುತ್ತಾಳೆ. ಕೆಲವೊಮ್ಮೆ ಸತ್ತಿರುವ ಮಕ್ಕಳ ಶವ ಸಂಸ್ಕಾರಕ್ಕೆ ದುಡ್ಡಿಲ್ಲದೆ ಅಂಗಾಮಿ ಭಿಕ್ಷೆ ಸಹ ಬೇಡಿದ್ದಾಳೆ. 1978 ರಲ್ಲಿ ಹಣದ ತೊಂದರೆಯಿಂದಾಗಿ ತನ್ನಲ್ಲಿದ್ದ ನಾಲ್ಕು ತೊಲ ಬಂಗಾರವನ್ನು ಅಂಗಾಮಿ ಮಾರಬೇಕಾಯಿತು. 1982ರಲ್ಲಿ ನೆಬಿಯೋಳ ತಂದೆ ಬಹಳ ಕಷ್ಟಪಟ್ಟು ಮಾಡಿಸಿದ ಒಡವೆಗಳನ್ನು ಸಹ ಮಾರಿದರು. ಈ ವಿಷಯಗಳನ್ನೆಲ್ಲಾ ಹೇಳುತ್ತಾ ಅಂಗಾಮಿ ಖಿನ್ನಳಾಗಿ ಹೇಳುತ್ತಾಳೆ-ಇಷ್ಟು ಚಿಕ್ಕ ವಯಸ್ಸಿನಲ್ಲಿ ಇಷ್ಟೊಂದು ಒತ್ತಡಗಳನ್ನು ಸಹಿಸುವ ಈ ನನ್ನ ಮಕ್ಕಳ ಭವಿಷ್ಯವೇನು?

ಈಗ ದಿನಕಳೆದಂತೆ ತಾನು ಸತ್ತ ನಂತರ ಈ ಮಕ್ಕಳ ಗತಿಯೇನು? ಎಂಬ ಚಿಂತೆ ಅಂಗಾಮಿಯನ್ನು ಬಾಧಿಸುತ್ತಲಿದೆ. ಈಗಾಗಲೇ ತಮ್ಮ ಕಾಲ ಮೇಲೆ ನಿಂತಿರುವ ಮಕ್ಕಳು ಸಹಕರಿಸಬಹುದೆಂಬುದೇ ಅಂಗಾಮಿಯ ಆಶಯ. ಅಂಗಾಮಿ ಬೆಳೆಸಿದ ವಿಟು ಎಂಬ ಇಪ್ಪತ್ತು ವಯಸ್ಸಿನ ಹುಡುಗ ಈಗ ಪೊಲೀಸ್ ಕಾನ್‌ಸ್ಟೇಬಲ್ ಆಗಿದ್ದಾನೆ. ಅವನು ಆಗಾಗ್ಗೆ ಹಣದ ಸಹಾಯ ಮಾಡುತ್ತಾನೆ. ನೆಬಿಯೋ ಈಗ ಡಾಕ್ಟರನೊಬ್ಬನನ್ನು ವಿವಾಹವಾಗಿದ್ದಾಳೆ. ತನ್ನ ತಾಯಿಯ ಸಾವಿನ ನಂತರ ಈ ಮಕ್ಕಳ ಹೊಣೆ ತನ್ನ ಮತ್ತು ತನ್ನ ಪತಿಯ ಮೇಲೆ ಬೀಳುವುದೆಂದು ಅವಳಿಗೆ ಗೊತ್ತಿದೆ. ಆದರೆ ಅವಳು ಹೇಳುತ್ತಾಳೆ. ಲೌಕಿಕವಾದ ಆಸೆಗಳಿಲ್ಲದೇ ಇರುವುದರಿಂದ ಇದು ನನಗೇನೂ ಬೇಸರ ತರುವುದಿಲ್ಲ."

ಕಪ್ಪು ಮೋಡಗಳ ತೆರೆ ಸರಿಸಿ ಸೂರ್ಯ ಉದಯಿಸುವ ಮುಂಜಾನೆ ಈ ಮಕ್ಕಳು ಪ್ರಾರ್ಥನೆ ಸಲ್ಲಿಸುತ್ತವೆ. ಹಂಬಲಿಸುತ್ತವೆ ತಮ್ಮ ಬಾಳಿಗೂ ಬರುವ ಬೆಳಕಿಗಾಗಿ. ಜಗತ್ತನ್ನೇ ಬೆಳಗುವ ಸೂರ್ಯ ತನ್ನ ಬೆಳಕ ಕುಡಿಯೊಂದನ್ನು ಈ ಮಕ್ಕಳಿಗೂ ನೀಡುವಂತಾದರೆ...ಅಂಗಾಮಿಯ ಶ್ರಮ ಸಾರ್ಥಕ. ●

ಬ್ರಿಟಿಶ್ ಅರ್ಥಶಾಸ್ತ್ರಿಯೊಬ್ಬನ ಹತ್ತಿರ ವಿದ್ಯಾರ್ಥಿಯೊಬ್ಬನು ಅರ್ಥ ಶಾಸ್ತ್ರದಲ್ಲಿ "ಮಂದಿ" "ಮುಗ್ಗಟ್ಟು" ಮತ್ತು "ಗಾಬರಿ" ಶಬ್ದಗಳ ಅರ್ಥವೇನೆಂದು ಕೇಳಿದ.

"ಬಲು ಸುಲಭ" ಎಂದ ಅರ್ಥಶಾಸ್ತ್ರಿ "ಮಂದಿ ಎಂದರೆ ವ್ಯಾಪಾರ ವ್ಯವಹಾರ ಕುಂದಿ ಜನ ಟೊಂಕಪಟ್ಟಿ ಬಿಗಿ ಮಾಡಬೇಕಾದ ಕಾಲ; ಅನಂತರ ಮುಗ್ಗಟ್ಟು ಎಂದರೆ ಬಿಗಿಮಾಡಲಿಕ್ಕೆ ಟೊಂಕಪಟ್ಟಿಯೇ ಇಲ್ಲವಾಗುವ ಕಾಲ; ಕಡೆಗೆ ಟೊಂಕಪಟ್ಟಿಯನ್ನು ಅಗತ್ಯವಾಗಿ ಮಾಡುವ ಇಜಾರವೇ ಇಲ್ಲದಂತಾದರೆ ಅದು ಗಾಬರಿ."

ಜೋಡಿದಾರರ ಹೊಸ ಮನೆ

★ ಬಿ.ಎನ್. ಸಂಪತ್ ★

ಜೋಡಿದಾರ ನಾರಾಯಣರಾಯರು ನಮ್ಮ ಮನೆಯ ಪಕ್ಕದಲ್ಲಿ ಮನೆ ಕಟ್ಟಿ ವಾರದ ಹಿಂದೆ ಗೃಹ ಪ್ರವೇಶ ಮಾಡಿದ್ದರು. ವರಾಂಡಾ, ಮೂರು ಮಲಗುವ ಕೋಣೆಗಳು, ದೊಡ್ಡ ಹಾಲು, ದೇವರ ಮನೆ ಇರುವ ಅಚ್ಚುಕಟ್ಟಾದ ಮನೆ. ತಮ್ಮ ಒಬ್ಬನೇ ಮಗನಾದ ರಾಮುವಿಗೋಸ್ಕರ ಕಟ್ಟಿಸಿದ ಮನೆ. ಆದರೆ ಅವರ ಮಗ ರಾಮು ಮನೆಯಲ್ಲಿ ಉಣ್ಣಲು, ಉಡಲು ಸಾಕಷ್ಟಿದ್ದರೂ, ನೈಜೀರಿಯದ 'ಎಣ್ಣೆಯ ಹಣದ' ಆಮಿಷಕ್ಕೆ ಒಳಗಾಗಿ ಲಾಗೋಸ್ ನಲ್ಲಿ ಇಂಜಿನಿಯರ್ ಕೆಲಸ ಮಾಡುತ್ತಿದ್ದ. ನಾರಾಯಣರಾಯರ ಅನೇಕ ಕಾಗದಗಳಿಗೆ ಉತ್ತರವಾಗಿ ತಾನು ಹುಟ್ಟಿ ಬೆಳೆದ ಸಿಂಗನಾಯಕನಹಳ್ಳಿಯಲ್ಲಿ ಇರಲು ಸಾಧ್ಯವಿಲ್ಲವೆಂದೂ, ಬೇಕಾದರೆ ಬೆಂಗಳೂರಿನಲ್ಲಿ ನೆಲಸುವ ಯೋಚನೆ ಮಾಡುತ್ತೇನೆಂದೂ ಬರೆದಿದ್ದ. ಸಧ್ಯದಿಲ್ಲಿ ಬೊಂಬಾಯಿ, ಬಿಟ್ಟು ಬೆಂಗಳೂರಿನಲ್ಲಾದರೂ ನೆಲಸುವ ಯೋಚನೆ ಮಾಡಿದನಲ್ಲಾ ಎಂಬ ತಪ್ತಿಯಿಂದ ಮಗ ಹಿಂದಿರುಗುವ ವೇಳೆಗೆ ನಾರಾಯಣರಾಯರು ಅಚ್ಚುಕಟ್ಟಾದ ಮನೆಯನ್ನು ಕಟ್ಟಿ ಮುಗಿಸಿದ್ದರು. ಗೃಹ ಪ್ರವೇಶದ ವೇಳೆಗೆ ಬರುತ್ತೇನೆಂದು ಬರೆದ ಮಗ, ತನ್ನ ಕೆಲಸದ ಕಂಟ್ರಾಕ್ಟನ್ನು ಇನ್ನೆರಡು ವರ್ಷಗಳು ಹೆಚ್ಚಿಸಿದ್ದಾರೆ, ಅದು ಮುಗಿಯುವರೆಗೂ ಭಾರತಕ್ಕೆ ಹಿಂದಿರುಗಲು ಸಾಧ್ಯವಿಲ್ಲವೆಂದು ಬರೆದಿದ್ದ. ಗೃಹ ಪ್ರವೇಶಕ್ಕೆ ಮಗ ಬರಲಿಲ್ಲವೆನ್ನುವ ಬೇಸರದ ಜೊತೆಗೆ ನಾರಾಯಣರಾಯರಿಗೆ ಇಷ್ಟು ದೊಡ್ಡ ಮನೆಯನ್ನು ಏನು ಮಾಡುವುದು ಎನ್ನುವ ಯೋಚನೆಯುಂಟಾಯಿತು. ಹಳ್ಳಿಯ ಜೀವನಕ್ಕೆ ಒಗ್ಗಿದ ರಾಯರು ಇಳಿವಯಸ್ಸಿನಲ್ಲಿ ಬೆಂಗಳೂರು ಕೊಂಪೆಯಲ್ಲಿರಲು ಇಚ್ಛಿಸಲಿಲ್ಲ. ಅವರು ಮನಸ್ಸು ಮಾಡಿದ್ದರೂ ಅವರ ಧರ್ಮಪತ್ನಿ ಅಲ್ಲಿರಲು ಎಳ್ಳಷ್ಟೂ ಇಷ್ಟಪಡುತ್ತಿರಲಿಲ್ಲ. ಅನ್ಯ ಮಾರ್ಗವಿಲ್ಲದೆ ಮನೆಯನ್ನು ಬಾಡಿಗೆಗೆ ಕೊಟ್ಟು ಊರಿಗೆ ವಾಪಸ್ಸು ಹೋಗುವುದೆಂದು ನಿಶ್ಚಯಿಸಿದ್ದರು. ನೆರೆಹೊರೆಯವರ ಸಲಹೆಯಂತೆ ಸ್ಥಳೀಯ ಪತ್ರಿಕೆಯೊಂದರಲ್ಲಿ 'ಮನೆ ಬಾಡಿಗೆಗೆ ಇದೆ' ಎಂದು ಜಾಹೀರಾತು ನೀಡಿದ್ದರು. ಆ ದಿನ ಬೆಳಿಗ್ಗೆ ಮನೆ ನೋಡಲು ಬರುತ್ತೇವೆಂದು ಯಾರೋ ಕಾಗದ ಬರೆದಿದ್ದರು. ಅವರು ಬರುವವರೆವಿಗೂ ನಮ್ಮ ಮನೆಯಲ್ಲಿ ಜೋಡಿದಾರರು ಮಾತನಾಡುತ್ತಿದ್ದರು.

ಬೆಳಿಗ್ಗೆ ಹತ್ತು ಗಂಟೆಯ ವೇಳೆಗೆ ನಮ್ಮ ಮನೆಯ ಮುಂದೆ ಒಂದು ಮಾರುತಿ ಕಾರು ಬಂದು ನಿಂತಿತು. ಗಂಡ ಹೆಂಡತಿ, ಇಬ್ಬರು ಹೆಣ್ಣುಮಕ್ಕಳು ಕಾರಿನಿಂದ ಇಳಿದರು. "ಬನ್ನಿ, ಬನಿ.... ಇಲ್ಲೇ ಇದ್ದಾರೆ ಮನೆಯ ಮಾಲೀಕರು, ಜೋಡಿದಾರ ನಾರಾಯಣರಾಯರು" ಎಂದು ನಾನೇ ಮುಂದೆ ಹೋಗಿ ಸ್ವಾಗತಿಸಿದೆ. "I am M.S. Char. glad to meet you" ಎಂದು ಬಂದವರು ನಾರಾಯಣರಾಯರಿಗೆ ತಮ್ಮ ಪರಿಚಯವನ್ನು ಮಾಡಿಕೊಂಡರು. ಕಿವಿಗೆ ಕಡುಕು, ತಲೆಗೆ

ಗುಂಡು ಟೋಪಿ ಧರಿಸಿದ ಹಳೆಯ ಕಾಲದ ಜೋಡಿದಾರರಿಗೆ, ಜೀನ್ಸ್ ಧರಿಸಿದ ವಯಸ್ಸಿಗೆ ಬಂದ ಆ ಹೆಣ್ಣು ಮಕ್ಕಳನ್ನು ನೋಡಿಯೇ ಸಂಕೋಚ ವಾಗಿತ್ತು. ಅಂಗಾಂಗಗಳೊಡನೆ ಹೋರಾಟ ನಡೆಸುತ್ತಿದ್ದ ಜೀನ್ಸ್ ಮತ್ತು ಶರಟು, ತಲೆಯ ಬಾಬ್ ತಮ್ಮ ಬಣ್ಣಕ್ಕೆ ಹೊಂದದ ರಬ್ಬಾ ರಬ್ಬಿ ಲಿಪ್‌ಸ್ಟಿಕ್ ಹಚ್ಚಿ ಸ್ವಲ್ಪವೂ ಗಾಂಭೀರ್ಯ ತೋರದ ಆ ಹೆಣ್ಣುಗಳನ್ನು ನೋಡಿ ಗಲಿ ಬಿಲಿಗೊಂಡಿದ್ದ ನಾರಾಯಣರಾಯರಿಗೆ ಬಂದಾತ ಎಂ.ಎಸ್. ಚಾರ್ ಎಂದು ಪರಿಚಯಿಸಿ ಕೊಂಡಾಗ ಪಂಜಾಬಿಗಳಾರೋ ಇರಬೇಕೇನ್ನಿಸಿತು. ಜೋಡಿದಾರರ ಮುಖ ಚರ್ಯೆಯಿಂದಲೇ ಅವರ ಮನಸ್ಸಿನಲ್ಲಿ ಮೂಡಿ ಬಂದ ವಿಚಾರವನ್ನು ಗ್ರಹಿಸಿದ ಚಾರ್‌ರವರು "ನಾನು ಮೇಲುಕೋಟೆಯವನು. ಶ್ರೀನಿವಾಸಾಚಾರ್ ಅಂತ. ದಿಲ್ಲಿಯಲ್ಲಿಯೇ ಮೂವತ್ತು ವರ್ಷಗಳಿದ್ದುದರಿಂದ ವ್ಯವಹಾರಕ್ಕೆ ಎಂ.ಎಸ್.ಚಾರ್ ಆಗಿದ್ದೇನೆ" ಎಂದು ಕನ್ನಡ ದಲ್ಲಿ ತಿಳಿಸಿದರು. ಜೋಡಿದಾರರಿಗೆ ಸ್ವಲ್ಪ ಧೈರ್ಯ ಬಂದಿತು. "ಸಧ್ಯ ಕನ್ನಡ ಜ್ಞಾಪಕಕ್ಕೆ ಬಂತಲ್ಲಾ" ಎಂದುಕೊಂಡು ನಾನು "ಬನ್ನಿ ಮನೆ ನೋಡಲು ಹೋಗೋಣ" ಎಂದು ಅವರುಗಳನ್ನು ಕರೆದುಕೊಂಡು ಪಕ್ಕದ ಮನೆಯ ಗೇಟಿಗೆ ಕೈ ಹಾಕಿದೆ. ವಿಶಾಲವಾದ ಕಾಂಪೌಂಡ್ ಗೇಟು ಮತ್ತು ವರಾಂಡಾದ ಮೆಟ್ಟಿಲಿಗೆ ಮಧ್ಯೆ ತುಳಸಿ ಗಿಡಕ್ಕೋಸ್ಕರ ಜೋಡಿದಾರರು ಎತ್ತರ ವಾದ ಸುಂದರ ಬೃಂದಾವನವನ್ನು ಕಟ್ಟಿಸಿದ್ದರು. ಚಾರ್‌ರವರ [illegible] ಶೂವನ್ನು ಬಿಚ್ಚದೆ ಬೃಂದಾವನವನ್ನೇರಿತು. ಗಟ್ಟಿಯಾದ ಸ್ವರದಲ್ಲಿ "Dad, what is this sepulture structure infront of the house?. (ಅಪ್ಪ ಇದೇನು ಮನೆಯ ಮುಂದೆ ಗೋರಿಯಂತಹ ಗೂಡು.) ಎಂದರಚಿತು ಆ ಹದಿನೆಂಟರ ಕಂದಮ್ಮ ಇಂಗ್ಲೀಷ್ ತಿಳಿದಿದ್ದ ಜೋಡಿದಾರರಿಗೆ ಕಪಾಳಕ್ಕೆ ಕೊಟ್ಟಂತಾಯಿತು. ದೊಡ್ಡ ಶಹರದ ದಿಲ್ಲಿ ಯಲ್ಲಿ ಹುಟ್ಟಿ ಬೆಳೆದು ಕಾನ್ವೆಂಟಿಗೆ ಹೋಗು ತ್ತಿದ್ದ ಆ ಹುಡುಗಿಗೆ ಸ್ಮಶಾನ ಮತ್ತು ಸಮಾಧಿ ಗಳ ಪರಿಚಯವಿದ್ದು ಬೃಂದಾವನದ ಗಂಧವೇ ಇಲ್ಲದುದ್ದರು ಆಶ್ಚರ್ಯವೇನಲ್ಲ. ಕಾಲಿನ




ಜೋಡಿನೊಡನೆ ಬೃಂದಾವನ ಹತ್ತಿದ್ದ ಆ ಕಪಿಯ ಮೇಲೆ ಸಿಟ್ಟು ಬಂದಿದ್ದರೂ, ಸಹಿಸಿ ಕೊಂಡೇ ಜೋಡಿದಾರರು ಮನೆಯ ಬೀಗ ತೆಗೆದರು.

ವರಂಡಾದಿಂದ ಒಳಹೊಕ್ಕಕೂಡಲೇ ದೊಡ್ಡ ಹಾಲಿದ್ದಿತು. ಈಗ ದೊಡ್ಡ ಹುಡುಗಿಯ ಸರದಿ: Mum, this looks like a community hall" (ಅಮ್ಮ ಇದು ಜನರು ಕೂಡುವ ಹಾಲಿನಂತಿದೆ.) ಎಂದೊರಲಿತು. ಹಾಲಿನಲ್ಲಿದ್ದ ಮರದ ಆಲಮಾರಿಗಳ ಕೆತ್ತನೆ ಕೆಲಸವನ್ನು ನಾರಾಯಣರಾಯರು ಚಾರ್‌ರ ವರಿಗೆ ತೋರಿಸುತ್ತಿದ್ದಂತೆ ಚಾರ್‌ರವರ ಪತ್ನಿ ಮತ್ತು ಇಬ್ಬರು ಕನ್ನಿಕೆಯರು ಒಳಗಿನ ಕೊಠಡಿ ಗಳನ್ನು ನೋಡಲು ಹೋದರು. ಇನ್ನು ನಾವು ಹಾಲ್‌ಗೆ ಸೇರಿದಂತಿದ್ದ ದೇವರ ಮನೆಗೆ ಬರುವ ವೇಳೆಗೆ ಇಬ್ಬರೂ ಹುಡುಗಿಯರು ಕಿರು ಚುತ್ತಾ ಓಡಿ ಬಂದವು. ಅವುಗಳ ಕಿರಿಚಾಟ ವನ್ನು ಕೇಳಿದ ಜೋಡಿದಾರರಿಗೆ ಮನೆಯೊಳಗೆ ಹಾವೋ ಗೀವೊ ಬಂದು ಬಿಟ್ಟಿತೇನೋ ಎನ್ನುವ ಗಾಬರಿಯಾಯಿತು. ಇಬ್ಬರು ಹುಡುಗಿಯರಲ್ಲಿ ದೊಡ್ಡ ಹುಡುಗಿ ತಂದೆಯ ಭುಜದ ಮೇಲೆ ಕೈ ಹಾಕಿತು, ಚಿಕ್ಕ ಹುಡುಗಿ ಅವರ ಕೈಯನ್ನೆಳೆ ಯುತ್ತಾ "come on Dad, We will go, this is a primitive structure. We cant live here even for a day" (ಬಾಪ್ಪಾ ಹೋಗೋಣ, ಇಂದೊಂದು ಹಳೆ ಮಾದರಿಯ ರಚನೆ. ಇದರಲ್ಲಿ ನಾವು ಒಂದು ದಿನವನ್ನೂ ಕಳೆಯಲಾರೆವು) ಎಂದರಚಿತು. ದಿಲ್ಲಿಯಲ್ಲಿ ವಾಸಿಸುತ್ತಿದ್ದರೂ ಮೇಲುಕೋಟೆಯಲ್ಲಿ ಹುಟ್ಟಿ ಬೆಳೆದಿದ್ದ ಚಾರ್‌ರವರಿಗೆ ಇದು ಹಳೆಯ ಕಾಲದ ಅಭಿರುಚಿಯ ಮನೆಯೆಂದೆನಿಸಿದರೂ ತಮ್ಮ ಮಕ್ಕಳು ಹೀಗೇಕೆ ಆಡುತ್ತಿದ್ದಾರೆ ಎನ್ನುವ ಸೂಕ್ಷ್ಮ ತಿಳಿಯಲಿಲ್ಲ. what is the matter darling? (ಏನು ಸಮಾಚಾರ ಪುಟ್ಟಿ) ಎಂದು ಆ ಹದಿನೆಂಟರ ಕಂದಮ್ಮನನ್ನು ಪ್ರಶ್ನಿಸಿದರು. ಅಷ್ಟರಲ್ಲಿಯೇ ಹರಳೆಣ್ಣೆ ಕುಡಿದ ಮುಖ ಮಾಡಿಕೊಂಡು ಹೊರ ಬಂದ ಚಾರ್‌ರವರ ಹೆಂಡತಿ "Yes darling, what Sumi says is correcot. We cant live here even fro a day. There is only one W.C. that too in the Indian style" (ಹೌದು ರಾಜ ಸುಮಿ ಹೇಳಿದ್ದು ನಿಜ. ಈ ಮನೆಯಲ್ಲಿ ನಾವು ಒಂದು ದಿನವನ್ನೂ ಕಳೆಯಲಾರೆವು. ಈ ಮನೆ ಯಲ್ಲಿ ಇಂಡಿಯಾದಲ್ಲಿ ರೂಢಿಯಲ್ಲಿರುವ ಒಂದೇ ಒಂದು ಕಕ್ಕಸು ಇದೆ) ಎಂದರು.

ಚಾರ್‌ರವರು ಮನೆಯನ್ನು ಪೂರಾ ನೋಡದೆಯೇ ನಾರಾಯಣರಾಯರನ್ನು ಕುರಿತು "ನಿಮ್ಮ ಮೂರು ಮಲಗುವ ಕೋಣೆಗಳಿಗೂ attached bath -room (ಜೋಡಿಸಿದ ಕಕ್ಕಸು) ಇಲ್ಲವಂತೆ. ನಮಗೆ ಕೊನೆಯ ಪಕ್ಷ ಮೂರು attached bathroom ಗಳಾದರೂ ಬೇಕು." ಎಂದು ಹೇಳುತ್ತಾ ಹೊರ ನಡೆದರು. ಒಂದು ಕ್ಷಣ ಜೋಡಿದಾರ ನಾರಾಯಣರಾಯರಿಗೆ ತಲೆ ಗಿರ್ರೆಂದಿತು. ಗಂಡ ಹೆಂಡತಿ ಇಬ್ಬರು ಹೆಣ್ಣು ಮಕ್ಕಳು ಸೇರಿ ಇರುವ ಈ ನಾಲ್ವರ ಕುಟುಂಬಕ್ಕೆ ಮೂರು ಕಕ್ಕಸುಗಳ ಅವಶ್ಯಕತೆಯ ಗಣಿತ ಐನ್‌ಸ್ಟೈನ್‌ನ ಸಾಪೇಕ್ಷವಾದಕ್ಕೆ ಸಂಬಂಧಿಸಿದ ಸೂತ್ರದಷ್ಟೆ ಕ್ಲಿಷ್ಟವಾಗಿ ತೋರಿತು. ಹದಿನೈದು ಮಂದಿಯ ಮನೆಯಲ್ಲಿ ಹುಟ್ಟಿ ಬೆಳೆದಿದ್ದ ಜೋಡಿದಾರರಿಗೆ ಒಂದು ಕಕ್ಕಸು ಸಾಕಾಗಿತ್ತು ಆ ಕಾಲದಲ್ಲಿ ನಾರಾಯಣರಾಯರು ಹೆಮ್ಮೆ ಯಿಂದ ಕಟ್ಟಿಸಿದ ಇಷ್ಟು ದೊಡ್ಡ ಮನೆಯನ್ನು ಕಸದಂತೆ ಕಂಡು ತಿರುಗಿಯೂ ನೋಡದೆ ಕಾರು ಹತ್ತಿತು ಚಾರ್‌ರ ಕುಟುಂಬ. ಅವರ ನಡವಳಿಕೆ ನನಗೂ ಬೇಸರ ತಂದಿತು. "ಹೋಗಲಿ ಬಿಡಿ ನಾರಾಯಣರಾಯರೇ" ಎಂದು ಸಮಾಧಾನ ಹೇಳಿದೆ.

ಆದರೂ ನನ್ನ ಮನಸ್ಸಿಗೆ ಬಂದ ಶಂಕೆಯನ್ನು ತಡೆಯಲಾರದೆ "ವಿದೇಶದಿಂದ ನಿಮ್ಮ ಮಗ ರಾಮು ಬಂದಾಗಲೂ ಈ ಪ್ರಶ್ನೆ ಏಳಬಹುದು, ಹೇಗಾದರೂ ಮಾಡಿ ಇನ್ನೊಂದು ಕಕ್ಕಸ ನಾದರೂ ಈ ಮನೆಗೆ ಸೇರಿಸಿ ಎಂದು ಸಂಕೋಚದಿಂದಲೇ ಸೂಚನೆಯಿತ್ತೆ. ದೂರದ ಲಾಗೋಸ್‌ನಲ್ಲಿ ಎಂಟು ವರ್ಷಗಳಿಂದಿರುವ ಮಗ ಈ ಜೋಡು ಕಕ್ಕಸಿನ ಸಂಸ್ಕೃತಿಯ ಪ್ರಭಾವಕ್ಕೊಳಗಾಗಿ ತಾವು ಇಷ್ಟೊಂದು ಶ್ರದ್ಧೆವಹಿಸಿ ಕಟ್ಟಿಸಿದ ಮನೆಯನ್ನೇ ಏನೋ ಎಂಬ ಯೋಚನೆಯಿಂದ ಜೋಡಿದಾರ್ ನಾರಾಯಣರಾಯರ ತಲೆ ಬಿಸಿಯಾಯಿತು.●

ದೃಷ್ಟಿದೋಷ



"ಸಾರ್! ಇವರೊಬ್ಬ ಸಮಾಜ ಸುಧಾರಕರು. ಕಣ್ಣು ತೆರೆದೇ ಇದ್ರೂ ಒಂದೂ ಕಾಣಸ್ಲ ಅಂತಾರೆ" ಕಾಂಪೌಂಡರ್ ಹೇಳಿದ.

"ಒಳಗೆ ಕಳಿಸು" ಆಜ್ಞಾಪಿಸಿದರು ಆ ನೇತ್ರ ಚಿಕಿತ್ಸಾ ವೈದ್ಯರು.

ಕೊಡಬೇಕಾದ ವರದಕ್ಷಿಣೇನ ತೆರಲಿಲ್ಲವಲ್ಲ ಎಂಬ ಸಿಟ್ಟಿನಿಂದ ಅದೆ ತಾನೆ ಲಗ್ನವಾದ ಮದುಮಗಳ ಮೇಲೆ ಸೀಮೆಎಣ್ಣೆ ಸುರಿದು ಜೀವಂತ ಸುಟ್ಟು ಹಾಕಿದ ಪಟವನ್ನು ತೋರಿಸುತ್ತ "ಮಿಸ್ಟರ್ ಸಮಾಜ ಸುಧಾರಕರೆ.... ಇದೇನೆಂದು ಗುರ್ತಿಸಬಲ್ಲಿರಾ?" ಕೇಳಿದ ವೈದ್ಯ.

"ಏನೂ ಕಾಣಿಸ್ತಿಲ್ವಲ್ಲ ಸೇಠ್!" ರೋಗಿ ಉತ್ತರಿಸಿದ.

"ನಾನು ಸೇಠ್ ಅಲ್ಲ ಮಹಾರಾಯಾ, ಡಾಕ್ಟರ್...."

ಸಮಕಾಲೀನ ಸಮಸ್ಯೆಗಳಿಗೆ ಸಂಬಂಧಿಸಿದ ಅನೇಕ ಚಿತ್ರಗಳನ್ನು ತೋರಿಸಿದ ಡಾಕ್ಟರ್

ಸಿಂಧಿ ಕಥೆ

ಪ್ರಯೋಜನವಾಗಲಿಲ್ಲ.

ಪುಸ್ತಿಕೆಯೊಂದನ್ನು ಕೈಯಲ್ಲಿ ಹಿಡಿದು ದೂರಕ್ಕೆ ಸರಿದು ಅದನ್ನು ರೋಗಿಗೆ ತೋರಿಸುತ್ತ, "ಇದು ಕಾಣಿಸುವುದೆ?" ಎಂದ ವೈದ್ಯ.

"ಓಹೋ....ಕಾಣಿಸುತ್ತಿದೆ ಸಾರ್" ಕೂಗಿ ಹೇಳಿದ ಹಿಗ್ಗಿನಿಂದ.

"ಏನಿದು...ಹೇಳಿ ನೋಡೋಣ!" ಕೇಳಿದ ಡಾಕ್ಟರ್ ಅನುಮಾನದಿಂದ

"ಚಂದಾ ಹಣ ವಸೂಲು ಮಾಡುವ ಪುಸ್ತಕ ಅಲ್ವೆ!"

"ಇನ್ನೇನೂ ಕಾಣಿಸ್ತಿಲ್ವ?"

"ಕಾಣಿಸುತ್ತಿದೆ ಸಾರ್!"

"ಏನು ಕಾಣಿಸೋದು?"

"ಹಣದ ಚೀಲ!"

"ಇವೆರಡೂ ನಿಚ್ಚಳವಾಗಿ ಕಾಣಿಸ್ತಿವೆಯಾ?"

"ಬಹು ನಿಚ್ಚಳವಾಗಿ ಕಾಣಿಸ್ತಿವೇರೀ."

'ಎಂಥ ಕುರುಡನಿಗಾದರೂ ಒಂದಲ್ಲ ಒಂದಿಷ್ಟು ಕಾಣಿಸದೆ ಇರದು' ಎಂಬ ತನ್ನ ಸಿದ್ಧಾಂತಕ್ಕೆ ಬೆಂಬಲ ಸಿಕ್ಕಿತಲ್ಲ ಎಂದು ಒಳಗೇ ಖುಷಿಪಟ್ಟ ಡಾಕ್ಟರ್.

ರೋಗೀನ ಬೇರೆ ಒಂದು ಕಡೆ ಕೂಡಲು ಹೇಳಿದ ವೈದ್ಯ.

"ಸಾರ್...ಈ ರೋಗಿ 'ನವ್ಯ ಕವಿ'. ಈತನ ಕಣ್ಣು ಪೂರ್ತಿಯಾಗಿ ಮುಚ್ಚಿಕೊಳ್ಳೋದೇ ಇಲ್ವಂತೆ. ಹತ್ತಿರದ ವಸ್ತುಗಳು ಕಾಣಿಸವು. ದೂರದ ವಸ್ತುಗಳು ಮಾತ್ರ ಚೆನ್ನಾಗಿ ಕಾಣಿಸ್ತಾವಂತೆ," ರೋಗಿಯ ತೊಂದರೆಗಳನ್ನು ತಿಳಿಸಿ ಹೇಳಿದ ಕಾಂಪೌಂಡರ್.

ವೈದ್ಯ ಕವಿಯನ್ನು ಹತ್ತಿರಕ್ಕೆ ಕರೆದ. ಆತನ ಹೆಂಡತಿ ಮಕ್ಕಳನ್ನು ಸಹ ಒಳಕ್ಕೆ ಕರೆದ. ಅವರನ್ನು ಕವಿಯ ಮುಂದೆ ನಿಲ್ಲಿಸಿ, "ಮಿಸ್ಟರ್ ಕವಿವರೇಣ್ಯರೆ! ನಿಮ್ಮ ಮುಂದೆ ನಿಂತವರು ಯಾರು ಹೇಳ ಬಲ್ಲಿರಾ?" ಎಂದು ಕೇಳಿದ.

"ಏನೂ ಕಾಣಿಸ್ತಾ ಇಲ್ಲಾರೀ...ವ್ಯವಸ್ಥಾಪಕ ಮಹಾಶಯ."

"ನಾನು ವೈದ್ಯ. ವ್ಯವಸ್ಥಾಪಕ ಅಲ್ಲ," ಬಲು ಬೇಸರದಿಂದ ತಿಳಿಸಿ ಹೇಳಿದ ಡಾಕ್ಟರ್.

ಕೆಲವು ಬ್ರಾಂದಿ ಸೀಸೆಗಳನ್ನು ಕವಿಯ ಮುಂದಿಟ್ಟು ಏನೋ ಕೇಳಬೇಕೆಂದು ಬಾಯಿ ತೆರೆಯುವಷ್ಟರಲ್ಲಿ, ಒಂದು ಸೀಸೇನ ಎಳಕೊಂಡು ಕಾರ್ಕ್ ತೆಗೆದು ಗಟಗಟ ಕುಡಿದುಬಿಟ್ಟ ಕವಿ.

"ಇದು ಹೀಗೆ ನಡಿಬೌದಂತ ನಾನು ಮೊದಲೇ ಊಹಿಸಿದ್ದೆ" ಗೊಣಗಿದ ಡಾಕ್ಟರ್.

ಕವಿಯನ್ನು ಮೊದಲ ರೋಗಿಯ ಪಕ್ಕದಲ್ಲೆ ಕೂಡಲು ಸೂಚಿಸಿದ ಡಾಕ್ಟರ್.

"ಸಾರ್...ಈ ರೋಗಿಯ ಕಂಪ್ಲೆಂಟು ಭಾಳ ಆಸಕ್ತಿಕರವಾಗಿದೆ. ಇವರು 'ಇತ್ತೀಚಿನ ಧುರೀಣರು'. ಇವ್ರ ಹಿಂದೆ ಎಷ್ಟೋ ಜನ ಬಂದವ್ರೆ. ಇವರ ಕಣ್ಣು ಸದಾ ಮುಚ್ಚಿಕೊಂಡೇ ಇರ್ತಾವಂತೆ. ಏನೇನೂ ಕಾಣಿಸಲ್ಲ ಅಂತ ಇವರೆಲ್ಲ ಹೇಳ್ತಾರೆ. ಒಂದು ವೇಳೆ ಕಾಣಿಸಿದ್ರೂ... ಎಲ್ಲ ಅಸ್ತವ್ಯಸ್ತವಾಗಿ, ತಲೆ ಕೆಳಗಾಗಿ ಕಾಣಿಸ್ತಾವಂತೆ. ಆದ್ರೆತನಗ ಯಾವ ತರದ ದೃಷ್ಟಿ ದೋಷ ಇಲ್ಲ ಅಂತ್ಲೆ ಈ ರೋಗಿ ವಾದಿಸ್ತವ್ರೆ," ಎಂದು ಇದ್ದ ಸಂಗತಿಯನ್ನು ವಿವರಿಸಿ ಹೇಳಿದ ಕಾಂಪೌಂಡರ್.

ಒಳಗೆ ಬರಲು ಹೇಳಿ ಎಂದು ಡಾಕ್ಟರ್ ಹೇಳುವಷ್ಟರಲ್ಲಿ, ಆತನನ್ನು ಒಳಕ್ಕೆ ನೂಕಿ ಬಿಟ್ಟರು ಹಿಂದೆ ಬಂದವರು.

ಡಾಕ್ಟರ್ ಮೊದಲು ಆತನ ಕಣ್ಣುಗಳನ್ನು ಪರೀಕ್ಷಿಸಿ ನೋಡಿದ. ಅನಂತರ ಬೆನ್ನು ಹೊಟ್ಟೆ, ಒಂದಾದ, ಅಸ್ಥಿಪಂಜರಗಳಂತಿದ್ದ ಕೆಲವರನ್ನು ಆತನ ಮುಂದೆ ನಿಲ್ಲಿಸಿ, "ಮಿಸ್ಟರ್ ಲೀಡರ್! ನಿಮ್ಮುಂದೆ ಏನಿದೆ ಹೇಳಿ ನೋಡೋಣ." ಕೇಳಿದರು ಡಾಕ್ಟರ್.

"ನನ್ನ ಆಹಾರ ಮೇಡಂ!" ಎಂದ.

ತನ್ನನ್ನು ಮೇಡಂ ಎಂದು, ಜನರನ್ನು 'ಆಹಾರ' ಎಂದು ಕರೆದದ್ದಕ್ಕೆ ಡಾಕ್ಟರಿಗೆ ಪಿತ್ತ ನೆತ್ತಿಗೇರಿತು. ಆದರೂ ಸಹನೆ ಕಳೆದುಕೊಳ್ಳದೆ, ಹರಿದುಹೋದ ಒಂದೂ ದೇಶದ ಭೂಪಟವನ್ನು ಬಿಚ್ಚಿ, ಆತನ ಮುಂದೆ ಹಿಡಿದು "ಇದೇನಿದು?" ಎಂದ.

"ನನ್ನ ಗಮ್ಯ ಸ್ಥಾನ!" ಎನ್ನುತ್ತ ತಪಕ್ಕನೆ ಕುರ್ಚಿಯಲ್ಲಿ ಕುಕ್ಕರಿಸಿದ.

ನಿಮ್ಮ ರೋಗ ಏನೆಂಬುದು ನನಗೀಗ ಅರ್ಥವಾಯ್ತು. ಸದ್ಯ ನಿಮ್ಗೆ ಕಾಣಿಸ್ತಿರೋ ವಸ್ತುಗಳು ಕಾಣಿಸದಂತೆ, ಕಾಣಿಸಬೇಕಾದ ವಸ್ತುಗಳು ಕಾಣಿಸುವಂತೆ ಆದಾಗ ಮಾತ್ರ ನಿಮ್ಮ ದೃಷ್ಟಿದೋಷ ಸರಿಹೋಗುತ್ತೆ." ಆ ಮೂವರು ರೋಗಿಗಳನ್ನುದ್ದೇಶಿಸಿ ಹೇಳಿದ ಆ ಡಾಕ್ಟರ್. ಅವರಿಗೆ ಔಷಧಿ ತರಲು ಒಳಗೆ ಹೋದ. ತಿರುಗಿ ಬರುವಷ್ಟರಲ್ಲಿ ಆ ಮೂವರು ರೋಗಿಗಳು ಅಲ್ಲಿಲ್ಲ. ರಸೀದಿ ಪುಸ್ತಕ, ಹಣದ ಚೀಲ, ಬ್ರಾಂದಿ ಸೀಸೆಗಳು, ಕುರ್ಚಿ-ಎಲ್ಲ ಮಂಗಮಾಯ. ಮೇಜಿನ ಕೆಳಗೆ ಬಿದ್ದು ಮುಲುಗುತ್ತಿದ್ದ ಕಾಂಪೌಂಡರ್ ಮಾತ್ರ ಕಣ್ಣಿಗೆ ಬಿದ್ದ. ಆತನ ಕೈಕಾಲುಗಳನ್ನು ಕಟ್ಟಿ, ಮೇಜಿನ ಕೆಳಗೆ ತಳ್ಳಿದ್ದಾರೆ. ಹರಿದ ಒಂದೂ ದೇಶದ ಭೂಪಟ ಆತನ ಮುಂದೆ ಬಿದ್ದಿದೆ. ■

ಕ್ರಿ.ಶ. 869ರಲ್ಲಿ ಕೇರಳದ ಮಹೋದಯಪುರ ಅಥವಾ ಮಲೆಯಾಳಿಯಲ್ಲಿ ಪ್ರಸಿದ್ಧವಾಗಿರುವ ವಂಥದಲ್ಲಿ ಆಳುತ್ತಿದ್ದ ರವಿವರ್ಮ ಶೇಖರನು ತನ್ನ ರಾಜಧಾನಿಯಲ್ಲಿ ಒಂದು ವೇಧಶಾಲೆಯನ್ನು ಕಟ್ಟಿಸಿದ್ದನು. ಇದು ಸಕಲ ಯಂತ್ರ ಮತ್ತು ತಂತ್ರಗಳಿಂದ ಕೂಡಿ ಸುಸಜ್ಜಿತವಾದುದಾಗಿತ್ತು. ಲಘು ಭಾಸ್ಕರೀಯದ ಟೀಕಾಕಾರನಾದ ಶಂಕರನಾರಾಯಣನ ಅಭಿಪ್ರಾಯದಂತೆ ಈ ನಗರದಲ್ಲಿ ಅನೇಕ ಬೃಹತ್ ಸೌಧಗಳಿದ್ದವು. ಈ ರಾಜನು ಇಲ್ಲಿ ಒಂದು ಬೃಹತ್ ಸೌಧವನ್ನು ಕಟ್ಟಿಸಿ ಅಲ್ಲಿ ಪೂರ್ವಾಪರ ರೇಖೆಗಳನ್ನು ಗುರುತಿಸಲು ತಜ್ಞರಾದ ತನ್ನ ಖಗೋಳ ಶಾಸ್ತ್ರಜ್ಞರಿಗೆ ತಿಳಿಸಲು ಯೋಚಿಸಿದನೆಂದೂ ತಿಳಿದು ಬರುತ್ತದೆ. ಅಲ್ಲದೆ ಈ ನಗರದಲ್ಲಿ 24 ನಿಮಿಷಗಳಿಗೊಮ್ಮೆ ಗಂಟೆಯನ್ನು ಬಾರಿಸಿ ಕಾಲವನ್ನು ಸೂಚಿಸಲು ಸೈನಿಕರನ್ನು ನೇಮಿಸಲಾಗಿತ್ತು. ರಾಜನು ಸ್ವತಃ ಖಗೋಳ ಶಾಸ್ತ್ರದಲ್ಲಿ ದೊಡ್ಡ ವಿದ್ವಾಂಸನಾಗಿದ್ದು ಕ್ರಿಸ್ತಶಕ 499 ರಲ್ಲಿ ಪ್ರಚಾರಕ್ಕೆ ಬಂದ ಆರ್ಯಭಟನ ಸಿದ್ಧಾಂತವನ್ನು ಅನುಸರಿಸುತ್ತಿದ್ದನು.

ಆದರ್ಶಗಳು ನಕ್ಷತ್ರಗಳಿದ್ದಂತೆ. ಅವುಗಳನ್ನು ಕೈಯಿಂದ ಮುಟ್ಟಲು ಸಾಧ್ಯವಿಲ್ಲ. ಮಹಾಸಾಗರದಲ್ಲಿ ಯಾನ ಮಾಡುವ ನಾವಿಕರಿಗೆ ನಕ್ಷತ್ರಗಳು ಹೇಗೆ ಮಾರ್ಗದರ್ಶನ ಮಾಡುವವೋ ಹಾಗೆ ಆದರ್ಶಗಳು ಜೀವನ ಮಹಾ ಸಾಗರದಲ್ಲಿ ಯಾನ ಮಾಡುವ ನಮಗೆ ಮಾರ್ಗದರ್ಶನ ಮಾಡುತ್ತವೆ.

ನಡೆ ಮುಂದೆ...ಮುಂದೆ ನಡೆ

● ಶಶಿಪ್ರಭಾ ●

ಮುಸ್ಲಿಂ ಸಮಾಜ ರಚನೆ ಪುರುಷ ಪ್ರಧಾನವಾದುದು. ಘೋಷಾದ ಹಿಂದಿನ ಮುಸ್ಲಿಂ ಸ್ತ್ರೀಯರ ಮುಖದಲ್ಲಿ ಮಡುಗಟ್ಟಿದ ನೋವು ಅವರ ಶೋಷಿತ ಬದುಕಿಗೊಂದು ಕೈಗನ್ನಡಿ. ಎಷ್ಟೋ ವಿದ್ಯಾವಂತ ಮುಸ್ಲಿಂ ತರುಣಿಯರು ಇಂದಿಗೂ ಅನೇಕ ಕಡೆ ಹೊಸ್ತಿಲು ದಾಟುವ ಧೈರ್ಯ ಮಾಡಿಲ್ಲ. ಇಂತಹ ಧರ್ಮದ ರೀತಿ ರಿವಾಜುಗಳ ನಡುವೆಯೂ ಇವುಗಳನ್ನು ಪ್ರತಿಭಟಿಸುವ ಕೆಲ ದನಿಗಳು ಏಳುವುದುಂಟು. ಇಂತಹ ಒಂದು ದನಿ ಈಚೆಗೆ ಕೇಳಿಬರುತ್ತಿರುವುದು ತಮಿಳುನಾಡಿನ ಒಂದು ಚಿಕ್ಕ ಹಳ್ಳಿಯಲ್ಲಿ. ಎಸ್ಸೆಸ್ಸೆಲ್ಸಿವರೆಗೆ ಮಾತ್ರ ಓದಿರುವ ಹಿತಾಯಾ ಧೈರ್ಯವಾಗಿ ಇಂತಹ ಕಂದಾಚಾರಗಳ ತಿರುಳನ್ನೇ ಪ್ರಶ್ನಿಸಿ ಸಮಾಜದ ಮುಖಂಡರಿಗೆ ಸವಾಲೊಡ್ಡಿದ್ದಾಳೆ.

ತಮಿಳುನಾಡಿನ ನೈರುತ್ಯ ತೀರದಲ್ಲಿ ಹುದುಗಿರುವ ಊರು ಕೋಲಾಚಲ್. ಇಲ್ಲಿನವರ ಮುಖ್ಯ ವೃತ್ತಿ ಮೀನುಗಾರಿಕೆ. ಈ ಊರಿನ ಒಂದು ಮುಸ್ಲಿಂ ಕುಟುಂಬದ ತರುಣಿ ಹಿತಾಯಾಳ ಕೆಲ ನವೀನ ವಿಚಾರ ಧೋರಣೆಗಳಿಂದ ಊರು ಸುದ್ದಿ ಮಾಡತೊಡಗಿದೆ.

ಹಿತಾಯಾ ೨೬ ವರ್ಷದ ಮುಸ್ಲಿಂ ತರುಣಿ. ಸುಶಿಕ್ಷಿತೆ ಎಂದು ಹೇಳುವಂತಿಲ್ಲದಿದ್ದರೂ ತನ್ನ ಪರಿಸರದ, ಸುತ್ತಮುತ್ತಲಿನ ಆಗುಹೋಗುಗಳ ಬಗ್ಗೆ ಪ್ರಜ್ಞೆ ಉಳ್ಳಾಕೆ. ತನ್ನ ಕೈಲಾದ ಸಹಾಯವನ್ನು ಇತರರಿಗೆ ಮಾಡುತ್ತಿರುವ ಈಕೆಗೆ ಸಮಾಜ ಸೇವೆಯೊಂದು ಹವ್ಯಾಸವೆಂಬುದಕ್ಕಿಂತ ಒಂದು ವ್ರತ ಎಂದು ಹೇಳಬಹುದಾಗಿದೆ. ಹಾಗೆ ನೋಡಿದರೆ ಈ ಹಳ್ಳಿಯಲ್ಲಿಯೇ ಇವಳ ಕುಟುಂಬವನ್ನು ಸಾಮಾಜಿಕವಾಗಿ ಜಾಗೃತ ಕುಟುಂಬವೆಂದು ಹೇಳಬೇಕು. ಸಮಾಜದಲ್ಲಿಯ ಮೂಢ ನಂಬಿಕೆಗಳನ್ನು ಮೊದಲು ಪ್ರತಿಭಟಿಸಿದವಳು ಇವಳ ಅಕ್ಕ ಲೈಲಾ. ನಾಗರಿಕರ ಸಾಮಾಜಿಕ ಹಕ್ಕುಗಳಿಗಾಗಿ ಹೋರಾಡುತ್ತಿರುವ ಸಂಸ್ಥೆ ವಿಜಿಲ್ ಇಂಡಿಯಾ ಬೆಂಗಳೂರಿನಲ್ಲಿದೆ. ಲೈಲಾ ಅದರ ಸದಸ್ಯೆ. ಈಗ ಹಿತಾಯಾ ಕೂಡ ಈ ಸಂಸ್ಥೆಯ ಸಕ್ರಿಯ ಸದಸ್ಯೆ.

ಮನೆ ಗೆದ್ದು ಮಾರು ಗೆದೆಯೆಂಬ ಗಾದೆಯಂತೆ ತನ್ನೂರಿನಲ್ಲಿಯೇ ಬಡಜನರ, ವಿಶೇಷತಃ ಮುಸಲ್ಮಾನರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಆಯಾ ಸಮಸ್ಯೆಗಳ ಪರಿಹಾರಕ್ಕೆ ಯತ್ನಿಸತೊಡಗುವುದು ಅವಳು ಇಟ್ಟುಕೊಂಡ ಪರಿಪಾಠ . ತನ್ನೂರ ಮೀನುಗಾರರಿಗೆ ಸರ್ಕಾರ ಕೊಡ ಮಾಡಿರುವ ಅನೇಕ ಸೌಲಭ್ಯಗಳ ಅರಿವೇ ಇಲ್ಲದುದನ್ನು ಕಂಡ ಆಕೆ ಅವರಲ್ಲಿ ಜಾಗೃತಿಯನ್ನುಂಟುಮಾಡಿ ನಾಗರಕೋಯಿಲ್ ಕಲೆಕ್ಟರ್ ಬಳಿ ಶಿಷ್ಟ ಮಂಡಳಿಯನ್ನೊಯ್ದು ಅದೆಲ್ಲ ಅವರಿಗೆ ದೊರೆಯುವಂತೆ ಮಾಡಿದಳು. ಬಡ ಮುಸಲ್ಮಾನರನ್ನೊಳಗೊಂಡು ಅನೇಕ ಭೂರಹಿತರಿಗೆ ಸರಕಾರದಿಂದ ಭೂಮಿಯನ್ನು ದೊರಕಿಸಿಕೊಡಲು ಶ್ರಮಿಸಿದಳು. ಅವಳ ಚಟುವಟಿಕೆಗಳು ಆರ್ಥಿಕ ಸೌಲಭ್ಯಗಳನ್ನು ದೊರಕಿಸುವುದಕ್ಕೆ ಸೀಮಿತವಾದಾಗ ಸಮಾಜದ ಹಿರಿಯರು ಅಷ್ಟಾಗಿ ಗಮನಿಸಲಿಲ್ಲ. ಮುಂದೆ ಅಪ್ರಾಪ್ತ ವಯಸ್ಸಿನಲ್ಲೇ


(ಆಧಾರ: 'ವೀಕ್' ಮತ್ತು 'ದಿ ಹಿಂದು'ಗಳಲ್ಲಿ ಬಂದ ವರದಿಗಳು)

ಮುಸಲ್ಮಾನ ಕನ್ನೆಯರ ವಿವಾಹ ಮಾಡಿಬಿಡುವ ಸಂಪ್ರದಾಯದ ವಿರುದ್ಧ ಹಿತಾಯಾ ಧ್ವನಿಯೆತ್ತಿದಳು. 18 ತುಂಬುವ ತನಕ ತಮ್ಮ ಮದುವೆ ಮಾಡುವ ಹಿರಿಯರ ಪ್ರಯತ್ನಗಳಿಗೆ ಸೊಪ್ಪು ಹಾಕಬಾರದೆಂದು ಅವಳು ಊರಿನ ಮುಸ್ಲಿಂ ಕನ್ನೆಯರ ಮನವೊಲಿಸತೊಡಗಿದಳು. ಅವಳ ಪ್ರಯತ್ನ ಫಲಪ್ರದವಾಗುವ ಚಿಹ್ನೆಗಳು ಕಂಡಾಗ 'ಹಿರಿಯರು' ಕಣ್ತೆರೆದರು.

ಈ ವರ್ಷದ ಜನವರಿ 23 ರಂದು ನಾಗರಕೋಯಿಲ್‌ನಲ್ಲಿ ವಿಜಿಲ್ ಇಂಡಿಯಾದ ಒಂದು ಸಭೆ ನಡೆಯಿತು. ಇದರಲ್ಲಿ ಹಿತಾಯ ಹಾಗೂ ಕೋಲಾಚಲ್‌ನ 19 ಜನ ಮುಸ್ಲಿಂ ಹುಡುಗಿಯರು ಭಾಗವಹಿಸಿದ್ದರು. ಈ ಸಭೆಯ ನಂತರ ಹಿತಾಯಾಳ ಹೋರಾಟಕ್ಕೆ ಹೆಚ್ಚಿನ ಚಾಲನೆ ದೊರೆತಂತಾಯಿತು. ಆದರೆ ಈ ವಿಷಯವೇ ಊರಿನ ಜಮಾತ್ ಮುಖಂಡರನ್ನು ಕಂಗೆಡಿಸಿತು . ಈ ಆತಂಕಕಾರೀ ಚಟುವಟಿಕೆಯ ಹುಡುಗಿಯ ಉತ್ಸಾಹವನ್ನು ಹತ್ತಿಕ್ಕುವ ನಿರ್ಧಾರವನ್ನು ಅವರು ಕೈಗೊಂಡರು.

ಈ ಪ್ರಕರಣ ನಡೆದ ಸ್ವಲ್ಪ ಸಮಯದ ನಂತರ ಜಮಾತ್ ಮುಖಂಡರು ಹಿತಾಯಾಳನ್ನು ಕರೆಕಳುಹಿಸಿದರು. ದೃಢ ನಿಲುವಿನ ಆಕೆ ಕೂಡಲೇ ಹೋಗಲಿಲ್ಲ. ಕಡೆಗೆ ಆಕೆ ತನ್ನ ತಂದೆಯ ಬಲವಂತಕ್ಕೆ ಮಣಿದು ಸೋದರಿ ಲೈಲಾಳೊಡನೆ ಜನವರಿ 28 ರಂದು ಜಮಾತ್‌ನ ಸಭೆಗೆ ಹಾಜರಾದಳು. ಜಮಾತ್‌ನ ಮುಖಂಡರು ಸರಿಸುಮಾರು ನಾಲ್ಕೂವರೆ ಗಂಟೆಗಳ ಕಾಲ ಆಕೆಯನ್ನು ವಿವಿಧ ರೀತಿಯಲ್ಲಿ ಪ್ರಶ್ನಿಸಿದರು. ಕೊನೆಗೆ ಅಂತಿಮ ನಿರ್ಧಾರವಾಗಿ ಹಿತಾಯಾ ಹಾಗೂ ಆಕೆಯ ಕುಟುಂಬವನ್ನು ತಮ್ಮ ಸಮಾಜದಿಂದ ಬಹಿಷ್ಕರಿಸಿದರು. ತನ್ನೊಡನೆ ನಾಗರಕೋಯಿಲ್ ಸಭೆಗೆ ಕರೆದೊಯ್ದಿದ್ದ ಮುಸ್ಲಿಂ ತರುಣಿಯರನ್ನು ಹಿಂದೂಗಳಾಗಿ ಮತಾಂತರಿಸಲು ಪ್ರಚೋದಿಸಿದ್ದಳೆಂಬ ಆರೋಪವನ್ನು ಆಕೆಯ ಮೇಲೆ ಹೇರಲಾಯಿತು.

ಈ ಬಹಿಷ್ಕಾರದಿಂದ ಹಿತಾಯಾಗೆ ಒಮ್ಮೆ ಗರಬಡಿದಂತಾಯಿತು. ಆದರೂ ಆಕೆ ಇದಕ್ಕೆ ಎದೆಗುಂದಲಿಲ್ಲ, ಈ ಹಿಂದೆ ಈಕೆಯ



ಸೋದರಿ ಲೈಲಾ ಕೂಡ ಇಂತಹ ಪ್ರಸಂಗವನ್ನೆದುರಿಸಿದವಳೇ. ಪೊಲೀಸ್ ಠಾಣೆಯಲ್ಲಿದ್ದ ವ್ಯಕ್ತಿಯೊಬ್ಬ ಬಾವಿಗೆ ಜಿಗಿದು ಸತ್ತ ಎಂದು ಪೊಲೀಸರು ನ್ಯಾಯಾಲಯದಲ್ಲಿ ತಮ್ಮ ಹೇಳಿಕೆ ನೀಡಿದ ಸಮಯದಲ್ಲಿ ಅಲ್ಲಿ ಹಾಜರಿದ್ದ ಲೈಲಾ ನ್ಯಾಯ ಮೂರ್ತಿಗಳೆದುರು ತನಗೆ ತಿಳಿದಿದ್ದ ಸಂಗತಿಗಳನ್ನು ಹೊರಗೆಡುಹಿದಳು. ಈ ಪ್ರಕರಣದಲ್ಲಿ ಅನಾವಶ್ಯಕವಾಗಿ ಈಕೆಯ ಗಂಡ ಹಾಗೂ ಸೋದರನನ್ನು ಎಲ್ಲಾ ರೀತಿಯ ಒತ್ತಡಗಳಿಂದ ಹಿಂಸಿಸಲಾಯಿತು. ಜಮಾತ್‌ನ ಮುಖಂಡರನ್ನು ಈ ಪ್ರಕರಣದಲ್ಲಿ ಲೈಲಾಳಿಗೆ ಮಧ್ಯೆ ಪ್ರವೇಶಿಸದಂತೆ ಸೂಚನೆ ಕೊಡಲು ಎಳೆಯಲಾಗಿತ್ತು. ಆದರೂ ಲೈಲಾ ತನ್ನ ಹೋರಾಟವನ್ನು ನಿಲ್ಲಿಸಲಿಲ್ಲ. ಪೊಲೀಸರ ಹಿಂಸೆಯಿಂದ ಸತ್ತ ಆ ವ್ಯಕ್ತಿಯನ್ನು ನಂತರ ಬಾವಿಗೆ ಎಸೆಯಲಾಯಿತೆಂಬ ಆಕೆಯ ವಾದವನ್ನು ನಂತರ ನ್ಯಾಯಾಲಯ ಪುರಸ್ಕರಿಸಿತು. ಈಗ ಹಿತಾಯಾಳ ಪಾಲಿಗೆ ಬಹಿಷ್ಕಾರದ ಮತ್ತೊಂದು ಪ್ರಸಂಗ ಪರೀಕ್ಷೆಯಾಗಿ ಕಾಡಿತು.

ಹಿತಾಯಾಳ ನೊಂದ ಮನಸ್ಸಿಗೆ ಆಕೆಯ ಇಡೀ ಕುಟುಂಬ ಸಾಂತ್ವನ ನೀಡಲು ಸಿದ್ಧವಾಯ್ತು. ಹಿತಾಯಾ ಈ ಸಮಯದಲ್ಲಿ ಸುಮ್ಮನೆ ಕೂಡಲಿಲ್ಲ. ತನಗಾದ ಅನ್ಯಾಯಕ್ಕೆ ನ್ಯಾಯಕೋರಿ ಪ್ರಾದೇಶಿಕ ಜಿಲ್ಲಾಧಿಕಾರಿಯವರ ಬಳಿ ಬಂದಳು. ಗೊತ್ತಿಲ್ಲದ ಕೆಲ ಖಾಲೀ ಹಾಳೆಗಳಿಗೆ ಹಸ್ತಾಕ್ಷರ ಹಾಕಿದರೆ ತಾನು ಈ ಪ್ರಸಂಗವನ್ನು ರಾಜೀ ಮಾಡಿಸಬಹುದೆಂದು ಅಧಿಕಾರಿ ಹೇಳಿದ ಮಾತು ಆಕೆಗೆ ರುಚಿಸಲಿಲ್ಲ. ನಂತರ ಕಲೆಕ್ಟರ್, ಸಂಸತ್ ಸದಸ್ಯರು ಹೀಗೆ ಹಂತಹಂತವಾಗಿ ಹಿತಾಯಾ ಈ ಪ್ರಕರಣವನ್ನು ಸಂಬಂಧಪಟ್ಟವರಲ್ಲಿಗೆ ಕೊಂಡೊಯ್ದಳು. ಆದರೆ ಫಲಿತಾಂಶ ಸೊನ್ನೆ.

ಈ ಅನ್ಯಾಯದ ಪರಮಾವಧಿಗೆ ಇತಿಶ್ರೀ ಹಾಡಲು ನಿರ್ಧರಿಸಿದ ಹಿತಾಯಾ ಕಳೆದ ತಿಂಗಳು ಮದ್ರಾಸಿಗೆ ಬಂದು ಅಲ್ಲಿಯ ರಾಜ್ಯಪಾಲ ಪಿ.ಸಿ. ಅಲೆಕ್ಸಾಂಡರ್ ಅವರೊಡನೆ ಭೇಟಿಯಾಗಿ ತನ್ನ ಹೃದಯದ ನೋವನ್ನೆಲ್ಲಾ ಬಿಡಿಬಿಡಿಯಾಗಿ ಚಿತ್ರಿಸಿ ನ್ಯಾಯ ಕೋರಿದಳು.

ರಾಜ್ಯಪಾಲರ ಆದೇಶ ಬಂದೊಡನೆಯೇ ಜಿಲ್ಲಾಧಿಕಾರಿಗಳು ಚುರುಕಾದರು. ಅದುವರೆವಿಗೆ ಜಮಾತ್‌ನ ಹಿರಿಯರೊಂದಿಗೆ ಮಾತನಾಡಲು ಹಿಂಜರಿಯುತ್ತಿದ್ದ ಜಿಲ್ಲಾಧಿಕಾರಿ ಸುಂದರದೇವನ್ ಈಗ ತಾವೇ ಮುಂದಾಗಿ ಎರಡು ಪಕ್ಷಗಳ ನಡುವೆ ಮಧ್ಯಸ್ಥಿಕೆ ವಹಿಸಿ ಜಮಾತ್ ತನ್ನ ನಿರ್ಣಯವನ್ನು ಪುನರ್ವಿಮರ್ಶಿಸುವಂತೆ ಮಾಡುವಲ್ಲಿ ಸಫಲರಾದರು. ರಮ್‌ಜಾನ್ ತಿಂಗಳು ಮುಗಿದ ನಂತರ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಜಮಾತ್ ಆಶ್ವಾಸನೆ ನೀಡಿತು.

ಆದರೆ ರಮ್‌ಜಾನ್ ನಂತರ ನಡೆದದ್ದೇ ಬೇರೆ. ಈ ಮುಂಚೆ ಅವಳ ಕುಟುಂಬದ ಮೇಲೆಯೇ ಹಾಕಿದ್ದ ಬಹಿಷ್ಕಾರವನ್ನು ಜಮಾತ್ ಹಿಂತೆಗೆದುಕೊಂಡು ವೈಯಕ್ತಿಕವಾಗಿ ಹಿತಾಯಾಳನ್ನು ಮಾತ್ರ ಧರ್ಮಬಾಹಿರಳಾಗಿ ಸಾರಿತು. ಈಗ ಅವಳ ಮೇಲೆ ಆಪಾದನೆಯೆಂದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟರೂ ಕೆಲ ಕ್ರೈಸ್ತರೂ ಕೂಡಿ ಅವಳನ್ನು ಆಡಿಸುತ್ತಿದ್ದಾರೆ ಎಂಬುದು. ಅಲ್ಲದೆ ಕೋಲಾಚಲ್‌ನಲ್ಲಿ ಅವಳಿಗಿಂತಲೂ ಹೆಚ್ಚು ಸುಶಿಕ್ಷಿತೆಯರಾದ ಮುಸ್ಲಿಂ ಮಹಿಳೆಯರಿದ್ದರೂ ಅವರೆಲ್ಲ ತಮ್ಮ ತಮ್ಮ ಪರಿಮಿತಿಯನ್ನು ಅರಿತುಕೊಂಡು ನಡೆಯುತ್ತಿದ್ದರೆ ಹಿತಾಯಾ ಮಾತ್ರ ಅದೆಲ್ಲವನ್ನು ಧಿಕ್ಕರಿಸಿ ವರ್ತಿಸುತ್ತಿದ್ದಾಳೆ ಎಂದು ಜಮಾತ್‌ನ ಹಿರಿಯರು ಹೇಳುತ್ತಾರೆ.

ಆದರೆ ಹಿತಾಯಾ ಬೆರಳಿಟ್ಟು ತೋರಿಸುವುದು ಜಮಾತ್‌ನ ಇಬ್ಬಗೆಯ ನೀತಿಯನ್ನು. ಅಲ್ಲಿಯ ಮುಸಲ್ಮಾನರಲ್ಲಿ ಸಿರಿವಂತರೂ ಇದ್ದಾರೆ. ಅವರ ಹೆಣ್ಣು ಮಕ್ಕಳು ಏನು ಮಾಡಿದರೂ ಅದು ಸಿರಿವಂತಿಕೆಯ ಪರದೆಯ ಹಿಂದೆ ಅಡಗಿ ಕೂತುಬಿಡುತ್ತದೆ. ಜಮಾತ್‌ನ ಮುಖಂಡರು ಕಂಡೂ ಕುರುಡರಂತೆ, ಕೇಳಿದಾಗಲೂ ಕಿವುಡರಂತೆ ತೆಪ್ಪಗೆ ಕೂಡುತ್ತಾರೆ. "ಆದರೆ ನನ್ನಂತಹ ಒಬ್ಬ ಸಾಮಾನ್ಯ ಹೆಣ್ಣು ಸಾಮಾಜಿಕ ಸುಧಾರಣೆಯ ಮಾತೆತ್ತಿದರೆ ಅವರ ಕಂಗಳು ಕಿಡಿ ಕಾರತೊಡಗುತ್ತವೆ. ಇಸ್ಲಾಂನಲ್ಲಿ ನನಗೆ ಅತೀವ ಶ್ರದ್ಧೆಯಿದೆ. ಆದರೆ ಆ ಶ್ರೇಷ್ಠ ಧರ್ಮದ ಹೆಸರಿನಲ್ಲಿ ಕೆಲವರು ನಡೆಸಿರುವ ಬೂಟಾಟಿಕೆಯ ವಿರುದ್ಧ ನಾನು ಬಂಡೇಳುತ್ತೇನೆ ಎನ್ನುತ್ತಾಳೆ ಹಿತಾಯಾ.

ಹಿತಾಯಾರಂಥ ಯುವತಿಯರು ಸಾಮಾಜಿಕ ಕುರುಡು ಕಟ್ಟಳೆಗಳಿಗೆ ಬಲಿಯಾಗಬೇಕಾದಂತಹ ಪರಿಸ್ಥಿತಿ ನಮ್ಮ ದೇಶದಲ್ಲಿ ಇನ್ನೂ ಉಳಿದಿರುವುದೊಂದು ದೊಡ್ಡ ದುರಂತ. ಇಪ್ಪತ್ತೊಂದನೆಯ ಶತಮಾನದತ್ತ ನಾವು ಧಾವಿಸುತ್ತಿದ್ದೇವೆ ಅಲ್ಲವೆ !?. ■

ಕನ್ನಡದ ನೆಲದಲ್ಲೊಬ್ಬ

ಜೀವಂತ ಗಾಂಧಿ !

● ಸುಪರ್ಣ ●

ಅಕ್ಟೋಬರ್ ತಿಂಗಳ ಕಸ್ತೂರಿ ಸಂಚಿಕೆಯಲ್ಲಿ 'ಕನ್ನಡದ ನೆಲದಲ್ಲಿ ಗಾಂಧಿ' ಲೇಖನವನ್ನೋದಿದಾಗ ನೆನಪಾದದ್ದು ಕನ್ನಡದ ನೆಲದಲ್ಲಿ ಈಗಲೂ ಇರುವ ಈ ಇನ್ನೊಬ್ಬ 'ಗಾಂಧಿ'. ಅದೇ ಮುಖ, ಅದೇ ಬೋಳು ತಲೆ, ಕಟ್ಟಿಲ್ಲದ ಕನ್ನಡಕ, ತುಂಡು ಪಂಚೆ, ಹೆಗಲ ಮೇಲೊಂದು ಅಂಗವಸ್ತ್ರ, ತೆಳುವಾದ ನೀಳ ಕಾಯ, ಮಾತು-ನಡಿಗೆ, ಎಲ್ಲವೂ ಅದೇ; ಗಾಂಧಿಯದ್ದೇ ತದ್ರೂಪು. ಗಾಂಧಿ ಮತ್ತೆ ಹುಟ್ಟಿ ಬಂದರೋ ಎಂದು ಭ್ರಮೆ ಹುಟ್ಟಿಸುವಷ್ಟು ಹೋಲಿಕೆ. ಇವರೇ ಗಂಗಣ್ಣ. ತುಮಕೂರು ಜಿಲ್ಲೆಯ ಶೆಟ್ಟಿಕೆರೆಯ ಈ 77ರ ವಯೋವೃದ್ಧ ಕರ್ನಾಟಕದ ಗಾಂಧಿಯೆಂದೇ ಎಲ್ಲರಿಗೆ ಚಿರಪರಿಚಿತ.

ಗಂಗಣ್ಣನವರು ಪ್ರಪ್ರಥಮವಾಗಿ 'ಗಾಂಧಿ' ಯಾದದ್ದು 1969ರಲ್ಲಿ, ಗಾಂಧಿ ಜನ್ಮ ದಿನೋತ್ಸವದಂದು. ಗಾಂಧೀಜಿಯವರಲ್ಲಿದ್ದಂತಹದೇ ವಾಚು, ಚೈನು, ಚಪ್ಪಲಿ, ಕನ್ನಡಕ, ಎಲ್ಲವನ್ನೂ ಹೊಂದಿಸಿ, ಈ ನವ ಗಾಂಧೀಜಿಯನ್ನು ಮೆರವಣಿಗೆಯಲ್ಲಿ ಊರೆಲ್ಲಾ ತಿರುಗಿಸಲಾಯಿತು. ಅಂದಿನ ಆ ಸನ್ನಿವೇಶವನ್ನು ನೆನಪಿಸಿಕೊಳ್ಳುವಾಗ ಈಗಲೂ ಗಂಗಣ್ಣನವರ ಸುಕ್ಕುಗಟ್ಟಿದ ಮುಖ ರಂಗೇರುತ್ತದೆ. ಗಾಂಧೀಜಿಯವರಂತೆ ಕಾಣಿಸಿಕೊಳ್ಳಲು ಗಂಗಣ್ಣನವರಿಗೆ ವಿಶೇಷ ತಯಾರಿಯೇನೂ ಬೇಕಿರಲಿಲ್ಲ. ಅವರಲ್ಲಿ ಸಹಜವಾಗಿಯೇ ಗಾಂಧಿಯ ಹೋಲಿಕೆಯಿತ್ತು. ಆದರೆ ಈ ಹೋಲಿಕೆ ಅವರ ಬಾಲ್ಯದಲ್ಲೇನೂ ಇರಲಿಲ್ಲ. ವಯಸ್ಸಾಗುತ್ತಾ ಬಂದಂತೆ. ಚರ್ಮ ನೆರಿಗೆ ಗಟ್ಟಿದಾಗ, ಗಂಗಣ್ಣನವರಲ್ಲಿ ಅವಾಹಿತರಾಗಿದ್ದ ಗಾಂಧೀಜಿಯನ್ನು ಅವರ ಸಹೋದ್ಯೋಗಿಗಳು ಗುರುತಿಸಿದರು.

ಗಾಂಧೀಜಿಯನ್ನು ಇಷ್ಟು ಚೆನ್ನಾಗಿ ಅನುಕರಿಸುವ ಗಂಗಣ್ಣ, ಅವರನ್ನು ಹತ್ತಿರದಿಂದ ಕಂಡವರೇನೂ ಅಲ್ಲ. ಗಂಗಣ್ಣ ಹತ್ತು ವರ್ಷದ ಹುಡುಗನಾಗಿದ್ದಾಗ, ಹತ್ತಿರದ ಊರೊಂದಕ್ಕೆ ಗಾಂಧಿ ಭೇಟಿ ನೀಡಿದ್ದರಂತೆ. ಆಗ ಕಂಡದಷ್ಟೇ ನೆನಪು. ಗಾಂಧೀಜಿಯವರ ಬಗ್ಗೆ ವಿಶೇಷವಾಗಿ ಓದಿ ತಿಳಿಯುವ ಅವಕಾಶವೂ ದೊರಕಲಿಲ್ಲ. ಆದರೂ ಗಾಂಧೀಜಿಯವರನ್ನು ದೂರದಿಂದ ಒಮ್ಮೆ ಕಂಡದ್ದು, ಗಂಗಣ್ಣನವರ ಮೇಲೆ ಬೀರಿದ ಪ್ರಭಾವ ಮಾತ್ರ ಅಷ್ಟಿಷ್ಟಲ್ಲ. ಗಂಗಣ್ಣ ಸ್ವಾತಂತ್ರ್ಯ ಹೋರಾಟಗಾರನಾಗಲು ನಿರ್ಧರಿಸಿದರು. ತಂದೆ- ತಾಯಿಗಳಿಗೆ, ಮಗ ಚಳವಳಿ ಸೇರಿ ಎಲ್ಲಿ 'ಗೂಂಡಾ' ಆಗಿಬಿಡುತ್ತಾನೋ ಎನ್ನುವ ಭಯ. ಆದರೆ ಗಂಗಣ್ಣ ಹಿಂದೆ ಸರಿಯಲಿಲ್ಲ. ಹತ್ತನೆ ತರಗತಿಯಲ್ಲಿದ್ದಾಗ, ಹಾಸ್ಟೆಲ್ ಬಿಟ್ಟು ಓಡಿಹೋಗಿ ಕಾಂಗ್ರೆಸ್ ಸೇರಿದರಂತೆ. ಸೆರೆವಾಸದ ಅನುಭವವೂ ಇವರಿಗಿದೆ. ಇವೆಲ್ಲಾ ಈಗ ಇತಿಹಾಸ.

ಅಟೆನ್‌ಬರೋನ 'ಗಾಂಧಿ' ಚಿತ್ರದ ಹೊರತಾಗಿ, ಗಾಂಧೀಜಿ ಬಗ್ಗೆ ಬೇರಾವ ಚಿತ್ರವನ್ನೂ ಗಂಗಣ್ಣ ನೋಡಿಲ್ಲ. ಗಾಂಧಿಯ ನಡೆನುಡಿಗಳನ್ನು ಅಭ್ಯಸಿಸದೇ ಈ ಅನುಕರಣೆ ಹೇಗೆ ಸಾಧ್ಯ ಎಂಬ ಅನುಮಾನಕ್ಕೆ ಗಂಗಣ್ಣ ಹೇಳುತ್ತಾರೆ. "ನಾನು ಗಾಂಧೀಜಿಯಂತೆ

ಕಾಣುತ್ತೇನೆಂದು ನನಗೆ ನಂಬಿಕೆ ಇದೆ. ಹಾಗಾಗಿ ಅವರು ಹೇಗೆ ನಡೆದುಕೊಳ್ಳುತ್ತಿದ್ದಿರಬಹುದೆಂದು ಊಹಿಸಿ, ಹಾಗೆಯೇ ನಡೆದುಕೊಳ್ಳಲು ಪ್ರಯತ್ನಿಸುತ್ತೇನೆ". ಅದೇನೇ ಇದ್ದರೂ ಗಂಗಣ್ಣ ಗಾಂಧೀಜಿ ಪಾತ್ರದೊಳಗೆ ಲೀನವಾಗುವ ಪರಿ ಬೆರಗು ಹುಟ್ಟಿಸುವಂಥಾದ್ದು. ಗಂಗಣ್ಣನವರು 'ಗಾಂಧಿ'ಯಾದ ಬಳಿಕ, ಸುತ್ತಮುತ್ತಲಿನ ಶಾಲೆಗಳಲ್ಲಿ ಗಾಂಧಿ ಜಯಂತಿಯಂದು ಅವರನ್ನು ಆಹ್ವಾನಿಸುವುದೂ ಉಂಟು. ಆಗ ಗಂಗಣ್ಣನವರು - ಅಹಿಂಸೆ ಹಾಗೂ ಸತ್ಯಪಾಲನೆ, ಮದ್ಯ ಮಾಂಸಾದಿಗಳ ದುಷ್ಪರಿಣಾಮ ಮೊದಲಾದ ಗಾಂಧೀತತ್ವಗಳನ್ನು ಮಕ್ಕಳಿಗೆ ಬೋಧಿಸುತ್ತಾರೆ. ಸ್ವತಃ ಗಂಗಣ್ಣ ಕೂಡಾ ಗಾಂಧೀಜಿಯವರ ಜೀವನದ ವಿಧಾನವನ್ನು ಚಾಚೂ ತಪ್ಪದೆ ಅನುಸರಿಸುತ್ತಾರೆ. ಮದ್ಯ, ಮಾಂಸ, ತಂಬಾಕು, ಅಷ್ಟೇಕೆ ಕಾಫಿ, ಚಹವೂ ಕೂಡಾ ಅವರಿಗೆ ವರ್ಜ್ಯ. ಓರ್ವ ವ್ಯಕ್ತಿಯನ್ನು ಅನುಸರಿಸುವ ಪ್ರಕ್ರಿಯೆಯಲ್ಲಿ ತಾನೇ ಆ ವಕ್ತಿಯಾಗಿಬಿಡುವುದು ಆಶ್ಚರ್ಯಕರವೆನಿಸಬಹುದು. ಆದರೆ ಗಂಗಣ್ಣನವರಿಗೆ ಗಾಂಧಿ ಬರೇ ಪಾತ್ರವಲ್ಲ; ಜೀವನದ ರೀತಿಯಾಗಿದ್ದಾರೆ.

ಗಂಗಣ್ಣನವರಿಗಿಂತ ಮೊದಲು, ಗಾಂಧಿಯನ್ನು ಅನುಕರಿಸುತ್ತಿದ್ದ ಇನ್ನೊಬ್ಬರು ದಸರಾ ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಅವರ ಮರಣಾನಂತರ ಆ ಪಟ್ಟ ಗಂಗಣ್ಣನವರದಾಯಿತು. ಚಲಿಸುತ್ತಿರುವ ವಿಗ್ರಹದಂತೆ ಕಾಣಬೇಕೆಂದು, ಮೊದ ಮೊದಲು ಗಂಗಣ್ಣ ಇಡೀ ದೇಹಕ್ಕೆ, 'ಸಿಲ್ವರ್ ಪೈಂಟ್' ಹಚ್ಚಿಕೊಳ್ಳುತ್ತಿದ್ದರು. ಆದರೆ ಬಣ್ಣವನ್ನು ಮತ್ತೆ ತೆಗೆಯುವುದು ಪ್ರಯಾಸದ ಕೆಲಸವಾಗುತ್ತಿದ್ದುದರಿಂದ, ಗಂಗಣ್ಣ ಈಗ ಬಣ್ಣ ಹಚ್ಚಿಕೊಳ್ಳುವುದಿಲ್ಲ. ಧೋತಿ ಮತ್ತು ಕನ್ನಡಕಗಳೂ ಅವರ ದಿನ ನಿತ್ಯದ ಮಾದರಿಯವೇ ಆದ್ದರಿಂದ, 'ಗಾಂಧಿ'ಯಾಗಲು ಅವರಿಗೆ ಬೇಕಾಗುವ ವಸ್ತುಗಳೆಂದರೆ ಒಂದು ಊರುಗೋಲು ಮತ್ತು ಹೊದ್ದುಕೊಳ್ಳುವ ಬಟ್ಟೆ. ಬಸ್ ಪ್ರಯಾಣಕ್ಕೆ ಅನುಕೂಲವಾಗುವಂತೆ, ಉದ್ದನೆಯ ಕೋಲಿಗೆ ಬದಲಾಗಿ, ಮಡಿಚಲು ಸಾಧ್ಯವಾಗುವ ಕೋಲೊಂದನ್ನು ಮಾಡಿಕೊಳ್ಳುವ ಯೋಚನೆಯೂ ಅವರಿಗಿದೆ.

ಒಮ್ಮೆ, ಮಂಡ್ಯದಲ್ಲಿ ನಡೆದ 'ಸತ್ಯಾಗ್ರಹ ಸೌಧ' ದಲ್ಲಿ ಗಂಗಣ್ಣನವರು, ತೆಪ್ಪದ ಮೇಲೆ ಎಡೆಬಿಡದೆ ನಾಲ್ಕು ತಾಸುಗಳ ಕಾಲ 'ಗಾಂಧಿ ವಿಗ್ರಹ'ವಾಗಿ ನಿಂತಿದ್ದರು. ಇದು ಇವರ 'ಗಾಂಧಿ ಬದುಕಿ'ನಲ್ಲೊಂದು ಅಪೂರ್ವ ಅನುಭವ.

ಗಂಗಣ್ಣನವರಿಗೆ ಗಾಂಧಿಯಾಗುವ ಕಾಯಕ, ಆದಾಯ ತರುವ ವ್ಯವಹಾರ ಎಂದು ಅನ್ನಿಸಿಲ್ಲ. ಆದರೆ ವ್ಯವಸ್ಥಾಪಕರು, ಇವರ ಖರ್ಚು ವೆಚ್ಚಗಳನ್ನು ಭರಿಸುವ ಜೊತೆಗೆ, ಒಂದಿಷ್ಟು ಗೌರವಧನವನ್ನೂ ನೀಡುತ್ತಾರಂತೆ. ದಸರಾ ಮೆರವಣಿಗೆಯಲ್ಲಿ 500ರೂಪಾಯಿ ಹಾಗೂ ರಾಜ್ಯೋತ್ಸವ ಸಮಾರಂಭದಲ್ಲಿ 200 ರೂಪಾಯಿಗಳನ್ನು ಗಂಗಣ್ಣ ಪಡೆದಿದ್ದಾರೆ. "ಹಣ ಅಥವಾ ಮನರಂಜನೆ ನನ್ನ ಉದ್ದೇಶವಲ್ಲ. ಗಾಂಧಿ ಹೇಗಿದ್ದರು ಎಂಬುದನ್ನು ಜನರು ನೋಡಲಿ ಎಂದಷ್ಟೇ ನನ್ನ ಉದ್ದೇಶ" ಎನ್ನುತ್ತಾರೆ ಗಂಗಣ್ಣ. ಕನ್ನಡದಲ್ಲಿ ಮಾತ್ರ ನಿರರ್ಗಳವಾಗಿ ಮಾತನಾಡಬಲ್ಲ ಗಂಗಣ್ಣನವರು ಇತ್ತೀಚೆಗೆ ಮುಂಬಯಿನಲ್ಲಿ, ಸರ್ವೋದಯ ಸಮ್ಮೇಳನದಲ್ಲಿ ಭಾಗವಹಿಸಿದ್ದಾಗ ಉರ್ದು ಮತ್ತು ಇಂಗ್ಲಿಷ್ ಬೆರಸಿ ಮಾತನಾಡಿದರು.

ಸ್ವಾತಂತ್ರ್ಯಾನಂತರ ದಿನಗಳಲ್ಲಿ ತುಮಕೂರು ಜಿಲ್ಲಾ ಕಾಂಗ್ರೆಸ್ ಸಮಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಗಂಗಣ್ಣ, ಇನ್ನೂ ಹಲವಾರು ಸಂಘ-ಸಂಸ್ಥೆಗಳ ಅಧ್ಯಕ್ಷರಾಗಿದ್ದಾರೆ. ಆದರೆ ರಾಜಕೀಯದಲ್ಲಿ ಮಾತ್ರ ಆಸಕ್ತಿಯಿಲ್ಲ. ಒಂಬತ್ತು ಮಕ್ಕಳ ತಂದೆಯಾದ ಇವರು ಒಬ್ಬ ಮಗನೊಂದಿಗೆ ತೆಂಗಿನ ತೋಟವನ್ನು ನೋಡಿಕೊಂಡು ಊರಲ್ಲೇ ಇದ್ದಾರೆ. ಗಂಗಣ್ಣನವರನ್ನು ಗಾಂಧೀಜಿ ಎಂದು ಕರೆಯುವವರು, ಅವರ ಪತ್ನಿಯನ್ನು ಕಸ್ತೂರಿಬಾ ಎಂದು ಕರೆಯ ತೊಡಗಿದ್ದಾರೆ..

ಸಾಕಷ್ಟು ಗಟ್ಟಿಯಾಗಿಯೇ ಇರುವ ಗಂಗಣ್ಣನವರ ಜೀವನೋಲ್ಲಾಸ, ಬತ್ತಲಾರದ ಗಂಗೆಯಂತಿದೆ. ಮರೆಯಾದ ಗಾಂಧೀಜಿಯನ್ನು ಇಂದಿನವರು ಮರೆಯದಂತೆ, ಮತ್ತೆ ಜೀವಂತಗೊಳಿಸಿ ಗಾಂಧಿಸ್ಮರಣೆ ಹಾಗೂ ಶಿಕ್ಷಣ ಎರಡನ್ನೂ ನೀಡುತ್ತಿರುವ ಗಂಗಣ್ಣನ ಸೇವೆ ಸ್ತುತ್ಯರ್ಹ: ಬದುಕು ಸಾರ್ಥಕ. ●

ಸೋವಾನ ಸಹೋದರಿ

ಜೆಕ್ ಕಥೆ

ಮೂಲ: ಮೇರಿ ಪುಜ್ಮನೋವಾ
ಅನುವಾದ: ಎಂ.ಎಸ್. ಶ್ರೀರಾಮ್

ಸೋವಾ ಒಬ್ಬ ಸಾಮಾನ್ಯ ಹುಡುಗ- ಅವನ ಸಹೋದರಿ ಅಷ್ಟು ಬೇಗ ಸಾಯಬಹುದೆಂದು ಯಾರೂ ಊಹಿಸಿರಲಿಲ್ಲ. ನಿನ್ನೆ ಅವನು ಶಾಲೆಗೆ ಬಂದಿರಲಿಲ್ಲ. ಗಣಿತದ ಪರೀಕ್ಷೆಗೆ ತಪ್ಪಿಸಿ ಕೊಳ್ಳ ಲೆಂದೇ ಬಂದಿಲ್ಲವೆಂದು ಎಲ್ಲರೂ ಅಂದು ಕೊಂಡಿದ್ದೆವು. ಆದರೆ ಇಂದು ಸೋವಾ ಮಾಸ್ತರರ ಮೇಜಿನ ಬಳಿ ಹೋದಾಗ ತನ್ನ ತೋಳಿನ ಸುತ್ತ ಶೋಕ ಸೂಚಕವಾಗಿ ಕಪ್ಪುಪಟ್ಟಿ ಕಟ್ಟಿ ಕೊಂಡಿದ್ದುದ್ದು ಕಂಡಿತು. ಸೋವಾ ಕ್ಷೀಣ ದನಿಯಲ್ಲಿ ತನ್ನ ತರಗತಿಯ ಮಾಸ್ತರರಿಗೆ ಹಿಂದಿನ ದಿನ ಬರಲಾಗದ್ದಕ್ಕೆ ಕಾರಣವನ್ನೂ ಮನೆಯಲ್ಲಾದ ಘಟನೆಯನ್ನೂ ವಿವರಿಸಿದ.

ಮಾಸ್ತರರು ಮೌನವಾಗಿ ತಲೆ ಆಡಿಸಿದರು. ಹೌದು ಶಿಕ್ಷಕರು ಸಾಮಾನ್ಯವಾಗಿ ಹೇಗೆ ವರ್ತಿಸುತ್ತಾರೆಂದು ಎಲ್ಲರಿಗೂ ತಿಳಿದಿದೆ. ಆದರೆ ಇಂಥ ವಾರ್ತೆ ಕೇಳಿದಾಗಲೂ ದಿಗ್ಭ್ರಾಂತಗೊಳ್ಳದೇ ಇದ್ದದ್ದು ನಿಜಕ್ಕೂ ಆಶ್ಚರ್ಯಕರ. ಆತ ಏನೂ ಆಗಿಯೇ ಇಲ್ಲವೇನೋ ಎಂಬಂತೆ ಹಾಜರಿ ಕೂಗಿದಾಗ ಮಾತ್ರ ಇದು ಸೋವಾನ ವಿಷಯದಲ್ಲಿ ಅವರ ದಯಾಹೀನ ಚರ್ಯೆ ಎನ್ನಿಸಿತು.

ಸೋವಾನ ಅಕ್ಕ ಸುಮಾರು ದೊಡ್ಡವಳೇ. ಹದಿನೆಂಟು ವರ್ಷ ವಯಸ್ಸಾಗಿತ್ತಂತೆ. ಅವಳಿಗೆ ಹೃದ್ರೋಗವಿತ್ತಂತೆ. ಸೋವಾಗೆ ಆ ಬಗ್ಗೆ ಚೆನ್ನಾಗಿ ಗೊತ್ತಿತ್ತು. ಅವನೇನು ಮಾಡಿದರೂ, ಏನೇ ಹೇಳಿದರೂ ನಮಗೆಲ್ಲಾ ವಿಶೇಷ ಪ್ರಾಮುಖ್ಯ ಇರುತ್ತಿತ್ತು. ಈ ಘಟನೆಯ ನಂತರವಂತೂ ಆರ್ಲಿಕ್‌ಗೆ ಸೋವಾನ ಬಗ್ಗೆ ಗೌರವ ಹಾಗೂ ಅವನ ವಿಷಯದಲ್ಲಿ ಸ್ವಲ್ಪ ಸಂಕೋಚವೂ ಉದ್ಭವವಾಯಿತು. ಅದಕ್ಕೆ ಕಾರಣವೂ ಇಲ್ಲದಿಲ್ಲ-ನಿನ್ನೆಯಲ್ಲ ಮೊನ್ನೆ ಕ್ಲಾಸಿನ ಮೇಜಿನ ಬಳಿ, ಬೇರಾವ ಹುಡುಗರೊಂದಿಗೆ ವರ್ತಿಸುವಂತೆಯೇ ಅವನ ಜೊತೆಯೂ ಜಗಳವಾಡಿ ಅವನನ್ನು ಚೆನ್ನಾಗಿ ಬೈದಿದ್ದ. ಅವನಿಗೇನು ಗೊತ್ತು.... ಸೋವಾನ ಅಕ್ಕ ಸಾಯುತ್ತಾಳೆಂದು? ಸಾಯುವಾಗ ಅವಳಿಗೆ ಭಯವಾಗಿದ್ದಿರಬಹುದೇ? ಅವಳು ಸತ್ತಾಗ ಸೋವಾ ಕೂಡ ಅಲ್ಲೇ ಇದ್ದನೇ? ಅಥವಾ ಅವನನ್ನು ಕೋಣೆಯಿಂದಾಚೆ ಕಳಿಸಿದ್ದರೆ? ಯಾರಾದರೂ ಸಾಯುವುದೆಂದರೆ ಅದು ಹೇಗಿರುತ್ತೆ?.... ಆರ್ಲಿಕ್‌ನ ಮನದಲ್ಲಿ ಇಂಥ ಹಲವಾರು ಪ್ರಶ್ನೆ ಗಳಿದ್ದರೂ ಆ ಬಗ್ಗೆ ಸೋವಾನನ್ನು ಅವನೇನೂ ಕೇಳಲಿಲ್ಲ. ಆಗಾಗ ಅವನ ಕಡೆಗೆ ಓರೆ ನೋಟ ಬೀರುತ್ತಿದ್ದ ಅಷ್ಟೆ. ತನ್ನ ಮೊಂಡು ಮೂಗು ಹೊತ್ತ ಸೋವಾ ಎಂದಿನಂತೆ ಕಾಣುತ್ತಿದ್ದ. ಅದೇಕೋ ಆ ಮೊಂಡು ಮೂಗು ಸಹೋದರಿ ಸತ್ತವನ ಮುಖಕ್ಕೆ ಹೊಂದುವುದಿಲ್ಲವೆನ್ನಿಸಿತು. ಸೋವಾ ಅಳಲಿಲ್ಲ. ಪ್ರಖ್ಯಾತ ಹುಡುಗನೆಂಬಂತೆ ತನ್ನ ದುಃಖವನ್ನು ತಡೆಹಿಡಿದಿದ್ದ. ನಾವುಗಳೆಲ್ಲಾ

(ಕೃಪೆ: 'ರುಜುವಾತು')

ಅವನಿಗೆ ಸಮಾಧಾನದ ಮಾತುಗಳನ್ನು ಹೇಳ ಬೇಕೆನ್ನುವ ವಿಷಯ ನಿರೀಕ್ಷಿಸುತ್ತಿದ್ದವನಂತೆ ಗಂಭೀರವಾಗಿದ್ದ. ಆರ್ಲಿಕ್‌ನಂತೂ ತನ್ನ ಸಂತಾಪ ಸೂಚಿಸ ಬೇಕಲ್ಲವೇ? ಹೌದು. ಅದೇ ಸಮಂಜಸವಾದದ್ದು. ಆದರೆ ಸುತ್ತ-ಮುತ್ತ ಹುಡುಗರೆಲ್ಲಾ ಮುತ್ತಿಕೊಂಡಿರುವಾಗ ಸಂತಾಪ ಸೂಚಿಸುವುದು ಸಂಕೋಚದ ವಿಷಯ. ಆದರೂ ಏನೂ ಹೇಳದೆ ಮೌನ ವಾಗಿರುವುದು ಆರ್ಲಿಕ್‌ಗೆ ಶೋಭಿಸುವುದಿಲ್ಲ. ಆಗವನು ಕಟುಕನಂತೆ ಕಾಣುತ್ತಾನೆ. ಶಾಲೆ ಯಿಂದ ಇನ್ನೇನು ಹೊರಡಬೇಕು ಎನ್ನುವಾಗ, ಕಡೆಯ ಕ್ಷಣದಲ್ಲಿ ಆರ್ಲಿಕ್ ಮನಸ್ಸು ಗಟ್ಟಿಮಾಡಿ ಕೊಂಡ. ಅವನು ಸೋವಾನ ಹತ್ತಿರ ಹೋಗಿ ನಿಂತ. ನೇರವಾಗಿ ಅವನ ಮುಖಕ್ಕೆ ಮುಖ ಕೊಟ್ಟು ಮಾತನಾಡಿಸಲು ಸಾಧ್ಯವಾಗಲಿಲ್ಲ. ತಲೆ ತಗ್ಗಿಸಿ ವಟಗುಟ್ಟಿದ- "ಸೋವಾ, ನಿನ್ನಕ್ಕನ ವಿಷಯ ತಿಳಿಯಿತು. ನಂಗೆ ತುಂಬಾ ದುಃಖ..."

ವಿಶೇಷ ಗತ್ತಿನಿಂದ ಸೋವಾ ಅವನ ಕೈಹಿಡಿದು ಒತ್ತಿದ. ಆರ್ಲಿಕ್ ತನ್ನ ಯೋಚನೆ ಯಲ್ಲಿ ಸೋವಾನ ಕೈ ಕುಲುಕುವುದನ್ನು ಮರೆತಿದ್ದ. ಸೋವಾ ಅವನಿಗೆ ಕೃತಜ್ಞತೆಗಳನ್ನು ಹೇಳಿದ್ದಲ್ಲದೆ, ಶವ ಪೆಟ್ಟಿಗೆಯಲ್ಲಿರುವ ತನ್ನಕ್ಕ ನನ್ನು ನೋಡಲಿಚ್ಛಿಸುವುದಿಲ್ಲವೇ ಎಂದೂ ಕೇಳಿದ.

"ಈಗ್ಲೇನಾ?" ಆರ್ಲಿಕ್ ಗಲಿಬಿಲಿಗೊಂಡು ಕೇಳಿದ. ಅವನು ಈವರೆಗೂ ಸತ್ತ ವ್ಯಕ್ತಿಯನ್ನು ನೋಡಿರಲಿಲ್ಲ.

"ಹೌದು ಈಗ್ಲೇ..." ಸೋವಾ ಉತ್ತರಿಸಿದ. ಮಧ್ಯಾಹ್ನ ಅವಳನ್ನು ತಗೊಂಡು ಹೋಗ್ತಾರೆ. ಪಾಲೆಕ್ಸ್, ಲೆವ್ ಎಲ್ರೂ ಬರ್ತಾ ಇದ್ದಾರೆ.

"ನಮ್ಮ ಚೀಲಗಳನ್ನು ಎಲ್ಲಿಡೋದು?" ಆರ್ಲಿಕ್ ಬಡಬಡಿಸಿದ. ಈ ವಿಷಯವನ್ನು ಯಾವುದೇ ಕಾರಣಕ್ಕೂ ಮನೆಯಲ್ಲಿ ಹೇಳು ವಂತಿರಲಿಲ್ಲ. ಯಾಕೆಂದು ಗೊತ್ತಿಲ್ಲ... ಆದರೂ ಅಪ್ಪ ಅಮ್ಮನಿಗೆ ಗೊತ್ತಾದರೆ ಅವರು ಖಂಡಿತಾ ಒಪ್ಪೋದಿಲ್ಲ ಎಂದವನಿಗೆ ಖಾತ್ರಿ ಯಾಗಿತ್ತು.

"ನಮ್ಮಂಗಡೀಲಿ ಇಡು ಪರ್ವಾಗಿಲ್ಲ". ಸೋವಾ ಹೇಳುತ್ತಾ ಬೇರೆ ಹುಡುಗರನ್ನು ಕರೆತರಲೆಂದು ಓಡಿದ.

ಅವರುಗಳೆಲ್ಲಾ ಸೋವಾನ ಅಂಗಡಿಯ ಓಣಿಯಲ್ಲಿ ಸಾಲಾಗಿ ನಿಲ್ಲಿಸಿದ್ದ ಹಲವಾರು ಪೀಪಾಯಿಗಳನ್ನು ದಾಟಿ ಒಬ್ಬರ ಹಿಂದೊಬ್ಬರು ನಡೆದರು. ಕಡೆಗೆ ಶಿಥಿಲವಾಗು ತ್ತಿದ್ದ ಸುತ್ತು ಮೆಟ್ಟಿಲ ಸಾಲುಗಳನ್ನೇರಿ ಮೇಲೆ ಹೋದರು. ಮೇಲಿನ ಹಜಾರದಲ್ಲಿ ದೊಡ್ಡ ದೊಡ್ಡ ಕಿಟಕಿಗಳಿದ್ದವು. ದೊಡ್ಡ ಪೆಠಾರಿ ಯೊಂದರ ಮೇಲೆ ಇದ್ದ ಮಡಕೆಯಲ್ಲಿ ಮಿರ್ಟಿಲ್ ಸಸಿಯಿತ್ತು. ಯಾರ ಸಹೋದರಿ ಯಾದರೂ ಸತ್ತರೆ ಅಗತ್ಯವಾಗಿ ಇರಲೇ ಬೇಕಾದ ಹಜಾರವೇನೋ ಎನ್ನಿಸು ವಂತೆ ಆ ಹಜಾರ ಇತ್ತು. ಶುಚಿಯಾಗಿದ್ದ ಅಡುಗೆ ಮನೆ ಯೊಳಕ್ಕೆ ಅವರುಗಳು ಹೊಕ್ಕರು.

ಸೋವಾನ ತಾಯಿ, ಭಾರವಾದ ದನಿಯಲ್ಲಿ ನಸುಕಂದು ಬಣ್ಣದ ಸ್ವೆಟರ್ ಹಾಕಿಕೊಂಡಿದ್ದ ಹೆಂಗಸರಿಗೆ ವಿದಾಯ ಹೇಳುತ್ತಿದ್ದರು. ಆರ್ಲಿಕ್ ಶಾಲೆಗೆ ಬರುವ ದಾರಿಯಲ್ಲಿ ಈ ಥರದ ಬಟ್ಟೆ ಹಾಕಿಕೊಂಡು ಬರುವ ಹೆಂಗಸ ರನ್ನು ರೇಗಿಸುತ್ತಿದ್ದ. ಅವರುಗಳು ಅಂಗಡಿ ಬಾಗಿಲ ಬಳಿ ನಿಂತಾಗ ಗೇಲಿ ಮಾಡುತ್ತಿದ್ದ. ಅವರುಗಳು ಈಗ ಆ ಸಿನೇಮಾಗಳಲ್ಲಿ ಅಥವಾ ಇನ್ನೆಲ್ಲಾದರೂ ಮಾಡುವಂತೆ, ಕೋಪದಿಂದ ತಮ್ಮನ್ನು ಹೊರಹಾಕಿದರೆ ಏನು ಮಾಡೋದು? ಆರ್ಲಿಕ್‌ನಿಗೆ, ತಾನು ಮಾಡ ಬಾರದನ್ನೇನೊ ಮಾಡಿದ್ದೇನೆಂಬ ಭಾವನೆ ಯನ್ನು ತನ್ನ ಅಂತರಂಗದಿಂದ ತೆಗೆದು ಹಾಕಲು ಸಾಧ್ಯವಾಗಲಿಲ್ಲ. ಅವನಿಗೇಕೋ ತನ್ನ ಬಗ್ಗೆ ಮತ್ತು ಸೋವಾನ ಬಗ್ಗೆ ವಿನಾಕಾರಣ ಮುಜುಗರವಾಯಿತು.

ಆ ಹೆಂಗಸರು, ಮಕ್ಕಳು ಬಂದ ಬಗ್ಗೆ ಸಂತೋಷ ವ್ಯಕ್ತಪಡಿಸಿ, ಅಲ್ಲಿಂದ ಎದ್ದು ಹೋಗದೆ ಕುಳಿತಿದರು. ಸೋವಾನ ತಾಯಿ ಸಣ್ಣ ಆಕಾರದವಳಾಗಿದ್ದು ಕಪ್ಪು ಕಿವಿಯೋಲೆ ಗಳನ್ನು ತೊಟ್ಟುಕೊಂಡಿದ್ದಳು.

"ಏನು ಮಕ್ಳಾ... ನೀವೂ ಅನೆಜ್ಕಾಗೆ ವಿದಾಯ ಹೇಳೋಕ್ಕೆ ಬಂದ್ರಾ?" ಅವಳು ಅಳು ಪ್ರಾರಂಭಿಸಿಬಿಟ್ಟಳು.

ಮಕ್ಕಳು ತಮ್ಮ ಟೋಪಿಗಳನ್ನು ತೆಗೆದು ವಿಚಿತ್ರವಾಗಿ ಕೈ ಕುಲುಕಿದರು. ತಾಯಿ

ಬಾಗಿಲನ್ನು ತೆರೆದಾಗ, ಎದುರುಗಡೆಯಿದ್ದ ಕೋಣೆಯಿಂದ ಗಾಢ ಮೌನ ಹೊರ ಬಂದ ಹಾಗೆ ಆಯಿತು.

ಆ ಹುಡುಗಿ ಆ ಇಕ್ಕಟ್ಟಾದ ಶವಪೆಟ್ಟಿಗೆಯಲ್ಲಿ ನವವಧುವಿನಂತೆ ಕಂಡು ಬಂದಳು. ಅವಳ ಮಡಚಿದ ಕೈಗಳಲ್ಲಿ ಶಿಲುಬೆಯಿತ್ತು. ಮುಖದ ಸುತ್ತಲೂ ಹೂಗಳನ್ನಿರಿಸಿದ್ದರು. ಅವಳ ತಲೆಯ ಮೇಲಿನ ತೆಳು ಬಟ್ಟೆಯ ಮುಸುಕು ಅವಳಿಗೆ ವಿಶೇಷ ಕಳೆಯನ್ನು ನೀಡಿ, ತೈಲಚಿತ್ರ ದಲ್ಲಿರಬಹುದಾದಂತಹ ಉನ್ನತ ವ್ಯಕ್ತಿ ಯೆಂಬಂತಹ ಭಾವನೆ ಸೂಸುತ್ತಿತ್ತು. ಅವಳ ಮುಖವನ್ನೂ ತೆಳುಬಟ್ಟೆಯಿಂದ ಮುಚ್ಚ



ಲಾಗಿತ್ತು. ಅವಳ ಕೈಗಳನ್ನು ಬಿಟ್ಟರೆ ದೇಹದ ಬೇರಾವ ಭಾಗವೂ ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ಅತಿ ಮೃದುವಾದ ಕೈಗಳೊಳಗಿನ ಮೂಳೆಗಳೂ ಅರೆ ಪಾರದರ್ಶಕವಾಗಿ ಹೊಳೆಯುತ್ತಿರುವಂತೆ ಭಾಸವಾಗುತ್ತಿತ್ತು. ಆರ್ಲಿಕ್‌ಗೆ ಹಳದಿ ಬಣ್ಣಕ್ಕೆ ತಿರುಗುತ್ತಿದ್ದ ಆ ಕೈಗಳಿಂದ ತನ್ನ ದೃಷ್ಟಿಯನ್ನು ತೆಗೆಯಲಾಗಲಿಲ್ಲ. ಅವಳ ಕೈಯಲ್ಲಿದ್ದಂತಹ ಶಿಲುಬೆಗಿಂತ ಜೀವರಹಿತವಾಗಿ ಅದನ್ನು ಹಿಡಿದಿದ್ದ ಕೈಗಳೇ ಎದ್ದು ಕಾಣುತ್ತಿದ್ದವು. ಆದರೂ ಸ್ಪಷ್ಟವಾಗಿ ಅವು ಮಾನವ ಕೈಗಳೇ!

ಆರ್ಲಿಕ್ ಯೋಚಿಸಿದ-ಅಲ್ಲಿದ್ದ ಕುರ್ಚಿಗಳಲ್ಲೊಂದು ಅಕಸ್ಮಾತ್ ಬಿದ್ದು ಅಲ್ಲಿರುವುದೆಲ್ಲಾ ಕುಸಿದರೆ ಏನಾಗುತ್ತೆ? ಅವಳು ಬಿದ್ದರೆ ಇನ್ನೊಮ್ಮೆ ಸಾಯಲೂ ಬಹುದಲ್ಲವೇ?... ಅಥವಾ ನಾನು ಅವಳೊಂದಿಗೆ ಏಕಾಕಿಯಾಗಿದ್ದು ಇದ್ದಕ್ಕಿದ್ದಂತೆ ಅವಳು ಶವಪೆಟ್ಟಿಗೆಯಿಂದ ಎದ್ದು ನಿಂತರೆ!... ಎಲ್ಲರೂ ತನಗೇ ಧನ್ಯವಾದಗಳನ್ನರ್ಪಿಸಿಯಾರು. ಆದರೂ ಅವಳು ಎದ್ದು ನಿಲ್ಲಬೇಕೆಂದು ಆಶಿಸಬೇಕೇ? ಖಂಡಿತಾ ಇಲ್ಲ.

ಹುಡುಗರು ಬಾಗಿಲ ಬಳಿಯೇ ನಿಂತಿದ್ದರು. ಆದರೆ ಅಲ್ಲಿದ್ದ ಹೆಂಗಸರು ಅವರುಗಳನ್ನು ಪಕ್ಕದ ಕೋಣೆಗೆ ತಳ್ಳಿದರು. ಆ ಕೋಣೆಯಲ್ಲಿ ಲಿಲ್ಲಿ ಹೂಗಳ ವಾಸನೆಯಿತ್ತು.

"ಅವಳನ್ನು ನೋಡ್ತೀಯಾ?" ಸೋವಾನ ತಾಯಿ ಮೃದುವಾಗಿ ಕೇಳಿದರು. ಆರ್ಲಿಕ್ ವಿಷಯದಲ್ಲಿ ಅವಳಿಗೆ ವಿಶೇಷ ಪ್ರೀತಿ ಉಂಟಾದಹಾಗೆ ತೋರುತ್ತಿತ್ತು. ಅಥವಾ ಹೊಸಬರೊಂದಿಗೆ ಅವನಿಗೆ ಯಾವಾಗಲೂ ಹಾಗೆನ್ನಿಸುತ್ತಿತ್ತೆ? ಅವನ ಉತ್ತರಕ್ಕಾಗಿ ಆಕೆ ಕಾಯಲಿಲ್ಲ. ತಾಯಿಯೊಬ್ಬಳಿಗೆ ಸಹಜವಾದ ಜಾಗರೂಕ ಹೆಜ್ಜೆಗಳನ್ನು ಹಾಕಿ ಮಗುವಿನ ಮುಖದ ಮೇಲಿನ ಪರದೆ ಎಳೆವಂತೆ...

"ಬೇಡ... ಹಾಗೆ ನೋಡ್ಬೇಡಿ..." ಆರ್ಲಿಕ್‌ಗೆ ಕೂಗಬೇಕೆನ್ನಿಸಿತು. ಆದರೆ ಈಗಾಗಲೇ ಸಾಕಷ್ಟು ತಡವಾಗಿತ್ತು.

ಆ ಹುಡುಗಿ ತನ್ನ ಜಡವಾದ ಬೆರಳತುದಿಯಿಂದ ತನ್ನ ಜೀವಂತ ತಾಯಿಯ ಕೈಯಲ್ಲಿದ್ದ ಮುಸುಕನ್ನು ಮತ್ತೆ ಹಿಂದಕ್ಕೆಳೆದುಕೊಂಡ ಹಾಗಾಯ್ತು. ಆರ್ಲಿಕ್ ತಾನು ಹಿಂದೆಂದೂ ಕಂಡಿರದ ದೃಶ್ಯವನ್ನು ಕಂಡ. ಮೊದಲ ಬಾರಿಗೆ ಸತ್ತ ವ್ಯಕ್ತಿಯ ಮುಖವನ್ನಾತ ನೋಡಿದ್ದ. ಅಷ್ಟು ಸುಂದರ ಮುಖವನ್ನು ಅವನು ಹಿಂದೆಂದೂ ನೋಡಿರಲಿಲ್ಲ. ಎಷ್ಟು ಸಣ್ಣ ವಯಸ್ಸಿನೋಳು... ಎಂಥ ಒಂಟಿ ಜೀವಿ. ನಮ್ಮಗಳ ವಿಷಯದಲ್ಲಿ ಎಷ್ಟು ತಿರಸ್ಕಾರ ಹೊಂದಿರಬಹುದು. ಗೊತ್ತಿರಬೇಕಾದ್ದೆಲ್ಲಾ ತನಗೆ ಈಗಾಗಲೇ ಗೊತ್ತಿದೆ ಎನ್ನುವಂತಿತ್ತು ಅವಳ ಮುಖ. ಈ ಹುಡುಗಿ ಖಂಡಿತ ಅಂಗಡಿಯವನ ಮಗಳಾದ, ಬಾರ್ಲಿ ತೂಕ ಹಾಕ್ತಾ ಇದ್ದ ಅನೆಜ್ಕಾಳ ಹಾಗೆ ಇರಲಿಲ್ಲ. ಇವಳು ಪ್ರಾಣ ಹೋಗಿದ್ದ ಯುವಕನ್ಯೆ ಮಾತ್ರ. ಆ ಶುದ್ಧ ಮುಖದಿಂದ ಅನಾವಶ್ಯಕವಾದ ಭಾವನೆಗಳೆಲ್ಲಾ ಹರಿದು ಹೊರಟು ಹೋಗಿದ್ದವು. ಮುಖ ಮಾತ್ರ ಬಿಲ್ಲಿನಾಕಾರ ಹೊಂದುತ್ತಿರುವ ಕಣ್ರೆಪ್ಪೆಗಳಡಿಯಲ್ಲಿ ಲೀನವಾಗಿತ್ತು. ನಮ್ಮಗಳ ದಿನಸಿತ್ಯದ ಬದುಕಿನಲ್ಲಾಗುವ ಮುಖಚರ್ಯೆಯ ಯಾವ ಬದಲಾವಣೆಗಳೂ ಈಗ ಆ ಮುಖದಲ್ಲಿರಲಿಲ್ಲ. ಯಾವುದಾದರೂ ಸುದ್ದಿ ಕೇಳಿದಾಗ ಮುಖ ಕೆಂಪಾಗುತ್ತದೆಂಬ ಸತ್ಯ, ನಮ್ಮಗಳ ದುಃಖ ಭಾವನೆ, ಏನಾದರೂ ಆಶಿಸುವಾಗ ಆಗುವ ಮುಖಚರ್ಯೆಯ ಯಾವ ಬದಲಾವಣೆ, ನಮ್ಮಗಳ ಜಗಳ-ಉಹುಂ- ಯಾವುದೂ ಆ ಮುಖದಲ್ಲಿಲ್ಲ, ಆಗತಾನೇ ಉಸಿರೆಳೆದುಕೊಂಡಂತಿದ್ದ ಅವಳ ಬಿರಿದ ತುಟಿಗಳು ಇನ್ನು ಮುಂದೆ ಯಾರಿಗೂ ಮುತ್ತು ಕೊಡಲಾರದು. ಅವುಗಳು ಏನೂ ಕುಡಿಯಲಾರವು. ಪಿಟಿಪಿಟಿ ಮಾಡಿ ಮಾತಾಡಲಾರವು. ಆರ್ಲಿಕ್‌ಗೆ ಭಯ ವಾಗಲಿಲ್ಲ. ಅವನಿಗೆ ಕರುಣೆಯೂ ಮೂಡಲಿಲ್ಲ. ಆದರೂ ಕೇವಲ ಒಂದು ಹೆಜ್ಜೆಯಾಚೆಗಿದ್ದ ಆ ಹುಡುಗಿಯ ಮುಖದ ಜಾದೂಜಾಲ ಅವನನ್ನು ದಿಗ್ಭ್ರಾಂತಿಗೊಳಿಸಿತ್ತು.

ಹುಡುಗಿಯ ತಾಯಿ ಬಾಯಲ್ಲಿ ಕರವಸ್ತ್ರ ತುರಿಸಿಕೊಂಡು, ಪರವಶಗೊಂಡವರಂತೆ ಮಗಳನ್ನೇ ದಿಟ್ಟಿಸಿ ನೋಡುತ್ತಿದ್ದರು. ಆಕೆಯ ಕಣ್ಣು ಮಾತ್ರ ಕಣ್ಣೀರಿನಲ್ಲಿ ಈಜಾಡುತ್ತಿತ್ತು.

"ಪಾಪದ ಹುಡುಗಿ... ಜೀವದಿಂದಿರೋ ಹಾಗೇ ಇದ್ದಾಳೆ"– ಪಕ್ಕದಲ್ಲಿದ್ದವರೊಬ್ಬರು ಬಿಕ್ಕಳಿಸಿದರು.

ಆರ್ಲಿಕ್ ಆ ಹೆಂಗಸನ್ನು ದುರುಗುಟ್ಟಿಕೊಂಡು ನೋಡಿದ- ಈ ಹುಡುಗಿಯನ್ನ ಯಾಕೆ ಎಲ್ಲರೂ ಇಷ್ಟು ಕರುಣೆಯಿಂದ ನೋಡ್ತಾ ಇದ್ದಾರೆ? ಅವಳು ಗಂಭೀರವಾಗಿದ್ದಾಳೆ. ಬೇರೆಲ್ಲರೂ ಸೊರಗುಟ್ಟಲು ಏನಾಗಿದೆ ಈಗ? ಅದೇಕೋ ಈ ಮಾತುಗಳೆಲ್ಲಾ ಸಾಂದರ್ಭಿಕವಲ್ಲ ಎನ್ನಿಸಿತು.

"ಅವಳಿಗೆ ವಿದಾಯ ಹೇಳೋಕ್ಕೆ ಎಷ್ಟು ಚೆಂದದ ಬಟ್ಟೆ ಹಾಕಿ ಸುಂದರವಾಗಿಸಿದ್ದಾರೆ-" ಪಕ್ಕದಲ್ಲಿದ್ದ ಮತ್ತೊಂದು ಹೆಣ್ಣು ಭಾವಪೂರ್ಣವಾಗಿ ಹೇಳಿದಳು. ಹುಡುಗಿಯ ತಾಯಿ ಹಸಿವಿನಿಂದ ತುತ್ತುಗಳನ್ನು ನುಂಗುವ ಹಾಗೆ ಜೋರಾಗಿ ಬಿಕ್ಕಳಿಸಲಾರಂಭಿಸಿದಳು.

"ಅಳ್ಬೇಡಿ... ಅಳಬಾರದು..." ಮೂರನೆಯ ಹೆಣ್ಣು ಆಕೆಯನ್ನು ಸಮಾಧಾನಪಡಿಸಲೆತ್ನಿಸಿದಳು. "ಈಗ ಗೋಳಾಡಿ ಏನು ಪ್ರಯೋಜನ? ಅವಳಿಗೆ ಈ ಯಾತ್ರೆ ಮುಗಿಯಿತು. ಈ ಜೀವನ ಅನ್ನೋದೇ ಹಾಗೆ. ಅವಳು ಬದುಕಿದ್ದಿದ್ರೆ ಅವಳಿಗಿನ್ನೂ ಏನೇನು ಕಾದಿತ್ತೋ ಯಾರಿಗೆ ಗೊತ್ತು?"

ಈ ಸಂಭಾಷಣೆ ಊಹಿಸಲು ಸಾಧ್ಯವಾಗದಷ್ಟು ಕ್ರೂರ ಎಂದು ಆರ್ಲಿಕ್ಕನಿಗನ್ನಿಸಿತು.

ಇದು ಸಾಲದೆಂಬಂತೆ ಅವಳು ತನ್ನಲ್ಲೇ ಮುದುರಿಕೊಂಡು ಕಣ್ಣನ್ನು ಮುಚ್ಚಿ ಬಾಯ ತುದಿಯಿಂದ ಕಿರುನಗೆ ಬೀರುತ್ತಾ ಪ್ರಾಣಾರ್ಪಣೆ ಮಾಡಿದ್ದಳು. ದೇವರೇ, ನಾವು ಎಷ್ಟು ಅಸಡ್ಡೆಯಿಂದ ವರ್ತಿಸುತ್ತಿದ್ದೇವೆ. ಆರ್ಲಿಕ್ ಇತರ ಹುಡುಗರಿಗೆ ಕೈ ಸನ್ನೆ ಮಾಡಿದ. ಎಲ್ಲರೂ ಹೊರಡಲು ತಯಾರಾಗಿ ಅವಸರವಸರವಾಗಿ ವಿದಾಯ ಹೇಳಿದರು.

"ಸ್ವಲ್ಪ ಇರಿ" ಸ್ತೋವಾ ತೆರೆದ ಕಿಟಕಿಯ ಮುಂದಿದ್ದ ಮೇಜಿನ ಬಳಿ ಹೋಗಿ ಅಲ್ಲಿದ್ದ ಕರಗಿದ ಮೇಣದಿಂದುದುರಿದ ಅಶ್ರುಧಾರೆಯಿಂದಾವೃತವಾದ ಮೊಂಬತ್ತಿಯನ್ನು ತೆಗೆದು ಅದರ ಕೆಳಗಿದ್ದ ಸಾವಿನ ಸೂಚನಾ ಪತ್ರಗಳನ್ನು ತಂದು ಒಬ್ಬೊಬ್ಬರಿಗೂ ಒಂದೊಂದಾಗಿ ಹಂಚಿದ. ಎಲ್ಲರೂ ಅದನ್ನು ಸ್ವೀಕರಿಸಿ ಏನು ಮಾಡಬೇಕೋ ತಿಳಿಯದೆ ಭದ್ರವಾಗಿ ಹಿಡಿದು ಮುಂದೆ ಸಾಗಿದರು.

ಮೆಟ್ಟಿಲಿನಿಂದಿಳಿದಾಗ ಇಬ್ಬರು ಹದಿಹರೆಯದ ಹುಡುಗಿಯರು ಅವರಿಗೆದುರಾದರು. ಸ್ವಪ್ರಜ್ಞೆಯ ಬಗ್ಗೆ ಬಹಳ ಕಾಳಜಿ ವಹಿಸಿದಂತೆ ಕಾಣುತ್ತಿದ್ದ ಅವರುಗಳು ಕೈಯಲ್ಲಿ -ಕಣ್ಣುರಿಯುವಷ್ಟು ಗಾಢವಾದ ಬಣ್ಣದ ಹೂಗಳಿಂದ ಹೂಗುಚ್ಛ ಕೊಂಡೊಯ್ಯುತ್ತಿದ್ದರು.



"ಮೂಳೆ ಸ್ಪೆಶಲಿಸ್ಟ್ ಅಂತೀಯಾ... ಮತ್ತೆ ಕೋಳಿ ಕಾಲಿನ ಮೂಳೇನ ಜಗೀಲಿಕ್ಕೆ ಯಾಕೋ ಇಷ್ಟು ಒದ್ದಾಟ?"

"ಅವರೇ ನನ್ನಕ್ಕನ ಶವಸಂಪುಟದ ಮಕ್ಮಲ್ ಬಟ್ಟೇನ ಎತ್ತಿ ಹಿಡಕೊಂಡು ಹೋಗೋರು". ಸೋವಾ ವಿವರಿಸಿದ. "ಅಂಕಾ ಬಿಳೀ ಬಟ್ಟೆ ಹಾಕ್ಕೊಳ್ತಾಳೆ, ಜೋಜ್ಕಾ ಕಪ್ಪು ಧಿರಿಸು ಧರಿಸ್ತಾಳೆ".

"ಬಹಳ ಉಗ್ರ ಪದ್ಧತಿ". ಆರ್ಲಿಕ್ ಆಲೋಚಿಸಿದ. "ಇಂಥಾ ಉಗ್ರ ವಿಧೀನ ಖುಷಿಯಿಂದ ಮಾಡ್ತಾ ಇದ್ದಾರಲ್ಲ. ಅವರಿಗೆ ತುಂಬಾ ದುಃಖ ಆಗಿದೇಂತ ಗೊತ್ತು. ಆದರೂ ಆ ದುಃಖದ ಒಂದೊಂದು ಕ್ಷಣವೂ ಅವರಿಗೆ ಖುಷಿಯಿಂದ ಆಪ್ಯಾಯತೆಯಿಂದ ಕೂಡಿರುವ ಹಾಗಿದೆ".

ಸೋವಾ ಅನೆಜ್ಕಾಳ ಸ್ನೇಹಿತೆಯರ ಜೊತೆ ಹಿಂದಿರುಗಿದ್ದು ಹುಡುಗರಿಗೆ ಸ್ವಲ್ಪ ನಿರಾಳವಾದಂತಾಯ್ತು.

ಲೆವ್ ಮಾತು ಪ್ರಾರಂಭಿಸಿದ- "ಸತ್ಹೋದೋವ್ರು ಆಮೇಲೆ ಗೋರಿಯಿಂದೆದ್ದು ಬಂದ ಎಷ್ಟೋ ಘಟನೆಗಳು ನಡೆದಿದೆಯಂತೆ..."

"ಹುಚ್ಚುಚ್ಚಾದ ಮಾತಾಡ್ಬೇಡ" ಆರ್ಲಿಕ್ ಜಿಗುಪ್ಸೆಯಿಂದ ಮಧ್ಯೆ ಪ್ರವೇಶಿಸಿದ.

"ನಿಜವಾಗ್ಲೂ ಆರ್ಲಿ" ಕೊಕೋಡಾನ್ ತನ್ನ ಅಭಿಪ್ರಾಯ ಸೇರಿಸಿದ – "ಈ ದುರ್ಮರಣಗಳನ್ನು ವಿಚಾರಣೆ ಮಾಡೋ ಮನುಷ್ಯ ನನ್ನ ಮಾವನಿಗೆ ಗೊತ್ತು..."

"ಈ ಬುರುಡೆ ನಿಲ್ಲಿಸ್ತೀರಾ?– ನಾ ಹೇಳಿದ್ದು ಕೇಳಿಸ್ತಾ?"

"ಯಾಕೆ?" ಹುಡುಗರು ಏಕ ಕಂಠದಲ್ಲಿ ಕೇಳಿದರು.

"ಅವಳ ಕಣ್ಣು ಪೂರ್ತಿ ಮುಚ್ಚಿರಲಿಲ್ಲಾನ್ನೋದು ಗಮನಿಸಿದ್ಯಾ?" ಪಾಲ್ಸೆಕ್ ಕೇಳಿದ.

ಆರ್ಲಿಕ್ ಅವನ ಕಡೆ ನೋಡಿ "ಬಾಯ್ಮುಚ್ಚು" ಎಂದ.

"ನಿಂಗ್ಯಾಕೋ ಅಷ್ಟೊಂದು ಕೋಪ?"

"ನಾವುಗಳು ಅಲ್ಲಿಗೆ ಹೋಗ್ಲೇಬಾರ್ದಾಗಿತ್ತು."

"ನೀನೇ ತಾನೇ ಮೊದಲು ಹೋಗಿದ್ದು!"

"ಹೌದು ಅದು ನನ್ನ ತಪ್ಪು" ಚಿಂತಾಕ್ರಾಂತನಾಗಿ ಆರ್ಲಿಕ್ ಹೇಳಿದ.

ಅವನು ಓದಿದ ಅನೇಕ ನಿಗೂಢ ಕತೆಗಳಲ್ಲಿ ಎಷ್ಟೋ ಬಾರಿ ಅವನು ಶವವನ್ನು ಎದುರಿಸಿದ್ದ. ಅದು ಅವನಿಗೆಂದೂ ಚಿಂತೆ ಉಂಟುಮಾಡಿರಲಿಲ್ಲ. ಬದಲಿಗೆ ಕೊಲೆಗಳು ಹೆಚ್ಚಾಗಿ, ಶವಗಳ ಸಂಖ್ಯೆ ಏರಿದಷ್ಟು ಖುಷಿ ಸಿಕ್ಕುತ್ತಿತ್ತು. ರೋಮಾಂಚಕವಾಗಿರುತ್ತಿತ್ತು. ಆದರೆ ನಿಜವಾದ ಹೆಣ ನೋಡಿದಾಗ? ಬಿಲ್ಲಿನಾಕಾರದ ಆ ಕಣ್ರೆಪ್ಪೆಗಳ ಕೆಳಗೆ ಅವಳು ತಿಳಿದುಕೊಂಡಿದ್ದದ್ದಾದರೂ ಏನು? ಮರಣಾನಂತರ ಮತ್ತೆ ಬದುಕು ಇದೆಯೆ? ಅಂಥ ಸುಂದರ ಹುಡುಗಿ ನಿಜವಾಗಲೂ ಸಾಯೋಕ್ಕೆ ಸಾಧ್ಯವೇ?

ಈ ರೀತಿ ಜೀವನ್ಮರಣಗಳ ಪ್ರಶ್ನೆಗಳ ಬಗ್ಗೆ ಆರ್ಲಿಕ್ ತಲೆ ಕೆಡಿಸಿಕೊಂಡು ಶೀತಲ ಪ್ರದೇಶಗಳಲ್ಲಿ ಅನೇಕ ದೂರಗಳನ್ನು ಕ್ರಮಿಸುತ್ತಿದ್ದಾಗ ಅವನ ಬಗ್ಗೆ ಏನು ಮಾಡಬೇಕೆಂದು ಮಾತ್ರ ಅವನ ಶಿಕ್ಷಕರಿಗೆ ತಿಳಿಯಲೇ ಇಲ್ಲ. ದಿನ ಬೆಳಗಾದರೆ ಯಾವುದಾದರೊಂದು ಹೊಸ ತರಲೆಯಲ್ಲಿ ಆರ್ಲಿಕ್ ತನ್ನನ್ನು ತಾನೇ ತೊಡಗಿಸಿಕೊಳ್ಳುತ್ತಿದ್ದ.

'ಮಿನಮಾಟಾ' ಎಂಬ ಶಬ್ದ ಪ್ರಪಂಚದ ಎಲ್ಲ ಪರಿಸರತಜ್ಞರಿಗೂ ಸಿಂಹಸ್ವಪ್ನವೆನಿಸಿದೆ. 1950-60ರ ದಶಕದಲ್ಲಿ ಜಪಾನಿನ ಮೀನುಗಾರರೆಲ್ಲ ಪತ್ತೆಹಚ್ಚಲಾಗದ ಭಯಾನಕವಾದ ರೋಗದಿಂದ ಬಳಲಿದರು. 1972ರ ವರೆಗೆ ಜಪಾನಿನ ಕ್ಯುಶು ದ್ವೀಪದ ಚಿಕ್ಕ ನಗರವಾದ ಮಿನಮಾಟಾದಲ್ಲಿನ 292 ನಿವಾಸಿಗಳು ಪಾದರಸದ ವಿಷ ಸೇವನೆಯಿಂದ ಬಳಲುತ್ತಿದ್ದರೆಂಬುದು ಅಧಿಕೃತವಾಗಿ ತಿಳಿದು ಬಂದಿದೆ. ಹತ್ತಿರದ ದಿ ನ್ಯೂ ಜಪಾನ್ ನೈಟ್ರೋಜನ್ ಕಂಪನಿಯಿಂದ ಹರಿದು ಬಂದ ರಾಸಾಯನಿಕಗಳಲ್ಲಿದ್ದ ಪಾದರಸ ನದೀ ನೀರಿನ ಮೂಲಕ ಮೀನಿನ ದೇಹ ಸೇರಿ, ಅಂಥ ನೀರನ್ನು ಕುಡಿದುದರಿಂದ ಅಥವಾ ಅಂಥ ಮೀನುಗಳನ್ನು ತಿಂದುದರಿಂದಾಗಿ ಜನರ ದೇಹದಲ್ಲಿ ಪಾದರಸದ ಅಂಶ ಹೆಚ್ಚುತ್ತ ಹೋಗಿ ಈ ರೋಗ ಕಾಣಿಸಿಕೊಂಡಿತು. ಕೆಲವು ಮಕ್ಕಳ ಬುದ್ಧಿ ಶಕ್ತಿ ಚೆನ್ನಾಗಿರಲಿಲ್ಲ. ಕಾರಣ ಗೊತ್ತಾದಾಗ ನೈಟ್ರೋಜನ್ ಕಂಪನಿಯ ಒಡೆಯರು 80 ಕೋಟಿ ರೂಪಾಯಿ ಪರಿಹಾರಧನವನ್ನು ಕೊಡಬೇಕಾಯಿತು. ಹುಚ್ಚು ಹಿಡಿಯುವುದು, ಮೈಯನ್ನು ಬಿಲ್ಲಿನಂತೆ ಬಗ್ಗಿಸುವುದು, ಸ್ನಾಯುಗಳ ಸೆಳೆತ, ಪಾರ್ಶ್ವ ವಾಯು, ದೃಷ್ಟಿಮಾಂದ್ಯ ಹಾಗೂ ಮಾತನಾಡಲು ಬಾರದಂತಾಗುವುದು, ಅಂಗವೈಕಲ್ಯ ಮುಂತಾದವು ಈ ರೋಗದ ಲಕ್ಷಣಗಳು. ರೋಗ ಉಲ್ಬಣಿಸಿದಾಗ ಸ್ನಾಯುಗಳು ನಿರುಪಯುಕ್ತವಾಗುತ್ತವೆ. ಬುದ್ಧಿಯ ಮೇಲಿನ ನಿಯಂತ್ರಣ ಕುಗ್ಗುತ್ತ ಹೋಗಿ ಕೊನೆಗೆ ಬುದ್ಧಿಮಾಂದ್ಯದ ಸ್ಥಿತಿಯನ್ನು ತಲುಪಿ ಮೃತ್ಯು ಬಂದೆರಗುತ್ತದೆ. ಪಾದರಸದ ವಿಷದ ದುಷ್ಪರಿಣಾಮದ ಘಟನೆಗಳು ಇರಾಕ್, ಸ್ವೀಡನ್ ದೇಶಗಳಲ್ಲೂ ಸಂಭವಿಸಿವೆ. ಈ ದೇಶಗಳಲ್ಲಿ ಪಾದರಸ ಕೂಡಿದ ಬೀಜಗಳನ್ನು ತಿಂದ ರೈತರು, ಪಶುಪಕ್ಷಿಗಳು, ಮೃತ್ಯುವಶರಾಗಿದ್ದಾರೆ.

ಭಾರತದ ಕೆಲವು ನದಿಗಳಲ್ಲಿ ಪಾದರಸದ ಅಂಶ ಸುರಕ್ಷತೆಯ ಮಿತಿಗಿಂತ ಹೆಚ್ಚಿನ ಪ್ರಮಾಣದಲ್ಲಿದೆಯೆಂದು ಒಂದು ಅಧ್ಯಯನದಿಂದ ತಿಳಿದು ಬಂದಿದೆ.

ತಾನು ಯಾರೆಂದು ತಿಳಿಯದ

ವಿಜ್ಞಾನ-ವಿಜ್ಞಾನವಲ್ಲ

● ಕೆ.ವಿ. ಬಾಲಕೃಷ್ಣ ●

ನೋಡುವ ಕಣ್ಣು, ನೋಡಲ್ಪಡುವ ವಸ್ತುವಿಗಿಂತ, ನೋಡುವವರಿಗೆ, ಹತ್ತಿರದಲ್ಲಿರುತ್ತದೆ. ಕೇಳಿಸಿಕೊಳ್ಳುವ ಕಿವಿ ಕೇಳುವ ಶಬ್ದಗಳಿಗಿಂತ ಕೇಳುವವರಿಗೆ ಹತ್ತಿರದಲ್ಲಿರುತ್ತವೆ. ಸ್ಪರ್ಶಿಸುವ ಕೈ ಮತ್ತು ಚರ್ಮದ ಇತರ ಪ್ರದೇಶಗಳು, ಸ್ಪರ್ಶಿಸಲ್ಪಡುವ ವಸ್ತುಗಳಿಗಿಂತ, ವ್ಯಕ್ತಿಗಳಿಗಿಂತ, ಸ್ಪರ್ಶಿಸುವವರಿಗೆ ಹೆಚ್ಚು ಹತ್ತಿರದಲ್ಲೇ ಇವೆ. ರುಚಿ ನೋಡುವ ನಾಲಿಗೆ, ಮೂಸುವ ಮೂಗು, ತಿನ್ನುವ, ಕುಡಿಯುವ ವಸ್ತುಗಳಿಗಿಂತ ರುಚಿ ನೋಡುವವರಿಗೆ ಹತ್ತಿರದಲ್ಲೇ ಇವೆ. ಆದ್ದರಿಂದ ವಿಜ್ಞಾನದಲ್ಲಿ ಮೊದಲ ಪಾಠವು, ವಸ್ತು ಪ್ರಪಂಚ . ಪರಿಚಯದ್ದಾಗಿರದೆ, ಇಂದ್ರಿಯ ಪಂಚಕದ್ದಾಗಿದೆ. ಅಷ್ಟೇ ಅಲ್ಲ, ಅನುಭವಿಸುವ ವಸ್ತುಗಳಿರುವ ಎಡೆಗೆ ಹೋಗಲು ನೆರವಾಗುವ ಕಾಲುಗಳೂ, ಹಿಡಿದು ತೆಗೆದುಕೊಳ್ಳುವ ಕೈಗಳೂ, ವಸ್ತುಗಳ ಹೆಸರು ಹಿಡಿಯಬೇಕೆಂದು ಕೇಳುವ ಮಾತಿನ ಬಾಯಿಯೂ ವಸ್ತುಗಳಿಗಿಂತ ಹತ್ತಿರದಲ್ಲಿ ದೇಹದಲ್ಲೇ ಇವೆ. ವಿಸರ್ಜಿಸುವ ಮಲ-ಮೂತ್ರಗಳು, ಕಕ್ಕಸು, ಮೂತ್ರಿಗಳಿಗಿಂತ ಹತ್ತಿರದಲ್ಲಿ ದೇಹಗಳಲ್ಲೇ ಉತ್ಪತ್ತಿಯಾಗುತ್ತವೆ. ದೇಹದೊಳಗಿರುವ ಈ ವಿವರಗಳು ಎಲ್ಲರಿಗೂ ಹತ್ತಿರದಲ್ಲೇ ಇದ್ದರೂ ಇವುಗಳನ್ನು ಎಲ್ಲರೂ ಬಳಸಿಕೊಳ್ಳುತ್ತಲೇ ಇದ್ದರೂ, ಇವುಗಳ ವಿಜ್ಞಾನವನ್ನು ನಿರ್ಲಕ್ಷಿಸಿ, ಹೊರಗಿನ ವಸ್ತುಗಳಿಗೂ ವ್ಯಕ್ತಿಗಳಿಗೂ ಸಂಬಂಧಿಸಿದ ವಿವರಗಳ ಬಗ್ಗೇ ವಿಜ್ಞಾನ ಎಂದು ತೀರ್ಮಾನಿಸಿ ವಿಜ್ಞಾನ ಎಂದು ಕರೆಯುವುದು ಹಾಸ್ಯಾಸ್ಪದವಾಗಿದೆ. ಈ ಹಾಸ್ಯಾಸ್ಪದ ವಿಜ್ಞಾನವು ನಿರುಪದ್ರವಿಯಾಗಿಲ್ಲ. ಅತ್ಯಂತ ಹಾನಿಕರವಾಗಿದೆ. ಹಾನಿಕರ, ಹಿಂಸಾಕರ, ವಿನಾಶಕರ ಸಾಧನಗಳನ್ನು ರಾಶಿ ರಾಶಿಯಾಗಿ ಉತ್ಪತ್ತಿ ಮಾಡಿ ಮಾರಾಟ ಮಾಡುವ, ಪರಿಸರ ಮಾರಕವಾದ ಬೃಹತ್ ಉದ್ಯಮಗಳ ಸ್ಥಾಪನೆಗೂ ವ್ಯವಸ್ಥೆಗೂ ಮಾರ್ಗದರ್ಶನವನ್ನು ಒದಗಿಸುತ್ತಿದೆ.

'ಕಲ್ಲು ಹಾಯ್ದಂತೆ ಸರ್ವಜ್ಞ':

ನಮ್ಮ ನಾಡಿನ ಜಂಗಮ ವಿಶ್ವವಿದ್ಯಾಲಯವಾದ ಸರ್ವಜ್ಞನ ಒಂದು ವಚನ ಈ ಸಂದರ್ಭದಲ್ಲಿ, ನೆನಪಿಸಿಕೊಳ್ಳಲು ಅರ್ಹವಾಗಿದೆ. "ಒಳ್ಳೆಯವರೊಡನಾಟ ಬೆಲ್ಲವನ್ನು ಮೆದ್ದಂತೆ" ಇದು ಎಲ್ಲರಿಗೂ ಸುಲಭವಾಗಿ ಗೊತ್ತಾಗುತ್ತದೆ. ಸರ್ವಜ್ಞ ಜನತೆಯ ದಾರ್ಶನಿಕ (Philosopher of the people) ಅವನು ಬೇರೊಂದು ಬಗೆಯ "ಜಾಣರ" ಬಗ್ಗೆ ಎಚ್ಚರಿಸುತ್ತಾನೆ. ಇವರು ಎಂಥ ಜಾಣರು? ತಮ್ಮ ಮಾತಿನ ಜಾಣ್ಮೆಯಿಂದ, ಕೈಕೆಲಸದ ಚಮತ್ಕಾರದಿಂದ ಅಲ್ಲದ್ದನ್ನೇ ಅಹುದು ಎಂದು ಒಪ್ಪಿಸುವ ಜಾಣರು. ಇಂಥವರ ಒಡನಾಟದ ಫಲವೇನು? ಇವರು ಕಣ್ಣಿದ್ದವರನ್ನೂ ಕುರುಡರನ್ನಾಗಿ ಮಾಡುತ್ತಾರೆ. ಇದು ಹೇಗೆ ಸಾಧ್ಯ? ಏಕೆ? ಪ್ರಚಾರದಿಂದ ಸಾಧ್ಯವಿಲ್ಲವೆ? ಮಾತಿನಲ್ಲೇ ಮಂಕುಬೂದಿ ಎರಚಿ, ರಾಜನೊಬ್ಬನನ್ನು ಬೆತ್ತಲೆಯಾಗಿ ಕುದುರೆ ಹತ್ತಿ ಮೆರವಣಿಗೆಗೆ ಹೋಗಲು ಪ್ರೇರಿಸಿದ "ದೇವಲೋಕದ" ನೇಕಾರರ ಕಥೆ ಎಲ್ಲರಿಗೂ ಗೊತ್ತಲ್ಲ! ಇದು ಈಸೋಪನ ಕಥೆ. ನರಿಯ ಪ್ರಚಾರಕ್ಕೆ ಮರುಳಾದ ಕಾಗೆ, ತನ್ನ ಕೊಕ್ಕಿನಲ್ಲಿ ಹಿಡಿದಿದ್ದ ಮಾಂಸದ ತುಂಡನ್ನೇ ಮರೆತು, 'ಕಾ' ಎಂದು ಬಾಯಿ ತೆರೆದಾಗ ಮಾಂಸದ ತುಂಡು ಬೀಳುತ್ತದೆ ಎಂದು ತಿಳಿಯದೆಯೇ "ಕಾ" ಎಂದದ್ದಲ್ಲವೆ? ಕಣ್ಣಿದ್ದವರನ್ನೂ

ಕುರುಡರನ್ನಾಗಿ ಮಾಡಬಲ್ಲ ಶಕ್ತಿ ಪ್ರಚಾರಕ್ಕಿದೆ. ಇಂಥ ಪ್ರಚಾರ ಮಾಡಬಲ್ಲವರನ್ನೇ ಸರ್ವಜ್ಞಮೂರ್ತಿ, "ಅಲ್ಲದಹುದೆಂಬ ಜಾಣರು" ಎಂದು ಪ್ರಶಂಸಿಸಿದ್ದಾನೆ. ಇಲ್ಲಿ 'ಜಾಣರು' ಎಂಬ ಪ್ರಶಂಸೆ, ವಿಡಂಬನೆ, 'ಬೃಹಸ್ಪತಿ' ಎನ್ನುವುದಿಲ್ಲವೇ ಹಾಗೆ. ಇಂಥವರ ಒಡನಾಟ ಹೇಗಿರುತ್ತದೆ? ಕಣ್ಣಿದ್ದರೂ 'ಕಲ್ಲುಹಾಯ್ದಂತೆ' ಕಣ್ಣಿದ್ದವರು ಕಲ್ಲಿಗೆ ಡಿಕ್ಕಿ ಹೊಡೆಯುತ್ತಾರೆಯೆ? ಹೌದು. ಯಾವಾಗ? ಅಲ್ಲದ್ದನ್ನೇ ಅಹುದು ಎಂದು ಒಪ್ಪಿಸುವ, ನಂಬಿಸುವ ಜಾಣರ ಮಾತಿಗೆ ಮನಸೋತಾಗ. ತಾನು ಯಾರೆಂದು ತಿಳಿಯದ ವಿಜ್ಞಾನವನ್ನೇ ವಿಜ್ಞಾನ ಎಂದು ಹೇಳುವವರು "ಅಲ್ಲದ್ದನ್ನೇ ಅಹುದೆಂದು ಹೇಳುವ 'ಜಾಣರು'."

ಒಳಗಿನ ಮಾರಕಾಸ್ತ್ರಗಳು:

ರಾಜನೀತಿ ನಿಪುಣರು, ಹಣವಹಿವಾಟುದಾರರು, ದೊಡ್ಡ ಕೈಗಾರಿಕೆ ದೊರೆಗಳು, ಸೈನ್ಯಾಧಿಪತಿಗಳು-ಇವರಿಗೆಲ್ಲ ಅಧಿಕಾರ ಲಾಲಸೆ ವಿಪರೀತ. ಇವರು ಮನುಷ್ಯರೇ ಆದರೂ ಮನುಷ್ಯರನ್ನೇ ಏರುವ ಮೆಟ್ಟಿಲುಗಳನ್ನಾಗಿಯೂ, ಪಾದಪೀಠಗಳನ್ನಾಗಿಯೂ, ವಾಹನಗಳನ್ನಾಗಿಯೂ ಬಯಸುವವರು. ಹೀಗೆ ಮನುಷ್ಯರು ಮನುಷ್ಯರನ್ನೇ ಸವಾರಿ ವಾಹನಗಳನ್ನಾಗಿ ಮಾಡಿಕೊಳ್ಳುವ ವ್ಯವಸ್ಥೆಯನ್ನು ಬೆಂಬಲಿಸುವುದಕ್ಕೊಂದು ವಿಜ್ಞಾನ ಬೇಕಷ್ಟೆ! ಈ ವಿಜ್ಞಾನ ಯಶಸ್ವಿ ಆಗಬೇಕಾದರೆ, ಮನುಷ್ಯರಿಗೆ ಆತ್ಮ ಇಲ್ಲ-ಏನಿದ್ದರೂ ಅಧಿಕಾರವಿರಬೇಕು. ಅಧಿಕಾರವೇ ಆತ್ಮ ಎಂಬ ಸಿದ್ಧಾಂತವನ್ನು ಪ್ರಚಾರ ಮಾಡಬೇಕು. ಆತ್ಮ ಇಲ್ಲ, ಇರುವುದೇನಿದ್ದರೂ ದೇಹವೊಂದೇ-ಎಂಬ ಸಿದ್ಧಾಂತವೇ ಶಿರೋಮಣಿ. ಅವರ ಆತ್ಮ ಎಂಬ ಪದಕ್ಕೆ ದೇಹ-ಎನ್ನುವುದೇ ನಿಶ್ಚಿತ ಅರ್ಥವಾಗುತ್ತದೆ. ಇದರಿಂದ ದೇಹಾತ್ಮ ಸಿದ್ಧಾಂತ ಸ್ಥಾಪಿತವಾಗುತ್ತದೆ. ಇದು ಅಸತ್ಯ. ಇದನ್ನೇ ಋತ ಎಂದು ಹಟ ಹಿಡಿಯುವುದು ನಿರ್ಋತ. ಈ ನಿರ್ಋತ ಸಿದ್ಧಾಂತಕ್ಕೊಂದು ವ್ಯಕ್ತಿತ್ವ ಕಲ್ಪನೆ ಮಾಡಿದರೆ, ಅದು ನೈಋತ್ಯನಾಗುತ್ತದೆ. ಅಷ್ಟ ದಿಕ್ಪಾಲಕರಲ್ಲಿ ಒಬ್ಬೊಬ್ಬರಿಗೆ ಒಂದೊಂದು ವಾಹನ ಕಲ್ಪನೆ ಇದೆ. ನೈಋತ್ಯನ ವಾಹನ ಮನುಷ್ಯ ಬದುಕಿನ ಸಿದ್ಧಾಂತ ನಿರ್ಋತ ವಿಜ್ಞಾನವಾದರೆ, ಮನುಷ್ಯ ಮನುಷ್ಯನಿಗೇ ವಾಹನವಾಗಿ ಬದುಕಬೇಕಾದ ಅವನತಿಯೇ ಒಂದು ವ್ಯವಸ್ಥೆ ಆಗುತ್ತದೆ. ಅತಿ ಸರಕಾರೀ-ಕರಣದ ಅಧಿಕಾರಶಾಹಿ ಎಂದರೆ ಇದೇ ತಾನೇ! ಇದರಲ್ಲಿ ಒಳಗಿನ ಮಾರಕಾಸ್ತ್ರಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ, ಹತಾಶೆ, ನಿರಾಶೆ, ಭಯ, ಗುಲಾಮತನ-ಎಂಬ ಒಳಗಿನ ಮಾರಕಾಸ್ತ್ರಗಳು ತಲೆಯೆತ್ತುತ್ತವೆ. ಇವುಗಳನ್ನು ಆತ್ಮಗುಣದಿಂದ ಎದುರಿಸೋಣವೆಂದರೆ ಆತ್ಮವೇ ಇಲ್ಲ ಎಂಬ ಸಿದ್ಧಾಂತವನ್ನು ಸಾರುವ ವಿಜ್ಞಾನ-ಸರ್ವಜ್ಞ ಹೇಳುವ ಹಾಗೆ "ಅಲ್ಲದಹುದೆಂಬ" ಜಾಣನಾಗಿರುತ್ತದೆ. ಆದ್ದರಿಂದ, ಒಳಗಿನ ಈ ಮೇಲೆ ಹೇಳಿದ ಮಾರಕಾಸ್ತ್ರಗಳನ್ನು, ಅವುಗಳ ಪ್ರತಿನಿಧಿಯಾದ ಹೊರಗಿನ ಮಾರಕಾಸ್ತ್ರಗಳ ಮೂಲಕ ಹೊರಗಿನ ವೈರಿಗಳ ಮೇಲೆ ಪ್ರಯೋಗಿಸಬೇಕೆಂಬ ಆತುರ ದಟ್ಟವಾಗುತ್ತದೆ. ಹೀಗೆ ನಿರ್ಋತ ಸಿದ್ಧಾಂತದ ವಿಜ್ಞಾನ, ಮನುಷ್ಯ-ಮನುಷ್ಯರನ್ನು ಸವಾರಿ ಮಾಡಬೇಕು, ಅಥವಾ ಕೊಲೆ ಮಾಡಬೇಕು ಎನ್ನುವ ಅನಿವಾರ್ಯಕ್ಕೆ ಮಾನವ ಜಾತಿಯನ್ನು ತಂದು ನಿಲ್ಲಿಸಿದೆ. ಕೊನೆಯ ಉಪಾಯ ಕೊಲೆ ಎಂಬ ಬಗ್ಗೆ ಎಲ್ಲ ದೇಶಗಳ ಆಡಳಿತ ಪ್ರಮುಖರೂ ಒಂದು ತೀರ್ಮಾನಕ್ಕೆ ಬಂದ ಹಾಗೆ ಆಗಿದೆ.

ತಳಮಳದ ಕಾರಣಗಳು ಒಳಗೇ ಇವೆ:

ವಿಮಾನಾಪಘಾತಗಳಿಗೆ ಹೊರಗಿನ ಕಾರಣಗಳಿರುವಂತೆ ಒಳಗಿನ ಕಾರಣಗಳೂ ಉಂಟು ಎನ್ನುವ ಸತ್ಯಾಂಶ ಈಗ ನಿಸ್ಸಂಶಯವಾಗಿ ತಿಳಿದ ವಿಷಯ. ಅದೇ ರೀತಿ ಮನುಷ್ಯನ ವ್ಯಕ್ತಿತ್ವದಲ್ಲಿ ಅಶಾಂತಿಯ ಮನೋವ್ಯಥೆಯ, ತಳಮಳದ, ಒತ್ತಡದ, ಕಾರಣಗಳು ವ್ಯಕ್ತಿತ್ವದ ಒಳಗೇ ಇರುತ್ತವೆ ಎನ್ನುವ ಸತ್ಯ, ಈಗಿನ "ಜಾಣರ" ವಿಜ್ಞಾನಕ್ಕೆ ತಿಳಿಯಬೇಕಾಗಿದೆ. ಈ ಜಾಣರ ಮುಖಂಡನನ್ನು ಬೃಹಸ್ಪತಿ ಎಂದು ಬಹಳ ಹಿಂದೆಯೇ ಕರೆದರು. ಈ ಬೃಹಸ್ಪತಿ ಲೋಕಾಯತ ಅಥವಾ ಚಾರ್ವಾಕ ಎಂಬ 'ದರ್ಶನ'ದ ಸ್ಥಾಪಕನಾದನು. ಈ ಬೃಹಸ್ಪತಿ-ಸರ್ವಜ್ಞನ ವಚನದಲ್ಲಿ ಹೇಳಿರುವಂತೆ "ಅಲ್ಲದ್ದನ್ನೇ ಅಹುದೆಂಬ ಜಾಣ." ಈ ಬೃಹಸ್ಪತಿಯ ಮಾತನ್ನು ನಂಬುವುದರಿಂದ ಕಣ್ಣಿದ್ದೂ ಕಲ್ಲಿಗೆ ಡಿಕ್ಕಿ ಹೊಡೆಯುವ ಹಾಗೆ ಆಗುತ್ತದೆ.

ವ್ಯಕ್ತಿತ್ವ ವಿಜ್ಞಾನ ಆಧ್ಯಾತ್ಮಿಕ, ಭೌತಿಕವಲ್ಲ:

ದೇಹವನ್ನೇ ಆತ್ಮ ಎಂದು ಭ್ರಮಿಸುವಿಕೆ, ಬರೇ ನಾಸ್ತಿಕರಿಗೆ ಮಾತ್ರ ಸಂಭವಿಸುವುದಿಲ್ಲ. ಅದು ಆಸ್ತಿಕರಿಗೂ ಸಂಭವಿಸುತ್ತದೆ. ಆಸ್ತಿಕರ ಪರಿಭಾಷೆಯಲ್ಲಿ ಈ ಭ್ರಮೆಗೆ "ದೇಹಾತ್ಮ ಬುದ್ಧಿ" ಎಂಬ ಹೆಸರಿದೆ. ಆದರೆ, ಆಸ್ತಿಕರು ತಮ್ಮಲ್ಲಿರುವ ದೇಹಾತ್ಮ ಬುದ್ಧಿಯನ್ನು "ಮತ" ಎಂಬ ಮಡಿಯಾದ ಹೆಸರಿನಿಂದ ಕರೆಯುತ್ತಾರೆ. ಇತರರ ಮತವನ್ನು ಮೈಲಿಗೆ ಎಂದು ಭಾವಿಸಿ, ಆ ಗತ್ತನ್ನು ಕಾಪಾಡಿಕೊಳ್ಳುವುದೇ ದೇವರಿಗೆ ಇಷ್ಟ ಎಂದು ತಿಳಿಯುತ್ತಾರೆ. ಒಳಗಿನ ಮಾರಕಾಸ್ತ್ರಗಳಾದ ಕಾಮಾದಿಷಡ್ವರ್ಗವನ್ನೂ, ಹತಾಶೆಯೇ ಮೊದಲಾದ ಚತುಷ್ಟಯವನ್ನೂ ತಂತಮ್ಮ ಧರ್ಮದ ಜೊತೆ ಸೇರಿಸಿಕೊಂಡಾಗ ಅದು ದೇವರ ಶಕ್ತಿ ಎಂದು ಅಮಲುಗೊಳ್ಳುತ್ತಾರೆ. ಈ ಅಮಲನ್ನೇ ಧರ್ಮ ಎಂದು ಲೆನಿನ್ ಮಹರ್ಷಿ ಲೇವಡಿ ಮಾಡುವುದು. ವ್ಯಕ್ತಿಯೊಳಗಣ ಮಾರಕಾಸ್ತ್ರಗಳ ಜೊತೆ ಧರ್ಮ ಸೇರಿದರೆ ಪ್ರಬಲವಾದ ಒದೆ ಕೊಡುವ ಅಮಲಾಗುತ್ತದೆ. ಈ ದೃಷ್ಟಿಯಿಂದ ಲೆನಿನ್ ಮಹರ್ಷಿಯ ಲೇವಡಿ ಅರ್ಥ ಗರ್ಭಿತ. ಅಷ್ಟೇ ಹೊರತು ಅದು ಧರ್ಮದ ಸೃಜನಾತ್ಮಕ ಚೈತನ್ಯದ ಖಂಡನೆಯಲ್ಲ. ಸಾಮಾನ್ಯ ಜನತೆಗೆ ಒಂದಲ್ಲ ಒಂದು ಅಮಲು ಬೇಕಲ್ಲವೆ? ಅದು ಆಸ್ತಿಕತೆಯ ಅಮಲಾದರೂ ಸರಿ. ನಾಸ್ತಿಕತೆಯ ಅಮಲಾದರೂ ಸರಿ. ಒಟ್ಟಾರೆ ದೇಹಾತ್ಮ ಭ್ರಮೆಯ ಅಮಲಾಗಿರಬೇಕು. ತಾನು ದೇಹವಲ್ಲ ಎಂದು ಒಪ್ಪಿದರೆ, ಬೇರೆ ಏನು ಎಂದು ಶೋಧನೆ ಮಾಡಬೇಕಾದ ತೊಂದರೆ ಗಂಟು ಬೀಳುತ್ತದೆ. ಆ ಶೋಧನೆ ಆಧ್ಯಾತ್ಮಿಕವೇ ಹೊರತು ಭೌತಿಕವಲ್ಲ. ಅದನ್ನು ಯಾವ ಬೆಳಕಲ್ಲಿ ಮಾಡಬೇಕು? ದೇಹದ ಬೆಳಕಲ್ಲೋ, ಆತ್ಮದ ಬೆಳಕಲ್ಲೋ? ಅಥವಾ ಸದಾ ಸನ್ನಿಹಿತವಾದರೂ ಸಂಭವಿಸದೇ ಇರುವ ಮೃತ್ಯುವಿನ ಬೆಳಕಲ್ಲೋ?

ಮೃತ್ಯುವು ಬೆಳಕು ಕೊಡುತ್ತದೆಯೆ?

ಈ ಪ್ರಶ್ನೆಗೆ ಉತ್ತರ ಕಂಡುಹಿಡಿಯಬೇಕಾದರೆ ಮೃತ್ಯುವಿನ ಭಯ, ಚಿತ್ತ[illegible] ನಾಚಿಕೆ ಎರ[illegible] [illegible] ಬಟ್ಟೆ ಬಟ್ಟೆಗೆ ಬರುವುದಿಲ್ಲ ಎಂದು ಬಗು[illegible]ತು. ಬಟ್ಟೆಯೊಳಗಿನ ಬೆತ್ತಲೆ ಮೈಗೆ. ಬದುಕಿರುವವನು ತೊಟ್ಟ ಬಟ್ಟೆ ಬದುಕಿರುವುದಿಲ್ಲ. ಹೆಣದ ಮೇಲಿನ ಬಟ್ಟೆ ಸತ್ತಿರುವುದಿಲ್ಲ. ಆದ್ದರಿಂದ ಮೃತ್ಯುವಿನಿಂದ ಬೆಳಕು ಬಯಸುವವನು ಬಟ್ಟೆಯ ಸಂದರ್ಭದಿಂದ ಪ್ರಭಾವಿತವಾದ ಮನಸ್ಸನ್ನೂ ಭಾಷೆಯನ್ನೂ ಕೈಬಿಡಬೇಕು. ಇದು ತುಂಬ ಸಾಹಸದ ಕೆಲಸವಲ್ಲವೇ? ಹೌದು. ಈ ಸಾಹಸಕ್ಕೇ ವೈರಾಗ್ಯ ಎಂದು ಹೆಸರು. ಈ ವೈರಾಗ್ಯದ ವೇಷ, ಭಾಷೆ ಮೈಯಲ್ಲಿ ಇರುವುದಿಲ್ಲ. ಅದನ್ನು ಕಣ್ಣಲ್ಲಿ ಪತ್ತೆ ಮಾಡಬೇಕು. ಉತ್ಕಟ ಸನ್ನಿವೇಶಗಳಲ್ಲಿ ನಡತೆಯ ಮೂಲಕ ಗುರುತಿಸಬಹುದು. ಆದರೆ ಪತ್ತೆ ಮಾಡುವುದೂ ಸಾಹಸದ ಕೆಲಸವೇ. ಇಂಥ ಸಾಹಸವಂತರನ್ನು ಧೀರರು ಎಂದು ಕರೆಯಲಾಗಿದೆ, ವೇದದಲ್ಲಿ. ತಾನು ಯಾರೆಂದು ತಿಳಿಯುವ ವಿಜ್ಞಾನ, ಇಂಥ ಧೀರರಿಗೇ ಮೀಸಲಾದ ಆಹ್ವಾನ.

ತನ್ನನ್ನು ತಾನು ಪ್ರಾಣದ ಮೂಲಕ ತಿಳಿಯಬೇಕು:

ತನ್ನನ್ನು ತಾನೇ ತಿಳಿಯುವ ವಿಜ್ಞಾನಕ್ಕೂ ಒಂದು ಮಾಧ್ಯಮ ಬೇಕು. ಆ ಮಾಧ್ಯಮವನ್ನು ಪುರಾತನರು ಕಂಡುಹಿಡಿದಿದ್ದರು. ಅದಕ್ಕೆ ಪ್ರಾಣ ಎಂದು ಹೆಸರು ಕೊಟ್ಟರು. ಪ್ರಾಣ ಇದ್ದರೂ ಪ್ರಜ್ಞೆ ಹೋಗುವುದುಂಟು. ಪ್ರಜ್ಞೆಬಾರದೆ ಪ್ರಾಣ ಹೋಗುವುದೂ ಉಂಟು. ಬಸಿರಿ ಹೆಂಗಸಿನಲ್ಲಿ, ಒಂದೇ ಪ್ರಜ್ಞೆಯೊಳಗೆ ಎರಡು ಪ್ರಾಣಗಳು ಇರುತ್ತವೆ. ಗರ್ಭಪಾತ ಮಾಡಿಸುವಾಗ, ಗರ್ಭದ ಪ್ರಾಣವನ್ನು ನಾಶಪಡಿಸಲಾಗುತ್ತದೆ. ಹೆರಿಗೆಯು ಇಷ್ಟವಾದಾಗ, ಮಗು ಪ್ರಾಣ ಸಹಿತ ಹುಟ್ಟುತ್ತದೆ. ಗಂಡಸು ತನ್ನನ್ನು ತಾನು ಅರಿಯಲು ಹೆಂಗಸಿನ ಆಪ್ತನೆರವನ್ನು ಪಡೆಯಬೇಕಾಗುತ್ತದೆ. ಈ ನೆರವು ದೊರೆಯುವುದು ದಾಂಪತ್ಯದ ಮೂಲಕ. ತನ್ನನ್ನು ತಾನು ಅರಿಯಲು ದಾಂಪತ್ಯವನ್ನು ಅವಲಂಬಿಸುವವರಿಂದ [illegible] ವೈರಾಗ್ಯವಿದೆ. [illegible] ಭೌತವಿಜ್ಞಾನ ಮತ್ತು ಅಧ್ಯಾತ್ಮ ವಿಜ್ಞಾನ ಎರಡೂ ಈ ದಿಶೆಯಲ್ಲಿ ಅಧ್ಯಯನ, ಸಂಶೋಧನೆ ಮಾಡಲು ವಿಪುಲ ಅವಕಾಶಗಳಿವೆ. ದಾಂಪತ್ಯವನ್ನು ಅರಿತು ಬಳಸಿದರೆ, ದಂಪತಿಗಳಿಬ್ಬರೂ ತನ್ನನ್ನು ತಾನು [illegible] ಅವಕಾಶವಿದೆ. ಮನೆಯೇ ಆಶ್ರಮವಾಗುತ್ತದೆ. ●



ನ್ಯೂಯೋರ್ಕಿನಿಂದ ಮಾಸ್ಕೋಗೆ ಪಾದಯಾತ್ರೆ

ಕಸ್ತೂರಿ ನಡೆದುಬಂದದಾರಿ

> ಗಾಂಧಿ ಮತ್ತು ಗಾಂಧೀವಾದ ಭಾರತದ ಮಟ್ಟಿಗೆ ಇತಿಹಾಸ ಮಾತ್ರವಾಗಿ ಉಳಿದಿವೆಯಾದರೂ ಹೊರಗಡೆ ಅವರ ತತ್ತ್ವಗಳಲ್ಲಿ ಶ್ರದ್ಧೆಯಿಟ್ಟುಕೊಂಡು ಅವುಗಳನ್ನು ಅನುಷ್ಠಾನಕ್ಕೆ ತರಲು ಯತ್ನಿಸುವವರು ಇದ್ದಾರೆಂಬುದು ಜಗತ್ತಿನ ಭವಿಷ್ಯದಲ್ಲಿ ಭರವಸೆ ಹುಟ್ಟಿಸುವಂತಿದೆ. ನ್ಯೂಯೋರ್ಕಿನಿಂದ ಮಾಸ್ಕೋಕ್ಕೆ ಪಾದಯಾತ್ರೆ ಕೈಕೊಂಡು ಪರಮಾಣು ಅಸ್ತ್ರಗಳನ್ನು ತಿರಸ್ಕರಿಸಿ ಶಾಂತಿಗಾಗಿ ಯತ್ನಿಸಿದ ಅಮೆರಿಕನ್ ಸಾಹಸಗಾಥೆಯೊಂದು ನಮ್ಮ *1952* ಜುಲೈ ಸಂಚಿಕೆಯಲ್ಲಿ ಬಂದಿದೆ. ನಮ್ಮ ಓದುಗರಿಗಾಗಿ ಅದನ್ನಿಲ್ಲಿ ಪುನಃ ಎತ್ತಿ ಪ್ರಕಟಿಸಿದ್ದೇವೆ. "ಧ್ಯೇಯಕ್ಕಾಗಿ ಸಾಯುವುದು ಸುಲಭ; ಆದರೆ ಅದಕ್ಕಾಗಿ ಬದುಕುವುದು ಮಾತ್ರ ಕಷ್ಟಸಾಧ್ಯ" ಎಂಬ ಬಾಬಾ ಆಮ್ಟೆಯವರ ಮಾತು ಇದನ್ನೋದುವಾಗ ಮನವರಿಕೆಯಾಗುತ್ತದೆ.

ಹೋದ ವರ್ಷ ಏಪ್ರಿಲ್ ತಿಂಗಳಿನಲ್ಲಿ ಈಸ್ಟರ್ ರವಿವಾರದ ದಿನ ಚಿಕಾಗೊ ಥಿಯೋಲಾಜಿಕಲ್ ಸೆಮಿನರಿ ಚರ್ಚಿನಲ್ಲಿ ಇಪ್ಪತ್ತೈದು ವರ್ಷದ ಬೀ ಬರ್ನೆಟ್ ಮತ್ತು ಮೂವತ್ತೈದು ವರ್ಷದ ಸ್ಕಾಟ್ ಹೆರಿಕ್‌ರ ವಿವಾಹ ಜರುಗಿತು. ಅತ್ಯಂತ ನಿರಾಡಂಬರವಾಗಿ ಜರುಗಿದ ಈ ಮದುವೆಯ ಸುದ್ದಿ ನ್ಯೂಯೋರ್ಕ್ ಸಿಟಿ ಮತ್ತು ಚಿಕಾಗೋವಿನ ಪತ್ರಿಕೆಗಳಲ್ಲಿ ಒಂದು ನಾಲ್ಕು ಸಾಲುಗಳಲ್ಲಿ ಪ್ರಕಟವಾಯಿತು. ಹೀಗಿದ್ದರೂ ಇದು ಅತ್ಯಂತ ಅಪೂರ್ವವಾದ ವಿವಾಹವಾಗಿತ್ತೆನ್ನುವುದರಲ್ಲಿ ಸಂದೇಹವಿಲ್ಲ.

ಬೀ ಬರ್ನೆಟ್ ನಾರ್ತ್ ಕೆರೋಲಿನಾದ ಒಬ್ಬ ರೈತನ ಮಗಳು. ಹನ್ನೊಂದು ಮಕ್ಕಳಲ್ಲಿ ಕಿರಿಯವಳಾದ ಇವಳು ತನ್ನ ಬಾಲ್ಯವನ್ನೆಲ್ಲಾ ಹೊಲ ಮನೆಯ ಕೆಲಸದಲ್ಲಿ ಕಳೆದಳು. [illegible] ಅಮೆರಿಕಕ್ಕೆ ಬಂದು ನೆಲೆಸಿ ಸಮೃದ್ಧವಾದ ಒಂದು ಕುಟುಂಬದಲ್ಲಿ [illegible] ಸ್ಕಾಟ್ [illegible] ತಂದೆಗೆ ಒಬ್ಬನೇ ಮಗ. ನ್ಯೂಯೋರ್ಕ್ ನಗರದಲ್ಲಿದ್ದ [illegible] [illegible] [illegible] ಮನೆಯಲ್ಲಿ ಸ್ಕಾಟ್ [illegible]

('ರೆಡ್ ಬುಕ್' ನಿಂದ)

ಆದರೆ ಇವರಿಬ್ಬರ ಲಗ್ನ ಶ್ರೀಮಂತ ವರ ಮತ್ತು ಬಡ ಕನ್ಯೆಯರಲ್ಲಿ ನಡೆದ ಮದುವೆ ಎಂದು ಅಪರೂಪವಾಗಿರದೆ ಅದಕ್ಕೆ ಬೇರೆಯೇ ಒಂದು ಕಾರಣವಿದೆ. ಮಾಸ್ಕೋಕ್ಕೆ ಕೈಗೊಂಡ ಪಾದ ಯಾತ್ರೆಯ ಪಥಕದಲ್ಲಿ ಸೇರಿದ್ದ ಇವರು ಪರಸ್ಪರ ಆಕರ್ಷಿಸಲ್ಪಟ್ಟವರಾಗಿ ಮದುವೆಯಾದರು ಎಂಬುದೇ ಇದರಲ್ಲಿನ ವಿಶೇಷವಾಗಿದೆ.

ಹೆರಿಕ್ ಕುಟುಂಬದವರೆಲ್ಲ ಮಹಾತ್ಮಾ ಗಾಂಧಿಯವರ ತತ್ವಗಳಿಂದ ಪ್ರಭಾವಿತರಾದವರು. ಯುದ್ಧ ಮತ್ತು ಅತ್ಯಾಚಾರಗಳಿಗೆ ಅಹಿಂಸಾತ್ಮಕ ಪ್ರತಿಭಟನೆಯೊಂದೇ ಯೋಗ್ಯವಾದ ನೈತಿಕ ಮಾರ್ಗವೆಂದೂ ಪರಮಾಣು ಯುಗದ ಸಮಸ್ಯೆಗೆ ಅದೊಂದೇ ವ್ಯಾವಹಾರಿಕವಾದ ಪರಿಹಾರ ವೆಂದೂ ಇವರೆಲ್ಲಾ ನಂಬುತ್ತಾರೆ.

1960ರಲ್ಲಿ ಅಹಿಂಸಾತ್ಮಕ ಕಾರ್ಯಾಚರಣೆಯ ಸಮಿತಿಯ ರಾಷ್ಟ್ರೀಯ ಕಾರ್ಯದರ್ಶಿ ಬ್ರಾಡ್ ಫೋರ್ಡ್ ಲಿಟ್ಲ್ ಎಂಬುವರು, ಶಾಂತಿಗಾಗಿ ಪ್ರಾರ್ಥಿಸಿಕೊಳ್ಳಲು ನಿಶ್ಶಸ್ತ್ರೀಕರಣದ ಮಹಿಮೆ ಯನ್ನು ಪ್ರಚುರಪಡಿಸಲು ಮತ್ತು ಗಾಂಧೀಜಿಯ ಅಹಿಂಸಾ ಸಂದೇಶವನ್ನು ಬೀರಲು ಸಾನ್ ಫ್ರಾನ್ಸಿಸ್ಕೋದಿಂದ ಮಾಸ್ಕೋದವರೆಗೆ ಪಾದಯಾತ್ರೆ ಕೈಗೊಳ್ಳಲಿರುವ ತಮ್ಮನ್ನು ಕೂಡಿಕೊಳ್ಳಲು ಸ್ವಯಂಸೇವಕರು ಮುಂದೆ ಬರಬೇಕೆಂದು ಸಾರ್ವಜನಿಕ ಬಿನ್ನಹಮಾಡಿಕೊಂಡರು.

ಸ್ಕಾಟ್ ಹೆರಿಕ್ ಮತ್ತು ಬೀ ಬರ್ನೆಟ್‌ರು ತಮ್ಮ ತಮ್ಮ ಭಿನ್ನ ಜಗತ್ತುಗಳಿಂದ ಬ್ರಾಡ್ ಫೋರ್ಡ್‌ರ ಕರೆಗೆ ಓಗೊಟ್ಟು, ಮಾಸ್ಕೋಕ್ಕೆ ಪಾದಯಾತ್ರೆ ಕೈಗೊಳ್ಳಲು ಸಿದ್ಧರಾದ ಇಪ್ಪತ್ತಾರು ಜನ ಶಾಂತಿವಾದಿಗಳ ಪಥಕವನ್ನು ಸೇರಿಕೊಂಡರು. ಈ ಪಥಕದವರು ತಮ್ಮ ಜೀವನದ ಎಂಟು ತಿಂಗಳ ಕಾಲವನ್ನು ಈ ಅಪೂರ್ವ ಕಾರ್ಯಕ್ಕಾಗಿ ಮೀಸಲಾಗಿರಿಸಿದ್ದರು. ಈ ಗುಂಪು 600 ಮೈಲು ಹಾದಿ ಯನ್ನು ಕ್ರಮಿಸುವಷ್ಟರಲ್ಲಿ ಸ್ಕಾಟ್ ಮತ್ತು ಬೀ ಪ್ರೇಮಪಾಶದಲ್ಲಿ ಸಿಲುಕಿಕೊಂಡರು.

ಸ್ಕಾಟ್ ಹೆರಿಕ್ ಆರಡಿ ಎತ್ತರದ ಬಲಿಷ್ಠ ಆಳು. ಶ್ರೀಮಂತನಾದ ಈತನೇನು ಪ್ರೇಯಸಿಗಾಗಿ ಶಾಂತಿವಾದಿಗಳ ಇಂಥ ತಂಡದಲ್ಲಿ ಅರಸಬೇಕಾಗಿರಲಿಲ್ಲ . ಹತ್ತು ವರ್ಷಗಳಿಂದಲೂ ಆತ ತನ್ನನ್ನು ಬಲೆಯಲ್ಲಿ ಹಾಕಿಕೊಳ್ಳಲು ಪ್ರಯತ್ನಿಸುತ್ತಿದ್ದ ವಿವಾಹೇಚ್ಛು ಕನ್ಯೆಯರ ಮತ್ತು ಅವರ ತಾಯಂದಿರ ಗತ್ತುಗಳಿಂದ ತನ್ನನ್ನು ಕಾಪಾಡಿಕೊಂಡು ಬಂದಿದ್ದ. ಆತ ಶಾಂತಿವಾದಿಗಳ ಈ ಪಾದಯಾತ್ರೆಯನ್ನು ಕೂಡಿಕೊಂಡಿದ್ದು ಹೆಂಡತಿಯನ್ನು ಅರಸುವುದಕ್ಕಾಗಿರದೆ ಇನ್ನೊಂದು ಮಹತ್ಕಾರ್ಯ ಸಾಧನೆಗಾಗಿ-ಮಾನವ ಜೀವಿತದ ಸುಖಭವಿತವ್ಯಸಾಧನೆಗಾಗಿ ಆಗಿತ್ತು.

ನ್ಯೂಯೋರ್ಕಿನ ಖಾಸಗಿ ಶಾಲೆಯೊಂದರಲ್ಲಿ ವಿದ್ಯಾಭ್ಯಾಸಮಾಡಿದ ಸ್ಕಾಟನು ಪರ್ಲ್ ಹಾರ್ಬರಿನ ಘಟನೆ ಮತ್ತು ದ್ವಿತೀಯ ಮಹಾಯುದ್ಧದ ಪರಿಣಾಮವಾಗಿ ನೌಕಾದಳದ ಸಮವಸ್ತ್ರ ಧರಿಸಿ ಶಿಕ್ಷಣ ವನ್ನು ಮುಂದೆ ಸಾಗಿಸುವಂತಾಯಿತು. 1945ರ ಬೇಸಿಗೆಯ ಆರಂಭದಲ್ಲಿ ಅವನಿಗೆ ಅಸಾಧ್ಯ ತಲೆನೋವು ಬರಲಾರಂಭಿಸಿತು. ಈತನ ಮಿದುಳಿನಲ್ಲಿ ಹುಣ್ಣಾಗುತ್ತಿದೆಯೇನೋ ಎಂದು ಶಂಕಿಸಿದ ನೌಕಾ ಆಸ್ಪತ್ರೆಯವರು ಇವನನ್ನು ಚಿಕಿತ್ಸೆಗಾಗಿ ಆಥ್ಸೆಡಾ ನೌಕಾ ಆಸ್ಪತ್ರೆಗೆ ಸೇರಿಸಿದರು.

ಸ್ಕಾಟ್ ಈ ಆಸ್ಪತ್ರೆಯಲ್ಲಿದ್ದಾಗಲೇ ಹಿರೋಶಿಮಾ ಮತ್ತು ನಾಗಾಸಾಕಿಗಳ ಮೇಲೆ ಪರಮಾಣು ಬಾಂಬುಗಳು ಬಿದ್ದವು. ಅನೇಕ ಅಮೇರಿಕನ್ನರಂತೆ ಸ್ಕಾಟ್ ಕೂಡ "ಅಬ್ಬಾ! ಎಂಥ ಭೀಕರ ಸಂಗತಿ ಯಿದು! " ಎಂದು ಯೋಚಿಸಿದ.

ಮುಂದೊಂದು ವರ್ಷವನ್ನು ಆತ ಕ್ಯಾಲಿಫೋರ್ನಿಯಾದ ಸಮುದ್ರ ತೀರ ಮತ್ತು ಪರ್ವತ ಪ್ರದೇಶಗಳಲ್ಲಿ ಪ್ರವಾಸ ಮಾಡುತ್ತ ಕಳೆದ. "ನಾನು ಅಸ್ವಸ್ಥಚಿತ್ತನಾಗಿದ್ದೆ; ಏನು ಮಾಡಬೇಕೆಂದೇ ತಿಳಿಯುತ್ತಿರಲಿಲ್ಲ. ಮೊದಲಿನಿಂದಲೂ ಸಂಗೀತಪ್ರಿಯನಾಗಿದ್ದೆ. ಸುಲಭದಲ್ಲಿ ಯಾರಿಗೂ ಪ್ರವೇಶ ಸಿಗದ ನ್ಯೂಯೋರ್ಕಿನ ಜ್ಯುಲಿಯರ್ಡ್ ಸಂಗೀತ ಶಾಲೆಯನ್ನು ಸೇರಿದೆ. ಆದರೆ ಒಂದು ದಿನ ಇದಕ್ಕಿದ್ದಂತೆ ಶಾಲೆಗೆ ಹೋಗುವ ಬದಲು ಆಸ್ಟ್ರೇಲಿಯಾಕ್ಕೆ ಹೋಗಿಬಿಟ್ಟೆ. ಏಕೋ ಏನೋ ಬೇರೊಂದು ವಾತಾವರಣ ನನಗೆ ಬೇಕು ಎಂದೆನಿಸಿತು", ಎಂದು ಸ್ಕಾಟ್ ತನ್ನ ಆ ದಿನಗಳನ್ನು ಕುರಿತು ಹೇಳುತ್ತಾನೆ.

ಅವನಿಗೆ, ಇಷ್ಟರಲ್ಲೇ ತನ್ನ ಅಜ್ಜ-ಅಜ್ಜಿಯರಿಂದ ಒಂದಷ್ಟು ಆಸ್ತಿ ಸಿಕ್ಕಿತ್ತು. ಆದರೆ ಆತ ಅದನ್ನು

ಮುಟ್ಟಲಿಲ್ಲ. ಆಸ್ಟ್ರೇಲಿಯಾದಲ್ಲಿ ಆತ ಬಂದಿಳಿದಾಗ ಅವನ ಬಳಿ ಕೇವಲ 100 ಡಾಲರುಗಳಿದ್ದವು. ಆಸ್ಟ್ರೇಲಿಯದಲ್ಲಿದ್ದ ಒಂದೂವರೆ ವರ್ಷ ಕಾಲದಲ್ಲಿ ಆತ ಕಬ್ಬಿನ ತೋಟದಲ್ಲಿ ಕೂಲಿಯಾಗಿ, ಕಲ್ಲಿನ ಗಣಿಯಲ್ಲಿ ಕೂಲಿಯಾಗಿ, ಒಂದು ಖಾನಾವಳಿಯಲ್ಲಿ ಅಡಿಗೆಯವನಾಗಿ ಕೆಲಸ ಮಾಡಿದ. "ಸತ್ಯದ ಬೆಳಕನ್ನು ನಿರೀಕ್ಷಿಸುತ್ತಿದ್ದ ನನಗೆ ಅದು ಇನ್ನೂ ದೂರ ದೂರವೇ ಇರುವಂತೆ ಕಾಣುತ್ತಿತ್ತು. ನಾನು ಸಿಡ್ನಿಯಿಂದ ಸಿಂಗಾಪುರಕ್ಕೆ, ಅಲ್ಲಿಂದ ಸಿಲೋನ್, ಮುಂದೆ ಮಾರ್ಸಲಿಸ್ ಮತ್ತು ಲೆ ಹಾವ್ರೆಗೆ ಹಡಗಿನಲ್ಲಿ ಪ್ರಯಾಣ ಮಾಡಿದೆ. ಈ ಪ್ರವಾಸ ಸಮಯದಲ್ಲಿ ಯುಗಯುಗದ ಮಹಾನ್ ಚಿಂತಕರ ಪುಸ್ತಕಗಳನ್ನು ಓದಿದೆ. ಲೆ ಹಾವ್ರೆಯನ್ನು ತಲುಪಿದಾಗ ನನ್ನಲ್ಲಿ ಕುರುಡು ಕಾಸು ಇರಲಿಲ್ಲ. ರೇಲ್ವೆ ಸ್ಟೇಶನ್ನಿನಲ್ಲಿ ಬೀಡುಬಿಟ್ಟಿದ್ದ ಕಂಗಾಲರ ಗುಂಪನ್ನು ಸೇರಿಕೊಂಡೆ. ಬೆಳಗಿನ ಜಾವ ನಾಲ್ಕು ಗಂಟೆಗೆ ಪೊಲೀಸರು ಬಂದು ನಮ್ಮನ್ನು ಅಲ್ಲಿಂದ ಓಡಿಸಿದರು.

"ನ್ಯೂಯೋರ್ಕಿಗೆ ಮರಳಿದ ಮೇಲೆ ಮೆಟ್ರೋಪಾಲಿಟನ್ ಆರ್ಟ್ ಮ್ಯೂಸಿಯಂನಲ್ಲಿ ನೌಕರಿ ಹಿಡಿದೆ. ಇಷ್ಟರಲ್ಲಿ ನನ್ನ ಮನದಲ್ಲಿ ಅನೇಕಾನೇಕ ವಿಚಾರಗಳು ರೂಪುಗೊಳ್ಳುತ್ತಿದ್ದವು. ಈ ಜಗತ್ತಿನಲ್ಲಿ ಮಾನವನಲ್ಲಿಯ ಸಹೋದರ ಭಾವವೊಂದೇ ಸರ್ವಮಾನ್ಯ ಸತ್ಯವೆಂದು ನನಗನಿಸತೊಡಗಿತ್ತು. ಪ್ರತಿಯೊಬ್ಬ ಧಾರ್ಮಿಕ ಧುರೀಣ-ಜಗತ್ತನ್ನು ಸುಧಾರಿಸಲು ಸಹಾಯ ಮಾಡಿರುವ ಪ್ರತಿಯೊಬ್ಬನೂ ಒಂದಲ್ಲ ಒಂದು ವಿಧದಲ್ಲಿ ನಮಗೆ ಪರಸ್ಪರರನ್ನು ಪ್ರೀತಿಸಲು ಪರಸ್ಪರ ಸುಖಕ್ಕಾಗಿ ಹೆಣಗಲು ಉಪದೇಶಿಸಿದ್ದಾನೆ. ಹಾಗಿದ್ದರೂ ಮೂರು ಸಾವಿರ ವರ್ಷಗಳಿಂದಲೂ ಈ ಜಗತ್ತು ದ್ವೇಷ, ಹತ್ಯೆ ಮತ್ತು ಯುದ್ಧಗಳ ಮೂಲಕ ತನ್ನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಯತ್ನಿಸುತ್ತ ಬಂದಿದೆ".

ಅಲ್ಲಿ ಮ್ಯೂಸಿಯಂನಲ್ಲಿ ಧೂಳು ಕೊಡಹುವ ಗರಿಯ ಗುಂಚವನ್ನು ಹಿಡಿದು ನಿಂತಿದ್ದಂತೆ ಸ್ಕಾಟ್‌ನಿಗೆ ಯಾವುದೋ ಯುದ್ಧದ ಕರೆ ಬಂದಂತೆನಿಸಿತಂತೆ. ಆತ ಹೇಳುತ್ತಾನೆ: "ಗಾಂಧೀಜಿಯ ತಂತ್ರಗಳನ್ನು ಪ್ರಯೋಗಿಸಿ ನೋಡುತ್ತಿದ್ದ ಕೆಲ ಚಿಕ್ಕ ಚಿಕ್ಕ ತಂಡಗಳು ಅಮೆರಿಕದಲ್ಲಿರುವುದು ನನಗೆ ಗೊತ್ತಿತ್ತು. ಸೈನ್ಯದ ಟ್ರಕ್ಕುಗಳ ಹಾದಿಯಲ್ಲಿ ಮಲಗಿಕೊಳ್ಳುವುದು, ವೈಟ್ ಹೌಸಿನ ಬೇಲಿಯ ತಂತಿಗೆ ತಮ್ಮನ್ನು ಕಟ್ಟಿಕೊಳ್ಳುವುದು, ಸೆರೆಮನೆಗೆ ಹೋಗಿ, ಅಲ್ಲಿ ಉಪವಾಸ ಮುಷ್ಕರ ಹೂಡುವುದು ಮುಂತಾದ ಹುಚ್ಚು ಉಪಟಳದ ಕಾರ್ಯಗಳನ್ನವರು ಮಾಡುತ್ತಿದ್ದಾರೆಂದು ನನಗನಿಸುತ್ತಿತ್ತು. ಆದರೂ ಈ ಜನರನ್ನು ಭೇಟಿಯಾಗಬೇಕೆಂಬ ಕತೂಹಲ ನನ್ನಲ್ಲಿತ್ತು. ಅಹಿಂಸಾತ್ಮಕ ಕಾರ್ಯಾಚರಣೆಯ ಸಮಿತಿಯೊಂದು ವಾಶಿಂಗ್ಟನ್ನಿನಲ್ಲಿ ಶಾಂತಿಗಾಗಿ ಮತ ಪ್ರದರ್ಶನ ನಡೆಸಲಿದೆ ಎಂಬ ಸುದ್ದಿಯನ್ನು ಯಾರೋ ನನಗೆ ಹೇಳಿದಾಗ ನಾನು ಅಲ್ಲಿಗೆ ಹೋದೆ.

ಅದೇನೂ ಹೇಳಿಕೊಳ್ಳುವಂಥ ಕೆಲಸವೆನಿಸಲಿಲ್ಲ. ಆ ಜನ ಪಿಕೆಟಿಂಗ್ ಮಾಡುತ್ತಿದ್ದರು. ಪೆಂಟಾಗಾನ್‌ನ (ಅಮೆರಿಕದ ಸೈನ್ಯ ಕೇಂದ್ರ) ಸುತ್ತಲೂ ಸಾಮೂಹಿಕ ಕಾವಲು ನಡೆಸಿದ್ದರು. ಅವರ ಸಂದೇಶ ಆಚೆಕಡೆ ತಲುಪಿತಾದರೂ ಅವರ ಕಾರ್ಯ ಪರಿಣಾಮಕಾರಿಯಾಗಿದೆಯೋ ಇಲ್ಲವೋ ಎಂದು ತಿಳಿಯುವಂತಿರಲಿಲ್ಲ. ಪತ್ರಿಕೆಗಳಲ್ಲಿ, ಟೆಲಿವಿಜನ್‌ನಲ್ಲಿ ಅವರ ಬಗ್ಗೆ ಸಾಕಷ್ಟು ಪ್ರಚಾರವಾಗುತ್ತಿತ್ತು.

"ವಾಶಿಂಗ್ಟನ್ನಿನಲ್ಲಿ ನಾನು ಭೇಟಿಯಾದ ಶಾಂತಿವಾದಿಗಳಲ್ಲಿ ಹೆಚ್ಚಿನವರು ಸುಶಿಕ್ಷಿತರೂ ನಿಷ್ಠಾವಂತರೂ ಬುದ್ಧಿವಂತರೂ ಆಗಿದ್ದರು. ಜೀವಮಾನವೆಲ್ಲ ಶಾಂತಿಗಾಗಿ ದುಡಿದ ರೆವರೆಂಡ್ ಎ.ಜೆ. ಮಸ್ತೆ, ಒಂದೆ ಸೆನೆಟ್ ಸದಸ್ಯರಾಗಿದ್ದ ವಿಲಿಯಂ ಮೇಯರ್‌ರ ಮಗ ಕಾರ್ಲ್ ಮೇಯರ್, ಮೆಡಿಕಲ್ ರಿಸರ್ಚ್ ಇಂಜನಿಯರರಾದ ಬ್ರಾಡ್‌ಫೋರ್ಡ್ ಲಿಟ್ಲ್ ಮುಂತಾದವರು ಈ ಶಾಂತಿವಾದಿಗಳಲ್ಲಿದ್ದರು.

"ಈ ಮತಪ್ರದರ್ಶನ ಮುಗಿದ ಮೇಲೆ ನಾನು ಬ್ರಾಡ್‌ಫೋರ್ಡ್ ಲಿಟ್ಲ್‌ನನ್ನು ಭೇಟಿಯಾಗಿ 'ನಿಮ್ಮ ಭೇಟಿಯಾದದ್ದು ಸಂತೋಷ. ಆದರೆ ನಿಮ್ಮ ಮತಪ್ರದರ್ಶನ ನನ್ನಲ್ಲೇನೂ ನಂಬಿಕೆ ಹುಟ್ಟಿಸಲಿಲ್ಲ' ಎಂದೆ. ಅವನು ಮುಗುಳ್ನಕ್ಕು 'ನಾನು ಅಂಥ ಪ್ರಯತ್ನವನ್ನೇ ಮಾಡಲಿಲ್ಲ. ನೀವು ಕಾರ್ಯ ಮಾಡಬೇಕಾದ ಸಮಯ ಬಂದಾಗ ಯಾವುದೂ ನಿಮ್ಮನ್ನು ತಡೆಯದು. ಹೆದರಿಕೆಯಿಂದ ಬಿಟ್ಟು ಹೋಗುವ, ಬೇನೆಯಿಂದ ಹಿಳಲಾರದ ಪ್ರಸಂಗವಿದ್ದರೂ. ನೀವು ಅಲ್ಲಿ ಶಾಂತಿವಾದಿಗಳ ರಂಗದ

ಫಲ್ಲಿ (ಈ ಶಬ್ದಪ್ರಯೋಗಕ್ಕಾಗಿ ಕ್ಷಮೆ ಇರಲಿ) ಧುಮುಕುವಿರಿ' ಎಂದನು.

"ನಾವು ಪರಸ್ಪರರನ್ನು ಬೀಳ್ಕೊಂಡೆವು. ಮತ್ತೆ ಅವನನ್ನು ಭೇಟಿಯಾಗುವೆನೆಂಬ ಕಲ್ಪನೆ ಕೂಡಾ ನನಗಿರಲಿಲ್ಲ. ನಾನು ಮರಳಿ ನ್ಯೂಯೋರ್ಕಿಗೆ ಬಂದಾಗ ವಿಮಾನದಾಳಿ ಸಾಧನೆ ನಡೆಯಲಿದೆ ಯೆಂದು ತಿಳಿಯಿತು. ನನಗದರಲ್ಲಿ ಮಹತ್ವ ಕಾಣಿಸಲಿಲ್ಲ. ನಾನು ಅದನ್ನು ಮರೆತೇಬಿಟ್ಟೆ ಎನ್ನ ಬಹುದು. ವಿಮಾನ ದಾಳಿಯ ಕಹಳೆ ಊದಿದಾಗ ನಾನು ಹೊರಗಡೆಯಲ್ಲಿದ್ದೆ. ಸುತ್ತಮುತ್ತಲಿನ ಎಲ್ಲರೂ ರಕ್ಷಣೆಯ ಸ್ಥಾನಗಳತ್ತ ಓಡಿದರು. ಏಕೊ ಏನೋ ನನ್ನ ಕಾಲುಗಳು ಚಲಿಸಲೇ ಇಲ್ಲ. ಪೋಲೀಸನೊಬ್ಬ ಮೆಲ್ಲಗೆ ನನ್ನನ್ನು ನೂಕಿ 'ಇದು ವಿಮಾನ ದಾಳಿ ಸಾಧನೆ. ಅಲ್ಲಿ ಕೆಳಗಡೆ ಓಡು' ಎಂದ.

"ಈ ಕಾರ್ಯದ ಮೂರ್ಖತನ ಮತ್ತು ಅಮಾನುಷತತೆ ಥಟ್ಟನೆ ನನಗರಿವಾಯಿತು. ನಾನಂದೆ: 'ಹೆಗ್ಗಣದಂತೆ ನಾನು ಆ ತಗ್ಗಿನಲ್ಲಿ ಅಡಗುವುದಿಲ್ಲ. ಶಾಂತಿ ಬೇಕು ಎನ್ನುತ್ತ ಈ ರೀತಿ ನಾವು ಯುದ್ಧ ಸಿದ್ಧತೆ ಮಾಡುತ್ತಿರುವಾಗ ನಮ್ಮಲ್ಲಿ ರಶಿಯನ್ನರು ಹೇಗೆ ವಿಶ್ವಾಸವಿಡಬೇಕು? ರಶಿಯನ್ನರೂ ಹೀಗೆಯೇ ಮಾಡುವುದನ್ನು ಕಂಡರೆ ನಿಮ್ಮ ಮೈ ನಡುಗದೆ? ನಾವೀಗ ಮಾಡುತ್ತಿರುವುದೇನು-ತಾವೇ ನಮ್ಮ ಮೇಲೆ ಮೊದಲು ಗುಂಡು ಹಾರಿಸುವುದು ಒಳ್ಳೆಯದು ಎಂದು ಅವರು ಯೋಚಿಸುವಂತೆ ಮಾಡುತ್ತಿಲ್ಲವೆ?'

"ಆದರೆ ಅದರಿಂದ ಪ್ರಯೋಜನವೇನೂ ಆಗಲಿಲ್ಲ. ಕಾನೂನು ಮುರಿದದ್ದಕ್ಕಾಗಿ ನನಗೆ ಐದು ದಿನಗಳ ಶಿಕ್ಷೆಯಾಯಿತು. ಜೈಲಿನಲ್ಲಿ ನಾನು ಥೋರೊನ ಪುಸ್ತಕಗಳನ್ನು ಓದಿದೆ. ಗುಲಾಮ ವ್ಯಾಪಾರಕ್ಕೆ ಆಶ್ರಯವಿತ್ತಿದ್ದ ಸರಕಾರಕ್ಕೆ ಕರ ಕೊಡಲು ನಿರಾಕರಿಸಿ ಆತ 1846ರಲ್ಲಿ ಜೈಲು ಕಂಡಿದ್ದ. ಆಗ ಅವನ ಮಿತ್ರ ರಾಲ್ಫ್ ವಾಲ್ಡೊ ಎಮರ್ಸನ್ ಅವನ ಭೇಟಿಗೆ ಬಂದು 'ಹೆನ್ರಿ, ನಿನ್ನಂಥ ಸಂಭಾವಿತ ಗೃಹಸ್ಥ ಇಲ್ಲಿ ಜೈಲಿನಲ್ಲಿ ಏನು ಮಾಡುತ್ತಿರುವೆ?' ಎಂದು ಕೇಳಿದ. ಆದರೆ ಥೋರೊ 'ನಿಜವಾಗಿ ಈ ಪ್ರಶ್ನೆ ನಾನು ಇಲ್ಲಿ ಏನು ಮಾಡುತ್ತಿದ್ದೇನೆ ಎಂಬುದಾಗಿರದೆ ನೀನು ಹೊರಗೆ ಏನು ಮಾಡುತ್ತಿರುವೆ ಎಂದು ಇರಬೇಕು' ಎಂದ. ಇದನ್ನೋದುತ್ತಿದ್ದಂತೆ ನನಗೆ ನಗೆ ಬಂತು."

ಜೈಲಿನಿಂದ ಬಿಡುಗಡೆ ಹೊಂದಿದ ಮೇಲೆ ಸ್ಕಾಟ್ ಒಂದು ದೋಣಿಯನ್ನು ಕೊಂಡು ಸಮುದ್ರ ತೀರ ಪ್ರದೇಶಗಳಲ್ಲಿದ್ದ ತನ್ನ ನೆಂಟರಿಷ್ಟರನ್ನು ಭೇಟಿಯಾಗುತ್ತ ಮನದಲ್ಲೇ ವಿಚಾರ ಮಾಡುತ್ತ ಕಾಲ ಕಳೆದ.

ಅಮೆರಿಕದ ನೌಕಾಪಡೆ ಅತ್ಯಾಧುನಿಕ ಅಸ್ತ್ರಗಳುಳ್ಳ ಒಂದು ಸಬ್‌ಮೆರೀನನ್ನು ತಯಾರಿಸಿತ್ತು. ಅದರ ಪರ್ಯಟನ ಪ್ರಾರಂಭೋತ್ಸವ ನ್ಯೂಲಂಡನ್‌ನಲ್ಲಿ ಜರುಗಲಿತ್ತು. ಅಹಿಂಸಾತ್ಮಕ ಕಾರ್ಯಾ ಚರಣೆಯ ಸಮಿತಿ ಆ ಸಂದರ್ಭದಲ್ಲಿ ಮತಪ್ರದರ್ಶನಗಳನ್ನಾರಂಭಿಸಿ ದೋಣಿಗಳುಳ್ಳ ಸ್ವಯಂ ಸೇವಕರಿಗಾಗಿ ಕರೆ ಇತ್ತಿತು. ಸ್ಕಾಟ್ ತನ್ನ ದೋಣಿಗೆ 'ಸತ್ಯಾಗ್ರಹ' ಎಂದು ಹೆಸರಿಟ್ಟ. ತನ್ನ ದೋಣಿಯ ಮುಖ್ಯ ಹಾಯಿಯ ಮೇಲೆ 'ಶಸ್ತ್ರಾಸ್ತ್ರ ಸ್ಪರ್ಧೆಯನ್ನು ನಿಲ್ಲಿಸಿರಿ' ಎಂಬ ಅಕ್ಷರಗಳನ್ನು ಬರೆಯಿಸಿ ತನ್ನ ದೋಣಿಯನ್ನು ನ್ಯೂಲಂಡನ್ ಬಂದರಿನಲ್ಲಿ ಸುತ್ತಾಡಿಸಿದ.

ಈ ಹೊತ್ತಿಗೆ ಬ್ರಾಡ್‌ಫೋರ್ಡ್ ಲಿಟ್ಲ್ ಅಹಿಂಸಾತ್ಮಕ ಕ್ರಿಯಾಸಮಿತಿಯ ರಾಷ್ಟ್ರೀಯ ಕಾರ್ಯದರ್ಶಿ ಯಾಗಿದ್ದನು. ಚಿಕಾಗೊ ವಿಶ್ವವಿದ್ಯಾಲಯ ಮತ್ತು ಅರ್ಲ್‌ಹ್ಯಾಮ್ ಕಾಲೇಜಿನ ಪದವೀಧರನಾಗಿದ್ದ ಈತ ಮಾಸ್ಕೋದವರೆಗೆ ಶಾಂತಿ ಪ್ರಚಾರದ ಪಾದಯಾತ್ರೆಯ ಹಂಚಿಕೆ ಹಾಕಿದ್ದನು.

ನಾಲ್ಕಾರು ಸಲ ಚರ್ಚೆ ಮಾಡಿದ ನಂತರ ಆತ ಈ ಪಾದಯಾತ್ರೆಯ ಮಹತ್ವವನ್ನೂ ಉಪಯುಕ್ತತೆಯನ್ನೂ ಸ್ಕಾಟ್‌ನಿಗೆ ಬಿಂಬಿಸಿದ. ಅವರಿಬ್ಬರೂ ಸಾನ್‌ಫ್ರಾನ್ಸಿಸ್ಕೋಗೆ ತೆರಳಿ ಈ ಯಾತ್ರೆಯನ್ನು ಸಂಘಟಿಸತೊಡಗಿದರು. ಆರೇ ಆರು ವಾರಗಳೊಳಗಾಗಿ 600ಕ್ಕಿಂತ ಹೆಚ್ಚು ಸ್ವಯಂ ಸೇವಕರಿಂದ ಅರ್ಜಿಗಳು ಬಂದವು. ಆದರೆ 6500 ಮೈಲುಗಳ ಈ ಪ್ರವಾಸವನ್ನು ಕಾಲ್ನಡಿಗೆ ಯಲ್ಲೇ ಮಾಡುವ ವಿಚಾರ ತಿಳಿದಾಗ ಇವರಲ್ಲಿ ಬಹಳಷ್ಟು ಜನ ಹಿಂದೆ ಸರಿದರು. ಕೆಲವರನ್ನು ತೀರಾ ಚಿಕ್ಕವರೆಂದು, ಕೆಲವರನ್ನು ತೀರಾ ವೃದ್ಧರೆಂದು ಬಿಡಲಾಯಿತು.

ಒಂದು ಮೋಟಾರ್ ಪ್ರಚಾರಕ ತಂಡದಲ್ಲಿ ಮಾಡೆಲ್ ಎಂದು ಕೆಲಸ ಮಾಡುತ್ತ ತಿಂಗಳಿಗೆ

1500 ಡಾಲರುಗಳನ್ನು ಗಳಿಸುತ್ತಿದ್ದ ಇಪ್ಪತ್ತೈದು ವರ್ಷ ಪ್ರಾಯದ ಬೀ ಬರ್ನೆಟ್‌ಳ ಅರ್ಜಿ ಸ್ವೀಕೃತ ವಾಯಿತು.

ಈ ಪಾದಯಾತ್ರೆಯ ಬಗ್ಗೆ ಬೀಗೆ ಇದ್ದ ಕಲ್ಪನೆಯೇ ಬೇರೆಯಾಗಿತ್ತು. "ನಾನು ಅರ್ಜಿ ಮಾಡಿ ಕೊಂಡಾಗ ನಾವೆಷ್ಟು ದೂರ ನಡೆಲಿದ್ದೇವೆ ಎಂಬುದು ನನಗೆ ತಿಳಿದಿರಲಿಲ್ಲ. ಕೆಲವು ವಾರಗಳ ವರೆಗೆ ಮಾತ್ರ ಈ ಯಾತ್ರೆಯೊಡನಿರಬೇಕು ಎಂದು ಯೋಚಿಸಿದ್ದೆ. ಚಿಕಾಗೊನಲ್ಲಿ ಒಂದು ಕೆಲಸದ ಕರಾರಿಗೂ ಸಹಿ ಹಾಕಿದ್ದೆ. ಆದರೆ ಸ್ಕಾಟ್‌ನ ಭೇಟಿಯಾದಾಗ ನನ್ನ ಮನಸ್ಸು ಬದಲಾಗಿ ಬಿಟ್ಟಿತು.

"ನಾನವನನ್ನು ಮೊದಲ ಬಾರಿ ಕಂಡಾಗ ಆತ ಒಂದು ಪೆಟ್ಟಿಗೆಯ ಮೇಲೆ ನಿಂತುಕೊಂಡು ಭಾಷಣ ಮಾಡುತ್ತಿದ್ದ ಪ್ರಥಮ ನೋಟಕ್ಕೇ ನಾನವನ ಪ್ರೇಮದಲ್ಲಿ ಸಿಲುಕಿದೆ. ಆತನ ಸೌಂದರ್ಯ ಕ್ಕೇನೂ ನಾನು ಮುಗ್ಧಳಾಗಲಿಲ್ಲ. ಅವನು ಶ್ರೀಮಂತ ಎಂದೂ ನನಗೆ ಯಾರೂ ಹೇಳಿರಲಿಲ್ಲ. ಆದರೆ ಅದೇಕೋ ಈತನೇ ನನ್ನ ಜೀವನ ಸಂಗಾತಿ ಎಂದು ನನಗೆ ಅವನನ್ನು ಕಂಡಕೂಡಲೇ ನಂಬಿಕೆ ಯಾಗಿ ಹೋಯಿತು".

ಬೀ ಪ್ರಯತ್ನಪಟ್ಟು, ಸಾಧ್ಯವಾದಾಗಲೆಲ್ಲ ಸ್ಕಾಟ್‌ನ ಬಳಿಯೇ ಇದ್ದುಕೊಂಡು ನಡೆಯತೊಡಗಿ ದಳು. ತನ್ನ ವೃತ್ತಾಂತ ಹೇಳಿದಳು. ಹಿಂದೆ ಯುದ್ಧದಲ್ಲಿ ಸೆರೆಸಿಕ್ಕ ಜರ್ಮನ್ ಸೈನಿಕರು ತಮ್ಮ ಹೊಲ ದಲ್ಲಿ ಕೆಲಸ ಮಾಡಲು ಬರುತ್ತಾರೆ ಎಂದು ತಂದೆ ಹೇಳುತ್ತಿದ್ದಾಗ ತನಗೆಷ್ಟು ಭಯವಾಗುತ್ತಿತ್ತೆಂದು ಅವಳು ಸ್ಕಾಟ್‌ನಿಗೆ ಹೇಳಿದಳು.

"ನಮಗೆ ಹೊಲದ ಕೆಲಸಕ್ಕೆ ಜನ ಬೇಕಾಗಿದ್ದರು. ಆದರೆ ಕೆಲಸಕ್ಕೆ ಬಂದಿದ್ದ ಈ ಜನ ನಾಝಿ ಗಳು, ರೊಮೆಲ್ಲನ ಆಫ್ರಿಕಾ ಕಾರ್ಪ್ಸ್‌ನ ಭೀಕರ ಯೋಧರು ಎಂದು ಕೇಳಿದ್ದೆ. ಈ ಜನ ಎಷ್ಟೋ ನಿರಪರಾಧಿಗಳನ್ನು ಹಿಂಸಿಸಿರಬೇಕು. ನನ್ನ ಅಪ್ಪನ ಬಳಿ ಬಂದೂಕಿದೆ ಎಂಬ ಮಾತು ನನಗೆ ಈ ಪರಿ ಸ್ಥಿತಿಯಲ್ಲಿ ಸಂತೋಷಕರವಾಗಿತ್ತು.

"ಆದರೆ ಈ ಜನರನ್ನು ದ್ವೇಷಿಸುವುದು ನನ್ನಿಂದಾಗಲಿಲ್ಲ. ಅವರು ಕಷ್ಟಪಟ್ಟು ದುಡಿಯುವವರು. ಉಲ್ಲಾಸಚಿತ್ತರು ಮತ್ತು ದಯಾ ಸ್ವಭಾವದವರಾಗಿದ್ದರು. ಯುದ್ಧದಿಂದ ದೂರ, ಇಲ್ಲಿ ಈ ಹೊಲ ಕೆಲಸದಲ್ಲಿ ತೊಡಗಿರುವುದು ಅವರಿಗೆ ಹಿತಕರವೆನಿಸಿದಂತಿತ್ತು. ಕೆಲಸ ಮಾಡುತ್ತಿರುವಾಗ ಅವರು ಹಾಡುತ್ತಿದ್ದರು. ಹಿಟ್ಲರ್‌ನ ವರ್ಣಭೇದ ನೀತಿಯ ಗಂಧಗಾಳಿಯೂ ಇಲ್ಲದವರಂತೆ ನೆರೆಹೊರೆಯ ನೀಗ್ರೋಗಳೊಂದಿಗೆ ವರ್ತಿಸುತ್ತಿದ್ದರು.

"ಯುದ್ಧ ಮುಗಿದ ಬಳಿಕ ನನಗೆ ಆಶ್ಚರ್ಯಾಘಾತವಾಗಿ ಹೋಯಿತು. ಜರ್ಮನ್ನರೇನೂ ಕೆಟ್ಟವ ರಲ್ಲ, ನಿಜವಾದ ಕೆಟ್ಟವರೆಂದರೆ ರಶಿಯನ್ನರು, ಅವರನ್ನು ದ್ವೇಷಿಸಬೇಕು ಎಂದು ನಮ್ಮ ಜನ ಅನ್ನ ತೊಡಗಿದ್ದರು. ನಾನೆಂದೂ ರಶಿಯನ್ನರನ್ನು ಕಂಡಿರಲಿಲ್ಲ. ಈ ಮಾತು, ಈ ದ್ವೇಷ ಭಾವನೆ ನನ್ನಂಥ ಬಾಲಿಕೆಗೆ ಮಹಾ ಒಗಟಾಗಿಬಿಟ್ಟಿತು" ಎಂದು ಬೀ ಸ್ಕಾಟ್‌ನಿಗೆ ತನ್ನ ಬಗ್ಗೆ ಹೇಳುತ್ತಾ ತಿಳಿಸಿದಳು.

ಈ ಶಾಂತಿವಾದಿಗಳು ಲಾಸ್ ಏಂಜಲ್ಸ್ ನಗರದ ಹದನ್ನು ತಲುಪಿದಾಗ ನೂರಾರು ಜನರು ಅವರನ್ನು ಸ್ವಾಗತಿಸಿ ಹಾಡುತ್ತ ಜಯಘೋಷ ಮಾಡುತ್ತ ಅವರನ್ನು ಒಂದು ಸಭಾಮಂದಿರಕ್ಕೆ ಕರೆದೊಯ್ದರು. ಶಾಂತಿವಾದಿಗಳು ಅಲ್ಲಿ 2000 ಜನರ ಸಭೆಯಲ್ಲಿ ಮಾತನಾಡಿದರು. ಸಭೆ ಮುಗಿದ ಮೇಲೆ ಜನರ ಇನ್ನೊಂದು ಗುಂಪು ಅವರೊಂದಿಗೆ 15 ಮೈಲುಗಳವರೆಗೆ ನಡೆಯುತ್ತ ಹೋಗಿ ಸಾನ್ ಬರ್ನಾರ್ಡಿನೋದ ರಸ್ತೆಯವರೆಗೆ ಅವರನ್ನು ಮುಟ್ಟಿಸಿ ಬಂದಿತು.

ಆದರೆ ಈಶಾನ್ಯ ದಿಕ್ಕಿನ ಪ್ರದೇಶದಲ್ಲಿ ಶಾಂತಿ ವಾದಿಗಳು ಕಾಲಿಟ್ಟೊಡನೆ ಜನರ ವಿರೋಧ ಹೆಚ್ಚೆಚ್ಚಾಗಿ ಕಂಡು ಬರತೊಡಗಿತು. "ಅದರಲ್ಲಿ ಅವರ ತಪ್ಪೇನಿರಲಿಲ್ಲ. ಅವರೆಲ್ಲ ತಮ್ಮ ಜೀವನ ಕ್ಕಾಗಿ ಶಸ್ತ್ರಾಸ್ತ್ರ ತಯಾರಿಕೆ ಕಾರಖಾನೆಗಳಲ್ಲಿ ದುಡಿಯುವವರಾಗಿದ್ದರು" ಎಂದು ಬ್ರಾಡ್‌ಫೋರ್ಡ್ ಲಿಟ್ಲ್ ಈ ಸಂಬಂಧದಲ್ಲಿ ಹೇಳುತ್ತಾನೆ.

ಒಂದು ಸಾರಿಯಲ್ಲ ಚರ್ಚಿನವರು ಮೊದಲು ಕೊಡಮಾಡಿದ್ದ ಆತಿಥ್ಯವನ್ನು ಆ ಮೇಲೆ ಹಿಂದಕ್ಕೆ

ಸಿದ್ದರಿಂದ ಈ ಶಾಂತಿವಾದಿ ಪಾದಯಾತ್ರಿಕರು ಮರುಭೂಮಿಯಲ್ಲಿ ರಾತ್ರಿಯನ್ನು ಕಳೆಯಬೇಕಾಗಿ ಬಂತು. ಆ ರಾತ್ರಿಯನ್ನು ಬೀ ಮತ್ತು ಸ್ಕಾಟ್ ಅನೇಕಾನೇಕ ವಿಷಯಗಳ ಬಗ್ಗೆ ಮಾತನಾಡುತ್ತ ಕಳೆದರು.

ಪಾದಯಾತ್ರಾ ಪಥಕ ಅರಿಝೋನಾದ ಫಿನಿಕ್ಸ್‌ನ್ನು ಸಮೀಪಿಸುತ್ತಿದ್ದಂತೆ ಸಂಕಟದ ಲಕ್ಷಣಗಳು ಕಾಣಿಸಿದವು. ಅರಿಝೋನಾ ಯೂನಿವರ್ಸಿಟಿಯ ಕ್ಯಾಂಪಸ್‌ನಲ್ಲಿ ನಡೆಯಲಿದ್ದ ಇವರ ಸಭೆಯನ್ನು ನಡೆಯಗೊಡದಂತೆ ಮಾಡಲು ಕೆಲ ಜನ ಪ್ರತಿಜ್ಞೆ ಮಾಡಿದ್ದಾರೆಂದು ಕೇಳಿಬಂತು.

ಆಗ ಲಿಟ್ಲ್ ತಮ್ಮವರ ಒಂದು ಸಭೆ ಸೇರಿಸಿ ಈ ಮಾತನ್ನುತಿಳಿಸಿ "ಏನು ಮಾಡೋಣ? ಊರನ್ನು ಸುತ್ತುಹಾಕಿ ಹೊರಗಿಂದ ಹೊರಗೇ ಹೋಗೋಣವೇ?" ಎಂದು ಕೇಳಿದ. ಪಥಕದ ಜನ, "ಊಹುಂ, ಊರೊಳಗಿಂದಲೇ ಹೋಗೋಣ", ಎಂದರು. "ಎಂಥ ಕಠಿಣ ಪ್ರಸಂಗವೇ ಬರಲಿ, ಯಾವಾಗಲೂ ಅಹಿಂಸಾವಾದಿಯಾಗೇ ಇರುತ್ತೇನೆ" ಎಂದು ಅವರೆಲ್ಲ ಪ್ರತಿಜ್ಞಾಪತ್ರಕ್ಕೆ ಅಂಕಿತ ಹಾಕಿದರು. ಆದರೆ ಅವರಲ್ಲಿ ಹೆಚ್ಚಿನವರಿಗೆ ಬಲಪ್ರಯೋಗವನ್ನು ಶಾಂತವಾಗಿ ವಿರೋಧಿಸಿ ಅನುಭವವಿರಲಿಲ್ಲ.

ಇಲ್ಲಿಯ ಅನುಭವವನ್ನು ಕುರಿತು ಬೀ ಬರ್ನೆಟ್ ಹೇಳುತ್ತಾಳೆ: "ನಾವು ವಿಶ್ವವಿದ್ಯಾಲಯ ಕ್ಯಾಂಪಸ್ಸನ್ನು ಸಮೀಪಿಸುತ್ತಿದ್ದಂತೆ ಅಲ್ಲೊಂದು ಮೂಲೆಯಲ್ಲಿ 100-150 ಜನ ನಿಂತದ್ದನ್ನು ಕಂಡೆ. ಅವರಲ್ಲಿ ಹೆಚ್ಚಿನವರು ಕಾಲೇಜು ವಿದ್ಯಾರ್ಥಿಗಳಂತೆ ಕಂಡರೂ ಕೆಲವರು ಪುಂಡರಂತೆ ತೋರುತ್ತಿದ್ದರು. ನಮ್ಮನ್ನು ನಮ್ಮ ಘೋಷಣಾ ಪತ್ರಿಕೆಗಳನ್ನೂ ಕಂಡೊಡನೆ ಅವರು 'ಹೋ' ಎಂದು ಕೂಗಿದರು. ಅವರ ಬಳಿಯೂ ಘೋಷಣಾಪತ್ರಿಕೆಗಳಿದ್ದವು. ಅವುಗಳಲ್ಲಿ 'ಯುದ್ಧ! ಶತ್ರುವನ್ನು ನಿರ್ನಾಮಮಾಡಿರಿ;' 'ಕ್ರುಶಿ-ನಿನ್ನ ಮೇಲೊಂದು ಬಾಂಬೆಸೆಯುವ ಕಾಲ ಬಂದಿದೆ!' 'ಮೊದಲಿನ ಏಟು ನಮ್ಮದೇ ಆಗಲಿ' ಎಂದು ಮುಂತಾಗಿ ಬರೆದಿತ್ತು.

"ನಾವು ಪೊಲೀಸರ ಸಹಾಯ ಯಾಚಿಸಬಾರದೆಂದು ನಿರ್ಧರಿಸಿದ್ದೆವು. ರಸ್ತೆಯಲ್ಲೆಲ್ಲ ಈ ವಿರೋಧಿ ಜನ ತುಂಬಿ ಹೋಗಿದ್ದರು. ನಮಗೆ ರಸ್ತೆ ಬಿಟ್ಟುಕೊಡಬಾರದೆಂದು ಅವರು ನಿರ್ಧರಿಸಿರುವುದು ಸ್ಪಷ್ಟವಾಗಿತ್ತು. ಬ್ರಾಡ್ ಮತ್ತು ಸ್ಕಾಟ್ ನಮ್ಮೆಲ್ಲರ ಮುಂದೆ ಇದ್ದುಕೊಂಡು ಆ ಜನರತ್ತಲೇ ನಡೆದರು. ನಾನು ಅಂಜಿಕೆಯಿಂದ ತತ್ತರಿಸಿಹೋಗಿದ್ದರೂ ಅವರನ್ನು ಕೂಡಿಕೊಳ್ಳಲು ಓಡಿದೆ. ಸ್ಕಾಟ್‌ನಿಗೆ ಏನಾದರೂ ಆದಲ್ಲಿ ನಾನವನ ಬಳಿ ಇರಬೇಕೆಂಬುದೇ ನನ್ನ ಬಯಕೆಯಾಗಿತ್ತು".

"ಒಬ್ಬಾತ ಅವರಿಬ್ಬರ ಹಾದಿಯನ್ನು ಅಡ್ಡಗಟ್ಟಿ 'ಎಲ್ಲಿಗೆ ಹೋಗುತ್ತಿದ್ದೀರಿ?' ಎಂದು ಕೇಳಿದ. ಬ್ರಾಡ್ ಲಿಟ್ಲ್ ಮಧುರ ಸ್ವರದಲ್ಲಿ, 'ನಾವು ಅರಿಝೋನಾ ವಿಶ್ವವಿದ್ಯಾಲಯದ ಜಿನ್ನಹದ ಮೇರೆಗೆ ವಿದ್ಯಾರ್ಥಿಗಳೆದುರು ಭಾಷಣ ಮಾಡಲು ಹೋಗುತ್ತಿದ್ದೇವೆ'. ಎಂದು ತಮಗೆ ಬಂದಿದ್ದ ಆಮಂತ್ರಣ ಪತ್ರಿಕೆಯನ್ನು ತೋರಿಸಿದ. ಆ ಮನುಷ್ಯ ಅದನ್ನು ಕಂಡು ತುಸು ಅನುಮಾನಕ್ಕೆ ಬಿದ್ದ. 'ನಾವು ಬರುವುದೇ ತಡವಾಗಿಹೋಗಿದೆ. ಬೇಗ ಹೋಗಬೇಕು' ಎಂದು ಬ್ರಾಡ್ ಮೆಲ್ಲಗೆ ಆ ಮನುಷ್ಯನನ್ನು ಬದಿಗೆ ಸರಿಸಿ ತನ್ನ ಪಥಕವನ್ನು ಆ ವಿರೋಧಕರ ಗುಂಪಿನ ನಡುವಿನಿಂದ ಕರೆದೊಯ್ದ".

"ಕ್ಯಾಂಪಸ್‌ನಲ್ಲಿ ನಡೆದ ನಾಲ್ಕು ತಾಸಿನ ಸಭೆಯಲ್ಲಿ ಗದ್ದಲವೋ ಗದ್ದಲವಾಯ್ತು. ವಿದ್ಯಾರ್ಥಿಗಳು ಕೂಗಿದರು: 'ದ್ರೋಹಿಗಳು'. 'ಹೇಡಿಗಳು' 'ಮಾಸ್ಕೋಕ್ಕೆ ಹೋದವರು ಅಲ್ಲಿಯೇ ಇದ್ದುಬಿಡಿ!"

"ಆದರೆ ಸಭೆ ಮುಗಿದ ಮೇಲೆ ನಾನು ಮತ್ತು ಸ್ಕಾಟ್ ನೆಲ ಉಡುಗತೊಡಗಿದಾಗ ನೆಲದ ಮೇಲೆ ಬಿದ್ದ ಹಸ್ತಪತ್ರಿಕೆಗಳ ಸಂಖ್ಯೆ ತೀರಾ ಕಡಿಮೆ ಇರುವುದು ಕಾಣಿಸಿತು. ಇದೊಂದು ಒಳ್ಳೆಯ ಲಕ್ಷಣವಾಗಿತ್ತು. ನೀವು ಹೇಳಿದ್ದು ಮನಸ್ಸಿಗೆ ಬಾರದೇಹೋದಲ್ಲಿ ನಿಮ್ಮ ಹಸ್ತಪತ್ರಿಕೆಗಳನ್ನು ಜನ ನಿಷ್ಪ್ರಯೋಜಕವೆಂದು ಕಾಲ ಕೆಳಗೆಸೆದುಬಿಡುತ್ತಾರೆ".

ಫೀನಿಕ್ಸ್‌ನಲ್ಲಿ ವಿಶ್ವವಿದ್ಯಾಲಯದ ಇಂಗ್ಲೀಷ್ ಪ್ರೊಫೆಸರ್ ಜಾನ್ ಮತ್ತು ಅವರ ಪತ್ನಿ ಬಾರ್ಬರಾ ಬೀಚರ್ ಈ ಪಾದಯಾತ್ರಾಪಥಕವನ್ನು ಕೂಡಿಕೊಂಡರು. ನ್ಯೂ ಮೆಕ್ಸಿಕೋದ ರೋಸೆಲ್‌ನಲ್ಲಿ ಈ ಪಥಕ ವಾಕರ್ ವಿಮಾನ ಪಡೆಯ ಠಾಣ್ಯದ ಎದುರು ಪಿಕೆಟಿಂಗ್ ಮಾಡಿದ್ದ

ರಿಂದ ಮಿಲಿಟರಿ ಅಧಿಕಾರಿಗಳು ಅವರಿಗೆ ಆಶ್ರಯವೀಯದಿರಲು ಜನರನ್ನು ಕೇಳಿಕೊಂಡಿದ್ದರು. ಚರ್ಚುಗಳಲ್ಲಿ ಸಹ ಈ ಯಾತ್ರಿಕರಿಗೆ ಆಶ್ರಯ ಸಿಗಲಿಲ್ಲ. ಸಾಲ್ವೇಶನ್ ಆರ್ಮಿಯವರು ಮಾತ್ರ ಆ ಧೈರ್ಯ ತೋರಿಸಿದ್ದರು. ಒಂದು ಊರಲ್ಲಿ ಅಲ್ಲಿಯ ಜೈಲಿನಲ್ಲಿ ಪಾದಯಾತ್ರಿಕರು ರಾತ್ರಿಯನ್ನು ಕಳೆಯಬೇಕಾಯಿತು.

"ಎಂಥ ಹುಚ್ಚುತನ ಇದು ಎಂದು ನನಗನ್ನಿಸಿತು. ರಟ್ಟುಗಳ ಮೇಲೆ ಶಾಂತಿಗಾಗಿ ನಾಲ್ಕು ವಾಕ್ಯಗಳನ್ನು ಬರೆದುಕೊಂಡು ಅಡ್ಡಾಡುವ ನಮ್ಮಲ್ಲಿ ಇವರೇನು ಅಪಾಯ ಕಂಡುಕೊಂಡರೋ ತಿಳಿಯದು", ಎಂದು ಬೀ ಬರ್ನೆಟ್ ಹೇಳಿದ್ದಾಳೆ.

ಟೆಕ್ಸಾಸ್‌ನಲ್ಲಿ ಈ ಶಾಂತಿವಾದಿ ಪಾದಯಾತ್ರಾಪಥಕಕ್ಕೆ ಸ್ವಾಗತವೂ ಸಿಕ್ಕಿತು; ವಿರೋಧವೂ ಎದುರಾಯಿತು. ಎಲ್‌ಪಾಸೋದಲ್ಲಿ ಸೈನಿಕರ ಭರತಿ ಕೇಂದ್ರದ ಎದುರು ಇವರು ಪಿಕೆಟಿಂಗ್ ನಡೆಸಿದಾಗ ನೌಕಾದಳದಿಂದ ನಿವೃತ್ತನಾದವನೊಬ್ಬ ಇವರಲ್ಲಿಬ್ಬರನ್ನು ಹಿಡಿದೆಳೆದು ನೆಲಕ್ಕೆ ಕೆಡವಿದನು. ಅವರು ಎದ್ದುನಿಂತು ಪಿಕೆಟಿಂಗ್ ಆರಂಭಿಸಿದಾಗ ಮತ್ತೊಮ್ಮೆ ಆತ ಅವರನ್ನು ನೆಲಕ್ಕೆ ಕೆಡವಿ ಒದ್ದನು.

ಟೆಲಿವಿಜನ್ ಸುದ್ದಿಗಾರರು ಈ ದೃಶ್ಯವನ್ನು ಚಿತ್ರಿಸಿಕೊಂಡರು. ಅಂದು ರಾತ್ರಿ ಸಾಮಾನ್ಯವಾಗಿ ಇಂಥ ಸಭೆಗೆ ಎಂದೂ ಬಾರದ ಜನರು ಬಂದು ಇವರಿಗೆ ಬೆಂಬಲವಿತ್ತರು.

ಬ್ಯಾಪ್ಟಿಸ್ಟ್ ಚರ್ಚೊಂದು ಇವರಿಗೆ ಆತಿಥ್ಯ ನೀಡಿತು. ಅಂದು ರಾತ್ರಿ ಸ್ಕಾಟ್ ಮತ್ತು ಬೀ ಅಡಿಗೆಮನೆಯಲ್ಲಿ ಕಾಫಿಕುಡಿಯುತ್ತ ಕುಳಿತಿದ್ದರು. ಯಾರೊ ಒಬ್ಬರು ಅವರಿಗೆ ಒಂದು ಸಂಗೀತ ಕಛೇರಿಯ ಟಿಕೇಟುಗಳನ್ನು ಕೊಟ್ಟಿದ್ದರು. ಆದರೆ ಸ್ಕಾಟ್ "ನನ್ನ ಬಳಿಯಲ್ಲಿ ಸರಿಯಾದ ಉಡುಪಿಲ್ಲ" ಎಂದು ಹೋಗಲೊಪ್ಪಲಿಲ್ಲ.

"ಏನು ಇಸ್ತ್ರಿ ಶರ್ಟ್ ತೊಟ್ಟಾಗ ಸಂಗೀತ ಹೆಚ್ಚು ಮಧುರವಾಗುವುದೇನು?" ಬೀ ಮೂದಲಿಸಿದಳು.

"ನಾನು ಪರಂಪರಾಪ್ರಿಯ. ನಾನು ಬೆಳೆದದ್ದೇ ಅಂಥ ವಾತಾವರಣದಲ್ಲಿ. ನೀನು ಇದನ್ನೆಲ್ಲ ರೂಢಿಸಿಕೊಳ್ಳುವುದುತ್ತಮ".

"ನಾನು ನಿನ್ನನ್ನು ತುಂಬಾ ಪ್ರೀತಿಸುತ್ತೇನೆ. ನಿನಗೆ ಗೊತ್ತಿದೆಯೆ?"

ಮುಂದೆ ಕೆಲ ನಿಮಿಷ ಇಬ್ಬರೂ ಮೌನವಾಗಿದ್ದರು. ಬಳಿಕ ಬೀ ಎದ್ದುನಿಂತು, "ನಾನು ಈ ಪಥಕವನ್ನು ಬಿಟ್ಟು ಹೋಗುವುದೇ ಒಳಿತು. ನನ್ನಿಂದೇನೂ ಅಂಥ ವಿಶೇಷ ಪ್ರಯೋಜನವಿಲ್ಲ. ಮೊದಲೇ ಇತರ ಸಮಸ್ಯೆಗಳು ಸಾಕಷ್ಟಿರುವ ಬ್ರಾಡ್‌ನ ಮೇಲೆ ಈ ಸಮಸ್ಯೆಯನ್ನು ಹೇರುವುದು ಬೇಡ". ಎಂದಳು.

"ಇನ್ನೂ ಸ್ವಲ್ಪ ತಡೆಯಲ್ಲ. ಇನ್ನು ಐದಾರು ತಿಂಗಳಲ್ಲಿ ನಾವು ಪ್ಯಾರಿಸ್ ತಲುಪುವೆವು. ಅಷ್ಟರಲ್ಲಿ ನಮ್ಮಿಬ್ಬರ ನಿಶ್ಚಿತಾಭಿಪ್ರಾಯ ತಿಳಿದೀತಲ್ಲ," ಸ್ಕಾಟ್ ಹೇಳಿದ.

ಆದರೆ ಪಥಕ ಕನ್ಸಾಸನ್ನು ಮುಟ್ಟಿದಾಗ ಬೀ ಅದರಿಂದ ಹೊರಬಿದ್ದಳು. ಚಿಕಾಗೋದಲ್ಲಿ ಕೆಲಸ ಮಾಡಲು ಮಾಡಿಕೊಂಡ ಕರಾರಿನಿಂದ ಅವಳಿಗೆ ಬಿಡುಗಡೆ ಸಿಕ್ಕಿರಲಿಲ್ಲ. ಅವಳು ವಿಚಿಟಾದಲ್ಲಿ ಸ್ಕಾಟ್‌ನನ್ನು ಬೀಳ್ಕೊಂಡಳು.

"ಮುಂದೆ ಅವನನ್ನೆಂದೂ ಕಾಣುವ ನಿರೀಕ್ಷೆಯನ್ನು ನಾನಿಟ್ಟುಕೊಂಡಿರಲಿಲ್ಲ. ನಮ್ಮನ್ನು ಪ್ರೀತಿಸದವರಲ್ಲಿ ಮೋಹಗೊಳ್ಳುವುದೆಂದರೆ ತುಂಬಾ ತಾಪದಾಯಕವಾದದ್ದು. ನನ್ನಲ್ಲಿ ಸ್ಕಾಟನಿಗೆ ಆಕರ್ಷಣೆ ಇದ್ದಿತಾದರೂ ಅದು ಸಾಕಷ್ಟು ಬಲಯುತವಾಗಿಲ್ಲವೆಂದು ನನಗೆ ತಿಳಿಬಿತ್ತು." ಬೀ ತನ್ನ ಆಗಿನ ಮನದಳಲನ್ನು ತೋಡಿಕೊಳ್ಳುವಾಗ ಹೇಳುತ್ತಾಳೆ.

ಆದರೆ ಮುಂದೆ ಮೂರು ವಾರಗಳ ನಂತರ ಪಥಕ ಚಿಕಾಗೋಕ್ಕೆ ಬಂದಾಗ ಸ್ಕಾಟ್ ಅವಳನ್ನು ಹುಡುಕಿಕೊಂಡು ಬಂದ. "ಬೀ, ನೀನಿಲ್ಲದಿದ್ದರೆ ನನ್ನ ಜೀವನ ಇಷ್ಟು ನೀರಸವಾಗುತ್ತದೆಂಬ ಕಲ್ಪನೆ ನನಗಿರಲಿಲ್ಲ. ನಾನು ನಿನ್ನನ್ನು ಪ್ರೀತಿಸುತ್ತೇನೆ. ನನ್ನನ್ನು ಲಗ್ನವಾಗು." ಎಂದನಾತ.

ತಾನು ಅವಸರದಿಂದಲೆ 'ಹೂಂ' ಎಂದೇ ಎನ್ನುತ್ತಾಳೆ ಬೀ.

ಅವರ ಮದುವೆಯ ನಿರ್ಧಾರದಿಂದ ಪಾದಯಾತ್ರಾ ಪಥಕದವರಲ್ಲಿ ಒಂದಿಷ್ಟು ಗಡಿಬಿಡಿ ಎದ್ದಿತು. ಇದರಿಂದ ಈ ಯಾತ್ರೆ ಒಂದು ಪ್ರಣಯದಾಟದ ಕೂಟ ಎಂಬ ಭಾವನೆ ಜನರಲ್ಲಿ ಉಂಟಾದೀತೆಂದು ಅವರಲ್ಲೆಷ್ಟೋ ಜನ ಭಾವಿಸಿದರು.

"ಅಲ್ಲಾ, ಜಗತ್ತಿಗೆ ಶಾಂತಿ, ಪ್ರೇಮ, ನಂಬಿಕೆಗಳನ್ನು ಬಿಂಬಿಸ ಹೊರಟ ಜನರಿಗೆ ನಮ್ಮಿಬ್ಬರ ಪ್ರೇಮದ ವಿಚಾರ ಇಷ್ಟು ತಲೆಕೆಡಿಸಬೇಕೆ? ಪ್ರೇಮವು ಜಗತ್ತಿಗೆ ಒಳ್ಳೆಯದಾದರೆ, ಶಾಂತಿವಾದಿ ಪಾದಯಾತ್ರಿಕರಿಗೆ ಮಾತ್ರ ಹೇಗೆ ಕೆಡುಕಾದೀತು?" ಬೀ ಯೋಚಿಸಿದಳು.

ಬ್ರಾಡ್ ಲಿಟ್ಲ್ ಪಾದಯಾತ್ರಿಕರ ಮನವನ್ನು ಒಲಿಸಿದನು. ಅವನಿಗೂ ತಮ್ಮ ಯಾತ್ರೆಯ ಕಾಲದಲ್ಲಿ ಪ್ರೇಮ ಪ್ರಕರಣ ನಡೆಯುವುದು ಬೇಕಾಗಿರಲಿಲ್ಲ. ನಿಜ. "ಈ ಪಾದಯಾತ್ರೆಯ ವಿಚಾರ ಮನದಲ್ಲಿ ಮೂಡಿದಾಗಲೇ ಯಾತ್ರಿಕರೆಲ್ಲರೂ ಗಂಡಸರೇ ಆಗಿರಬೇಕು ಎಂದು ನಿಶ್ಚಯಿಸಿದ್ದೆ. ಸ್ತ್ರೀ ಪುರುಷರಿಗೆ ಬೇರೆ ಬೇರೆ ಮಲಗುವ ವ್ಯವಸ್ಥೆ ಮಾಡುವುದೇ ಮುಂತಾದ ಕಾರ್ಯಗಳು ಯಾತ್ರೆಯ ಕಾಲದಲ್ಲಿ ಸುಗಮವಾಗಿರಲಿಲ್ಲ. ಯಾತ್ರೆಯ ಕಾಲದಲ್ಲಿ ದೈಹಿಕ ಕಷ್ಟವಂತೂ ಸರಿಯೇ. ಜೊತೆಗೆ ನಾವು ಹಿಂಸಾಚಾರಕ್ಕೂ ಒಳಗಾಗುವ ಸಂಭವವಿತ್ತು.

"ಆದರೆ ಯಾತ್ರೆಯಲ್ಲಿ ಸೇರಿಕೊಳ್ಳಲಿಚ್ಛಿಸಿದ ಸ್ತ್ರೀಯರ ಸಂಖ್ಯೆ ದೊಡ್ಡದಿತ್ತು. ನಿರುಪಾಯನಾಗಿ ನಾನು ಕೆಲವರನ್ನು ಸೇರಿಸಿಕೊಳ್ಳಲೇಬೇಕಾಯಿತು. ಹಾಗೆ ನೋಡಿದರೆ ಶಾಂತಿಯ ಮಾತುಗಳನ್ನು ಗಂಡಸರಿಗಿಂತಲೂ ಎಷ್ಟೋ ಮೊದಲು ಆಡಿದವರು ಸ್ತ್ರೀಯರೇ ಅಲ್ಲವೆ? ಯಾತ್ರೆಯ ಕಾಲದಲ್ಲಿ ಖಂಡಿತಾ ಪ್ರೇಮ ಪ್ರಣಯಾದಿಗಳಿಗೆ ಅವಕಾಶವಿರಬಾರದು ಎಂದು ಯೋಚಿಸಿದ್ದೆನಾದರೂ ಬೀ ಮತ್ತು ಸ್ಕಾಟ್‌ರ ಪ್ರೇಮವು ನಿಜವಾದದ್ದು, ಪವಿತ್ರವಾದದ್ದು ಎಂದು ಕಂಡಕೊಂಡೆನಾದ್ದರಿಂದ ಚಿಕೊಗೋನಲ್ಲಿ ನನ್ನ ತಂದೆ ಅವರ ಲಗ್ನ ನೆರವೇರಿಸುವರು ಎಂದು ಅವರಿಗೆ ತಿಳಿಸಿದೆ. ನನ್ನ ತಂದೆ ಪಾದ್ರಿ" ಎಂದು ಬ್ರಾಡ್ ಲಿಟ್ಲ್ ಹೇಳುತ್ತಾನೆ.

ಯಾತ್ರಿಕರು ವಾಶಿಂಗ್ಟನ್ನಿಗೆ ಪ್ರಯಾಣ ಬೆಳೆಸಿದರು. ಹಾದಿಯಲ್ಲಿ ವಿಶೇಷವೇನೂ ಘಟಿಸಲಿಲ್ಲ. ಈಗ ಅಧ್ಯಕ್ಷ ಕೆನ್ನೆಡಿಯವರ ಶ್ವೇತ ಭವನದ ಸಹಾಯಕರಲ್ಲೊಬ್ಬರೂ ಹಾರ್ವರ್ಡ್ ಇತಿಹಾಸ ಕಾರರೂ ಆದ ಆರ್ಥರ್ ಸ್ಕೆಸ್ಲಿಂಗರ್ ಜೂನಿಯರ್‌ರೊಂದಿಗೆ ಈ ಶಾಂತಿವಾದಿಗಳು ತಮ್ಮ ವಿಷಯ ವನ್ನು ಚರ್ಚಿಸಿದರು. ಈ ಯಾತ್ರೆಯ ಸಾರ್ಥಕತೆಯನ್ನೇ ಪ್ರೊಫೆಸರ್ ಸ್ಕೆಸ್ಲಿಂಗರ್‌ರು ಪ್ರಶ್ನಿಸಿದಾಗ ಬ್ರಾಡ್ ಲಿಟ್ಲ್ ಹೇಳಿದ:

"ಏಕಪಕ್ಷೀಯ ನಿಶ್ಶಸ್ತ್ರೀಕರಣವೆಂಬುದು ಗಂಡಾಂತರಕಾರಿ ಎಂದು ನಮಗೆ ಗೊತ್ತಿದೆ. ಆದರೆ ಯಾವನೊಬ್ಬ ಅಂಜುಬುರುಕನಾಗಲಿ ಶಸ್ತ್ರಪ್ರಯೋಗದ ಲವಲವಿಕೆಯುಳ್ಳ ಸೈನಿಕನಾಗಲಿ ಇಲ್ಲವೇ ಮುತ್ಸದ್ದಿಯಾಗಲಿ ಒಂದೇ ಒಂದು ಗುಂಡಿಯನ್ನೊತ್ತಿ ಇಡೀ ಜಗತ್ತನ್ನೇ ನಾಶಮಾಡಬಲ್ಲ ಎಂಬುದು ಸ್ಪಷ್ಟವಿರುವಾಗ ಇದಕ್ಕೊಂದು ಮೂಲಭೂತ ಉತ್ತರವೇ ಬೇಕಲ್ಲವೆ? ಸಂಧಾನಕ್ಕಾಗಿ ಕಾಯ್ದೆ, ಕರಾರುಗಳನ್ನು ಹಾಕದೇನೇ ಶಸ್ತ್ರಾಸ್ತ್ರಗಳ ತ್ಯಾಗದ ವಿಚಾರವನ್ನು ಮಾಡುವಂತೆ ಜನರನ್ನು ಪ್ರೇರೇಪಿಸಲು ಪ್ರಯತ್ನ ಮಾಡಲೆಂದು ನಾವು ಮಾಸ್ಕೋದವರೆಗೆ ಪಾದಯಾತ್ರೆ ಕೈಕೊಂಡಿದ್ದೇವೆ. ನಾವೆಲ್ಲ ಒಂದು ಸ್ಫೋಟದಿಂದ ಛಿನ್ನವಿಚ್ಛಿನ್ನರಾಗಿ ಆಕಾಶದಲ್ಲಿ ತೂರಲ್ಪಡುವ ಮೊದಲೇ ಶಸ್ತ್ರಾಸ್ತ್ರ ಸ್ಪರ್ಧೆ ನಿಲ್ಲಬೇಕು".

ಶಾಂತಿ ಪಥಕ ನ್ಯೂಯೋರ್ಕಿಗೆ ನಡೆದುಹೋಗಿ ಅಲ್ಲಿ ಸಂಯುಕ್ತ ರಾಷ್ಟ್ರ ಸಂಘದೆದುರು ಚಿಕ್ಕ ಮತಪ್ರದರ್ಶನವನ್ನು ನಡೆಸಿ ಅಲ್ಲಿಂದ ಲಂಡನ್ನಿಗೆ ವಿಮಾನದಲ್ಲಿ ಪ್ರಯಾಣ ಮಾಡಿತು.

"ಶಾಂತಿವಾದಿಗಳು ಮೋಸಹೋಗುವಂಥ ದೇಶ ಇಂಗ್ಲೆಂಡ್. ಅಲ್ಲಿ ಶಾಂತಿ ಚಳವಳಿ ಬಲ ವಾಗಿದೆ. ನಿಶ್ಶಸ್ತ್ರೀಕರಣದಲ್ಲೂ ಅಲ್ಲಿ ಆಸ್ಥೆ ಇದೆ. ಅಲ್ಲಿ ಸಿಗುವ ಪ್ರೋತ್ಸಾಹದಿಂದ ಗಗನಕ್ಕೇರಿ ದಂತಾಗುತ್ತದೆ. ನಾವೆಂದರೆ ಬಹಳ ದೊಡ್ಡವರು ಎಂಬ ಭಾವನೆ ಬರುತ್ತದೆ." ಸ್ಕಾಟ್ ಇಂಗ್ಲೆಂಡಿನ ಬಗ್ಗೆ ನುಡಿಯುತ್ತಾ ಹೇಳುತ್ತಾನೆ.

ಲಂಡನ್ ವಿಮಾನ ನಿಲ್ದಾಣದಲ್ಲಿ ಈ ಶಾಂತಿಪಾದಯಾತ್ರಿಕರನ್ನು 4000 ಜನ ಎದುರ್ಗೊಂಡರು. ಮಳೆ ಜೋರಾಗಿ ಬೀಳುತ್ತಿದ್ದರೂ ಲೆಕ್ಕಿಸದೆ ಅವರ ಜೊತೆಯಲ್ಲಿ ಟ್ರಾಫಲ್ಗರ್ ಚೌಕಿನವರೆಗೆ ನಡೆದರು. ನಾಲ್ಕು ದಿನಗಳ ವರೆಗೆ ಸಭೆಗಳನ್ನು ಸೇರಿಸಿ ಭಾಷಣಗಳನ್ನು ಮಾಡಿದ ಈ ಶಾಂತಿ ವಾದಿಗಳು ಇಂಗ್ಲೀಷ್ ಕಡಲ್ಗಾಲುವೆ ದಾಟಿ ಫ್ರಾನ್ಸಿನ ದಂಡೆಯತ್ತ ನಡೆದರು.

ಫ್ರೆಂಚ್ ಸರಕಾರ ಇವರಿಗೆ ಪ್ರವೇಶ ಪತ್ರವನ್ನು ಕೊಡಲು ನಿರಾಕರಿಸಿತ್ತು. ಇವರ ಪಾದ ಯಾತ್ರೆಯ ಮಾರ್ಗದಲ್ಲಿದ್ದ ದೇಶಗಳಲ್ಲಿ ಫ್ರಾನ್ಸ್ ಒಂದೇ ಇವರಿಗೆ 'ನ'ಕಾರವಿತ್ತ ದೇಶವಾಗಿತ್ತು.

ಆದರೆ ಶಾಂತಿವಾದಿಗಳು ಕೈಚೆಲ್ಲಿ ಕೂಡ್ರಲಿಲ್ಲ. "ನಿರಾಕರಣೆಗೆ ಯಾವ ಕಾರಣವನ್ನೂ ಫ್ರೆಂಚ್ ಸರಕಾರ ಕೊಡಲಿಲ್ಲ. ಆದರೆ ಫ್ರೆಂಚ್ ಜನರೆದುರು ನಾವು ಮಾತನಾಡುವುದು ನಮ್ಮ ಕರ್ತವ್ಯ ವೆಂದು ಭಾವಿಸಿದೆವು. ಲೆ ಹಾವ್ರೆಗೆ ಹೊರಟ ದೋಣಿಯೊಂದನ್ನು ಏರಿದೆವು. ನಾವು ತೀರವನ್ನು ತಲುಪಿದಾಗ ಫ್ರೆಂಚ್ ಪೊಲೀಸರು ನಮ್ಮನ್ನು ಇಳಿಯಗೊಡಲಿಲ್ಲ. ಹೀಗಾದೀತೆಂಬ ಕಲ್ಪನೆ ನಮಗಿತ್ತು. ಅಲ್ಲಿ ದಂಡೆಯ ಮೇಲೆ ನೆರೆದಿದ್ದ ಫ್ರೆಂಚ್ ಶಾಂತಿವಾದಿಗಳತ್ತ ನಾವು ಕೈ ಬೀಸಿದೆವು. ಅವರ ಕೈಯಲ್ಲಿ 'ಬಾಂಬನ್ನು ಪ್ರತಿಬಂಧಿಸಿರಿ' ಎಂಬ ಘೋಷಣೆಯನ್ನು ಬರೆದ ಫಲಕಗಳಿದ್ದವು. ಪೊಲೀಸರು ಅವನ್ನು ಕಸಿದುಕೊಂಡು ಸಮುದ್ರಕ್ಕೆಸೆದರು.

"ನಾವು ದೋಣಿಯಲ್ಲಿ ಆಪ್ತಾಲೋಚನೆ ಮಾಡಿ ಯಾವುದೊಂದು ಬಗೆಯ ಸತ್ಯಾಗ್ರಹದಿಂದ ಪ್ರತಿಭಟನೆ ಸಲ್ಲಿಸಬೇಕೆಂದು ನಿರ್ಧರಿಸಿದೆವು. ಆದರೆ ಹೇಗೆ? ಸತ್ಯಾಗ್ರಹ ಅಹಿಂಸಾತ್ಮಕವೂ ಆಕರ್ಷಕವೂ, ಭವ್ಯವೂ ನಮ್ಮ ಕಾರ್ಯಕ್ಕೆ ನೇರವಾಗಿ ಸಂಬಂಧಪಟ್ಟಿದ್ದೂ ಆಗಿರಬೇಕು. 'ದೋಣಿಯಿಂದ ನೀರಿನಲ್ಲಿ ಧುಮುಕೋಣ' ಎಂದೊಬ್ಬ ಕೂಗಲು ಉಳಿದವರೆಲ್ಲ 'ಭೇಷ್' ಎಂದರು."

ಸ್ಕಾಟ್ ಮತ್ತು ಇನ್ನಿತರ ಹದಿನೈದು ಜನ ಶಾಂತಿ ಯಾತ್ರಿಕರು ನಿಶ್ಶಸ್ತ್ರೀಕರಣದ ಹಸ್ತಪತ್ರಿಕೆಗಳು ತುಂಬಿದ್ದ ವಾಟರ್ ಪ್ರೂಫ್ ಪ್ಲಾಸ್ಟಿಕ್ ಚೀಲಗಳನ್ನು ಹೆಗಲಿಗೆ ಹಾಕಿಕೊಂಡು ನೀರಿನಲ್ಲಿ ಧುಮುಕಿದರು.

ಸ್ಕಾಟ್ ಒಳ್ಳೆಯ ಈಜುಗಾರ ಎಂದು ಗೊತ್ತಿದ್ದರೂ ಬೀಯ ಹೃದಯ ಹೊಡೆದುಕೊಳ್ಳ ತೊಡಗಿತು. ಈ ದೃಶ್ಯದ ಫೋಟೋ ತೆಗೆಯಲು ಅವಳಿಗೆ ಹೇಳಿದ್ದರು. ಆದರೆ ಅವಳ ಕೈಗಳು ನಡುಗುತ್ತಿದ್ದುದರಿಂದ ಒಂದು ಫೋಟೋ ಕೂಡಾ ಸರಿಯಾಗಿ ಬರಲಿಲ್ಲ.

ಶಾಂತಿಯಾಂತ್ರಿಕರು ನೀರಿನಲ್ಲಿ ಹಾರಿಕೊಂಡ ಕೆಲವೇ ನಿಮಿಷಗಳಲ್ಲಿ ಫ್ರೆಂಚ್ ಪೊಲೀಸರ ಮೂರು ವ್ಯಾನುಗಳು, ಒಂದು ಆಂಬ್ಯುಲೆನ್ಸ್ ವ್ಯಾನ್, ಸುದ್ದಿಗಾರರಿಂದ ತುಂಬಿದ ಮೂರು ಕಾರುಗಳು ಬಂದರದ ಧಕ್ಕೆಯ ಬಳಿ ನೆರೆದವು. ಫ್ರೆಂಚ್ ಪೊಲೀಸನೊಬ್ಬ ಶಾಂತಿಯಾತ್ರಿಕರನ್ನುದ್ದೇಶಿಸಿ 'ಫ್ರೆಂಚ್ ಸರಕಾರಕ್ಕೆ ಶರಣಾಗತರಾಗಿರಿ' ಎಂದು ಕೂಗಿದ.

ಶಾಂತಿಯಾತ್ರಿಕರು ಕೈಬೀಸುತ್ತಾ ದಂಡೆಯತ್ತ ಈಜಿ ಬರತೊಡಗಿದರು. ಫ್ರೆಂಚ್ ಪೊಲೀಸ ನೊಬ್ಬ ದೋಣಿಯೊಂದರಲ್ಲಿ ಜಿಗಿದು ಅದರ ಯಂತ್ರವನ್ನು ಆರಂಭಿಸಲು ಯತ್ನಿಸಿದ. ಯಂತ್ರ ಚಾಲೂ ಆಗಲಿಲ್ಲ. ಸ್ಕಾಟ್ ಅಲ್ಲಿಗೆ ಈಸಿಹೋಗಿ ಅವನಿಗೊಂದು ಹಸ್ತ ಪತ್ರಿಕೆ ಕೊಡ [illegible]. ಆ ಹಸ್ತ ಪತ್ರಿಕೆಯ ಬದಲು ಸ್ಕಾಟ್‌ನ ಕೈಯನ್ನೇ ಹಿಡಿಯಲೆತ್ನಿಸಿದ. ಸ್ಕಾಟ್ ದೋಣಿಯ [illegible] ಈಸಿ ಹೋಗಿ ಒಂದು ಹಸ್ತ ಪತ್ರಿಕೆಯನ್ನು ದೋಣಿಯಲ್ಲಿ ಚೆಲ್ಲಿದ. ಇಷ್ಟರಲ್ಲಿ ದಂಡೆಯಲ್ಲಿ ನೂರಾರು ಜನ ಸೇರಿದರು. ನೀರಿನಲ್ಲಿ ಈಜುತ್ತಿದ್ದ ಶಾಂತಿಯಾತ್ರಿಕರೆಲ್ಲ [illegible] ಅನೇಕ ಹಡಗುಗಳ ಮೇಲೆ ಹಸ್ತ ಪತ್ರಿಕೆಗಳನ್ನು ತೂರತೊಡಗಿದರು. "ನಾವು ಶಾಂತಿಗಾಗಿ [illegible] ದ್ದೇವೆ! ಪರಮಾಣು ಶಸ್ತ್ರಗಳನ್ನು ತ್ಯಜಿಸಿ! ಯುದ್ಧಕಾಲ ಮುಗಿದುಹೋಯಿತು."

ಜನ [illegible]

ಒಂದು ಸ್ಕಾಟ್ ನಿಂತಿದ್ದ ಕಟ್ಟೆಗೆ ಡಿಕ್ಕಿ ಹೊಡೆಯಿತು. ಸ್ಕಾಟ್ ನೀರಿನಲ್ಲಿ ಬಿದ್ದ. ಪೊಲೀಸರು ಅವನನ್ನು ಲಾಂಚಿನೊಳಕ್ಕೆ ಜಗ್ಗಿಕೊಂಡರು. ದಂಡೆಗೊಯ್ದು ಪೊಲೀಸ್ ವ್ಯಾನಿನಲ್ಲಿ ಕೂಡಿಸಿದರು. "ನನ್ನ ಕೈತಿರುಪಿ ಒದ್ದ ಪೊಲೀಸನ ಕೆನ್ನೆಗೊಂದು ಬಿಗಿಯಬೇಕು ಎಂದು ನನಗನಿಸಿತು. ಆದರೆ ನಾನು ಅಹಿಂಸಾ ಪ್ರಚಾರಕನಾದ್ದರಿಂದ ಅದು ತರವಲ್ಲ ಎಂದುಕೊಳ್ಳುತ್ತ ಸುಮ್ಮನಾದೆ" ಎನ್ನುತ್ತಾನೆ ಸ್ಕಾಟ್.

ಪೊಲೀಸ್ ಠಾಣೆಯಲ್ಲಿ ಸ್ಕಾಟ್‌ನನ್ನು ಒಂದು ಚಿಕ್ಕ ಕೋಣೆಗೆ ನೂಕಿದರು. ಆಗಲೇ ಆ ಕೋಣೆ ಶಾಂತಿಯಾತ್ರಿಕ ಈಜುಗಾರರಿಂದ ತುಂಬಿತ್ತು. ಎಲ್ಲರೂ ತೊಯ್ದುಹೋಗಿದ್ದರು. ದಣಿದಿದ್ದರು. ಪಥಕದಲ್ಲಿಯ ಒಬ್ಬಳಂತೂ ನೀರಿನಲ್ಲಿ ಒಂದು ತಾಸಿಗಿಂತ ಹೆಚ್ಚು ಹೊತ್ತು ಈಸುತ್ತಿದ್ದಳು. ಅವಳು ಧಕ್ಕೆಗೆ ಬರಲೆತ್ನಿಸಿದಾಗಲೆಲ್ಲ ಪೊಲೀಸರು ಅವಳ ಕೈಗಳ ಮೇಲೆ ಹೊಡೆದು ಓಂದಕ್ಕಟ್ಟಿದ್ದರು. ಕೊನೆಗೆ ಪೊಲೀಸ್ ಲಾಂಚ್ ಅವಳಿದ್ದಲ್ಲಿಗೆ ಹೋಗಿತ್ತು. ಅಧಿಕಾರಿಯೊಬ್ಬ ಅವಳ ಕೂದಲನ್ನು ಹಿಡಿದು ಅವಳನ್ನು ಲಾಂಚಿನೊಳಕ್ಕೆ ಎಳೆದಕೊಂಡಿದ್ದ.

ಆದರೆ ಅವರಾರೂ ಪೊಲೀಸರ ಬಗ್ಗೆ ದ್ವೇಷಭಾವನೆ ತಾಳಲಿಲ್ಲ. ತಿಳಿದೂ ತಿಳಿದೂ ಅವರು ಕಾನೂನುಭಂಗಮಾಡಿದ್ದರು. ಅದರ ಪ್ರಾಯಶ್ಚಿತ್ತ ಭೋಗಿಸಲು ಸಿದ್ಧರಾಗಿದ್ದರು.

ಶಾಂತಿಯಾತ್ರಿಕರು ನೀರಿನಲ್ಲಿ ಹಾರಿಕೊಂಡ ಏಳು ತಾಸುಗಳ ನಂತರ ಅವರನ್ನು ಮತ್ತೆ ಬಂದರಕ್ಕೆ ಕರೆದೊಯ್ದರು. ಅಲ್ಲಿ ದೊಡ್ಡದೊಂದು ಜನರ ಗುಂಪು ಇನ್ನೂ ಇತ್ತು. ಅವರೆಲ್ಲ ದೋಣಿಯಲ್ಲಿದ್ದ ಶಾಂತಿಯಾತ್ರಿಕರತ್ತ ಕೈಬೀಸುತ್ತ ಕೂಗುತ್ತ ನಿಂತಿದ್ದರು. ಪೊಲೀಸ್ ವ್ಯಾನ್ ಆ ಜನರ ನಡುವೆ ಹಾದಿ ಮಾಡಿಕೊಂಡು ಹೋಯಿತು. ಶಾಂತಿಯಾತ್ರಿಕರನ್ನಿಳಿಸಿ ಸ್ಟ್ರೆಚರ್‌ಗಳ ಮೇಲೆ ಹಾಕಿಧಕ್ಕೆಗೆ ಸಾಗಿಸಿದರು.

ಶಾಂತಿಯಾತ್ರಿಕರು ಇಂಗ್ಲಂಡಿನ ಸೌಥಂಪ್ಟನ್ ಬಂದರಕ್ಕೆ ಮರಳಿ ಬಂದಾಗ ಪತ್ರಿಕೆಗಳಲ್ಲಿ ಅವರ ಸಾಹಸ ಕಾರ್ಯದ ವರ್ಣನೆ ಪ್ರಾಮುಖ್ಯವಾಗಿ ಬಂದಿತ್ತು. ಪ್ಯಾರಿಸ್ಸಿನಿಂದ ಫ್ರೆಂಚ್ ಶಾಂತಿ ಪಥಕವೊಂದು ಹೊರಟು ಈ ಅಮೆರಿಕನ್ ಶಾಂತಿಪಾದಯಾತ್ರಿಕರನ್ನು ಬೆಲ್ಜಿಯಂ ಗಡಿಯಲ್ಲಿ ಕೂಡಿಕೊಳ್ಳುವುದು ಎಂಬ ಸುದ್ದಿಯೂ ಪ್ರಕಟವಾಗಿತ್ತು.

ಬೆಲ್ಜಿಯಂ ಗಡಿಗೆ ಅವರು ಮಾರನೇ ದಿನ ಬಂದಾಗ ಬೆಲ್ಜಿಯನ್ ಗುಪ್ತಪೊಲೀಸರು ಅವರ ಮಾರ್ಗದಲ್ಲೆಲ್ಲ ಅವರನ್ನನುಸರಿಸಿ ಅವರಿಗೆ ಸಕಲ ಸೌಕರ್ಯಗಳು ಲಭ್ಯವಾಗುವಂತೆ ಏರ್ಪಾಡು ಮಾಡಿದರು ಎಂಬುದು ತಿಳಿದು ಅವರಿಗೆ ಆಶ್ಚರ್ಯವಾಯಿತು. ಶಾಂತಿಯಾತ್ರಿಕರಿಗೆ ಕೆಥೋಲಿಕ್ ಕಾನ್ವೆಂಟ್‌ಗಳು ಹಾದಿಯಲ್ಲಿ ಆತಿಥ್ಯ ನೀಡಿದ್ದವು. ಉತ್ತಮ ಊಟವನ್ನು ಬಡಿಸಿದ್ದವು. ಅದಕ್ಕಾಗಿ ಹಣ ಕೇಳಿದ ಸಂದರ್ಭಗಳು ಕಡಿಮೆಯಾಗಿದ್ದವು. ಹಾಲಂಡಿನಲ್ಲಿ ಸುಸಂಘಟಿತವಾದ ಶಾಂತಿವಾದಿ ಸಂಘಗಳು ಅವರಿಗೆ ಸ್ವಾಗತಾತಿಥ್ಯಗಳನ್ನು ನೀಡಿದವು.

ಆದರೆ ಮುಂದೆ ಕೆಲ ದಿನಗಳ ನಂತರ ಪಶ್ಚಿಮ ಜರ್ಮನಿಯಲ್ಲಿ ಈ ತಂಡ ತೊಂದರೆಗೊಳಗಾಯ್ತು. ಬೀದಿಯ ಮೂಲೆಗಳಲ್ಲಿ ಅಪ್ಪಣೆ ಪಡೆಯದೆ ನಿಂತರೆಂದು ಅವರಲ್ಲನೇಕರನ್ನು ಬಾನ್‌ನಲ್ಲಿ ಬಂಧಿಸಿದರು. ಅನಧಿಕೃತ ಸ್ಥಳದಲ್ಲಿ ನಿಂತಿದ್ದಕ್ಕಾಗಿ ಡಾರ್ಟ್ಮಂಡ್‌ನಲ್ಲಿ ಇಡೀ ಪಥಕದವರನ್ನೇ ಪೊಲೀಸರು ಬಂಧಿಸಿದರು.

"ಪಶ್ಚಿಮ ಜರ್ಮನಿಯಲ್ಲಿ ನಮಗೆ ನಿರಾಶೆ ಆಯ್ತು. ಕೆಲವರು ನಮಗೆ ವಿರೋಧ ಮಾಡಿದರೆಂದಲ್ಲ, ಆದರೆ ಅವರೆಲ್ಲ ಭಾವನಾಹೀನರಂತೆ ಕಂಡುಬಂದಿದ್ದಕ್ಕಾಗಿ. ಈಶಾನ್ಯ ಅಮೆರಿಕದಲ್ಲಿ ಬಹಳಷ್ಟು ಜನ ನಮ್ಮನ್ನು ವಿರೋಧಿಸಿದರೂ ನಮ್ಮೊಂದಿಗೆ ಶಾಂತಿಯ ಮಾತನ್ನು ಚರ್ಚಿಸಲು ಅವರು ಸಿದ್ಧರಿದ್ದರು. ಆದರೆ ಜರ್ಮನಿಯ ಜನರು 'ನಾವು ಚೆನ್ನಾಗಿಯೇ ಇದ್ದೇವೆ. ಇದ್ದುದನ್ನು ಹದಗೆಡಿಸಬೇಡಿ. ಈಗ ಹದಿನೈದು ವರ್ಷಗಳ ಹಿಂದೆ ಧೂಳಿನಲ್ಲಿ ಹೊರಳಾಡುತ್ತಿದ್ದ ನಾವು ಈಗ ಅಭಿವೃದ್ಧಿಯನ್ನು ಸಾಧಿಸಿಕೊಂಡಿದ್ದೇವೆ. ನಮ್ಮ ಅಂಗಡಿಗಳನ್ನು ನೋಡಿ. ಬೇಕಾದ ಸಾಮಾನಗಳು ಸಿಗುತ್ತವೆ. ಬೀದಿಗಳಲ್ಲಿ ಮೋಟಾರುಗಳು ತುಂಬಿ ಹೋಗಿವೆ' ಎನ್ನುವಂತಿತ್ತು" ಎಂದು ಸ್ಕಾಟ್ ಪಶ್ಚಿಮ ಜರ್ಮನಿಯಲ್ಲಿ ದೊರೆತ ಅನುಭವವನ್ನು ವಿವರಿಸಿದ್ದಾನೆ.

ಶಾಂತಿಪಾದಯಾತ್ರಿಕರು ಪೂರ್ವಜರ್ಮನಿಗೆ ಹೊರಡುವುದಕ್ಕೆ ಕೆಲ ನಿಮಿಷಗಳ ಮೊದಲು ಅಮೆರಿಕನ್ ಉದ್ದಿಮೆದಾರನೊಬ್ಬ ಹೇಳಿದ: "ಮಿತ್ರರೆ, ಇದು ಖಾಸಗಿ ಮಾತು. ಆದರೆ ಕಮ್ಯುನಿಸ್ಟ್ ಜಗತ್ತಿನ ಬಗ್ಗೆ ನಿಮಗೆ ಒಂದಿಷ್ಟು ಜ್ಞಾನವಿರಬೇಕು. ಪಶ್ಚಿಮ ಜಗತ್ತಿನಲ್ಲಿ ನಿಮಗೆ ಸಾಕಷ್ಟು ವಿರೋಧ ಕಂಡುಬಂದಿರಬೇಕು. ಆದರೆ ಅಲ್ಲಿ ನಿಮ್ಮ ನಿಜಸ್ಥಿತಿಯ ಕಲ್ಪನೆ ನಿಮಗಿತ್ತು. ನಿಮ್ಮನ್ನು ಬೈದ, ಹೊಡೆದ ಜನ ನಿಮ್ಮನ್ನು ದ್ವೇಷಿಸುತ್ತಿರಬಹುದು. ಆದರೆ ಕಮ್ಯುನಿಸ್ಟ್ ಜಗತ್ತಿನಲ್ಲಿ ಹಾಗಲ್ಲ. ಅವರು ಕೂದಲಿನಿಂದ ಕುತ್ತಿಗೆ ಕೊಯ್ಯುವವರು. ಅವರು ನಿಮ್ಮ ಬುದ್ಧಿಭ್ರಂಶಕ್ಕಾಗಿ ಯತ್ನಿಸುವರು. ಜಾಗ್ರತೆಯಿರಲಿ".

'ಕಬ್ಬಿಣದ ಪರದೆ' ದಾಟಿ ಕಮ್ಯುನಿಸ್ಟ್ ಜಗತ್ತಿನಲ್ಲಿ ಈ ಪಾದಯಾತ್ರಿಕರು ಕಾಲಿಟ್ಟೊಡನೆ ತಾವು ಪೂರ್ವ ಜರ್ಮನಿಯ ಶಾಂತಿ ಸಮಿತಿಯವರು ಎಂದುಕೊಂಡು ಸುಮಾರು 50 ಜನ ಅವರನ್ನು ಭೇಟಿಯಾದರು. ಅವರು ಅತಿಥಿಗಳ ಕೈಕುಲುಕಿ, ಬೆನ್ನು ಚಪ್ಪರಿಸಿ ಅವರನ್ನನುಸರಿಸಿ ನಡೆದರು.

"ನಾವೊಂದು ಬೀದಿಯ ಮೂಲೆಯಲ್ಲಿ ನಿಂತು ಭಾಷಣ ಮಾಡಲು ಯತ್ನಿಸಿದೆವು. ನಮ್ಮನ್ನೆದು ಗೊಂಡ ಶಾಂತಿಸಮಿತಿಯ ಜನ ನಮ್ಮನ್ನು ಸುತ್ತುಗಟ್ಟಿ ನಿಂತು ಕಾಲು ಅಪ್ಪಳಿಸಿ, ಚಪ್ಪಾಳೆತಟ್ಟಿ, ಕೂಗಿ ಗದ್ದಲ ಮಾಡಿ ನಾವಂದದ್ದೇನೂ ಯಾರಿಗೂ ಕೇಳದಂತೆ ಮಾಡಿದರು. ಪಶ್ಚಿಮ ಜರ್ಮನಿಯನ್ನು ನಿಶ್ಶಸ್ತ್ರಗೊಳಿಸಿರಿ ಎಂಬ ಫಲಕಗಳನ್ನವರು ಹಿಡಿದುಕೊಂಡಿದ್ದರು".

ಶಾಂತಿಪಾದಯಾತ್ರಾ ಪಥದವರು ಪೂರ್ವ ಜರ್ಮನಿಯ ಹೆದ್ದಾರಿಯ ಮಗ್ಗುಲಲ್ಲಿ ಕುಳಿತು ತಮ್ಮ ಜರ್ಮನ್ ಬೆಂಬಲಿಗರಿಗೆ ಖಂಡತುಂಡವಾಗಿ ತಮ್ಮ ಅಭಿಪ್ರಾಯ, ಧ್ಯೇಯ ಇತ್ಯಾದಿಗಳನ್ನು ಹೇಳಿದರು. ಬ್ರಾಡ್ ಲಿಟ್ಲ್ ಹೇಳಿದ: "ನಮ್ಮ ಪಥಕದ ನಿಯಮಗಳಿಗೆ ಸಂಪೂರ್ಣವಾಗಿ ಅಧೀನವಾಗಿ ನಡೆಯದವರಾರೂ ನಮ್ಮ ಪಥಕದಲ್ಲಿ ಸೇರಿಸಿಕೊಳ್ಳಲಾರರು. ನಾವು ಒಪ್ಪದ ಘೋಷಣೆಗಳನ್ನು ಬರೆದ ಹಲಗೆಗಳನ್ನು ಯಾರೂ ಹಿಡಿದುಕೊಳ್ಳಲಾರರು. ನಮಗೆ ಬರೇ ಪಶ್ಚಿಮ ಜರ್ಮನಿಯನ್ನು ಮಾತ್ರವಲ್ಲ, ಇಡೀ ಜಗತ್ತನ್ನೇ ನಿಶ್ಶಸ್ತ್ರಗೊಳಿಸಬೇಕಾಗಿದೆ". ಪೂರ್ವ ಜರ್ಮನಿಯ ಶಾಂತಿಸಮಿತಿಯ ಜನ ತಟ್ಟನೆ ಈ ಕರಾರುಗಳಿಗೆ ಒಪ್ಪಿದ್ದನ್ನು ಕಂಡು ಬ್ರಾಡ್‌ನಿಗೆ ಆಶ್ಚರ್ಯವಾಯಿತು. ಮುಂದೆ ಅವರಿಂದೇನೂ ಬ್ರಾಡ್‌ನ ಪಥಕಕ್ಕೆ ತೊಂದರೆಯಾಗಲಿಲ್ಲ. ಒಂದೆಡೆ ಮಾತ್ರ ವಿಚಿತ್ರ ಕಟು ಅನುಭವ ಬಂತು. ಅವರ ಭಾಷಣಕ್ಕೆ 8-10 ಸಾವಿರಕ್ಕಿಂತಲೂ ಹೆಚ್ಚು ಜನ ಸೇರಿದ್ದರು. ಜರ್ಮನ್ ಶಾಂತಿವಾದಿಗಳಿಗೆ 'ಈ ಹಸ್ತಪತ್ರಿಕೆಗಳನ್ನು ಹಂಚಿರಿ' ಎಂದು ಬ್ರಾಡ್‌ನ ಪಥಕದವರು ಸಾವಿರಾರು ಹಸ್ತಪತ್ರಿಕೆಗಳನ್ನು ಕೊಟ್ಟರು. ಅದೇ ಅವರ ದೊಡ್ಡ ತಪ್ಪಾಯಿತು. ಮರುದಿನ ಮುಂಜಾನೆ ಈ ಸಹಸ್ರಾರು ಪತ್ರಿಕೆಗಳು ಒಂದು ಹೊಂಡದಲ್ಲಿ ತೇಲುತ್ತಿರುವುದು ಅವರಿಗೆ ಕಾಣಿಸಿತು.

ಅಲ್ಲದೆ ಶಾಂತಿಪಾದಯಾತ್ರಿಕರಿಗೆ ತಮ್ಮ ಮೇಲೆ ಸದಾ ರಾಜಕೀಯ ಕಣ್ಗಾವಲಿರುವುದು ತಿಳಿದಿತ್ತು. ಒಬ್ಬಾತ ಕಣ್ಣೀರು ಸುರಿಸುತ್ತ ಅವರ ಬಳಿಗೆ ಬಂದಾಗ ಅವರಿಗೆ ಆಶ್ಚರ್ಯವಾಗಿ ಹೋಯಿತು. ಬಂದಾತ, "ನಾನೊಬ್ಬ ಶಾಲೆಯ ಪ್ರಿನ್ಸಿಪಾಲ್. ಆದರೆ ಸರಕಾರದ ನಿಯಂತ್ರಣ ಇಷ್ಟೆಲ್ಲಾ ಇರುವಾಗ ನಾನೇನು ಕಲಿಸಲಿ? ನಾನು ಸತ್ಯವನ್ನು ಕಲಿಸಬಯಸುತ್ತೇನಲ್ಲದೆ ರಾಜಕೀಯವನ್ನಲ್ಲ. ಆದರೆ ಇಲ್ಲಿ ಪ್ರತಿಯೊಂದು ಸತ್ಯಕ್ಕೂ ರಾಜಕೀಯ ಬಣ್ಣಕೊಡುತ್ತಿದ್ದಾರೆ" ಎಂದ. ವಿದ್ಯಾರ್ಥಿಯೊಬ್ಬ "ನಾನು ಲಿಪ್‌ಜಿಗ್ ವಿಶ್ವವಿದ್ಯಾಲಯದಲ್ಲಿದ್ದೇನೆ. ನಮ್ಮಲ್ಲಿರುವ ವಿದ್ಯಾರ್ಥಿಗಳಲ್ಲಿ ನೂರಕ್ಕೆ ಎಪ್ಪತ್ತೈದರಷ್ಟು ಜನ ಪಶ್ಚಿಮ ಜಗತ್ತಿಗೆ ಓಡಿಹೋಗಬೇಕೆನ್ನುತ್ತೇವೆ ಬಯಸಿದ್ದಾರೆ. ನಮಗೆ ಸಹಾಯ ಮಾಡಿ", ಎಂದ.

ಬ್ರಾಡ್ ಲಿಟ್ಲ್ ಅವನಿಗೆ ಹೇಳಿದ: "ನಾವು ಮಹಾತ್ಮಾ ಗಾಂಧೀಯವರ ಅಹಿಂಸಾತ್ಮಕ ಸತ್ಯಾಗ್ರಹದಲ್ಲಿ ನಂಬಿಕೆಯುಳ್ಳವರು. ಅದರಿಂದ ನಾವು ಮಾಡುವುದೆಲ್ಲವೂ ಬಹಿರಂಗವಾಗಿ, ನ್ಯಾಯವಾಗಿ ಇರಬೇಕು. ನಾವು ಮಾಡುವುದೆಲ್ಲವೂ ಬಹಿರಂಗವಾಗಿ, ನ್ಯಾಯವಾಗಿ ಇರಬೇಕು. ನಾವು ಒಳಸಂಚುಗಳಲ್ಲಿ ಭಾಗವಹಿಸಲಾರೆವು. ಸುಳ್ಳು ಹೇಳಲಾರೆವು. ನಾವು ನ್ಯಾಯವೆಂದು ನಂಬಿರುವುದನ್ನು ಸಾಧಿಸಲು ಕೂಡ ವಾಮಮಾರ್ಗವನ್ನು ಹಿಡಿಯಲಾರೆವು. ನಾವು ನಿಮಗೆ ಹೇಗೆ ಸಹಾಯ

ಮಾಡಬಲ್ಲೆವು?"

ಆ ವಿದ್ಯಾರ್ಥಿ ಸಿಟ್ಟಿನಿಂದಲೇ, "ಇಲ್ಲ, ನೀವು ಸಹಾಯ ಮಾಡಲಾರಿರಿ", ಎಂದುತ್ತರವಿತ್ತ.

ಆಗಸ್ಟ್ ೧೩ರಂದು ಪಶ್ಚಿಮ ಮತ್ತು ಪೂರ್ವ ಜರ್ಮನಿಯನ್ನು ಪ್ರತ್ಯೇಕಿಸುವ ಸಿಮೆಂಟಿನ ಗೋಡೆ ಮತ್ತು ಮುಳ್ಳು ತಂತಿ ಬೇಲಿಯನ್ನು ಪೂರ್ವ ಜರ್ಮನ್ ಸರ್ಕಾರ ಪ್ರಾರಂಭಿಸಿದ ದಿನ ಈ ಪಾದ ಯಾತ್ರಿಕರು ಪೂರ್ವ ಬರ್ಲಿನ್‌ನ್ನು ತಲುಪಿದರು.

ಪಶ್ಚಿಮ ಜರ್ಮನ್, ಪೂರ್ವ ಜರ್ಮನ್, ಅಮೆರಿಕನ್ ಅಧಿಕಾರಿಗಳೆಲ್ಲ ಉದ್ವಿಗ್ನರಾಗಿ ಬಂದೂಕಿನ ಕುದುರೆಯ ಮೇಲೆ ಬೆರಳಿಟ್ಟುಕೊಂಡೇ ಕುಳಿತಿದ್ದರು. ಅವರಿಗೆ ಈ ವಿಷ ನಿಮಿಷದಲ್ಲಿ ಶಾಂತಿವಾದಿಗಳ ತಂಡವನ್ನು ಕಣ್ಣಿನಿಂದ ನೋಡುವುದೂ ಬೇಡವಾಯಿತು. ಪೂರ್ವ ಜರ್ಮನ್ನರು ಅವರನ್ನು ಬಲಾತ್ಕಾರವಾಗಿ ಒಂದು ಬಸ್ಸಿನಲ್ಲಿ ತುಂಬಿ ಪಶ್ಚಿಮ ಜರ್ಮನಿಗೆ ಹೊತ್ತು ಹಾಕಿದರು. ಅಲ್ಲಿಂದ ಅವರು ಬೇರೊಂದು ಮಾರ್ಗದಿಂದ ಪೋಲಂಡಿಗೆ ತೆರಳಿದರು.

"ನಾವು ಆಗಸ್ಟ್ ಕೊನೆಯಲ್ಲಿ ಹಳ್ಳಿಗಳಲ್ಲೆಲ್ಲ ಸುಗ್ಗಿ ಹಬ್ಬಗಳು ನೆರವೇರುತ್ತಿದ್ದಾಗ ಪೊಲಂಡನ್ನು ಪ್ರವೇಶಿಸಿದೆವು. ಪ್ರತಿಯೊಬ್ಬನೂ ಸಂತಸಚಿತ್ತನಾಗಿದ್ದ. ಚರ್ಚಗಳು ಜನರಿಂದ ತುಂಬಿರುತ್ತಿದ್ದವು. ನಮ್ಮ ದುರ್ದೈವದಿಂದ, ಅವರೆಷ್ಟು ಸಂತೋಷಚಿತ್ತರಾಗಿದ್ದರೆಂದರೆ ಅವರಿಗೆ ಯುದ್ಧ ಮತ್ತು ಶಾಂತಿ ಎರಡರ ಪ್ರಸ್ತಾಪವೂ ಬೇಕಿರಲಿಲ. ನಮ್ಮನ್ನಾಲಂಗಿಸಿ, ಸ್ವಾಗತಿಸಿ ಮದ್ಯವನ್ನಿತ್ತು ' ಕುಣಿಯೋಣ' ಎಂದರವರು. ಬರ್ಲಿನ್-ವಾರ್ಸಾ ಹೆದ್ದಾರಿಯ ನಡುವೆ. ನಾವು ನೃತ್ಯ ಮಾಡು ವಂತಾಯಿತು."-ಸ್ಕಾಟ್ ಜರ್ಮನಿಯ ಪ್ರಯಾಣದ ಮುಕ್ತಾಯವನ್ನು ವಿವರಿಸುತ್ತಾ ಹೇಳಿದ.

ಪೋಲಂಡಿನ ಶಾಂತಿ ಸಮಿತಿಯ ಆಗ್ರಹದ ಮೇರೆಗೆ ಆಸ್ಕ್‌ವಿಝ್‌ನಲ್ಲಿದ್ದ ನಾಝಿ ಸ್ಥಾನಬದ್ಧ ಶಿಬಿರವನ್ನು ಸಂದರ್ಶಿಸಲು ಈ ಪಾದಯಾತ್ರಿಕರು ಒಪ್ಪಿಕೊಂಡರು.

ಉಳಿದ ನಾಝಿ ಸ್ಥಾನಬದ್ಧ ಶಿಬಿರಗಳನ್ನೆಲ್ಲ ಅಳಿಸಿ ಅಲ್ಲಿ ತೋಟಪಟ್ಟಿಗಳನ್ನುಮಾಡಿದ್ದರೂ ಆಸ್ಕ್‌ವಿಝ್‌ನ್ನು ಇದ್ದಕ್ಕಿದ್ದಂತೆಯೇ ಇಟ್ಟಿದ್ದಾರೆ. ಶತ್ರುಗಳು ಅಸಹಾಯ ಜನತೆಯನ್ನು ಎಂಥ ದುರ್ದೆಸೆಗೀಡುಮಾಡಬಲ್ಲರು ಎಂಬುದನ್ನು ನೋಡದೆ ಯಾರಿಗೂ ಏಕಪಕ್ಷೀಯ ನಿಶ್ಶಸ್ತ್ರೀಕರಣವನ್ನು ಪ್ರಚಾರ ಮಾಡುವ ಅಧಿಕಾರವಿಲ್ಲ ಎಂದು ಪೋಲಂಡಿನ ಶಾಂತಿ ಸಮಿತಿಯ ಸದಸ್ಯರಲೊಬ್ಬ ಹೇಳಿದ.

"ಹ್ಹಾ! ಅದೊಂದು ಭೀಕರ ಅನುಭವವಾಗಿತ್ತು. ನರಕದಲ್ಲಿ ಐದು ತಾಸು ಸಂಚರಿಸಿ ಬಂದಂತಾಯಿತು ನಮಗೆ. ಅಲ್ಲಿ ೪೦ ಲಕ್ಷ ಜನ ಯಹೂದ್ಯರು ಅಸುವನ್ನು ನೀಗಿದ್ದರು. ನಮ್ಮಲ್ಲಿ ಅನೇಕ ಸ್ತ್ರೀಯರು ತಿರುಗಿಹೋಗಿ ಬಸ್ಸಿನಲ್ಲಿ ಕುಳಿತುಬಿಟ್ಟರು. ಆ ಶಿಬಿರದಲ್ಲಿ ಎಲ್ಲಿ ಬೇಕಲ್ಲಿ ಬೂಟಿನಿಂದ ನೆಲ ಕೆದರಿದರೂ ಸಾಕು ಅಲ್ಲಿ ಮಾನವ ಎಲುವುಗಳು ಕಾಣಿಸುತ್ತವೆ. ಆರ್ತರು ಅಲ್ಲಲ್ಲಿ ಗೋಡೆ ಗಳ ಮೇಲೆ ಗೀಚಿದ ವಾಕ್ಯಗಳು ಇನ್ನೂ ಕಾಣಿಸುತ್ತಿವೆ. ಬಂಧಿತರ ಮೈಮೇಲಿಂದ ಕಿತ್ತುಕೊಂಡಿದ್ದ ಆಭರಣಗಳನ್ನು ಪ್ರದರ್ಶನಕ್ಕಿಟ್ಟಿದ್ದಾರೆ" ಎಂದು ಈ ಶಿಬಿರವನ್ನು ಕಂಡುಬಂದ ಬೀ ಹೆರಿಕ್ ಹೇಳಿದರು.

ಆಮೇಲೆ ಪೋಲಿಶ್ ಶಾಂತಿ ಸಮಿತಿಯವರು ಈ ಶಾಂತಿವಾದಿಗಳನ್ನು ಕೇಳಿದರು: "ನಾವು ಜರ್ಮನ್ನರಿಗೆ ಏಕೆ ಅಂಜಬೇಕು ಎಂಬುದು ನಿಮಗೀಗ ಖಾತ್ರಿಯಾಯಿತೆ? ಇಂಥ ಸಂಗತಿಗಳು ಮತ್ತೆಂದೂ ಜರುಗಬಾರದೆಂದು ನಾವು ಶಸ್ತ್ರಧಾರಿಗಳಾಗಬೇಡವೆ? ನಮಗೆ ಅಮೆರಿಕನ್ನರ ಭಯ ವಿಲ್ಲ, ಆದರೆ ಜರ್ಮನ್ನರದಿದೆ. ಬಹುಶಃ ಆಸ್ಕ್‌ವಿಝ್‌ನ್ನು ಕಂಡು ನಿಮ್ಮ ಹೃದಯ ಕರಗಲಿಲ್ಲ ವೇನು?"

ಅದಕ್ಕೆ ಈ ಶಾಂತಿವಾದಿಗಳೇನು ಹೇಳಬೇಕು? ಬ್ರಾಡ್ ಲಿಟ್ಲ್ ಅನಂತರ ಈ ಪ್ರವಾಸದ ವಿಷಯ ವನ್ನು ಕುರಿತು ಹೇಳುತ್ತಿದ್ದಾಗ ಹೀಗೆಂದ: "ಆಗ ನನಗೆ ಅಧೈರ್ಯವಾಯಿತು. ನಾವು ಮಾತಾಡಿ ಮುಗಿಸಿದೆವು. ಆದರೆ ಎಲ್ಲ ಕಡೆಯಲ್ಲಿಯೂ ತಾವು ಶಾಂತಿಪ್ರಿಯರು, ಇತರರ ಆಕ್ರಮಣದ ಭೀತಿಯೇ ಶಸ್ತ್ರಾಸ್ತ್ರ ಸಂಗ್ರಹ ಅಗತ್ಯವಾಗುವಂತೆ ಮಾಡುತ್ತದೆ ಎಂದೇ ಅನ್ನುತ್ತಿದ್ದರು. ಒಬ್ಬ

ಪೋಲ್ ಹೇಳಿದ: 'ಅಮೆರಿಕದ ನಿಮಗೆ ಹೈಡ್ರೊಜನ್ ಬಾಂಬಿನ ಅಂಜಿಕೆಯಿದೆ. ಆದರೆ ಅದು ಬಲು ಕ್ಷಿಪ್ರದಲ್ಲಿ ಕೊಲ್ಲುತ್ತದೆ. ಜರ್ಮನ್ನರು ನಮ್ಮ ಜನಸಂಖ್ಯೆಯಲ್ಲಿ ಕಾಲು ಭಾಗವನ್ನು ಐದು ವರ್ಷಗಳ ದೀರ್ಘ ಅವಧಿಯಲ್ಲಿ ಚಿತ್ರಹಿಂಸೆಗೊಳಪಡಿಸಿ ಕೊಂದರು. ನಿಮ್ಮ ಯಾತ್ರೆ-ಸಂದೇಶಗಳು ನಿಷ್ಫಲವಾದವುಗಳು. ನಾವು ಖಂಡಿತಾ ಶಸ್ತ್ರಸಂನ್ಯಾಸ ಮಾಡುವುದಿಲ್ಲ."

ಮಳೆ ಜೋರಾಗಿ ಬೀಳುತ್ತಿರುವಾಗಲೆ ಶಾಂತಿಪಾದಯಾತ್ರಿಕರು ಪೋಲಂಡ್-ರಶಿಯಾ ಗಡಿಯನ್ನು ದಾಟಿದರು. ಸೋವಿಯತ್ ಶಾಂತಿ ಸಮಿತಿಯ ಸದಸ್ಯರು ಮುಗುಳ್ನಗೆಯಿಂದ ಅವರನ್ನು ಸ್ವಾಗತಿಸಿ ದೊಡ್ಡದಾದ ಹೂಗುಚ್ಛಗಳನ್ನು ಅರ್ಪಿಸಿದರು. ಅವರನ್ನೆಲ್ಲ ಒಂದು ಉಸಿರುಗಟ್ಟಿಸುವಂತಿದ್ದ ದೊಡ್ಡ ಸ್ವಾಗತ ಭವನಕ್ಕೆ ಕರೆದೊಯ್ದರು. ಅಲ್ಲಿ ಮೇಜಿನ ಮೇಲೆ ಸೋಡಾಪಾಪ್ ಮತ್ತು ವೋಡ್ಕಾ ಬಾಟ್ಲಿಗಳು ತುಂಬಿದ್ದವು. "ಸ್ವೀಕರಿಸಿ ಪಾನಿಯಗಳನ್ನು" ಎಂದರು, ಸೋವಿಯತ್ ಶಾಂತಿ ಸಮಿತಿಯವರು.

ನ್ಯೂಯೋರ್ಕಿನಲ್ಲಿ ಸೋವಿಯತ್ ಅಧಿಕಾರಿಗಳೊಂದಿಗೆ ಚರ್ಚಿಸಿ ಗೊತ್ತುಪಡಿಸಿದ ಅಧಿಕೃತ ಕಾರ್ಯಕ್ರಮಗಳೆಲ್ಲ ಅವರು ರಶಿಯಕ್ಕೆ ಹೋದೊಡನೆಯೇ 'ಅಸಾಧ್ಯ', 'ಅವ್ಯಾವಹಾರಿಕ' ಅಥವಾ 'ಕಾನೂನಿಗೆ ಅಸಂಗತವಾದವು' ಎಂದಾದವು. ರಶಿಯದ ಗಡಿಯಲ್ಲಿ ತಿರುಗಿಕೊಡಲಾಗುವುದು ಎಂದು ಈ ಶಾಂತಿ ಪಾದಯಾತ್ರಕರಿಂದ ಪೂರ್ವ ಜರ್ಮನಿಯಲ್ಲಿ ಜಪ್ತ್ ಮಾಡಲ್ಪಟ್ಟಿದ್ದ ಮಿಮಿಯೊಗ್ರಾಫ್ ಮಷಿನ್ ಎಂದು ನಾಪತ್ತೆಯಾಗಿಹೋಗಿತ್ತು. ಇವನ್ನೆಲ್ಲ ಓದಿ ನೋಡಬೇಕು ಎಂಬ ನೆಪ ಹೇಳಿ ಅವರ ಬಳಿ ಇದ್ದ ಹಸ್ತಪತ್ರಿಕೆಗಳ ಗಂಟುಗಳು ಜಪ್ತ್ ಮಾಡಲ್ಪಟ್ಟವು.

"ಆದರೆ ಇವನ್ನೆಲ್ಲ ನಿಮ್ಮ ಅಧಿಕಾರಿಗಳು ಮೊದಲೇ ನೋಡಿ ಒಪ್ಪಿದ್ದರಲ್ಲ?" ಬ್ರಾಡ್ ಲಿಟ್ಲ್ ಹೇಳಿದ.

"ಆದರೆ ಅವರು ನೋಡಿದ್ದೇ ಇವು ಎಂದು ನಮಗೆ ಹೇಗೆ ಗೊತ್ತಾಗಬೇಕು?" ರಶಿಯನ್ ಅಧಿಕಾರಿಗಳು ಸವಾಲು ಹಾಕಿದರು.

ಲಿಟ್ಲ್ ತಾಳ್ಮೆಯಿಂದಲೇ ಉತ್ತರಿಸಿದ: "ನಮಗೆ ಹಸ್ತಪತ್ರಿಕೆಗಳು ಬೇಕು. ನ್ಯೂಯೋರ್ಕಿನಲ್ಲಿರುವ ನಿಮ್ಮ ಅಧಿಕಾರಿಗಳು ಅವನ್ನು ನೋಡಿ ಅಡ್ಡಿಯಿಲ್ಲವೆಂದಿದ್ದಾರೆ. ಅವು ಸಿಗದೆ ನಾವಿಲ್ಲಿಂದ ಮುಂದೆ ಹೋಗುವುದಿಲ್ಲ. ಧರಣೆ ಸತ್ಯಾಗ್ರಹ ಎಂಬ ಶಬ್ದವನ್ನು ನೀವು ಕೇಳಿದ್ದೀರಿ ತಾನೆ?"

ಪಾದಯಾತ್ರಿಕರು ಹಸ್ತಪತ್ರಿಕೆಗಳ ಗಂಟುಗಳು ಮೇಲೆ ಕುಳಿತುಕೊಂಡರು. ಸೋವಿಯತ್ ಅಧಿಕಾರಿಗಳು ಅವಸರದಿಂದ ವಿಚಾರವಿನಿಮಯ ಮಾಡಿಕೊಂಡು "ಸರಿ, ಹಸತಿಪತ್ರಿಕೆಗಳನ್ನು ಒಯ್ಯಲಡ್ಡಿಯಿಲ್ಲ" ಎಂದು ತಿಳಿಸಿದರು.

"ಇಲ್ಲಿಗೆ ನಮ್ಮೆಲ್ಲ ತೊಂದರೆಗಳು ಮುಗಿದವು ಎಂದು ನಾವು ಭಾವಿಸಿದೆವು. ನಾವೆಲ್ಲ ಕಾಫಿ-ತಿಂಡಿಗಳನ್ನು ಸೇವಿಸುತ್ತಿದ್ದಾಗ ನಾನು ಮತ್ತು ಬೀ ಕಿಟಕಿಯಾಚೆ ನೋಡಿದೆವು. ಹೊರಗಡೆ ಒಂದು ದೊಡ್ಡ ಹಳದಿ ಬಸ್ ನಿಂತಿತ್ತು.

"ಸೋವಿಯತ್ ಶಾಂತಿ ಸಮಿತಿಯ ಸದಸ್ಯನೊಬ್ಬ ಬಂದು, 'ಇಂದು ರಾತ್ರಿ ನೀವು ಮಿನ್ಸ್ಕ್‌ನಲ್ಲಿರುವಿರಿ' ಎಂದ. ನಾವು ನಕ್ಕು 'ಎರಡು ನೂರು ಮೈಲಿ ದೂರವಿರುವ ಅಲ್ಲಿಗೆ ನಾವು ಕಾಲ್ನಡಿಗೆಯಿಂದ ರಾತ್ರಿಯೊಳಗಾಗಿ ಹೇಗೆ ಹೋದೇವು!?' ಎಂದು ಕೇಳಿದೆವು. ಆತ ಆಘಾತವಾದವನಂತೆ 'ನಡೆಯುತ್ತೀರಾ? ಹುಚ್ಚರಂತಾಡಬೇಡಿ. ವಾಹನ ಸೌಕರ್ಯವಿರುವಾಗ ಯಾರು ನಡೆಯುತ್ತಾರೆ?' ಎಂದ.

"ಎಷ್ಟೋ ಜನ ಅಮೆರಿಕನ್ನರಂತೆ ಸೋವಿಯತ್ ಅಧಿಕಾರಿಗಳು ನಮ್ಮ ಈಪಾದಯಾತ್ರೆ ಅಕ್ಷರಶಃ ಕ್ಷಷ್ಟರದ್ದೇ ಎಂದು ಭಾವಿಸಿದ್ದಾರೆಂದು ನಮಗೆ ಈಗ ತಿಳಿಯಿತು. ಪ್ರತಿಯೊಂದು ಹೆಜ್ಜೆಯನ್ನು ನಡದೇ ಹೋಗಬೇಕೆಂಬ ನಮ್ಮ ಪ್ರತಿಜ್ಞೆಯೊಂದು ಹುಚ್ಚುತನ ಎಂದು ರಶಿಯನ್ನರು ತಿಳಿದಿದ್ದರು. ಅಂತೆಯೇ ಅವರು ನಮಗಾಗಿ ಒಂದು ವಿಲಾಸೀ ಸಂಚಾರ ಕಾರ್ಯಕ್ರಮವನ್ನು ಯೋಜಿದ್ದರು.

"ನಾವು ಸ್ಥಳ ಸಂದರ್ಶನಕ್ಕಾಗಿ ಬಂದಿಲ್ಲ ಎಂದು ಅವರಿಗೆ ಹೇಳಿದೆವು. ನಾವು ಶಾಂತಿಯಾತ್ರಿ

ಕರು. ಬ್ರೆಸ್ಟ್‌ಲಿಟೊವಸ್ಕ್‌ನಿಂದ ಮಾಸ್ಕೋದವರೆಗೆ ನಡೆದುಕೊಂಡೇ ಹೋಗುವುದು ನಮ್ಮ ಪ್ರತಿಜ್ಞೆ. ಹಾಗೆ ಮಾಡಲು ನಮಗೆ ಸೋವಿಯತ್ ವೀಸಾ ಸಿಕ್ಕಿದೆ ಎಂದು ತಿಳಿಸಿದೆವು.

"ಸೋವಿಯತ್ ಅಧಿಕಾರಿಗಳು ಕಂಗಾಲಾದಂತಾದರು. ಅವರೆಂದರು: 'ಆದರೆ ನಿಮ್ಮ ವೀಸಾಗಳು ಮೂರು ವಾರಗಳವರೆಗೆ ಮಾತ್ರ ಅಧಿಕೃತವಾಗಿರುವವು. ಅಷ್ಟರಲ್ಲಿ ನೀವಿಲ್ಲಿಂದ ಮಾಸ್ಕೋದವರೆಗೆ ನಡೆದು ಹೋಗಲಾರಿರಿ. ನೀವು ಪ್ರತಿನಿತ್ಯ ಐವತ್ತು ಮೈಲು ಕ್ರಮಿಸಬೇಕಾದೀತು."

ರಶಿಯನ್ ಅಧಿಕಾರಿಗಳ ಈ ಮಾತು ಕೇಳಿ ಪಾದಯಾತ್ರಿಕರು ಗೊಂದಲಕ್ಕೆ ಬಿದ್ದರು. "ಇಂದಿಗೂ ನನಗೆ ನಮ್ಮನ್ನು ಬೇಕೆಂದೇ ಮೋಸಗೊಳಿಸಿದರೋ ಅಥವಾ ನಾವೇ ಮೂರ್ಖರಾಗಿದ್ದೆವೋ ಎಂದು ಸ್ಪಷ್ಟವಾಗಿಲ್ಲ. ಸಾಮಾನ್ಯವಾಗಿ ಆರು ವಾರಗಳು ಬೇಕಾಗುವ ಪಯಣಕ್ಕಾಗಿ ನಮಗೆ ಕೇವಲ ಮೂರೇ ವಾರಗಳನ್ನು ಕೊಡಲಾಗಿತ್ತೆಂಬುದು ಸತ್ಯ. ನಮ್ಮ ಪಥಕದಲ್ಲಿ ಮಧ್ಯ ವಯಸ್ಸಿನ ಗಂಡಸರು ಮತ್ತು ಹೆಂಗಸರು ಇದ್ದರು. ನಾವೇನು ಮಾಡಬಹುದಾಗಿತ್ತು ಈ ಸಂದರ್ಭದಲ್ಲಿ?" ಆಗಿನ ಮನಃಸ್ಥಿತಿಯನ್ನು ಕುರಿತ ಬ್ರಾಡ್ ಲಿಟ್ಲ್ ಹೇಳುತ್ತಾನೆ.

ವೀಸಾದ ಅವಧಿ ಹೆಚ್ಚಿಸಿಕೊಡಿರಿ ಎಂದು ಕೇಳಿದಾಗ "ಅದನ್ನು ಕೊಡುವುದು ಸ್ಮೊಲೆನ್ಸ್ಕಿನಲ್ಲಿ. ಅಲ್ಲಿಗೆ ಹೋಗಿ ಅವಧಿ ಬೆಳೆಸಿಕೊಂಡು ಬನ್ನಿರಿ" ಎಂಬ ಉತ್ತರ ಸಿಕ್ಕಿತು.

ಪಾದಯಾತ್ರಿಕರಲ್ಲಿ ಕೆಲವರು ತಮ್ಮ ಹಾಸಿಗೆ ಗಂಟನ್ನೆತ್ತಿಕೊಂಡು ತಾವು ತಿರುಗಿ ಮನೆಗೆ ಹೋಗುತ್ತೇವೆಂದರು. ಕೆಲವರು ಮುಂದೆ ಸಾಗೋಣ, ಮೂರು ವಾರದಲ್ಲಿ ಮಾಸ್ಕೋದಿಂದ ಗಾಅಂ ಮೈಲು ದೂರದವರೆಗಾದರೂ ತಲುಪುತ್ತೇವಲ್ಲ. ಅಷ್ಟರಿಂದಲೆ ತುಸುವಾದರೂ ಕಾರ್ಯವಾದಿತು ಎಂದರು.

ಇನ್ನು ಕೆಲವರು ಬಸ್ಸಿನಿಂದ ನೇರವಾಗಿ ಮಾಸ್ಕೋಕ್ಕೆ ಹೋಗೋಣ. ಇಡೀ ಮೂರು ವಾರಗಳನ್ನು ಅಲ್ಲಿಯೇ ಕಳೆಯೋಣ. ಜಗತ್ತಿನ ಕಣ್ಣಿಗಾದರೂ ನಾವು ಬಿದ್ದೇವು ಎಂದರು.

ಸ್ಕಾಟ್ ಹೆರಿಕ್ ಹೇಳಿದ: "ಇಷ್ಟು ದೂರ ಬಂದಿರುವ ನಾವು ಹಿಡಿದ ಕಾರ್ಯ ಕೈಬಿಡಬಾರದು. ಹಗಲು-ರಾತ್ರಿ ನಡೆದರೆ ನಾವು ನಿರ್ದಿಷ್ಟ ಅವಧಿಯಲ್ಲಿ ಮಾಸ್ಕೋ ತಲುಪಬಹುದು. ಪ್ರಯಾಣ ಬಲವಂತದ್ದಾಗಬೇಕು. ಬಸ್ಸಿನಲ್ಲಿ ನಿದ್ರಿಸೋಣ. ಹೇಳಿ, ಯಾರು ಸಿದ್ಧರಿದ್ದೀರಿ?"

ಒಂದಿಷ್ಟು ಚರ್ಚೆಯನಂತರ ಎಲ್ಲರೂ ಈ ಯೋಜನೆಯನ್ನು ಒಪ್ಪಿದರು. "ನೀವು ರಾಜಕೀಯ ಕಾರ್ಯಕರ್ತರು. ಜಟ್ಟಿಗಳಲ್ಲ" ಎಂದು ರಶಿಯನ್ ಶಾಂತಿ ಸಮಿತಿಯವರು ಪ್ರತಿಭಟಿಸಿದರು. ಹಳ್ಳಿಗಾಡಿನ ಮಾರ್ಗದಲ್ಲೆಲ್ಲ ಹಿಂಸ್ರ ಪಶುಗಳಿವೆ ಎಂದು ಎಚ್ಚರಿಸಿದರು.

"ಎಂಥ ಹಿಂಸ್ರ ಪ್ರಾಣಿಗಳು?" ಬೀ ಕೇಳಿದರು.

"ಬಹು ದೊಡ್ಡ ಮೊಲಗಳು" ರಶಿಯನ್ನರು ಗಂಭೀರವಾಗಿ ಹೇಳಿದರು.

ಗಟ್ಟಿಯಾಗಿ ನಗುತ್ತಾ ಶಾಂತಿಯಾತ್ರಿಕರು ತಮ್ಮ ಗಂಟುಗಳನ್ನೆತ್ತಿಕೊಂಡು ನಡೆಯತೊಡಗಿದರು ಅವರ ಘೋಷಣಾಪತ್ರಿಕೆಗಳ ಮೇಲೆ "ಯುದ್ಧ ಕೆಟ್ಟದ್ದು" "ಪರಮಾಣು ಯುದ್ಧದಲ್ಲಿ ಯಾರೂ ಗೆಲ್ಲುವುದಿಲ್ಲ" "ಬಾಂಬ್ ಬೇಡ. ರೊಟ್ಟಿ ಬೇಕು" "ನಿಶ್ಶಸ್ತ್ರೀಕರಣಕ್ಕಾಗಿ ಈಗಲೇ ಕಾರ್ಯಮಾಡಿ" ಎಂದು ಬರೆದಿತ್ತು.

ಸ್ಕಾಟ್ ರಶಿಯದಲ್ಲಿಯ ಪ್ರವಾಸದ ವಿಚಾರವಾಗಿ ಮಾತಾಡುತ್ತಿದ್ದಾಗ ಹೇಳಿದ: "ರಶಿಯದಲ್ಲಿ ಕಾಲಿಟ್ಟೊಡನೆ ನಮಗೆ ಒಂದು ಮಾತು ತಿಳಿಯಿತು. ಆ ಮಾತು ಭಯಂಕರವಾಗಿತ್ತು. ಸೋವಿಯತ್ ಜನರಿಗೆ ಪರಮಾಣು ಯುದ್ಧದ ಬಗ್ಗೆ ಏನೂ ಮಾಹಿತಿ ಇರಲಿಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪರಮಾಣು ಬಾಂಬಿನ ಹಾವಳಿಯ ಬಗ್ಗೆ ಇರುವ ಮಾಹಿತಿಯನ್ನು ಕೇಳಿ ಅವರು ದಂಗಾದರು

"ಭಾಷೆಯ ಪ್ರಶ್ನೆ ಬಲು ಜಟಿಲವಾಗಿತ್ತು. ನಮ್ಮಲ್ಲಿ ಒಬ್ಬಳಿಗೆ ಮಾತ್ರ ರಶಿಯನ್ ಭಾಷೆ ಬರುತ್ತಿತ್ತು. ರಶಿಯನ್ ಶಾಂತಿ ಸಮಿತಿಯ ದುಭಾಷಿಗಳು ಚೆನ್ನಾಗಿಯೇ ಭಾಷಾಂತರ ಮಾಡುತ್ತಿದ್ದಾರೆ ಎಂದಾಕೆ ನಮಗೆ ಹೇಳಿದಳು. ಆದರೆ ನಾವು ಯಾರನ್ನು ಭೇಟಿಯಾಗುತ್ತಿದ್ದೆವು, ಅವರ ಹೆಸರು ಏನು ಎಂಬುದೇ ನಮಗೆಂದೂ ತಿಳಿಯುತ್ತಿರಲಿಲ್ಲ. ಒಂದು ಸಾರ್ವಜನಿಕ ಸಭೆ ಕೆಲ

ಗಾರರು ವೇದಿಕೆಯ ಮೇಲೆ ದಾಳಿ ಮಾಡಿ ನಮ್ಮ ಹಸ್ತಪತ್ರಿಕೆಗಳನ್ನೆಲ್ಲ ಕಸಿದುಕೊಂಡು ಹರಿದು ಹಾಕಿದರು. ಇನ್ನೊಂದು ಕಾರಖಾನೆಯಲ್ಲಿ ನಮ್ಮವರಲ್ಲೊಬ್ಬ ವೇದಿಕೆಯನ್ನೇರಿ ಪರಮಾಣು ಶಸ್ತ್ರಗಳಲ್ಲಿ ನಂಬಿಕೆಯಿಡುವ ಸರಕಾರ ಹುಚ್ಚ ಸರಕಾರ ಎಂದಾಗ ರಶಿಯನ್ನರು ಇದ್ದೊಂದು ವಿನೋದವೆಂದು ಭಾವಿಸಿ ವಿಕಟಹಾಸ್ಯಗೈದರು.

"ಆಗ ಬ್ರಾಡ್ ಲಿಟ್ಲ್ ಎದ್ದು ನಿಂತು, 'ನಿಮ್ಮ ನಗರಗಳು ಮತ್ತು ಕುಟುಂಬಗಳ ಮೇಲೆ ಗುರಿಯಿಡುವ ಬಂದೂಕುಗಳು ಮತ್ತು ರಾಕೆಟ್ಟುಗಳ ವಿರುದ್ಧ ನಾನು ಅಮೆರಿಕದಲ್ಲಿ ಪ್ರತಿಭಟಿಸಿ ಜೈಲುವಾಸವನ್ನನುಭವಿಸಿದ್ದೇನೆ. ಅವರಂತೆ ನನ್ನ ಕುಟುಂಬ ಮತ್ತು ನಗರದ ಮೇಲೆ ರಶಿಯನ್ ಬಂದೂಕುಗಳು ಗುರಿ ಹಿಡಿದಿವೆ ಎಂದೂ ನಾನು ಬಲ್ಲೆ. ಇದನ್ನು ಪ್ರತಿಭಟಿಸಲು ನೀವೇನಾದರೂ ಮಾಡಿರುವಿರಾ?' ಎಂದ.

"ಜನ ಬಹಳ ಹೊತ್ತಿನವರೆಗೂ ಪಿಟಿಟೆನ್ನಲಿಲ್ಲ. ಬ್ರಾಡ್ ಮುಂದುವರೆಸಿದ: 'ನಾವು ಅಮೆರಿಕದಲ್ಲಿದ್ದಾಗ ಹೋಗಿ ಈ ಮಾತನ್ನು ರಶಿಯನ್ನರಿಗೆ ಹೇಳಿರಿ ಎಂದರು. ನಾವು ಈಗ ಇಲ್ಲಿ ಬಂದಿದ್ದೇವೆ. ಆ ಮಾತನ್ನು ನಾನೀಗ ಹೇಳುತ್ತಿದ್ದೇನೆ. ರಶಿಯವು ಅಣ್ವಸ್ತ್ರ ಪ್ರಯೋಗಗಳನ್ನು ಮುಂದುವರೆಸಿದ್ದು ನಿಜವಾಗಿಯೂ ನಾಚಿಕೆಗೇಡೆಂದು ನನಗೆ....'

"ಆಗ ಇಡೀ ಸಭೆ 'ಫ್ರಾನ್ಸ್, ಫ್ರಾನ್ಸ್' ಎಂದು ಕೂಗಿತು. ಬಾಂಬ್ ಪ್ರಯೋಗಗಳ ಅಂತಾರಾಷ್ಟ್ರೀಯ ನಿಯಮವನ್ನುಲಂಘಿಸಿಲು ಅಮೆರಿಕ ಫ್ರಾನ್ಸಿಗೇಕೆ ನಿಯಮವನ್ನುಲಂಘಿಸಲು ಅನುಮತಿ ನೀಡಿತೆಂದು ಅವರು ಕೇಳುತ್ತಿದ್ದಾರೆಂದು ದುಭಾಷಿಗಳು ನಮಗೆ ಹೇಳಿದರು. ಫ್ರಾನ್ಸ್ ಸ್ವತಂತ್ರ ದೇಶ. ಸಹಾರಾ ಪ್ರದೇಶದಲ್ಲಿ ಬಾಂಬ್ ಪ್ರಯೋಗ-ನಡೆಸದಿರಲು ಫ್ರಾನ್ಸಿನ ಮನವೊಲಿಸಲು ನಮ್ಮ ಅಧ್ಯಕ್ಷರು ತುಂಬಾ ಪ್ರಯತ್ನ ಮಾಡಿದರು. ಆದರೆ ಫ್ರಾನ್ಸ್ ಕೇಳಲಿಲ್ಲ ಎಂದು ನಾನೆಂದೆ.

"ಆದರೆ ಈ ಕೆಲಸಗಾರರು ನಮ್ಮ ಮಾತನ್ನು ನಂಬಲಿಲ್ಲವೆನ್ನುವುದು ಸ್ಪಷ್ಟವಾಗಿತ್ತು. ಅಮೆರಿಕವು ರಶಿಯದ ಸುತ್ತಲೆಲ್ಲ ಸೈನಿಕ ಠಾಣ್ಯಗಳನ್ನೇಕೆ ಸ್ಥಾಪಿಸಿದೆ ಎಂದು ಅವರು ಪುನಃ ಪುನಃ ನಮ್ಮನ್ನು ಕೇಳಿದರು. ರಶಿಯನ್ ಸರಕಾರ ಗಂಡಾಂತರಕಾರಿ, ಆಕ್ರಮಣಕಾರಿ ರಾಷ್ಟ್ರವಾಗಿದೆಯೆಂದು ನಮ್ಮ ಸರಕಾರಿ ಭಾವಿಸುತ್ತಿದೆಯೆಂದು ನಾವು ಹೇಳಿದೆವು. ಇದಕ್ಕೆ ಅವರ ಉತ್ತರ ಯಾವಾಗಲೂ ತಿರಸ್ಕಾರಯುಕ್ತ ನಗುವಾಗಿತ್ತು. 'ನಾವು ಆಕ್ರಮಣಕರರೆ! ಭೇಷ್ ನಿಮ್ಮಿಂದ ಈ ಮಾತು ಬರುವುದೆಂದರೆ ಭಲೆ!' ಎಂದರವರು.

"ಶಾಂತಿಗಾಗಿ ವೈಯುಕ್ತಿಕ ಕಾರ್ಯವೆಂಬ ಮಾತಿನ ಮರ್ಮ ಅವರಲ್ಲಿ ಬಹು ಸ್ವಲ್ಪ ಜನರಿಗಷ್ಟೇ ಅರ್ಥವಾಯ್ತು. 'ಅಲ್ಲಾ ನೀವೆಷ್ಟು ಜನರನ್ನು ಪ್ರತಿನಿಧಿಸುತ್ತಿದ್ದೀರಿ?' ಎಂದವರು ಮತ್ತೆ ಮತ್ತೆ ಕೇಳುತ್ತಿದ್ದರು. ನಾವು ಪ್ರಾಮಾಣಿಕವಾಗಿ 'ನಮ್ಮನ್ನಷ್ಟೆ' ಎಂದುತ್ತರವಿತ್ತೆವು. ಏಕಪಕ್ಷೀಯ ನಿಶ್ಶಸ್ತ್ರೀಕರಣ ವಿಷಯದಲ್ಲಿ ನಮ್ಮಂತೆಯೇ ಆಲೋಚಿಸುವ ಕೆಲ ಜನ ಅಮೆರಿಕದಲ್ಲಿದ್ದಾರೆಂದು ಹೇಳಿದೆವು.

"ರಶಿಯನ್ನರು ತಲೆಯಲ್ಲಾಡಿಸಿದರು. 'ನಿಮ್ಮದು ವ್ಯಾಪಕವಾದ ಚಳವಳಿಯಲ್ಲವೆಂದ ಮೇಲೆ ಅದರಿಂದ ಪ್ರಯೋಜನವೇನು?' ಎಂದವರು ಕೇಳಿದರು. ಕೆಲ ಸಲ ಗಂಡಸರು, ಹೆಂಗಸರು ನಮ್ಮ ಬಳಿ ಬಂದು ಹರಕು ಮುರುಕು ಇಂಗ್ಲೀಷಿನಲ್ಲಿ 'ಅಮೆರಿಕನ್ನರೆ, ನಾವು ಶಾಂತಿಯನ್ನು ಬಯಸುತ್ತೇವೆ. ನಮಗೆ ಶಾಂತಿ ಬೇಕು. ನೋಡಿ, ನಾವೇನೂ ಬಾಂಬ್ ದಾಳಿಯಿಂದ ರಕ್ಷಣೆಗಾಗಿ ಆಶ್ರಯ ಸ್ಥಾನಗಳನ್ನು ಕಟ್ಟಿಕೊಳ್ಳುತ್ತಿಲ್ಲ. ನಮ್ಮ ಮಕ್ಕಳಿಗೆ ಆಯುಧಾದಿಗಳ ಆಟಿಗೆಗಳನ್ನೂ ಕೊಡುತ್ತಿಲ್ಲ' ಎಂದು ಹೇಳುತ್ತಿದ್ದರು."

ತಾಸಿಗೆ ನಾಲ್ಕು ಮೈಲುಗಳಂತೆ ನಡೆಯುತ್ತ, ಪಾಳಿಯಂತೆ ಜೊತೆ ಬರುತ್ತಿದ್ದ ಬಸ್ಸಿನಲ್ಲಿ ಮಲಗುತ್ತ ಹೊರಟ್ಟಿದ್ದ ಈ ಪಾದಯಾತ್ರಿಕರು ಬಲು ಬೇಗನೆ ದಣಿದು ಬಸವಳಿದರು.

ದಿನದಿನಕ್ಕೆ ಈ ಪಾದಯಾತ್ರಿಕರನ್ನು ಕಾಣ ಬರುತ್ತಿದ್ದ ಜನರ ಸಂಖ್ಯೆ ಹೆಚ್ಚಾಗುತ್ತಿತ್ತು. ಕೂಡುದಾರಿಗಳಲ್ಲಿ ಎಷ್ಟೋ ಸಲ ನೂರಿನ್ನೂರಕ್ಕಿಂತ ಹೆಚ್ಚು ಜನ ಅವರ ಹಾದಿ ಕಾಯುತ್ತ ನಿಂತಿರುತ್ತಿದ್ದರು. ಬೆರೆಝುನಾದಲ್ಲಂತೂ ಎಲ್ಲರೂ ರಸ್ತೆಗಳಲ್ಲಿ ಸೇರಿದಂತಿತ್ತು. ಶಾಂತಿ

ಪಾದಯಾತ್ರಿಕರು ಆ ಊರು ಮುಟ್ಟಿದಾಗ ಕತ್ತಲೆಯಾಗತೊಡಗಿತ್ತು. ಇವರು ಬಂದೊಡನೆ ಜನರ ಗದ್ದಲದಿಂದಾಗಿ ವಾಹನ ಸಂಚಾರ ನಿಂತಿತು. ಯಾತ್ರಿಕರೆಲ್ಲ ತೀರ ದಣಿದಿದ್ದರೂ ಆ ಜನಸಮೂಹದ ತೆರೆಯಲ್ಲಿ ಸಿಕ್ಕು ತೇಲಿಹೋದರು. ಅವರು ಒಂದೆಡೆ ಭಾಷಣ ಮಾಡಲೆತ್ನಿಸಿದಾಗ ರಶಿಯನ್ ಶಾಂತಿ ಸಮಿತಿಯ ಸದಸ್ಯರು ಅವರನ್ನು ಒಂದು ಹೋಟೆಲ್ಲಿಗೆ ಎಳೆದೊಯ್ದರು. "ಈಗ ಊಟದ ಹೊತ್ತಾಗಿದೆ ಆಮೇಲೆ ನೋಡೋಣ" ಎಂದರವರು.

ಎಲ್ಲೆಡೆಯಲ್ಲಿಯೂ ಇವರ ಮನೋರಂಜನೆಗಾಗಿ ಸಾಕಷ್ಟು ವ್ಯವಸ್ಥೆ ಮಾಡುತ್ತಿದ್ದರು. ನೃತ್ಯ, ಸಂಗೀತ, ಚಲಚ್ಚಿತ್ರ ಮುಂತಾದ ಕಾರ್ಯಕ್ರಮಗಳು ಪ್ರತಿನಿತ್ಯ ಇರುತ್ತಿದ್ದವು. ಆದರೆ ಪಾದಯಾತ್ರಿಕರ ಅವಸ್ಥೆ ಕಠಿಣವಾಗಿತ್ತು. ಪ್ರತಿನಿತ್ಯ ರಾತ್ರಿ ಅವರಿಗೆ ಎರಡು ಮೂರು ತಾಸುಗಳಿಗಿಂತ ಹೆಚ್ಚು ನಿದ್ರೆ ಸಿಗುತ್ತಿರಲಿಲ್ಲ. ಅವರಲ್ಲಿ ಪ್ರತಿಯೊಬ್ಬರೂ ಶೀಘ್ರ ಕೋಪಿಯಾದರು. ಕೆಲವರಿಗೆ ಬಸ್ಸಿನಲ್ಲಿ ನಿದ್ದೆ ಬರುತ್ತಲೇ ಇರಲಿಲ್ಲ.

ಈ ಬಲವಂತದ ನಡಿಗೆಯಿಂದ ಅವರಲ್ಲೆಷ್ಟೋ ಜನ ಬೇನೆ ಬಿದ್ದರು. ರಶಿಯನ್ ಭಾಷೆಯನ್ನು ಬಲ್ಲ ರೆಜಿನಾ ಫಿಶರ್ ಕೂಡ ಬೇನೆ ಬಿದ್ದಳು.

"ಇವರಿಗೆಲ್ಲಾ ವಿಪರೀತ ಜ್ವರ ಬರುತ್ತಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆಯಬೇಕಾದ ಅವಶ್ಯಕತೆ ಇತ್ತು. ರಶಿಯನ್ನರು ಯೋಗ್ಯ ಔಷಧೋಪಚಾರವನ್ನೊದಗಿಸಿದರಾದರೂ ಬೇನೆ ಬಿದ್ದವರನ್ನು ಹಿಂದೆ ಬಿಟ್ಟು ನಮ್ಮ ಯಾತ್ರೆ ಮುಂದೆ ಸಾಗಲು ಅವರು ಬಿಡಲಿಲ್ಲ. ನಮ್ಮ ವೀಸಾದಂತೆ ನಾವೊಂದು ಗುಂಪಾಗಿಯೇ ಪ್ರಯಾಣ ಮಾಡಬೇಕಾಗಿತ್ತು. ಕಾನೂನಿನಂತೆ ನಾವೆಲ್ಲ ಒಟ್ಟಾಗಿಯೇ ಇರಬೇಕಾಗಿತ್ತು.

ಆದರೆ ಸಮಯ ಜಾರುತ್ತಲಿತ್ತು. ಅವರಿಗಿದ್ದ ಮಾರ್ಗ ಒಂದೇ ಆಗಿತ್ತು. ಬೇನೆ ಬಿದ್ದವರನ್ನೆಲ್ಲ ಬಸ್ಸಿನಲ್ಲಿ ಮಲಗಿಸಿ ಅದನ್ನೇ ಒಂದು ಆಸ್ಪತ್ರೆಯನ್ನಾಗಿ ಮಾಡಿ ಉಳಿದವರು ನಡೆಯತೊಡಗಿದರು.

ಸ್ಮೊಲೆನ್ಸ್ಕ್‌ನಲ್ಲಿ ಏನು ನಡೆಯಿತು, ಎಂಬುದನ್ನು ಈ ಯಾತ್ರಿಕರಲ್ಲಿ ಒಬ್ಬರ ದಿನಚರಿಯಿಂದ ತಿಳಿಯಬಹುದು.

"ಆದಿತ್ಯವಾರ:- ಆಕಾಶ ಸ್ವಚ್ಛವಾಗಿತ್ತು. ಹವೆ ತಂಪಾಗಿತ್ತು. ಮೊದಲ ಪಾಳಿಯ ಜನ ಬೆಳಗು ಮುಂಜಾನೆ ಎರಡು ಗಂಟೆಗೇ ಎದ್ದು ನಡೆಯತೊಡಗಿದರು. ಹಸ್ತಪತ್ರಿಕೆಗಳ ಚೀಲಗಳನ್ನು ಹೆಗಲಮೇಲೆ ಹೊತ್ತುಕೊಂಡಿದ್ದೆವು. ಹುಣ್ಣಿಮೆಯ ಚಂದ್ರ ಪ್ರಕಾಶವಿದ್ದುದರಿಂದ ಬ್ಯಾಟರಿ ದೀಪ ಬೇಕಾಗಿರಲಿಲ್ಲ. ಕೈಕಾಲುಗಳು ನೋಯುತ್ತಿದ್ದವು. ಹಾದಿಯಲ್ಲಿ ಒಂದು ಪೆಟ್ರೋಲ್ ಪಂಪಿನ ಬಳಿಯಲ್ಲಿದ್ದ ಐವರಿಗೆ, ರಸ್ತೆಯಲ್ಲಿ ಹಾಡುತ್ತ ಹೋಗುತ್ತಿದ್ದ, ಮದ್ಯದ ಅಮಲೇರಿದ ಆರು ಜನರಿಗೆ, ಬಂದೂಕು ಧರಿಸಿ ನಾಯಿಯೊಂದರ ಜೊತೆಯಲ್ಲಿ ಹೋಗುತ್ತಿದ್ದ ಒಬ್ಬನಿಗೆ ಹಸ್ತಪತ್ರಿಕೆ ಕೊಟ್ಟೆವು.

"ಮುಂಜಾನೆ 10 ಗಂಟೆ:- ರಸ್ತೆ ಬಲು ಕೆಟ್ಟದ್ದಿತ್ತು. ಮುಗ್ಗರಿಸಿ ಒಬ್ಬರ ಮೇಲೊಬ್ಬರು ಬೀಳುತ್ತಿದ್ದೆವು. ಬಾತುಕೋಳಿಗಳ ಹಿಂಡೊಂದು ಎದುರಾದಾಗ ಅವುಗಳ ಮೇಲೆಯೇ ಕಾಲಿಡುವಂತಾಯಿತು. ಕ್ಯಾಬೇಜಗಳನ್ನು ಕೊಯ್ಯುತ್ತಲಿದ್ದ ಒಕ್ಕಲಿಗರಿಗೆ ಹಸ್ತಪತ್ರಿಕೆ ಹಂಚಿದೆವು. ಅವರಲ್ಲೊಬ್ಬ ಹತ್ತು ರೂಬಲ್‌ಗಳನ್ನು ನಮಗೆ ಕೊಡಮಾಡಿದ. ನಾವು ಫಲಾಹಾರಕ್ಕಾಗಿ ನಿಂತಾಗ ಸಮೀಪದ ಮನೆಯಿಂದ ಒಬ್ಬಾಕೆ ಬಿಸಿನೀರು ತಂದು ಕೊಟ್ಟಳು. ನಾವು ಕೈಕಾಲು ತೊಳೆದುಕೊಂಡೆವು. ನಾವು ಹ್ಯಾಟ್ ಧರಿಸದಿದ್ದುದಕ್ಕಾಗಿ ಅವಳು ನಮ್ಮನ್ನು ಛೀಮಾರಿ ಹಾಕಿದಳು. ರಶಿಯನ್ನರಿಗೆ ಹ್ಯಾಟ್ ಅಂದರೆ ಜೀವ.

"ಸಂಜೆ ಐದು ಗಂಟೆ:- ಸುಮಾರು 500 ಜನರ ಎದುರು ಭಾಷಣ ಮಾಡಿದೆವು. ರಶಿಯನ್ ಶಾಂತಿ ಸಮಿತಿಯವರು ನಮ್ಮೊಂದಿಗೆ ಚರ್ಚಿಸುತ್ತಿದ್ದಾಗ ಎಲ್ಲರೂ ಶಾಂತಿ ಬೇಕು. ಆದರೆ ಎಲ್ಲರೂ ತ್ಯಾಗ ಮಾಡಲು ಹೆದರುತ್ತಾರೆ. ಇರುವ ಪ್ರಶ್ನೆಯೆಂದರೆ ಸ್ವಾತಂತ್ರ್ಯ ಬಿಟ್ಟುಕೊಡುವುದು. ಆದರೆ ನಮ್ಮ ಸ್ವಾತಂತ್ರ್ಯವನ್ನು ಕಾಯುವುದಾಗಿದೆ ಎಂದು ನಾವೆಂದೆವು. ರಶಿಯನ್ನರು ಇದಕ್ಕೆ ಉತ್ತರವನ್ನೇ ಕೊಡಲಿಲ್ಲ."

ಅಕ್ಟೋಬರ್ ಒಂದರಂದು ಶಾಂತಿಪಾದಯಾತ್ರಿಕರು ಬೆಂದು ಬಸವಳಿದವರಾಗಿ ಮಾಸ್ಕೋದ ಉಪನಗರ ಪ್ರದೇಶದಲ್ಲಿ ಕಾಲಿಟ್ಟರು. ಶಾಂತಿಪಾದಯಾತ್ರಿಕರು ಬೀದಿಗಳಲ್ಲಿ ಹೋಗುತ್ತಿದ್ದ ಹಾಗೆ ಇಲ್ಲಿಯವರೆಗಿನ 6,500 ಮೈಲಿನ ಪಾದಯಾತ್ರೆಯಲ್ಲಿ ಅವರ ಪ್ರೀತಿಯ ಹಾಡಾಗಿ ಪರಿಣಮಿಸಿದ್ದ,

ನನ್ನ ಬಳಿ ಸುತ್ತಿಗೆಯೊಂದಿದ್ದರೆ
ನಾನೊಂದು ಸಂದೇಶ ಜಡಿಯುತ್ತಿದ್ದೆ
ಸ್ವಾತಂತ್ರ್ಯ!
ನನ್ನ ಬಳಿ ಸುತ್ತಿಗೆಯೊಂದಿದ್ದರೆ
ನಾನೊಂದು ಸಂದೇಶ ಜಡಿಯುತ್ತಿದ್ದೆ
ಶಾಂತಿ!

ಎಂಬರ್ಥದ ಹಾಡನ್ನು ಹಾಡುತ್ತ ನಡೆದರು. ಅಮೆರಿಕನ್ ಮತ್ತು ಯೂರೋಪಿಯನ್ ಸುದ್ದಿಗಾರರು ಅವರನ್ನು ಭೆಟ್ಟಿಯಾದರು.

"ನಾವು ಒಬ್ಬರೊಬ್ಬರ ಬಗಲಲ್ಲಿ ಕೈ ಹಾಕಿ ನಡೆಯುತ್ತಿದ್ದೆವು. ನಾವು ಅಳುತ್ತ-ನಗುತ್ತ ನಡೆದಿದ್ದೆವು. ನಾವು ಮಾಸ್ಕೋಕ್ಕೆ ಬಂದಿದ್ದೆವು. ನಾವು ಇಷ್ಟು ದೂರ ನಡೆದುಕೊಂಡೇ ಬಂದೆವೆಂಬ ಮಾತಿನಲ್ಲಿ ನಮಗೆ ವಿಶ್ವಾಸ ಉಂಟಾಗದಂತಿತ್ತು ನಮ್ಮ ಮನಃಸ್ಥಿತಿ. ನಮ್ಮನ್ನಿಳಿಸಿದ ಮನೆಗಳಲ್ಲಿ ಟೆಲಿವಿಜನ್, ಬಿಸಿನೀರಿನ ಸ್ನಾನದ ವ್ಯವಸ್ಥೆ, ಕೋಣೆಗೇ ಊಟ ತಂದುಕೊಡುವ ಏರ್ಪಾಟು ಎಲ್ಲ ಇದ್ದವು," ಎಂದು ಸ್ಕಾಟ್ ಹೇಳಿದ್ದಾನೆ.

ಮರುದಿನ ಮುಂಜಾನೆ ಯಾತ್ರಿಕರೆಲ್ಲ ಆರು ಗಂಟೆಗೇ ಎದ್ದು ಏಳು ಗಂಟೆಗೆ ಹೊರಹೊರಟರು. ಮಧ್ಯಾಹ್ನ ಎರಡು ಗಂಟೆಯಷ್ಟು ಹೊತ್ತಿಗೆ ಅವರು 12-13 ಮೈಲು ದೂರವಿದ್ದ ರೆಡ್‌ಸ್ಕ್ವೇರ್ ತಲುಪಬೇಕಾಗಿತ್ತು. ಆಗ ಏಳು ರಾಷ್ಟ್ರಗಳ ಟೆಲಿವಿಜನ್ ಫೋಟೋಗ್ರಾಫರರು ರಶಿಯದಲ್ಲಿ ಅವರ ಪ್ರವೇಶದ ಅಧಿಕೃತ ಫೋಟೋ ತೆಗೆದುಕೊಳ್ಳಲಿದ್ದರು. ಪಾದಯಾತ್ರಿಕರಲ್ಲಿ ಇನ್ನೊಂದು ಸಮಸ್ಯೆಯೂ ಉದ್ಭವಿಸಿತ್ತು. ಅವರ ಬಳಿ ಕೇವಲ 24,000 ಹಸ್ತಪತ್ರಿಕೆಗಳಷ್ಟೇ ಉಳಿದಿದ್ದವು. ಅವರು ಲಂಡನ್ನಿನಿಂದ ತರಿಸಿಕೊಳ್ಳಬಯಸಿದ್ದ ಹಸ್ತಪತ್ರಿಕೆಗಳು ಬರುವುದು ಅದು ಹೇಗೋ ತುಂಬಾ ವಿಳಂಬವಾಗಿತ್ತು.

ಕೈಕಾಲು ಮೈನೋವನ್ನು ಮರೆತು ಪಾದಯಾತ್ರಿಕರು ಹೊರಟರು. ಫೆಲ್ಟ್‌ಹ್ಯಾಟ್ ಧರಿಸಿ ಗಂಭೀರವದನದಿಂದ ಅವರ ಜೊತೆ ಬರತೊಡಗಿದ ಕೆಲವರನ್ನು ಕಂಡು ಅವರು ಕೈ ಬೀಸಿ 'ಹಲೋ' ಎಂದರು.

"ನಮ್ಮ ಸಂಗಡ ಬರತೊಡಗಿದ ಈ ಜನರು ಗುಪ್ತ ಪೊಲೀಸರೆಂದು ನಮಗೆ ಅವರನ್ನು ಕಂಡೊಡನೆ ತಿಳಿದು ಹೋಯಿತು. ಆದರೆ ನಮಗೆ ಅದರಿಂದೇನೂ ಅನಿಸಲಿಲ್ಲ. ನಾವು ತುಸು ದೂರ ನಡೆಯುವಷ್ಟರಲ್ಲಿ ಸಾವಿರಾರು ಸ್ನೇಹಪರ ಜನ ನಮ್ಮನ್ನು ಮುತ್ತಿದರು. ನಮ್ಮ ಕೈಯಲ್ಲಿದ್ದ ಹಸ್ತಪತ್ರಿಕೆಗಳನ್ನು ಅವರು ಕಸಿದುಕೊಂಡು ಕಿಸೆಗಳಲ್ಲಿ ತುರುಕಿಕೊಂಡರು. ಒಂದೇ ಒಂದನ್ನಾದರೂ ಒಬ್ಬರೂ ಕೆಳಗೆಸೆಯಲಿಲ್ಲ. ಹ್ಹಾ! ನಾವು ಬಂದದ್ದು ಸಾರ್ಥಕವಾಯಿತು." —ಬೀ ಆ ಸಮಯವನ್ನು ನೆನಸಿಕೊಂಡಾಗ ಪುಲಕಿತಳಾಗಿ ಹೇಳುತ್ತಾಳೆ.

ರೆಡ್ ಸ್ಕ್ವೇರಿನಲ್ಲಿ ಅವರು ಎರಡು ತಾಸು ಪ್ರಾರ್ಥನೆ ಮಾಡಿದರು. ಅನೇಕ ಹೆಂಗಸರು ಕೆಲ ಗಂಡಸರು ಅವರ ಜೊತೆ ಮೊಣಕಾಲೂರಿ ಕುಳಿತು ಪ್ರಾರ್ಥನೆ ಮಾಡಿದರು.

ಆನಂತರ ಅವರು ನಗರದಲ್ಲಿ ಸಂಚರಿಸುತ್ತಿದ್ದಾಗ ಸೈನ್ಯದ ರೇಡಾರ್ ಸ್ಟೇಶನ್ನೊಂದು ಅವರ ಕಣ್ಣಿಗೆ ಬಿತ್ತು. ಅವರು ಕೂಡಲೇ ಅದರ ಹೆಬ್ಬಾಗಿಲ ಹತ್ತಿರ ಪಿಕೆಟಿಂಗ್ ಆರಂಭಿಸಿ ನಿಶ್ಶಸ್ತ್ರೀಕರಣದ ಫಲಕಗಳನ್ನೆತ್ತಿ ಹಿಡಿದು ಶತಪಥ ಹಾಕಹತ್ತಿದರು.

ಸ್ಕಾಟ್ ಹೇಳಿದ್ದಾನೆ:- "ನಾವು ಕೆಲ ರಶಿಯನ್ ಸೈನಿಕರೊಂದಿಗೆ ಮಾತಾಡಿದೆವು. ಅವರು ವಿವೇಕಿಗಳೂ ಕರುಣೆಯುಳ್ಳವರೂ ಎಂದು ನಮಗನ್ನಿಸಿತು. ವಿಪರೀತ ಚಳಿಯಿತ್ತು. ಅವರು ಬಿಸಿ ಚಹವನ್ನು ನಮಗಿತ್ತು ಸ್ಟಾಲಿನ್‌ಗ್ರಾಡ್ ಯುದ್ಧದ ಭೀಕರ ಕತೆಯನ್ನು ಹೇಳಿದರು. ಶತ್ರು

ಮಿತ್ರರಿಬ್ಬರನ್ನು ಕೂಡಿಯೇ ಕೊಂದು ಹಾಕುವ ಪೃಥ್ವಿಯನ್ನೇ ವಿಷ ಗಾಳಿಯಿಂದ ಕೆಡಿಸುವ ಪರಮಾಣು ಯುದ್ಧದ ವಿಚಾರವನ್ನು ನಾವವರಿಗೆ ಹೇಳಿದೆವು."

ಮಾಸ್ಕೊಗೆ ಅವರು ಬಂದ ಮಾರನೆ ದಿನ ರಶಿಯನ್ ಶಾಂತಿ ಸಮಿತಿಯ ಸದಸ್ಯರು ಅವರನ್ನು ನಸುಕಿನಲ್ಲಿಯೇ ಎಬ್ಬಿಸಿ ಉತ್ಸಾಹದಿಂದಲೇ "ನೀವಿಂದು ಶ್ರೀಮತಿ ಕ್ರುಶ್ಚೇವ್‌ರನ್ನು ಭೇಟಿಯಾಗಲಿದ್ದೀರಿ" ಎಂದು ಹೇಳಿ ಅವರನ್ನೆಲ್ಲ ಮೊದಲು ಝಾರರದಾಗಿದ್ದು ಈಗ ಯುವಕರ ಚಟುವಟಿಕೆಗಳಿಗಾಗಿ ಉಪಯೋಗಿಸುತ್ತಿದ್ದ ಒಂದು ಭವನಕ್ಕೆ ಕರೆದೊಯ್ದರು.

"ಶ್ರೀಮತಿ ಕ್ರುಶ್ಚೇವ್ ದಯಾಳು, ಕೋಮಲಹೃದಯದ ಹೆಣ್ಣುಮಗಳಾಗಿ ಕಂಡಳು. ನಾವೊಂದು ದೊಡ್ಡ ಕಪ್ಪು ಮೇಜಿನ ಸುತ್ತ ಕುಳಿತೆವು. ಅವಳು ಒಂದೇ ಸಮನೆ ನಮ್ಮ ಕಪ್ಪುಗಳಲ್ಲಿ ಚಹಾ ಸುರಿಯುತ್ತಿದ್ದಳು. ಗಾಂಧಿ ಮತ್ತು ಅಹಿಂಸೆಯ ವಿಚಾರ ಅವಳಿಗೇನಾದರೂ ತಿಳಿದಿದೆಯೆ ಎಂದರಿಯಲು ನಾವು ಪ್ರಯತ್ನಿಸಿದೆವು. ಅವಳಿಗೆ ಅದು ಚೆನ್ನಾಗಿ ಗೊತ್ತಿತ್ತು. ಗಾಂಧೀಜಿಗೆ ಟಾಲ್‌ಸ್ಟಾಯ್‌ರಿಂದ ತುಂಬಾ ಪ್ರೇರಣೆ ದೊರೆತಿತ್ತೆಂಬ ವಿಚಾರ ಅವಳಿಗೆ ತಿಳಿದಿತ್ತು. 'ಎಲ್ಲಿ ಪ್ರೇಮವಿದೆಯೋ ಅಲ್ಲಿ ದೇವರಿದ್ದಾನೆ,' ಎಂಬ ವಾಕ್ಯವನ್ನಾಕೆ ಉಚ್ಚರಿಸಿದಳು. ನಿಟ್ಟುಸಿರೊಂದನ್ನು ಬಿಟ್ಟು ಎಲ್ಲ ಪರಮಾಣು ಬಾಂಬುಗಳನ್ನು ಸಮುದ್ರದಲ್ಲಿ ಚೆಲ್ಲಿದರೆ ಒಳಿತಾಗುತ್ತಿತ್ತು ಎಂದಳಾಕೆ. ನಮ್ಮನ್ನು ಬೀಳ್ಕೊಡುವಾಗ ನಮ್ಮಲ್ಲಿ ಪ್ರತಿಯೊಬ್ಬರ ಕೈಯನ್ನೂ ಕುಲುಕಿದಳು. ನಾನು ಮತ್ತು ಸ್ಕಾಟ್ ನೂತನ ದಂಪತಿಗಳು ಎಂದು ನಾನು ಹೇಳಿದಾಗ ನಕ್ಕು, 'ತುಂಬಾ ಮಕ್ಕಳಾಗಲಿ' ಎಂದು ಹಾರೈಸಿದಳು," ಎಂದು ಬೀ ಶ್ರೀಮತಿ ಕ್ರುಶ್ಚೇವರೊಡನೆ ನಡೆದ ಭೇಟಿಯನ್ನು ವರ್ಣಿಸಿದ್ದಾಳೆ.

ಮೂರನೆಯ ದಿನ ಪಾದಯಾತ್ರಿಕರನ್ನೆಲ್ಲಾ ಒಂದು ಬಸ್ಸಿನೊಳಗೆ ತುಂಬಿಕೊಂಡು ಮಾಸ್ಕೋ ಯೂನಿವರ್ಸಿಟಿಯ ಕ್ಯಾಂಪಸ್‌ಗೆ ಕರೆದೊಯ್ಯಲಾಯಿತು. ಯಾತ್ರಿಕರಲ್ಲಿ ಅರ್ಧಕ್ಕರ್ಧ ಜನ ಅಲ್ಲಿಗೆ ಹೋಗಲಿಲ್ಲ. ಮಾಸ್ಕೋದಲ್ಲಿ ಮಾಡಿದ ಕಾರ್ಯಗಳಲ್ಲೆಲ್ಲ ಈ ಭೇಟಿಯೇ ಮಹತ್ವದ್ದಾಗಿತ್ತು ಎಂದು

ಬ್ರಾಡ್ ಲಿಟ್ಲ್ ಹೇಳಿದ್ದಾನೆ.

ಮಾಸ್ಕೋದಲ್ಲಿಯೇ ಅತಿ ಎತ್ತರವಾದ ಗಗನಚುಂಬಿ ಕಟ್ಟಡವೊಂದರಲ್ಲಿ ಇಡೀ ವಿಶ್ವವಿದ್ಯಾಲಯವಿದೆ. ಈ ಕಟ್ಟಡದಲ್ಲಿ ವಿದ್ಯಾರ್ಥಿಗಳ ವಸತಿಗೃಹವೂ ಇದ್ದು ಒಟ್ಟು 22,000 ಕೋಣೆಗಳಿವೆ ಎಂದು ರಶಿಯನ್ನರು ಹೇಳಿದರು.

2,000 ವಿದ್ಯಾರ್ಥಿಗಳು ನೆರೆದಿದ್ದ ಸಭಾಗೃಹದಲ್ಲಿ ಬ್ರಾಡ್ ಲಿಟ್ಲ್ ಪರಮಾಣು ಶಸ್ತ್ರಗಳ ವಿಷಯವಾಗಿ ಮಾತನಾಡಿ ಅವುಗಳ ವಿನಾಶಕಾರಿ ನಿಷ್ಪ್ರಯೋಜಕತೆಯನ್ನೂ ಮಾನವ ಜಾತಿಯ ಮೂಲಭೂತ ಅವಶ್ಯಕತೆಗಳಾದ ಆಹಾರ, ಆಶ್ರಯ, ಸ್ವಾತಂತ್ರ್ಯ, ಪ್ರೇಮಗಳನ್ನೂ ಕುರಿತು ಮಾತನಾಡಿದ. ಅಲ್ಲಿಯ ಪ್ರೊಫೆಸರನೊಬ್ಬ ಎದ್ದು 20 ಮಿನಿಟುಗಳವರೆಗೆ ಸಿದ್ಧಭಾಷಣ ಒಂದನ್ನೋದಿ ಪಾಶ್ಚಿಮಾತ್ಯ ರಾಷ್ಟ್ರಗಳೇ ಆಕ್ರಮಣಕರರು ಎಂದು ಬಲವಾಗಿ ಪ್ರತಿಪಾದಿಸಿದನು.

ಈ ಭಾಷಣ ನಡೆದಿದ್ದಾಗ 'ಶಿಷ್ಯಮಂಡಲದ ಪ್ರಮುಖರಿಗೆ' ಎಂದು ಬರೆದ ಚೀಟಿಯೊಂದನ್ನು ಬ್ರಾಡ್ ಲಿಟ್ಲ್‌ನ ಕೈಗೆ ಕೊಡಲಾಯಿತು. ಅದರಲ್ಲಿ "ಪ್ರಿಯ ಮಿತ್ರರೆ, ಈ ಹೊಲಸು ಅಧಿಕಾರಿ ಮತ್ತು ಅವನ ಹೇಳಿಕೆಗಳನ್ನೆಲ್ಲ ನಂಬಬೇಡಿ. ನಿಮ್ಮ ಕಾರ್ಯ ಮುಂದುವರಿಸಿ, ನಾವೆಲ್ಲ ನಿಮ್ಮ ಬೆಂಬಲಕ್ಕಿದ್ದೇವೆ" ಎಂದು ಬರೆದಿತ್ತು.

ಮಧ್ಯಾಹ್ನ ಒಂದು ಗಂಟೆಗೆ ಸಭೆ ಮುಗಿಯುವ ಹೊತ್ತಾದಾಗ ವಿದ್ಯಾರ್ಥಿಗಳು ಬಾಗಿಲಲ್ಲಿ ನೆರೆದು "ನ್ಯೆತ್, ನ್ಯೆತ್" ಎಂದು ಕೂಗಿದರು. ಸಭೆ ಮತ್ತೆರೆಡು ತಾಸುಗಳವರೆಗೆ ನಡೆಯಿತು.

ಆ ವಿಶ್ವವಿದ್ಯಾಲಯದ ಬೃಹದಾಕಾರವೇ ಪಾದಯಾತ್ರಿಕರನ್ನು ನಿಯಂತ್ರಣದಲ್ಲಿಡಲು ಆತಂಕವಾಯಿತು. ಉತ್ಸಾಹಿಗಳಾದ ವಿದ್ಯಾರ್ಥಿಗಳಿಂದ ಸುತ್ತುವರೆಯಲ್ಪಟ್ಟ ಅವರು ಖಾಲಿ ಇದ್ದ ವರ್ಗ ಕೋಣೆಗಳಿಗೆ ಹೋಗಿ ಅಲ್ಲಿ ಚರ್ಚಾಕೂಟ ಜರುಗಿಸಿದರು. ಅವರು ಭಾರತದಲ್ಲಿ ನಡೆದ 20 ವರ್ಷ ದೀರ್ಘಕಾಲದ ಅಹಿಂಸಾತ್ಮಕ ಕ್ರಾಂತಿಯ ಬಗ್ಗೆ ಮಾತನಾಡಿದರು. ಮಾರ್ಟಿನ್ ಲ್ಯೂಥರ್ ಕಿಂಗರ ನೇತೃತ್ವದಲ್ಲಿ ಅಮೇರಿಕದ ದಕ್ಷಿಣ ಪ್ರಾಂತಗಳಲ್ಲಿ ನಡೆದ ಸತ್ಯಾಗ್ರಹದ ಬಗ್ಗೆ ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳಿಗೆ ಉತ್ತರವಿತ್ತರು.

ಎಲ್ಲ ಶಾಂತಿಪಾದಯಾತ್ರಿಕರನ್ನು ವಿಶ್ವವಿದ್ಯಾಲಯದ ನಾನಾ ಭಾಗಗಳಿಂದ ಹೊರಗೆ ಕರೆತಂದು ಹಳದಿ ಬಸ್ಸಿನಲ್ಲಿ ಕೂಡ್ರಿಸಿದಾಗ ಸಂಜೆ 5 ಗಂಟೆಯಾಗಿಹೋಗಿತ್ತು.

"ನಮ್ಮ ಶಾಂತಿಪಾದಯಾತ್ರೆ ಮಾರನೆಯ ದಿನ ಮಧ್ಯಾಹ್ನಕ್ಕೆ ಮುಕ್ತಾಯವಾಯಿತು. ನಮ್ಮ ಹೊಟೆಲಿನಿಂದ ರೆಡ್ ಸ್ಕ್ವೇರ್‌ಗೆ ನಡೆದು ಹೋಗಿ ಅಲ್ಲಿ ಸುಮಾರು ಒಂದು ತಾಸಿನವರೆಗೆ ಶಿರ ಬಾಗಿ ನಿಂತುಕೊಂಡೆವು. ನಮ್ಮ ಹಸ್ತಪತ್ರಿಕೆಗಳು ಎಂದೋ ಮುಗಿದುಹೋಗಿದ್ದವು. ಭಾಷಣ ಮಾಡುವ ಹುಮ್ಮಸ್ಸು ನಮ್ಮಲ್ಲಾರಿಗೂ ಇರಲಿಲ್ಲ.

"ನಾನು ಕೃತಜ್ಞತಾ ಭಾವದಿಂದ ತುಂಬಿ ಹೋಗಿದ್ದೆ. ಏನೋ ಒಂದು ಪವಾಡದಲ್ಲಿ ನಾನು ಭಾಗಿಯಾಗಿದ್ದೆ ಎಂದು ನನಗನ್ನಿಸಿತು. ರಶಿಯದಲ್ಲಿ ಬೋಲ್ಶೆವಿಕ್ ಕ್ರಾಂತಿಯಾದ ಮೇಲೆ ರಶಿಯನ್ ಸರಕಾರವನ್ನು ಟೀಕಿಸುತ್ತ ಅದರ ಧೋರಣಕ್ಕೆ ವಿರುದ್ಧವಾದ ವಿಚಾರಗಳನ್ನು ಪ್ರಚುಪಡಿಸುತ್ತ ಅಡ್ಡಾಡಿದ ತಂಡ ನಮ್ಮದೊಂದೇ ಆಗಿತ್ತು.

"ನಮ್ಮ ಸರಕಾರವನ್ನು ನಾವು ಟೀಕಿಸುತ್ತಿದ್ದುದೇ ಅದಕ್ಕೆ ಕಾರಣವಾಗಿತ್ತೆ? ಅಥವಾ ನಮ್ಮ ತಂಡವನ್ನು ತಮ್ಮ ಪ್ರಚಾರಕ್ಕೆ ಉಪಯೋಗಿಸಿಕೊಳ್ಳಬಹುದು ಅಥವಾ ನಮ್ಮನ್ನು ತಮ್ಮ ಅಭಿಪ್ರಾಯಕ್ಕೆ ತಿರುಗಿಸಿಕೊಳ್ಳಬಹುದು ಎಂದು ಅವರಲ್ಲಿದ್ದ ಆಶೆ (ಅದೀಗ ಎಂದೋ ಕರಗಿಹೋಗಿತ್ತು) ಕಾರಣವಾಗಿತ್ತೆ? ಇಲ್ಲವೇ ನ್ಯಾಯವೂ ಸತ್ಯಯುತವೂ ಆದ ನಮ್ಮ ಧ್ಯೇಯದ ಬಲವೇ ನಮ್ಮ ಕಾರ್ಯದಲ್ಲಿ ಯಶಸ್ಸು ತಂದುಕೊಟ್ಟಿತ್ತೇ?

'ಅಧಿಕಾರಕ್ಕೆ ಸತ್ಯದ ಮಾತು ಹೇಳಿರಿ' ಎಂಬ ಹಳೆಯ ಉಕ್ತಿಯೊಂದು ನನ್ನ ನೆನಪಿಗೆ ಬಂತು. ನಾನು ಬೀಯತ್ತ ನೋಡಿದೆ. ಅವಳು ಮೌನವಾಗಿ ಕಣ್ಣೀರು ಸುರಿಸುತ್ತಿದ್ದಳು. ಆಮೇಲೆ ನೂರಾರು ರಶಿಯನ್ ಸ್ತ್ರೀ-ಪುರುಷರು ನಮ್ಮ ಸುತ್ತಮುತ್ತ ತಲೆ ತಗ್ಗಿಸಿ ನಿಂತಿರುವುದು ನನಗೆ ಕಾಣಿಸಿತು. ಅವರಲ್ಲನೇಕ ಸ್ತ್ರೀಯರು ಕಣ್ಣೀರು ಕರೆಯುತ್ತಿದ್ದರು. ಅವರು ನಮ್ಮೊಂದಿಗೆ ಮಾತನಾಡುವಂತಿ

ರಲಿಲ್ಲ; ನಾವು ಅವರೊಂದಿಗೆ ಮಾತನಾಡುವಂತಿರಲಿಲ್ಲ. ಆದರೆ ಖಂಡಿತವಾಗಿಯೂ ಅವರು ನಮಗೆ ತಾವೂ ಶಾಂತಿಯುತವಾದ ಜಗತ್ತಿನಲ್ಲಿ ಬಾಳಬೇಕೆನ್ನುತ್ತೇವೆ ಎಂದು ಹೇಳಬಯಸಿದಂತಿತ್ತು." —ಪಾದಯಾತ್ರೆಯ ಮುಕ್ತಾಯದ ಸಮಯವನ್ನು ಕುರಿತು ಸ್ಕಾಟ್ ಇಂತು ಹೇಳಿದ್ದಾನೆ.

ಅಂದೇ ಸಂಜೆ ಶಾಂತಿಪಾದಯಾತ್ರಿಕರು ಮಾಸ್ಕೋದಿಂದ ಟ್ರೇನಿನಲ್ಲಿ ಹೆಲ್ಸಿಂಕಿಗೆ ಹೊರಟರು. ಪೂರ್ವ ಜರ್ಮನಿಯಲ್ಲಿ ಜಪ್ತು ಮಾಡಲ್ಪಟ್ಟ ಮಿಮಿಯೋಗ್ರಾಫ್ ಅವರಿಗೆ ಮರಳಿ ದೊರೆಯದೆ ಹೋದರೂ ಲಂಡನ್ನಿನಿಂದ ಬಂದಿದ್ದ 200 ಪೌಂಡು ತೂಕದ ಹಸ್ತಪತ್ರಿಕೆಗಳ ಗಂಟು ಮಾತ್ರ ಸಿಕ್ಕಿತು. ಟ್ರೇನಿನಲ್ಲಿ ಹೋಗುವಾಗ ಅವರು ಅವುಗಳನ್ನು ಹಾದಿಯ ಊರುಗಳಲ್ಲಿ ಚೆಲ್ಲಿದರು.

ಮಾರನೆಯ ದಿನ ಸ್ಕಾಟ್ ಮತ್ತು ಬೀ ಜೆಟ್ ವಿಮಾನದಲ್ಲಿ ನ್ಯೂಯೋರ್ಕಿಗೆ ತೆರಳಿದರು. ಐಡಲ್‌ವೈಲ್ಡ್ ವಿಮಾನ ನಿಲ್ದಾಣದಿಂದ ಟ್ಯಾಕ್ಸಿಯಲ್ಲಿ ಕುಳಿತು ಹೋಗುವಾಗ ಬೀ ಹೇಳಿದಳು: "ನಾನು ಇನ್ನೆಂದೂ ಎಲ್ಲಿಗೂ ನಡೆದು ಹೋಗುವುದಿಲ್ಲ."


"ಛೇ! ನೀನು ನಡೆಯಲೇಬೇಕಾದೀತು. ಏಕೆನ್ನುವಿಯೋ, ನೀನು ನಿರುದ್ಯೋಗಿಯೂ ನಿರ್ಧನನೂ ಆದ ಒಬ್ಬನನ್ನು ಮದುವೆಯಾಗಿರುವಿ. ನನಗೆ ದೊರೆತ ಪಿತ್ರಾರ್ಜಿತ ಧನವನ್ನೆಲ್ಲ ಒಂದು ಧರ್ಮನಿಧಿಯನ್ನಾಗಿ ಮಾಡಲು ನಿರ್ಧರಿಸಿದ್ದೇನೆ. ಅದನ್ನು 'ಮಹಾತ್ಮಾ ಗಾಂಧಿ ನಿಧಿ' ಎಂದು ಕರೆಯುತ್ತೇನೆ. ಅದನ್ನು ಶಾಂತಿ ಪ್ರಚಾರ ಕಾರ್ಯಕ್ಕಾಗಿ ವಿನಿಯೋಗಿಸಲಾಗುವುದು. ಹಣ ಗಳಿಸಲು ನಾನು ನೀನು ಏನು ಮಾಡಬಹುದೋ ನನಗೆ ತಿಳಿಯದು. ಆದರೆ ನೀನು ಟೆಲಿವಿಜನ್‌ನಲ್ಲಿ ಕೆಲಸ ಮಾಡಿರುವಿಯಲ್ಲವೇ?" ಎಂದು ಕೇಳಿದ ಸ್ಕಾಟ್.

ಆಮೇಲೆ ಈ ವಿಷಯ ಬಂದಾಗ ಬೀ ನಮ್ಮೊಡನೆ ಹೇಳಿದಳು: "ಆಗ ನಾನು ಕಣ್ಣು ರೆಪ್ಪೆ ಕೂಡ ಬಡಿಯಲಿಲ್ಲ. ನಿಜವಾಗಿಯೆಂದರೆ, ನನಗಾಗ ಸಮಾಧಾನವೇ ಆಯಿತು. ಸ್ಕಾಟ್‌ನ ಪಿತ್ರಾರ್ಜಿತ ಸಂಪತ್ತಿನ ವಿಷಯ ನನಗೆ ಸ್ವಲ್ಪ ತಲೆನೋವೇ ಆಗಿತ್ತು. ಶ್ರೀಮಂತ ಗಂಡನನ್ನು ಬುಟ್ಟಿಗೆ ಹಾಕಿಕೊಂಡ ಶಾಂತಿವಾದಿ ಎಂದು ಕರೆಯಿಸಿಕೊಳ್ಳುವುದು ನನಗೆ ಬೇಡವಾಗಿತ್ತು. ಮುಂದೆ ಕೆಲ ತಿಂಗಳುಗಳವರೆಗೆ ನಮಗೆ ಭಾಷಣದ ಕರೆಗಳು ಬಂದದ್ದರಿಂದ ನಾವು ನಿರುದ್ಯೋಗಿಗಳಾಗಿದ್ದೇವೆಂದು ಹೇಳಲು ಬಾರದು. ಕೈ ಬಿಗಿ ಹಿಡಿದು ಖರ್ಚು ಮಾಡುವುದು ನನಗೆ ಅಭ್ಯಾಸವಾದ ಮಾತು.

"ವಿವಾಹನಂತರ ಪರಸ್ಪರ ಶೀಘ್ರದಲ್ಲಿ ಒಗ್ಗಿಕೊಳ್ಳಬೇಕಾದರೆ 6,500 ಮೈಲು ಪಾದಯಾತ್ರೆ ಮಾಡಬೇಕು ಎಂದೇ ನಾನು ಶಿಫಾರಸು ಮಾಡುತ್ತೇನೆ. ನಾನು ಮತ್ತು ಸ್ಕಾಟ್ ಲಗ್ನವಾಗಿ ಎಷ್ಟೋ ವರ್ಷಗಳು ಸಂದಂತೆ ನನಗನಿಸುತ್ತಿದೆ." ★

Printed and published by **M.H. BELGAUMKAR** on behalf of Lokashikshana Trust at "SAMYUKTA KARNATAKA PRESS" No. 2, Residency Road, Bangalore-560 025, Phone: 579265, Hubli Phone: 64303. Managing Editor K. SHAMA RAO. Rep: Bombay: V. Satyamurthi. Phone: 5510502, Madras, S.K. Murti Phone: 414870. New Delhi: V.K. Chopra Phone: 7114785. Hyderabad: S. Shankaranarayana, Phone: 65700.

Registered with the Registrar of Newspapers for India under No. 35/3957.


ಕೋಂಪ್ಲಾನ್ ಚಾಂಪಿಯನ್ಸ್!
Complan
"ಕೋಂಪ್ಲಾನ್ ಆರೋಗ್ಯಪೂರ್ಣ ಸರ್ವಾಂಗೀಣ ಬೆಳವಣಿಗೆಗಾಗಿ ಆದರ್ಶವಾಗಿದೆ."
– ಅನಿತಾ ಸೂದ್
Anita Sood
ರಾಷ್ಟ್ರೀಯ ಈಜುವ ಚಾಂಪಿಯನ್.
ಎಳೆಯರು ಈಜುವ ಪಂದ್ಯದಲ್ಲಿ ಪಳಗುವಂತೆ ಅನಿತಾ ಸೂದ್ ಸಹಾಯ ಮಾಡುತ್ತಾಳೆ. ಅವಳು ಕೋಂಪ್ಲಾನ್ ಶಿಫಾರಸು ಮಾಡುತ್ತಾಳೆ. ಇದುವೆ ಆರೋಗ್ಯಪೂರ್ಣ ಸರ್ವಾಂಗೀಣ ಬೆಳವಣಿಗೆಗಾಗಿ ಸಂಪೂರ್ಣ ನಿಯೋಜಿತ ಆಹಾರ. ನೆನಪಿನಲ್ಲಿರಲಿ, ಕೋಂಪ್ಲಾನ್ ಬೆಳೆಯುವ ಮಕ್ಕಳಿಗೆ ಆದರ್ಶವಾದುದು.
Complan
23
ಪೋಷಕ ಆಹಾರಗಳು ನಿಯೋಜಿತ ಪ್ರಮಾಣದಲ್ಲಿ.
ಹಾಲು ಸೇರಿಸುವ ಅಗತ್ಯವಿಲ್ಲ
ಕೋಂಪ್ಲಾನ್®
ಸಂಪೂರ್ಣ ನಿಯೋಜಿತ ಆಹಾರ.

GX/45/173KAN

KASTURI PRICE Rs 3.00 Reg No KRNG
Licence No L2120/wpp No

